KANARESE

HYMN-BOOK

THIRTEENTH EDITION

—

JUBILEE EDITION

—

ಭಕ್ತರು ದೇವರ ಸ್ತೋತ್ರಕ್ಕಾಗಿ

ದೇವಾಲಯಗಳಲ್ಲಿಯೂ ಮನೆಗಳಲ್ಲಿಯೂ ಹಾಡತಕ್ಕ

ಗೀತಗಳು

PUBLISHED BY THE
BASEL MISSION BOOK AND TRACT DEPOSITORY
MANGALORE
1933

PRINTED AT THE BASEL MISSION PRESS MANGALORE S. K.

PREFACE

TO THE ELEVENTH EDITION (1913)

The *first edition* of the *Kanarese Hymn-Book* containing 68 hymns appeared in 1845 under the title ಕ್ರಿಸ್ತ ಗೀತಗಳು. The subsequent editions were again and again revised and enlarged. The *fifth edition* (1867) contained 168 hymns. Most of these were composed by the old Basel missionaries, H. MÖGLING, G. WEIGLE, J. LAYER, F. METZ and others.

In the *seventh edition* of 1885 those 168 hymns were reprinted as *First Part*, and a new collection of 102 hymns were added as *Second Part*, bringing up the total number to 270.

For the revision and enlargement of the present *eleventh edition* containing 410 hymns, we are chiefly indebted to the Rev. B. LÜTHI. A number of missionaries and catechists co-operated in revising the old hymns and adding valuable new material. The two parts of the previous editions are now amalgamated and re-arranged, and 140 new hymns are added.

The numbers of the old edition are printed in parentheses () at the right side of the new numbers. **Asterisks indicate that the respective hymns have been considerably altered or added to.*

Our hearty thanks are due to the secretary of the Tract and Book Society, Bangalore, for kindly granting us permission to take 24 hymns from the *Kanarese*

Hymns composed and selected by the Rev. B. RICE (Bangalore, Tract and Book Society, 1898). Their numbers in the *Kanarese Hymn-Book** are : 2 (6), 8 (12), 113 (119), 131 (265), 134, 169 (207), 175 (282), 184 (279), 196 (223), 197 (266), 204 (164), 249 (92), 250 (137), 271 (155), 299 (152), 316 (233), 345 (197), 356 (124), 368 (222), 372 (284), 374 (274), 375 (220), 176 (221), 406 (246). Some of these hymns have been slightly altered to suit the idiom of South Kanara and South Mahratta.

Most of the *tunes* are found in the *Mangalore Tune-Book* (Mangalore, Basel Mission Book and Tract Depository, 1905) marked *M. T.* Some other books are referred to by the following abbreviations :

Mal. Chr. T. *The Malayalam Christian Tune-Book* (Mangalore, 1891).
S. f. Ch. *Songs for Children* (Mangalore 1904).
Schw. Ges. *Schweizer Gesangbuch.*
S. S. *Sacred Songs and Solos*, 1200 Pieces.
H. A. & M. *Hymns Ancient and Modern*, *old edition*. The corresponding numbers of the *new edition* (given in parentheses) are : for 214 (369), 232 (380), 235 (381), 274 (442), 365 (547), 423 (241). Only No. 104 referred to in hymn 184 is the number of the new edition (=94 old edition).

May these songs of praise, prayer, and consecration be acceptable in the sight of the Lord of the Church and add to the edification, joy and comfort of those who sing and read them.

---

* The corresponding numbers of the *Kanarese Hymns* are added in parentheses ( ).

PREFACE

TO THE THIRTEENTH EDITION (1933)

This edition is an unaltered reprint of the 12th edition which for some time was out of stock. It is called the Jubilee-edition, because next year, 1934, the first century of the Basel Mission work in India will be completed. That God has privileged our Mission, in spite of all its shortcomings and mistakes, to continue His work 100 years, is for all its members to be a cause of deep and penitent gratitude. They are to confess: "I am not worthy of the least of all the mercies and of all the truth which thou hast shewed unto thy servant". And should not this gratitude again and again find expression in the hymns of prayer and supplication, of joy and comfort, of praise and thanksgiving as contained in this reprinted collection?

May God fill our heart with His spirit moving us to sing the hymns to His glory in our Sunday- and Week-Services, our family prayers and in any other worship of God for which they are suitable.

Mangalore,
August 1933

J. C. Meyer,
President, Basel Mission.

ವಿಷಯಾನುಕ್ರಮಣಿಕೆ

TABLE OF CONTENTS

"ಕ್ರಿಸ್ತನ ವಾಕ್ಯವು ನಿಮ್ಮಲ್ಲಿ ಸಮೃದ್ಧಿಯಾಗಿ ವಾಸಿಸಲಿ; ಸಕಲ ಜ್ಞಾನದಿಂದ ಕೂಡಿದವರಾಗಿ ಒಬ್ಬರಿಗೊಬ್ಬರು ಉಪದೇಶ ಮಾಡಿಕೊಳ್ಳಿರಿ, ಬುದ್ಧಿ ಹೇಳಿಕೊಳ್ಳಿರಿ; ಕರ್ತನ ಕೃಪೆಯನ್ನು ನೆನಸಿಕೊಳ್ಳುವವರಾಗಿ ಕೀರ್ತನೆಗಳಿಂದಲೂ ಸಂಗೀತಗಳಿಂದಲೂ ಆತ್ಮಸಂಬಂಧವಾದ ಹಾಡುಗಳಿಂದಲೂ ನಿಮ್ಮ ಹೃದಯಗಳಲ್ಲಿ ದೇವರಿಗೆ ಗಾನ ಮಾಡಿರಿ" (ಕೊಲೊ. ೩, ೧೬).

ಕನ್ನಡ ಗೀತಗಳು

1. ದೇವಭಜನೆ

೧

Jehovah, deinem Namen.
M. T. 171.

ಯೆಹೋವ! ಯೆಹೋವ!
ಯೆಹೋವ, ನಿನ್ನ ನಾಮ
ಸದಾ ಸಂಕೀರ್ತ್ಯವೇ!
ಆಮೆನ್! ಆಮೆನ್!
ತ್ರಿಜಗನ್ನಾಥ ಕರ್ತನೇ!
ಸದಾನಂದನೇ! ಸದಾ
ನಮ್ಮ ಪತಿ ನೀನು.
ಸಂಕೀರ್ತ್ಯ, ಕೀರ್ತ್ಯ,
ಕೀರ್ತ್ಯ ಈಶಾ!
ಹಲ್ಲೆಲೂಯಾ! ಹಲ್ಲೆಲೂಯಾ!

೨

Mel. Thou art the way.—M. T. 20.

1. ಯೆಹೋವ ಜಗದೀಶನೇ!
ನೀನಾತ್ಮನಾಗಿದ್ದೀ;
ಸಂಪೂರ್ಣ ಆತ್ಮಸೇವೆಗೆ
ಯಾವಾಗ್ಯು ಮೆಚ್ಚುತ್ತೀ.

2. ನಮ್ಮಂತರಂಗ, ಕರ್ತನೇ,
ಪರೀಕ್ಷೆ ಮಾಡುತ್ತಿ;
ನಮ್ಮಲ್ಲಿ ಮೋಸ ಕಂಡರೆ
ಅಸಹ್ಯ ಪಡುವಿ.

3. ಪವಿತ್ರ ಸ್ವಾಮೀ ದೇವರೇ,
ನಮ್ಮನ್ನು ಶುಚಿಸು;
ಆ ಮೇಲೆ ಸತ್ಯದಿಂದಲೇ
ಆರಾಧಿಸುವೆವು.

೩

Holy, holy, holy.—M. T. 245.

1. ಶುದ್ಧ, ಶುದ್ಧ, ಶುದ್ಧ, ಸರ್ವ
ಶಕ್ತ ಕರ್ತ,
ನಿಂಗೆ ಸ್ತುತಿ ಸ್ತೋತ್ರ ನಿರಂತವಾ
ಗಲಿ!
ಅತಿ ಪರಿಶುದ್ಧ ಕರುಣಾಳು ಸ್ವಾ
ಮೀ!
ಏಕ, ತ್ರಯೈಕ, ಅನಾದಿ ದೇವ
ರೇ!

2. ಪರಿಶುದ್ಧ ಕರ್ತ, ಪರಲೋ
ಕದಲ್ಲಿ
ಶುದ್ಧರೆಲ್ಲ ನಿಂಗೆ ಸಾಷ್ಟಾಂಗ ಬೀ
ಳ್ವರು.
ದೂತರೆಲ್ಲ ಕೂಡ ಸ್ತೋತ್ರ ಮಾ
ಡುತ್ತಾರೆ—
ಏಕ, ತ್ರಯೈಕ, ಅನಂತ ದೇವರೇ!

3. ಕರುಣಾಳು ಸ್ವಾಮೀ, ವಿಶ್ವ
ದೊಂದಿಗಿನ್ನು
ಅಲ್ಪರಾದ ನಾವು ಕೊಂಡಾಡ
ಬಂದೆವು—
ನಮ್ಮ ಸ್ತುತಿ ಹೊಂದು, ಸರ್ವ
ಶಕ್ತ ಕರ್ತಾ!
ಏಕ, ತ್ರಯೈಕ, ಅನಾದ್ಯನಂತ
ನೇ!

೪

Die Gottesseraphim.—M. T. 226.

1. ಸ್ವರ್ಗೀಯ ಮೇಳವು,
ಸಮಸ್ತ ದೂತರು,
ಕೆರೂಬ್ ಸೆರಾಫರು
ಯೆಹೋವನನ್ನು ಸ್ತುತಿಸಿ
ಗಂಭೀರವಾಗಿ ಕೀರ್ತಿಸಿ—
ಶುದ್ಧ, ಶುದ್ಧ, ಶುದ್ಧ
ನಮ್ಮೊಡೆಯಾ!
ಎಂದ್ಹಾಡುತ್ತಾರಹಾ.

2. ಸಂಸಿದ್ಧ ಭಕ್ತರು
ಬಂಗಾರ ಬಾಗಲು
ಪ್ರವೇಶ ಮಾಡಲು,
ಶ್ರೀ ಶುಭ್ರವಸ್ತ್ರ ಧರಿಸಿ
ಆ ಧನ್ಯ ಮೇಳ ಕೀರ್ತಿಸಿ—
ಶುದ್ಧ, ಶುದ್ಧ, ಶುದ್ಧ
ನಮ್ಮೊಡೆಯಾ!
ಎಂದ್ಹಾಡುತ್ತಾರಹಾ.

3. ನಮ್ಮಲ್ಪ ಸಭೆಯು
ಕನಿಷ್ಠ ಸ್ಥಾನದ್ದು,
ಧೂಳೀಲಿ ಬಿದ್ದದ್ದು;
ಸ್ವರಕ್ತದಿಂದ ಬಿಡಿಸಿ
ಕೊಂಡಾತನನ್ನು ಕೀರ್ತಿಸಿ—
ಶುದ್ಧ, ಶುದ್ಧ, ಶುದ್ಧ
ನಮ್ಮೊಡೆಯಾ!
ಎಂದ್ಹಾಡುತ್ತೇವಹಾ.

೫

Mel. Sollt' es gleich bisweilen scheinen.—M. T. 33.

1. ನನ್ನ ದೇವ, ಪ್ರಿಯ ತಂದೆ!
ಬಡ ಬಾಲ ನಾನು ಬಂದೆ,
ಕರ್ತ, ಆದಿವಸ್ತುವೆ!
ನಿನ್ನ ಮುಂದೆ ವಂದಿಪೆ.

2. ದೂತಗಣ ಘನದಿಂದ
ಸ್ತೋತ್ರ ಮಾಡೊ ಕಡೆಯಿಂದ

ನೀನು ಕೃಪಾನೇತ್ರದಿ
ಧೂಳಿಯೆನ್ನ ನೋಡುತಿ.

3. ದೇವಗೃಹ, ದಿವದ್ವಾರ
ಅವಿಶ್ವಾಸಿ ಕಾಣಲಾರ.
ನಿಂಗೆ ದೂರವಾದೆನ್ನೈ!
ಎಷ್ಟೊ ಭ್ರಾಂತಿಯಾಯಿತ್ತೈ!

4. ಕೆಟ್ಟ ಲೋಕದಾಶೆಯಿಂದ;
ಇನ್ನು ನಿನ್ನ ಐಕ್ಯದಿಂದ
ಅಗಲಿರಲಾರೆನು!
ನನ್ನ ಪ್ರಾಣ ರಕ್ಷಿಸು!

5. ಬುದ್ಧಿ ಬಂತು ಕಡೆಯಲ್ಲಿ.
ನಿನ್ನ ಸನ್ನಿಧಾನದಲ್ಲಿ
ಸೇರಿ, ಪ್ರಿಯ ತಂದೆಯೆ,
ನಿತ್ಯಜೀವ ಹೊಂದಿದೆ.

6. ಕೃಪೆಯಿಂದ ಕ್ಷಮೆಯನ್ನು,
ಕೃಪೆಯಿಂದ ಜೀವವನ್ನು
ಪಡಕೊಂಡೆ. ದೇವರೇ,
ನನ್ನ ಗತಿ ಕೃಪೆಯೇ!

೬

Der Herr ist gross.—M. T. 267.

1. ಯೆಹೋವನೇ,
ಸಮಸ್ತ ಸೃಷ್ಟಿಯಿಂದ
ಸನ್ಮಾನ ಹೊಂದ ಯೋಗ್ಯನೇ,
ನಾನಾದರೂ ಮಹಾ ಸಂತೋಷ
ದಿಂದ
ಸಂಗೀತ ನಿನಗೆತ್ತುವೆ.

2. ಸರ್ವೇಶನೇ,
ಅನಾದಿಯಿಂದಿದ್ದಾತ,
ನೀನೆಲ್ಲ ಉಂಟುಮಾಡಿದಿ;
ಸಮಸ್ತವಂ ಸದಾ ನೀನಾಳು
ವಾತ,
ನನ್ನನ್ನು ನೀನೇ ಆಳುವಿ.

3. ಇಮ್ಮಾನುವೇಲ್!
ನಾ ಕೆಟ್ಟು ಬೀಳುವಲ್ಲಿ
ನೀನೊಲಿದವತರಿಸಿ
ಈ ನನ್ನ ಘೋರ ಪಾಪಯುದ್ಧ
ದಲ್ಲಿ
ನೀ ನನಗಾಗಿ ಜೈಸಿದಿ.

4. ಯೆಹೋವನೇ,
ನೀನಿನ್ನು ಬರುವಾತ
ಗಂಭೀರ ನ್ಯಾಯತೀರ್ಪಿಗು;
ಅಂದೆನಗಿದ್ದು ನೀ ಸಂಜೀವ
ದಾತ
ಕಲ್ಯಾಣದಲ್ಲಿ ಸೇರಿಸು!

೭

Mel. Es ist gewisslich an der Zeit.
M. T. 111.

1. ಭೂಲೋಕಕ್ಕೀಶ ಮಾಡಿದ
ಸಂಪ್ರೀತಿಗೀಡು ಇಲ್ಲ.
ತಾ ಕಂಡು ದ್ರೋಹಜಾತಿಯ,
ಉಪೇಕ್ಷೆ ಮಾಡಲಿಲ್ಲ.
ಈ ಪ್ರೀತಿಯಂತವರಿತು
ದಯಾಬ್ಧಿನೆಲ ಕಾಣಲು
ಸಾಮರ್ಥ್ಯ ಯಾರಿಗುಂಟು?

2. ಅಸಹ್ಯ ಪಾಪಮುಲದಿ
ದೇವಾರಿಲೋಕ ಬಿತ್ತು;
ಆದಾಗ್ಯು ತಂದೆ ಒಲ್ಮೆಲಿ
ಕಟಾಕ್ಷ ಪೂರ್ತಿಯಿತ್ತು,
ವಿಮುಕ್ತಿ ಮಾಡುವದಕೆ
ಕೆಟ್ಟೋದ ಪಾಪಿಜಾತಿಗೆ
ಕುಮಾರನನ್ನು ಕೊಟ್ಟ.

3. ಕುಮಾರನನ್ನು ಲೋಕವು
ತಾತ್ಸಾರ ಮಾಡಿತಲ್ಲ.
ಆದಾಗ್ಯು ಶಿಕ್ಷೆ ತಡೆದು
ತನ್ನಾತ್ಮ ಕೊಟ್ಟನಲ್ಲ.
ಹಾ! ದೀರ್ಘಶಾಂತ ದೇವರೇ,
ನಿನ್ನತಿಶಯ ಕೃಪೆಗೆ
ಸಾಷ್ಟಾಂಗ ನಮಸ್ಕಾರ!

೮

1. John 4, 8.
Come, let us all unite to sing.
M. T. 294.

1. ನಾವೆಲ್ಲ ಕೂಡಿ ಹಾಡುವ —
ದೇವರು ಪ್ರೀತಿಯೇ;
ಭೂಪರಲೋಕಗಾಯನ —
ದೇವರು ಪ್ರೀತಿಯೇ;
ಪಾಪಾತ್ಮರೆಲ್ಲಾ ಬನ್ನಿರಿ,
ಇಂಪಾದ ರಾಗ ಬಾರಿಸಿ
ಸಂಭ್ರಮದಿಂದ ಹಾಡಿರಿ —
ದೇವರು ಪ್ರೀತಿಯೇ.

2. ಓ ಸಾರಿರೆಲ್ಲ ಜನಕ್ಕು —
ದೇವರು ಪ್ರೀತಿಯೇ.
ಸಂರಕ್ಷಕನ್ನ ಕೊಟ್ಟನು;
ದೇವರು ಪ್ರೀತಿಯೇ.
ಕ್ರಿಸ್ತ್ಯೇಸುವಿನ ರಕ್ತವು
ಸಮಸ್ತ ಪಾಪ ತೊಳೆದು,
ನಮ್ಮನ್ನು ಶುಭ್ರ ಮಾಡಿತು;
ದೇವರು ಪ್ರೀತಿಯೇ.

3. ಎಷ್ಟೋ ಸಂತೋಷವಾಯಿ
ತು!
ದೇವರು ಪ್ರೀತಿಯೇ!
ಯೆಹೋವ ನಮ್ಮ ತಂದೆಯು;
ದೇವರು ಪ್ರೀತಿಯೇ.
ಗುರಾಣಿ, ಸೂರ್ಯ, ಸಂಪತ್ತು,
ಆಶ್ರಯ, ಕೋಟೆ, ದುರ್ಗವು,

ಅನಂತ ಭಾಗ್ಯವಾತನು;
ದೇವರು ಪ್ರೀತಿಯೇ.

4. ಈ ದೇಹ ಕ್ಷೀಣವಾದರೂ
ದೇವರು ಪ್ರೀತಿಯೇ!
ಹೃದಯ ಕುಂದಿಹೋದರೂ
ದೇವರು ಪ್ರೀತಿಯೇ!
ಭೂಲೋಕಯುದ್ಧದೊಳಗೆ
ಅಘೋರ ಮೃತ್ಯುಗಳಿಗೆ
ಬಂದಾಗ್ಯು ಆಗದಂಜಿಕೆ;
ದೇವರು ಪ್ರೀತಿಯೇ.

೯

Ps. 23.
M. T. 268. 269. 144.

1. ಯೆಹೋವನೆಮ್ಮ ಕುರುಬ!
ಕುಂದೇನು ನನಗೆ?
ತಣ್ಣೀರ ತಗ್ಗಿಗಹಹ,
ಹಚ್ಚಾನ ದಿನ್ನೆಗೆ
ನನ್ನನ್ನು ಬಿಟ್ಟು ಕಾಯುವ
ನನ್ನೊಳ್ಳೆ ಕುರುಬ.

2. ಆಯಾಸ ಪಟ್ಟ ಕುರಿಗೆ
ವಿಶ್ರಾಂತಿಯೀಯುವ;
ಸಂಕಷ್ಟ ಬಂದರದಕೆ
ಸಹಾಯಕ್ಕೋಡುವ.
ನಿತ್ರಾಣ ಮರಿ ಹಟ್ಟಿಗು
ಕೈಯಲ್ಲಿ ಒಯ್ವನು.

3. ಸಾವೆಂಬ ಕಪ್ಪು ಕೊಳ್ಳದಿ
ನಾ ಹಾಯು ಸೇರಲು
ನೀನೆನ್ನ ಕೂಡ ಸಾಗುವಿ,
ಪಿಶಾಚಿಗಂಜೆನು;
ನಿಂಗಿಪ್ಪ ದಂಡವೆನಗೆ
ಅಭಯ ಕೊಡುತೆ.

4. ಮೇಲಾದ ಹಬ್ಬದೂಟಕೆ
ನೀನೆನ್ನ ಕರಿಸಿ
ಸುತ್ತೈಲವೆನ್ನ ಮಂಡೆಗೆ
ಚನ್ನಾಗಿ ಹಚ್ಚುವಿ.
ಈ ಭಾಗ್ಯವನ್ನು ಶತ್ರುವು
ಕಂಡಾಗ್ಯು ಹೊಂದನು.

5. ಯೆಹೋವ, ಎಲ್ಲ ಕಾಲಕು
ನಿನ್ನಾಶೀರ್ವಾದವೆ
ನನ್ನಲ್ಲಿ ಕಂಡುಬಪ್ಪುದು;
ಸಂತೃಪ್ತನಾಗುವೆ
ನಿನ್ನೊಂದಿಗಿಹದಲ್ಲಿಯು,
ನಿನ್ನೊಂದಿಗಲ್ಲಿಯು.

೧೦

Gott ist getreu!—M. T. 170.

1. ಯೆಹೋವನ
ಆಶ್ರಯದುರ್ಗದಿ
ಹೊಕ್ಕಿರುವವನೂ,
ಸರ್ವೇಶನ
ಕೃಪಾವಾತ್ಸಲ್ಯದಿ

ನೆಲ್ಗೊಂಡ ಭಕ್ತನೂ,
ವಿಶಿಷ್ಟ ಸುಖದುಃಖದಲ್ಲಿ,
ಸಮಸ್ತ ರಾಜ್ಯಕ್ಷೋಭೆಯಲ್ಲಿ
ಸುಭದ್ರನೇ.

2. ಯೆಹೋವನ
ಅಪ್ರತಿ ಸ್ನೇಹವೆ
ಅಭಯವೆನಗೆ.
ಶತ್ರುಂಗಳ
ಉಪಾಯತಂತ್ರಕೆ
ನಾನೆಂದು ಹೆದರೆ.
ಶೋಕಾಬ್ಧಿ ತೆರೆನೊರೆಯಲ್ಲಿ,
ನನ್ನನ್ನು ಮೃತ್ಯು ಹಿಡಿದಲ್ಲಿ
ನಾ ಬಾಳುವೆ.

3. ಯೆಹೋವನ
ವಾಗ್ದತ್ತನೆಲ್ಲವು
ಸಂಪೂರ್ಣವಹುದು.
ಸನ್ಮಾರ್ಗದ
ತುದೀಲಿ ಮೋಕ್ಷವು
ಭಕ್ತಂಗೆ ತಪ್ಪದು.
ದೇವಾನುಗ್ರಹವೆನ್ನ ತೋಷ,
ಪವಿತ್ರ ವಾಕ್ಯ ನನ್ನ ಪೋಷ
ಭೂಯಾತ್ರೆಗೆ.

4. ಯೆಹೋವನ
ಕೃಪಾಕಟಾಕ್ಷವು
ನನ್ನಿಷ್ಟ ಪದವಿ.
ದಯಾತ್ಮನ
ಸುಶಿಕ್ಷೆ ಬರಲು,
ಪ್ರಲಾಪಕಾಲದಿ
ವಿಧೇಯನಾಗಿ ಬೊಗ್ಗುತ್ತೇನೆ,
ಬಾಯ್ ಮುಚ್ಚಿ ಒಡಂಬಟ್ಟಿದ್ದೇನೆ
ದೇವಾಜ್ಞೆಗೆ.

5. ಯೆಹೋವನ
ಮಹಾಂತಃಕರಣ
ಅಪರಿಮಿತವು.
ಪಾಪಾತ್ಮನ
ವಿನಾಶ ಮರಣ
ಇಚ್ಛೈಸನೆಂದಿಗು.
ದುರ್ಗತ ಶಾಪಗ್ರಸ್ತರನ್ನು
ವಿಮುಕ್ತಿ ಮಾಡೊ ಕ್ರಿಸ್ತನನ್ನು
ತಾ ಕೊಟ್ಟನು.

6. ಯೆಹೋವನ
ಆಶ್ರಯದುರ್ಗವ
ಹೊಕ್ಕಿರು ಬಿಡದೆ!
ಸರ್ವೇಶನ
ಕೃಪಾವಾತ್ಸಲ್ಯವ
ನಂಬೆನ್ನ ಮನವೇ!
ವಿಶ್ವಾಸಿಸೋ! ಹೋರಾಟದಲ್ಲಿ
ಗಟ್ಟ್ಯಾಗಿ ನಿಲ್ಲು! ನಿನಗಲ್ಲಿ
ಸೌಭಾಗ್ಯವೇ!

2. ಯೇಸುವಿನ ಭಜನೆ

೧೧

Schönster Herr Jesu.—M. T. 58.

1. ಸುಂದರ ಯೇಸು!
ಸರ್ವಲೋಕಕರ್ತ!
ನಾರಿಪುತ್ರ, ದೇವಜ!
ಆತ್ಮದ ಮೋದ!
ಆತ್ಮಕಿರೀಟ!
ಪ್ರೀತಿಸುತ್ತಿರ್ವೆ ನಿನ್ನನ್ನ.

2. ಹೊಳ್ಪದು ನಾಡು,
ಹೊಳ್ಪದಿನ್ನು ಕಾಡು,
ಚೈತ್ರಮಾಸ ಬಂದರೆ;
ಅಧಿಕ ಹೊಳ್ಪು,
ಅಧಿಕ ಶುಚಿ
ಶಾಂತಿದ ಯೇಸುವಲ್ಲಿಯೇ!

3. ಸೂರ್ಯನು ಚಂದ,
ಚಂದ್ರಕಾಂತಿ ರಮ್ಯ,
ತಾರಾರಾಶಿ ಮಿಂಚೊದು;
ಯೇಸುವ ಶುದ್ಧ
ತೇಜಸಿನಲ್ಲಿ
ಬೆಳ್ಕಿಗು ಬೆಳಕಿಲ್ಲವು.

೧೨

Mel. Meinen Jesum lass' ich nicht.
M. T. 72.

1. ಯೇಸು ಕ್ರಿಸ್ತ, ನಿನಗೆ
ನಿತ್ಯ ಘನ ಕೊಡುತೇವೆ;
ನಿನ್ನ ಕೃಪೆಯಿಂದಲೆ
ನಿನ್ನ ಪ್ರಜೆಯಾಗಿದ್ದೇವೆ!
ನೀನು ಇಹಪರಕೆ
ನಮ್ಮ ಗತಿ, ಯೇಸುವೆ!

2. ನಮ್ಮ ಕಷ್ಟ ತಿಳಿದು
ದೇವಸನ್ನಿಧಾನ ಬಿಟ್ಟಿ;
ನಮ್ಮ ದ್ವೇಷವರಿತು,
ನಮ್ಮ ಮೇಲೆ ಪ್ರೀತಿ ಇಟ್ಟಿ;
ಆದಿತೇಜ ತ್ಯಜಿಸಿ
ನರನಾಗಿ ಹುಟ್ಟಿದಿ.

3. ನಮ್ಮ ಪಾಪರಾಶಿಗೆ
ಪ್ರಾಯಶ್ಚಿತ್ತ ಮಾಡ ಬಂದಿ;
ಮೃತ್ಯುವಶ ಜನಕೆ
ಹೊಸ ಜೀವವನ್ನು ತಂದಿ;
ನಮ್ಮ ಶಾಪ ವಹಿಸಿ
ನಿನ್ನ ರಕ್ತ ಚೆಲ್ಲಿದಿ.

4. ನೀನು ಸತ್ತು ಜೈಸಿದಿ
ಕ್ರೂರ ಮೃತಿರಾಜನನ್ನು;

ನಿನ್ನ ಜೀವವರ್ಪಿಸಿ
ಕೊಂಡುಕೊಂಡಿ ಕ್ಷೇಮವನ್ನು
ಪಾಪಬದ್ಧ ವಂಶಕೆ.
ನಿನ್ನ ಪ್ರೀತಿ ದೊಡ್ಡದೆ!

5. ಪೊಸಿಯನ್ನ, ಯೇಸುವೆ,
ಸೋತ ಹಾಗೆ ಕಂಡು, ಗೆದ್ದಿ!
ಭೂಮಿಗರ್ಭದೊಳಗೆ
ಸೇರಿ, ತೇಜದಿಂದ ಎದ್ದಿ.
ಈಗ ಶ್ರೇಷ್ಠ ಪೀಠದಿ
ಕೂತು ರಾಜ್ಯವಾಳುತಿ.

6. ಕ್ರಿಸ್ತ, ನೀನು ಮರಳಿ
ಚೀಯೋನಲ್ಲಿ ಸೇರುವಾಗ,
ನಿತ್ಯ ರಾಜ್ಯ ಸ್ಥಾಪಿಸಿ
ತೇಜಪೀಠವೇರಲಾಗ
ನಿನಗೆಲ್ಲ ಲೋಕವು
ನಮಸ್ಕಾರ ಮಾಡೊದು.

7. ಈಗ ನಾವು ನಿನಗೆ
ನಂಬಿ ಘನ ಕೊಡುತೇವೆ;
ನಿನ್ನ ಕೃಪೆಯಿಂದಲೆ
ನಿನ್ನ ಪ್ರಜೆಯಾಗಿದ್ದೇವೆ.
ನೀನು ಇಹಪರಕೆ
ನಮ್ಮ ಗತಿ, ಯೇಸುವೆ!

೧೩

Mel. **Gott sei Dank in aller Welt.**
M. T. 10.

1. ನನ್ನ ಯೇಸು ಕ್ರಿಸ್ತನೆ,
ನಿನ್ನ ಸ್ತೋತ್ರ ಹಾಡುವೆ.
ನಿನ್ನ ದಯೆ ನನಗೆ
ಅತಿಹಿತವಾಗಿದೆ!

2. ನಿನ್ನ ಚಿತ್ತದಿಂದಲೆ
ಇಹದಲ್ಲಿ ಹುಟ್ಟಿದೆ;
ನಿನ್ನ ಕೃಪೆಯಿಂದಲೆ
ಪರಮೋಕ್ಷ ಸೇರುವೆ.

3. ಶಾಪವಂಶಕ್ಕೋಸ್ಕರ
ನೀನು ತಾಳ್ದಿ ಶಾಪವ;
ನಿನ್ನ ಪ್ರಾಣಯಜ್ಞವೆ
ನಮ್ಮ ಪ್ರಾಣರಕ್ಷಣೆ!

4. ಗೋರಿಕತ್ತಲೊಳಗೆ,
ಕರ್ತ, ನೀನು ಸೇರಲೆ,
ಮರಣಾಂಧಕಾರವು
ಪರಿಹಾರವಾಯಿತು.

5. ಯೇಸು, ನಿನ್ನ ದೇಹವು
ಆತ್ಮಾಹಾರವಾದದು;
ನಿನ್ನ ರಕ್ತ, ಕ್ರಿಸ್ತನೆ,
ಜೀವಪಾನ ನಮಗೆ.

6. ನೀತಿ ನಿನ್ನ ಕೃತ್ಯವು,
ನಿನ್ನ ಗುಣ ಪ್ರೀತಿಯು;

ತ್ರಾಣ ನಿನ್ನ ಆಜ್ಞೆಯು,
ನಿನ್ನ ವಾಕ್ಯ ಪ್ರಾಣವು.

7. ಯೇಸು, ನನಗೊಲಿದು,
ನನ್ನ ಪಾಪ ಹರಿಸು!
ನನ್ನ ಹೃದದೊಳಗೆ
ಮೂಡಿ ಆಳು, ಸೂರ್ಯನೆ!

8. ಆಗ ನಿನ್ನ ಪ್ರೀತಿಯು
ನನ್ನ ಕ್ಷೇಮವಹುದು;
ನಿನ್ನ ದಿವ್ಯ ಜ್ಞಾನವು
ಅಹುದಾತ್ಮಜ್ಯೋತಿಯು.

9. ನನ್ನ ಯೇಸು ಕ್ರಿಸ್ತನೆ,
ನಿನ್ನ ಸ್ತೋತ್ರ ಹಾಡುವೆ.
ನಿನ್ನ ದಯ ನನಗೆ
ಅತಿಹಿತವಾಗಿದೆ!

೧೪

Meinen Jesum lass' ich nicht.
M. T. 72.

1. ನನ್ನ ಯೇಸುವಗಲೆ.
ಆತ ಸತ್ತ ನನಗಾಗಿ.
ಎಡೆ ಬಿಡದಾತಗೆ
ಅಂಟುತೇನೆ ಸ್ಥಿರವಾಗಿ.
ಆತ ಜೀವಜ್ಯೋತಿಯೆ!
ನನ್ನ ಯೇಸುವಗಲೆ.

2. ನನ್ನ ಯೇಸುವಗಲೆ.
ನನ್ನ ಆಸ್ತಿ, ನನ್ನ ಪ್ರಾಣ
ವಶ ಕೊಟ್ಟೆನಾತಗೆ;
ಆತ ನನ್ನ ಸಮಾಧಾನ.
ನಾನು ಇರ್ವ ವರೆಗೆ
ನನ್ನ ಯೇಸುವಗಲೆ.

3. ಇಂದ್ರಿಯಂಗಳೊಳಗೆ
ತ್ರಾಣಧಾತು ಇಲ್ಲವಾಗಿ,
ನನ್ನ ಅಂತ್ಯಕಾಲಕೆ
ಕಣ್ಣು ಮೊಬ್ಬು ಬರಲಾಗಿ,
ಜೀವ ಪೋಪ ವೇಳೆಗೆ
ನನ್ನ ಯೇಸುವಗಲೆ.

4. ಸದ್ವಿಶ್ವಾಸ ಫಸದಿ
ಶೋಭಿಸುವ ಸ್ಥಳ ಸೇರಿ,
ತಂದೆಬಲಪಾರ್ಶ್ವದಿ
ಯೇಸು ಕೂತ ಪೀಠಕೇರಿ
ಆತನಲ್ಲಿ ಹರ್ಷಿಪೆ.
ನನ್ನ ಯೇಸುವಗಲೆ.

5. ಮಾಯೆ, ಡಂಭ, ಮಹಿಮೆ
ನನಗೇನು ಹಿತವಲ್ಲ;
ಸತ್ತು ಎದ್ದ ಯೇಸುವೆ
ಪೂರ್ಣ ತೃಪ್ತಿ ಮಾಡ ಬಲ್ಲ.
ನನ್ನ ಮಿತ್ರನಾತನೆ!
ನನ್ನ ಯೇಸುವಗಲೆ.

6. ನನ್ನ ಯೇಸುವಗಲೆ.
ಇರ್ವೆನಾತನೈಕ್ಯದಲ್ಲಿ,
ಆತನಿಂದ ಕುಡಿವೆ

ಜೀವಜಲದ್ದೊಳೆಯಲ್ಲಿ.
ಒಪ್ಪಿಕೊಳ್ಳಿ, ಭ್ರಾತೃರೆ!
ನನ್ನ ಯೇಸುವಗಲೆ.

೧೫

Liebe, die du mich zum Bilde.
M. T. 77.

1. ಪ್ರೀತಿ, ದಿವ್ಯ ರೂಪವಾಗಿ
ನನ್ನ ನೀನು ನಿರ್ಮಿಸಿ,
ಪ್ರೀತಿ, ಪೂರ್ಣ ಕೃಪೆಯಾಗಿ
ಬಿದ್ದ ನನ್ನನೆತ್ತಿದಿ!
ಪ್ರೀತಿ, ಸರ್ವಕಾಲಕೆ
ದಾಸನಾದೆ ನಿನಗೆ!

2. ನೀನು ನನ್ನನ್ನಾದಿಯಿಂದ
ಆದುಕೊಂಡಿ, ಪ್ರೀತಿಯೆ;
ಪ್ರೀತಿ, ಬಂದು ದಿವದಿಂದ,
ನನ್ನ ಹಾಗೆ ಹುಟ್ಟಿದೆ!
ಪ್ರೀತಿ, ಸರ್ವಕಾಲಕೆ
ದಾಸನಾದೆ ನಿನಗೆ!

3. ಪ್ರೀತಿ, ನೀನು ಕ್ರೂಜೆಯಲ್ಲಿ
ಸತ್ತಿ ನನಗಾಗಿಯೆ;
ಪ್ರೀತಿ, ನೀನು ಯುದ್ಧದಲ್ಲಿ
ನನಗಾಗಿ ಕಾದಿದೆ!
ಪ್ರೀತಿ, ಸರ್ವಕಾಲಕೆ
ದಾಸನಾದೆ ನಿನಗೆ!

4. ಪ್ರೀತಿ, ನೀನೆ ಸತ್ವ, ತ್ರಾಣ,
ಆತ್ಮ, ಜೀವ, ಬೆಳಕು;
ಪ್ರೀತಿ, ನಂಗೆ ನಿನ್ನ ಪ್ರಾಣ
ಪಾಪಬಲಿಯಾಯಿತು!
ಪ್ರೀತಿ, ಸರ್ವಕಾಲಕೆ
ದಾಸನಾದೆ ನಿನಗೆ!

5. ಪ್ರೀತಿ, ನಿನ್ನ ನೊಗವನ್ನು
ಎಂದೂ ಹೊತ್ತುಕೊಂಬೆನು;
ಪ್ರೀತಿ, ನನ್ನ ಎದೆಯನ್ನು
ಪ್ರೇಮಭ್ರಾಂತಿ ಬಿಡದು!
ಪ್ರೀತಿ, ಸರ್ವಕಾಲಕೆ
ದಾಸನಾದೆ ನಿನಗೆ!

6. ಪ್ರೀತಿ, ನನ್ನ ಪ್ರಾಣಕಾಗಿ
ಎಷ್ಟೊ ಶ್ರಮ ತಾಳಿದಿ!
ಪ್ರೀತಿ, ಮಧ್ಯವರ್ತಿಯಾಗಿ
ನನಗಾಗಿ ಬೇಡುತಿ!
ಪ್ರೀತಿ, ಸರ್ವಕಾಲಕೆ
ದಾಸನಾದೆ ನಿನಗೆ!

7. ಪ್ರೀತಿ, ನಂಗೆ ಗೋರಿ ಬಿಟ್ಟು
ಏಳ ನೀನು ಹೇಳಲೆ,
ಜೀವಮಾಲೆಯೆನಗಿಟ್ಟು
ಕೊಟ್ಟ ನಿನಗೆರ್ಗುವೆ!
ಪ್ರೀತಿ, ಸರ್ವಕಾಲಕೆ
ದಾಸನಾದೆ ನಿನಗೆ!

೧೬

Mel. Sollt' es gleich bisweilen scheinen.—M. T. 38.

1. ಸೂರ್ಯನೇರಿ ಮೇಘದಲ್ಲಿ
ಜ್ಯೋತಿ ಚೆಲ್ಲುವಂದದಲ್ಲಿ
ನರರಂಧಕಾರವ
ಯೇಸು ಹೋಗ ಮಾಡುವ.

2. ಹೊನ್ನು ಮುಡಿ ಮುಂಡೆಗಿಲ್ಲ,
ಅಹಂಕಾರ ಛಾಯವಿಲ್ಲ,
ಕರುಣಾತಿಶಯವೆ
ಆತನಲ್ಲಿ ಮಿಂಚುತ್ತೆ.

3. ಹಾನೋಕನ ಭಾವಶುದ್ಧಿ,
ಇಸಾಕ್ ತಾಳ್ದ ಯಾಗಬುದ್ಧಿ,
ಪಿತೃಗಳ ಧರ್ಮವು
ಆತನಲ್ಲಿ ದೃಶ್ಯವು.

4. ಕಾಲಜ್ಞಾನಿಕೂಟವೆಲ್ಲ
ದೃಷ್ಟಿಯಿಟ್ಟು ಮೆಲ್ಲಮೆಲ್ಲ
ರಕ್ಷಕನ್ನ ಕಾಣಲು
ಪಾದಕಡ್ಡ ಬಿದ್ದರು.

5. ಯಾವ ಮುನೀ ಬಾಯಿ
ಯಿಂದ
ನಾವು ಕೇಳೊ ಮಾತಿಗಿಂತ
ಯೇಸುವಿನ ವಾಕ್ಯವು
ಎಷ್ಟೊ ಶ್ರೇಷ್ಠವಾದದ್ದು.

6. ಕವಿ, ಋಷಿ, ರಾಜ, ಶೂರ,
ಇವರಲ್ಲಿ ಪಾಪ ದೂರ
ಮಾಡಿದವರಾರೆಲೋ?
ಕ್ರಿಸ್ತನೊಬ್ಬನಲ್ಲವೋ!

7. ಮರ್ತ್ಯರೇ, ನಿಮ್ಮಲ್ಲಿ ಬಂದ;
ಪ್ರೀತಿ, ನೀತಿ, ಜೀವ ತಂದ;
ಆತನ ಕಟಾಕ್ಷವೆ
ಗೊತ್ತಿಲ್ಲೇನು ನಿಮಗೆ?

8. ದೈವಮಾನವಕುಮಾರ,
ನಿನ್ನಮೂಲ್ಯವುಪಕಾರ
ನನ್ನ ಗತಿ; ನನ್ನನ್ನು
ಹಿಡಿ, ತ್ರಾಹಿ ನಿತ್ಯಕು!

9. ಕ್ರೂಜೆಯಲ್ಲಿ ತೂಗಿದಾತ,
ಮೇಘದಲ್ಲಿ ಬರುವಾತ
ಶುದ್ಧ, ಶುದ್ಧ, ಶುದ್ಧನು!
ಅನ್ನಲೆಲ್ಲ ಸೃಷ್ಟಿಯು.

೧೭

John 14, 6.
Thou art the way; by Thee alone.
M. T. 20.

1. ನೀ ಮಾರ್ಗ, ಕರ್ತ, ನಿನ್ನನ್ನೆ
ಆಶ್ರಯಿಸಿದೆವು;
ನಿನ್ ಹೊರ್ತು ತಂದೆ ಬಳಿಗೆ
ಯಾರೊಬ್ಬ ಬಾರನು.

2. ನೀ ಸತ್ಯ; ನಿನ್ನ ವಾಕ್ಯವು
ಜ್ಞಾನೋಪದೇಶವು;
ಸುಬುದ್ಧಿ, ಶುದ್ಧ ಮನಸು
ನಿನ್ನಿಂದ ಬಪ್ಪುದು.

3. ನೀ ಜೀವ; ಗೋರಿ ಒಡೆದು
ಸಾವನ್ನು ಜೈಸಿದಿ;
ನಿನ್ನನ್ನು ನಂಬಿದವನು
ಇನ್ನಾವ್ಯಕಂಜಲಿ!

4. ನೀ ಮಾರ್ಗ, ಸತ್ಯ, ಜೀ
ವವು,
ಸನ್ಮಾರ್ಗ ತೋರಿಸಿ,
ಸುಶಿಕ್ಷೆ ಕೊಟ್ಟು, ಸೇರಿಸು
ನಮ್ಮನ್ನು ಜೀವದಿ!

೧೮

Wer ist wohl wie du.—M. T. 56.

1. ಶಾಂತ ಯೇಸುವೇ,
ನಿನ್ನ ಹಾಗೆಯೇ
ಯಾರು ಸರ್ವಲೋಕದಲ್ಲಿ?
ಎಲ್ಲ ನರಪುತ್ರರಲ್ಲಿ
ಅತಿಶ್ರೇಷ್ಠನೇ,
ಶಾಂತ ಯೇಸುವೇ!

2. ನನ್ನ ಸಾಲವು
ಪೀಡೆ ಕೊಡಲು,
ನೀನು ದೊಡ್ಡ ಪ್ರೀತಿಯಿಂದ
ನನ್ನನೆಲ್ಲ ದೋಷದಿಂದ
ಶುದ್ಧ ಮಾಡಿದಿ
ಸಾಲ ಸಲ್ಲಿಸಿ.

3. ಆದಿತೇಜನೇ,
ಪ್ರೀತಿಯಿಂದಲೇ
ನರರಲ್ಲಿ ನರನಾಗಿ
ನೀಚ ಶತ್ರುಜನಕಾಗಿ
ನಿನ್ನನರ್ಪಿಸಿ
ಯಜ್ಞ ಮಾಡಿದಿ!

4. ದಿವ್ಯ ಶೂರನೆ,
ಮೃತಿಯೊಳಗೆ
ಸೇರಿ, ದುಷ್ಟ ಶತ್ರುವನ್ನು
ಜೈಸಿ, ನಮ್ಮ ಶಿಕ್ಷೆಯನ್ನು
ಅನುಭವಿಸಿ,
ಮೇಲಕೇರಿದಿ!

5. ಸತ್ಯವಾದಿಯೇ,
ಸರ್ವರಾಜನೇ!
ನಿನ್ನ ಚಿತ್ತಕೊಪ್ಪುತೇನೆ;
ನಿನ್ನ ಶಿಷ್ಯನಾಗಿದ್ದೇನೆ.
ನಿನ್ನ ಪಾದವೆ
ಗತಿ ನನಗೆ!

೧೯

Mel. Let us with a gladsome mind.—M. T. 11.

1. ಯೇಸು ನಮ್ಮ ದೇವರು;
ತಕ್ಕ ಸ್ತೋತ್ರ ಹಾಡಿರಿ!
ಆತ ನಮ್ಮ ಕರ್ತನು;
ಸತ್ಯ ಸೇವೆ ಆಗಲಿ!

2. ಯೇಸು ನಮ್ಮ ಗುರುವು;
ಶ್ರೇಷ್ಠ ಅಯ್ಯನಾತನೇ.

ಯೇಸುವಿನ ಶಿಕ್ಷೆಯು
ನಮ್ಮ ನಿತ್ಯಜೀವವೇ.

3. ಯೇಸು ನಮ್ಮ ರಕ್ಷಕ;
ಆತ ಪ್ರೀತಿಪೂರ್ತಿಯು;
ಆತ ಪಟ್ಟ ಮರಣ
ಪ್ರಾಯಶ್ಚಿತ್ತಮೂಲವು.

4. ಯೇಸು ನಮ್ಮ ಮಿತ್ರನು.
ಯೇಸುವನ್ನು ಸ್ನೇಹಿಸಿ,
ಜೀವವಿರೋ ವರೆಗು
ನಂಬಿ, ದೃಢ ನಿಲ್ಲಿರಿ!

೨೦

Mel. Meinen Jesum lass' ich nicht.
M. T. 72.

1. ಯೇಸು ನಮ್ಮ ರಕ್ಷಕ!
ಪಾಪಪರಿಹಾರದಾನ
ಆತ ಸಿದ್ಧ ಮಾಡಿದ.
ಕೇಳಿರೀ ಸುವರ್ತಮಾನ!
ಧೈರ್ಯವಾಗಿ ನಂಬುವ!
ಯೇಸುವೆಮ್ಮ ರಕ್ಷಕ!

2. ಯೇಸು ನಮ್ಮ ಕುರುಬ!
ನಿಜ ರೊಟ್ಟಿ, ನಿಜ ಪಾನ
ಸಿದ್ಧ ಮಾಡಿ ಪುಷ್ಕಲ,
ಒಳ್ಳೇ ಊಟ, ಒಳ್ಳೇ ದಾನ
ತನ್ನ ಕುರಿಗಿಡುವ.
ಯೇಸುವೆಮ್ಮ ಕುರುಬ!

3. ಯೇಸು ನಮ್ಮ ಸ್ನೇಹಿತ!
ಕಷ್ಟವಾದರೂ ಅಭಯ
ಕೊಟ್ಟು, ನಮ್ಮ ಕಾಯುವ.
ನಾವು ಆತನೊಳ್ಳೇ ದಯ
ನೋಡಿ, ಪ್ರೀತಿ ಮಾಡುವ!
ಯೇಸುವೆಮ್ಮ ಸ್ನೇಹಿತ!

4. ಯೇಸು ನಮ್ಮ ಬೋಧಕ!
ಆತ ಬೋಧಿಸಿದ ರೀತಿ
ಬೆಳಕುಳ್ಳ ಶುದ್ಧತ್ವ,
ನಿಜ ಪ್ರೀತಿ, ಸತ್ಯ, ನೀತಿ;
ಈ ಸದ್ಬೋಧೆ ಕೇಳುವ!
ಯೇಸುವೆಮ್ಮ ಬೋಧಕ!

5. ಯೇಸು ನಮ್ಮ ಯಾಜಕ!
ಆತನೇ ಮಧ್ಯಸ್ಥಗಾರ.
ತನ್ನ ರಕ್ತ ಚೆಲ್ಲಿದ
ಹೊತ್ತುಕೊಂಡು ನಮ್ಮ ಭಾರ;
ದಿವ್ಯ ಯಜ್ಞ ಮಾಡಿದ.
ಯೇಸುವೆಮ್ಮ ಯಾಜಕ!

6. ಯೇಸು ನಮ್ಮ ಕರ್ತನು!
ಸಾಲ ತೆತ್ತನೆಮಗಾಗಿ;
ಬೆಳ್ಳಿಯಲ್ಲ, ನೆತ್ತರು
ಕೊಟ್ಟಿದ್ದಾನೆ ಕ್ರಯವಾಗಿ;
ನಾವು ಆತನವರು.
ಯೇಸುವೆಮ್ಮ ಕರ್ತನು!

7. ದೇವಪುತ್ರ ಯೇಸುವೆ,
ನೀನೆ ನನ್ನ ಯಜಮಾನ!
ನಿನ್ನ ಸೇವೆ ಹಿಡಿದೆ.
ನೀ ಬೇಕಾದ ಶಕ್ತಿದಾನ
ನಂಗೆ ದಯಪಾಲಿಸು,
ರಕ್ಷಾಕಾರ್ಯತೀರಿಸು!

೨೧

Mel. Jesu, komm doch selbst zu mir.—M. T. 12.

1. ಯೇಸು ಕ್ರಿಸ್ತನುತ್ತಮ
ತ್ರಾಣವುಳ್ಳ ಕುರುಬ;
ಯೇಸುವಿನ ಮಂದೆಯು
ಭದ್ರವಾಗಿರುವದು.

2. ಯೇಸುಪತಿಕುರಿಗೆ
ಹಸಿ ಮೇವು ಊಟಕೆ,
ಶುದ್ಧ ನೀರು ಪಾನಕೆ
ನಿತ್ಯ ದೊರಕುತದೆ.

3. ಒಂದೇ ಒಂದು ಕುರಿಯು
ಮಾರ್ಗ ತಪ್ಪಿ ಹೋಗಲು,
ಅದು ಸಿಕ್ಕುವನಕ
ಬಿಡನೊಳ್ಳೇ ಕುರುಬ.

4. ಲೋಕಕಾಡಿನೊಳಗೆ
ಮಂದೆ ಪಾಲಿಸ್ಯೇಸುವೆ!
ನಾನು ಬಡ ಕುರಿಯು;
ನನ್ನ ಆತ್ಮ ಹುಡುಕು!

೨೨

Luke 15, 3—7.
Mel. Weil ich Jesu Schäflein bin.
M. T. 67.

1. ಒಂದು ನೂರು ಕುರಿಯು
ಹಟ್ಟಿಯೊಳಗಿದ್ದವು.
ಕಾಯುವವ ಪ್ರೀತಿಯಿಂದ
ಕುರಿ ನಡಿಸಿದ್ದರಿಂದ,
ಸುಖಕ್ಷೇಮ ಪಡೆದು
ಚಿಂತೆಯಿಲ್ಲದಿದ್ದವು.

2. ಒಂದು ಕುರಿ ಮಾತ್ರವೆ
ಏನೂ ಸುಖ ಕಾಣದೆ,
ತನಗೆ ಸ್ವತಂತ್ರವನ್ನು
ಬಯ್ಸಿಕೊಂಡು, ಹಟ್ಟಿಯನ್ನು
ಬಿಟ್ಟು, ಹಟ ಹಿಡಿದು,
ದೂರ ಓಡಿ ಹೋಯಿತು.

3. "ಅಪ್ಪಾ, ತೊಂಭತ್ತೊಂಭತ್ತು
ಹಟ್ಟಿಯೊಳಗಿರಲು,
ಒಂದು ಹೋದರೇನು ನಷ್ಟ?
ತರಲಿಕ್ಕೂ ಎಷ್ಟೋ ಕಷ್ಟ!"
ಎಂತ ಜನರೆಲ್ಲರು
ಬುದ್ಧಿ ಹೇಳ ಹೋದರು.

4. ಆದರೊಳ್ಳೇ ಕುರುಬ
ಅಂಥ ಮಾತು ಲಾಲಿಸ.
ಕುರಿ ಹಿಂದೆ ಹೋಗಿ, ತಾನೆ
ಕುರಿ ಹೆಜ್ಜೆ ಹಿಡ್ಯುತಾನೆ,

ಓಡಿ ಬೇಸರಾಗದೆ—
"ಕುರಿ ಎಲ್ಲಿ ಬಿದ್ದದೆ?"

5. ಹಟ್ಟಿ ಬಿಟ್ಟ ಕೂಡಲೆ
ಕಷ್ಟ ಬಂತು ಕುರಿಗೆ.
ಗುಡ್ಡ ಏರಿ, ಕೊರ್ಕಳಲ್ಲಿ
ಬಿದ್ದು ಕೊಂಡು, ಮುಳ್ಳಿನಲ್ಲಿ
ಗಾಯವಾಗಿ ಸಾಯಲು
ಕುರುಬಂಗೆ ಸಿಕ್ಕಿತು.

6. ಬುದ್ಧಿಗೆಟ್ಟ ಕುರಿಯು
ಎತ್ತಿಕೊಂಡು, ಕುರುಬ
ಎಂಥ ಗಾಢಕತ್ತಲನ್ನೂ
ಗುಡ್ಡ ತಗ್ಗು ಹಳ್ಳವನ್ನೂ
ದಾಟಿ ಬಂದನೆಂಬದು
ಯಾರಿಗೂ ಗೊತ್ತಿಲ್ಲವು.

7. "ಯಾಕೆ ಗುಡ್ಡದಾರಿಯು
ತುಂಬ ರಕ್ತಹನಿಯು?"—
"ತಪ್ಪಿ ಹೋದ ಕುರಿಗಾಗಿ
ನಾನು ಓಡುತಿರಲಾಗಿ,
ಬಂಡೆಗಲ್ಲು ತಾಗಲು
ನನ್ನ ರಕ್ತ ಸೋರಿತು."

8. "ಯಾಕೆ ನಿನ್ನ ಕೈಗಳು
ಇಷ್ಟು ಗಾಯವಾದವು?"
"ಕುರಿ ಸಿಕ್ಕುವಷ್ಟರಲ್ಲಿ
ರಾತ್ರಿಯಾಗಿ, ಕಾಡಿನಲ್ಲಿ
ತಿರುಗಾಡುತಿರಲು
ಮುಳ್ಳು ನಂಗೆ ಚುಚ್ಚಿತು."

9. ಆಗ ಭೂಮಿ ಮೇಲೆಯೂ
ಪರಲೋಕದಲ್ಲಿಯೂ
ದೂತಸೈನ್ಯ ಹರ್ಷವಾಗಿ,
ಕುರುಬನ ಸ್ತೋತ್ರಕಾಗಿ—
"ತನ್ನ ಕುರಿ ತಂದನು"
ಎಂಬ ಗೀತ ಹಾಡಿತು.

೨೩

John 10.
Weil ich Jesu Schäflein bin.
M. T. 68.

1. ಯೇಸುವಿನ ಕುರಿಯು
ನಾನು; ಚಿಂತೆ ಪಡೆನು.
ನಂಗೆ ನಿತ್ಯಕ್ಕೂ ಸಂತೋಷ;
ಪ್ರೀತಿಯಿಂದ ಒಳ್ಳೇ ಪೋಷ
ಕೊಟ್ಟು ಕಾಯ್ವ ಯೇಸುವು
ನನ್ನ ನಾಮ ಬಲ್ಲನು.

2. ಕೋಲು ಹಿಡಿದೆನ್ನನ್ನು
ಶಾಂತಿಯಿಂದ ಕಾಯಲು
ಸುಖಕ್ಷೇಮದಲ್ಲಿದ್ದೇನೆ,
ಒಳ್ಳೇ ಮೇವು ಮೆಲ್ಲುತೇನೆ;
ದಾಹವಾಗೆ, ಕುರುಬ
ತೋರಿಸೋನು ಬುಗ್ಗೆಯ.

3. ಸುಖಿಯಾದ ಕುರಿಗೆ
ಹೃತ್ಸಂತೋಷವಿರದೆ?
ಈ ಸುಕಾಲದಂತ್ಯದಲ್ಲಿ
ಆತ ಸ್ವಂತ ಹೆಗಲಲ್ಲಿ

ಮನೆಗೆನ್ನನೊಯ್ಯಲು,
ಸುಖಪೂರ್ತಿ ಅಹುದು.

೨೪

Der beste Freund ist in dem Himmel.—M. T. 93.

1. ನನ್ನೊಳ್ಳೇ ಮಿತ್ರ ದಿವದಲ್ಲಿ,
ಭೂಮಿಾಲಿ ಮಿತ್ರರಿಲ್ಲವು;
ಅಸತ್ಯ ಲೋಕಭ್ರಮೆಯಲ್ಲಿ
ಕುಯುಕ್ತಿ ಬಲವಾದದು.
ನನ್ನೊಳಗಿದೇ ಮನಸು—
ಕ್ರಿಸ್ತ್ಯೇಸು ಒಳ್ಳೇ ಮಿತ್ರನು.

2. ಮನುಷ್ಯರಲ್ಲಿ ಸ್ಥಿರವಿಲ್ಲ,
ನನ್ನಾಪ್ತ ದೃಢ ಶಿಲೆಯು;
ನಾ ಸೋಲುವಾಗ, ಬಿಡೋದಿಲ್ಲ;
ನಾ ಬೇಡೆ, ಕೊಡದಿರನು.
ತಾಯ್ತಂದೆ ಮರ್ತು ಬಿಡೋರು,
ಕ್ರಿಸ್ತ್ಯೇಸು ಒಳ್ಳೇ ಮಿತ್ರನು.

3. ನಿನ್ನಾಪ್ತರೆಂಗೆ ಬೇಡ, ಲೋಕ!
ಆ ಕಳ್ಳರನ್ನು ನಂಬೆನು.
ನೀ ದ್ವೇಷ ಮಾಡಲೇನೂ ಶೋಕ
ನನ್ನೆದೆಯಲ್ಲಿ ಹುಟ್ಟದು.
ನನ್ನಾಪ್ತನೊಲ್ಮೆ ಕುಂದದು;
ಕ್ರಿಸ್ತ್ಯೇಸು ಒಳ್ಳೇ ಮಿತ್ರನು.

೨೫

What a friend we have in Jesus. M. T. 233.

1. ಸರ್ವ ಕಷ್ಟ ಪರಿಹಾರ
ಗೈಯುವಂಥ ಕ್ರಿಸ್ತನು
ಇದ್ದರೆನಗೆಂಥಾ ಭಾಗ್ಯ,
ಆತ್ಮಕ್ಕೆಂಥಾ ಸೌಖ್ಯವು!
ಮರ್ತ್ಯರಾದ ಮಿತ್ರರೆಲ್ಲ
ನನ್ನ ಮರ್ತುಬಿಟ್ಟರು,
ದಿವ್ಯ ಮಿತ್ರನಾದ ಕ್ರಿಸ್ತ
ಎಂದೂ ಬಿಡದಾತನು.

2. ಆತ ಹತ್ರವಿರುವಲ್ಲಿ
ತಾಪತ್ರಯ ಬಂದರು,
ದೃಷ್ಟಿಯಿಟ್ಟು ಆತನಲ್ಲಿ
ಶಾಂತಿ ಪಡಕೊಳ್ವೆನು.
ಆತನೊಳ್ಳೇ ಮಿತ್ರನಾಗಿ
ತಾಪಿಯಾದ ನನಗೆ—
"ನಾನು ಸಹತಾಪಿ" ಎಂದು
ಧೈರ್ಯವನ್ನು ಹೇಳನೆ?

3. ಹೊತ್ತುಕೊಳ್ಳಲಾರದಂಥ
ಭಾರ ನನಗಿರಲು,
ಆಪ್ತಮಿತ್ರ, ನೆರವಾಗು;
ನೀನೆ ನಂಗೆ ಶರಣು.
ನಾನು ಬಲಹೀನನೆಂದು
ನೀನು ತಿಳಿದಾತನು.
"ನನ್ನ ಕೃಪೆ ನಿಂಗೆ ಸಾಕು!"
ಎಂದು ಬಲ ಪಡಿಸು.

೨೬

Ich bete an die Macht der Liebe.
M. T. 94.

1. ಕ್ರಿಸ್ತ್ಯೇಸುವಲ್ಲಿ ಕಾಣಬಂದ
ಅಪಾರ ಪ್ರೀತಿ ಅರಿತು,
ಅರಿಷ್ಟಗ್ಹೊಸ ಜೀವ ತಂದ
ಕಟಾಕ್ಷಕಡ್ಡ ಬೀಳ್ವೆವು.
ನಾವಿನ್ನು ನಮ್ಮ ಮರೆಯೋಣ,
ಪ್ರೇಮಾಬ್ಧಿಯಲ್ಲಿ ಮುಳುಗೋ
ಣ!

2. ನಿನ್ನೊಲ್ಮೆ, ಯೇಸು, ರಕ್ಷಾ
ತ್ರಾಣ;
ನಿನ್ನಾಶೀರ್ವಾದ ಗತಿಯು.
ನೀನೆನ್ನ ಹೃದದಂತಃಪ್ರಾಣ;
ನೀನೆನ್ನ ನಿಜ ಮೋಕ್ಷವು.
ನೀ ಪ್ರೀತಿ, ಅಪ್ಪಿಕೊಳ್ಳು ನನ್ನ,
ಆರೈಕೆ ಮಾಡು ಶಿಶುವನ್ನ!

3. ನೀ ಮಾತ್ರ ಬೇಕು, ನೀನ
ಗತ್ಯ;
ನಾ ನಿನಗಾಗಿ ಬಾಳುವೆ.
ಪ್ರಪಂಚ ಪೂರ್ಣವಾಗ್ಯಸತ್ಯ;
ನನ್ನಾಶಾಬಂಧ ನಿನ್ನಲೆ!
ನಿನ್ನಲ್ಲಿ ಶಾಂತಿ, ಹೃತ್ಸಂತೋಷ;
ನಿನ್ನಲ್ಲಿ ಶ್ರೇಷ್ಠ ಆತ್ಮಪೋಷ.

4. ಶ್ರೀ ಯೇಸು, ನಿನ್ನ ನಾಮ
ವನ್ನು
ಕೊಂಡಾಡುತೇವೆ ಎಂದಿಗು!
ಸಂಪ್ರೀತಿಮೂಲ, ಪ್ರೀತಿಯನ್ನು
ನಮ್ಮೊಳು ನೀನು ಹುಟ್ಟಿಸು!
ನೀ ತೋರಿಸಿಪ್ಪ ದಾರಿಯಲ್ಲಿ
ಸೇರೇವು ಜೀವರಾಜ್ಯದಲ್ಲಿ.

೨೭

How sweet the name of Jesus sounds.—M. T. 23.

1. ಎಷ್ಟಿಂಪು ಯೇಸುನಾಮವು
ವಿಶ್ವಾಸಿ ಕಿವಿಗೆ!
ಅಭಯವೀಯುವಂಥಾದು
ಕಂಗಾಲ ಭಕ್ತಗೆ.

2. ದಿಕ್ಕಿಲ್ಲದಂಥ ಪಾಪಿಗೆ
ಆಶ್ರಯವಾಗುತೆ.
ಅರಣ್ಯ ಹಾಯುವಾತಗೆ
ಈ ನಾಮ ಮನ್ನವೆ.

3. ಈ ನಾಮ ಭದ್ರಶಿಲೆಯು,
ಗುರಾಣಿ, ಆಸರೆ
ಒಬ್ಬೊಬ್ಬ ಕ್ರೈಸ್ತ ದಾಸಗು,
ಸಮಸ್ತ ಸಭೆಗೆ.

4. ಉದ್ಧಾರಿ, ಮಿತ್ರ, ಪಾಲಕ,
ಪ್ರವಾದಿ, ಅರಸೇ!
ಸ್ವೀಕಾರ ಮಾಡೀ ಗೀತವ,
ನನ್ನಲ್ಪ ಗೀತವೇ.

5. ಅಪಾರ ನಿನ್ನ ಪ್ರೀತಿಯ
ನಾನೆಡೆಬಿಡದೆ
ಕೊಂಡಾಡಿ ಶ್ವಾಸ ಹೋಗುವ
ಸಮಯ ಹಾಡುವೆ.

೨೮

In meines Herzens Grunde.
M. T. 130.

1. ನನ್ನೆದೆಗುಂಡಿಯಲ್ಲಿ
ನಿನ್ ನಾಮ ಮಾತ್ರವೆ,
ಐ, ಹಗಲಿರುಳಲ್ಲಿ
ತಳ್ತಳಿಸುತ್ತದೆ.
ಕ್ರಿಸ್ತ್ಯೇಸು, ನಿನ್ನ ರಕ್ತ
ನನ್ನಾತ್ಮತೃಪ್ತಿಯು!
ನಾ ನಿತ್ಯ ನಿಂಗಾಸಕ್ತ
ಆಳಾಗಿರುವೆನು.

2. ಶ್ರೀ ನಾಮವೇ! ಕ್ರಿಸ್ತ್ಯೇಸು
ನಾಮಾಧಿನಾಮವೇ!
ನೀನಿರೆ, ಎಲ್ಲ ಲೇಸು;
ನಿನ್ ಹೊರ್ತು ಸುಖವೇ?
ನಿನ್ನನ್ನು ನಂಬೋ ತಾಪಿ
ಸುಕ್ಷೇಮಶಾಲಿಯು;
ನಿನ್ನನ್ನು ಹೇಳ್ವ ಪಾಪಿ
ವಿಮುಕ್ತನಾಹನು.

3. ಬೇರೊಂದು ಹೆಸರಿಂದ
ಸಂರಕ್ಷೆಯಿಲ್ಲವು;
ಬೇರೊಂದು ಬೀಜದಿಂದ
ಸಂಜೀವನಾಗದು.
ಈ ಬೀಜ ಮಾತ್ರದಲ್ಲಿ
ಅನಂತ ಶಕ್ತಿಯು;
ಈ ಹೆಸರೊಂದರಲ್ಲಿ
ಅನಂತ ಸೌಖ್ಯವು!

4. ಕುಶಾಪಗ್ರಸ್ತನಾದ
ನಾನೀಗ ಮುಕ್ತನೇ!
ನರ್ಕಾಗ್ನಿಪಾತ್ರನಾದ
ನಾನೀಶಶಿಶುವೇ!
ನನ್ನೆದೆಕತ್ತಲಲ್ಲಿ
ಈ ಯೇಸುಹೆಸರು
ಅಪಾರ ತೇಜದಲ್ಲಿ
ತೋರೋದು ನಿತ್ಯಕೂ!

೨೯

Wenn ich ihn nur habe.
M. T. 59.

1. ನಾನು ಯೇಸುವನ್ನು
ಹಿಡಿದಿರಲೆ,
ನನ್ನ ಹೃದವಾತನನ್ನು
ಎಂದು ಮರ್ಯದಿದ್ದರೆ,
ಹೋಗೊದೆಲ್ಲ ದುಃಖ;
ತಪ್ಪದೆಂದು ಭಕ್ತಿ, ಪ್ರೀತಿ, ಸುಖ.

2. ನನ್ನ ಕರ್ತ ಮಾತ್ರ
ನನಗಿದ್ದರೆ,

ಇಹಭೋಗವೆಂಬ ಯಾತ್ರ
ನನಗಿನ್ನು ಯಾತಕೆ?
ಇಕ್ಕಟ್ಟಾದ ದ್ವಾರ
ಸೇರಿದವ ಭೋಗ ಮಾಡಲಾರ.

3. ಆತನಿರುವಲ್ಲಿ
ನನ್ನ ಸ್ಥಾನವು;
ಆತನೀಯ್ವ ವರದಲ್ಲಿ
ಪೂರ್ಣ ತೃಪ್ತಿ ತಪ್ಪದು.
ಹಾ, ಮಹಾ ಸಂತೋಷ!
ಆತನಲ್ಲಿ ನಿತ್ಯ ಆತ್ಮಪೋಷ.

೩೦

Ich will dich lieben, meine Stärke.
M. T. 87. 88.

1. ನನ್ನತಿಪ್ರಿಯ ನಿಜ ತ್ರಾಣ,
ನನ್ನತಿಪ್ರಿಯ ಒಡವೆ!
ನಿಂಗೊಲಿಯುತ್ತದೆನ್ನ ಪ್ರಾಣ;
ನೀನೆನ್ನ ನಿತ್ಯ ಆಶೆಯೆ!
ಹೃದ್ ಛಿನ್ನವಾಗೊ ವರೆಗು
ನೀ ಜೀವಜ್ಯೋತಿಯು!

2. ನನ್ನತಿಪ್ರಿಯ ಪ್ರಾಣಸ್ಥಾನ,
ನೀ ಪರಮೋತ್ತಮಾಪ್ತನು!
ನಾ ಮಾಳ್ಪೆ ನಿನ್ನ ಪ್ರೇಮ ಧ್ಯಾನ,
ನೀ ಜೀವ ಕೊಡೊ ವರೆಗು.
ನೀ ಮದಲಿಂಗನೆನಗೆ,
ದೇವರ ಕುರಿಯೇ!

3. ಅನಾದಿ ರಮಣೀಯ ಕಾಂತಿ!
ನಾ ಮರ್ತು ನಿನ್ನ ಭಜನೆ,
ನನ್ನೊಂದೇ ಗತಿ, ಸತ್ಯ ಶಾಂತಿ!
ನಿನ್ನನ್ನು ಪ್ರೀತಿ ಮಾಡದೆ
ಇಷ್ಟೊತ್ತು ಸುಮ್ಮನಿದ್ದದು
ನಂಗೊಂದೆ ಚಿಂತೆಯು.

4. ನಿನ್ನರ್ಯದಿರೆ, ಲೋಕಾ
ಚಾರ
ಸಂಭ್ರಮ ಕೊಟ್ಟಿತೆನಗೆ;
ಕಣ್ಣಾಗಣದಿಹದಂಧಕಾರ
ಬೆಳ್ಕಂತ ಅಲೆದಾಡಿದೆ.
ನಿನ್ನೊಳ್ಮೆಯಿಂದಲೀಗಲೇ
ನಾ ಕಂಡೆ ನಿನ್ನನೇ.

5. ಪ್ರಭಾವಮಯ ಸತ್ಯಾದಿತ್ಯ!
ನೀ ಮೂಡೆ, ದೃಷ್ಟಿ ಹೊಂದಿದೆ.
ಐ, ಶಾಪಪರಿಹಾರಿ! ನಿತ್ಯ
ಆನಂದವಿತ್ತಿ ನನಗೆ.
ನಿನ್ನಾಶೀರ್ವಾದ ರೋಗಿಗೆ
ಆರೋಗ್ಯ ಕೊಟ್ಟದೆ!

6. ನನ್ನಡಿ ಲೋಕಯಾತ್ರೆಯಲ್ಲಿ
ಜಾರೀತು; ಸ್ವಾಮಿ ರಕ್ಷಿಸು!
ನೀನಾದುಕೊಂಡ ಮಾರ್ಗದಲ್ಲಿ
ಕೈ ಹಿಡಿದೆನ್ನ ನಡಿಸು!
ನೀ ವ್ಯಾಪಿಸೆನ್ನ ಆತ್ಮವ
ಸ್ವರ್ಗೀಯ ಭಾಸ್ಕರ!

7. ಕಣ್ಣೀಲಿ ಹುಟ್ಟಿತಶ್ರುಧಾರೆ,
ಎದೇಲಿ ಶುದ್ಧ ಮೋಹವು;
ನಾ ನಿನಗೆದುರಾಡಲಾರೆ;
ಆಸಕ್ತ ದಾಸನಾದೆನು.
ನನ್ನಾತ್ಮ, ಬುದ್ಧಿ, ಮನಸು
ನಿಂಗೊಳಗಾದವು.

8. ಎನ್ ಮಣಿಯೇ! ಅಘೋರ
ಕಷ್ಟ
ಬಂದಾಗ್ಯು, ಪ್ರೀತಿ ಕುಂದದು.
ನಿನ್ನಾಳು ನಾನು! ಪ್ರಾಣನಷ್ಟ
ನಂಗೇನು? ಕರ್ತ, ಸಲಹು!
ಹೃದ್ ಭಿನ್ನವಾಗೊ ವರೆಗು
ನೀ ಜೀವಜ್ಯೋತಿಯು!

೩೧

Meinen Jesum ich erwähle.
M. T. 173.

1. ಯೇಸುವನ್ನು ಆದುಕೊಂಡೆ;
ಆತನತಿಪ್ರಿಯನೇ.
ಆತನಲ್ಲಿ ಹರ್ಷಗೊಂಡೆ;
ಆತ ಜೀವಜ್ಯೋತಿಯೇ.
ನನ್ನ ಆತ್ಮದಾಪ್ತನೇ,
ಯೇಸುವೇ,
ವಾಸ ಮಾಡೆನ್ನೊಳಗೆ, ಒಳಗೆ;
ಎನ್ನನೊಯ್ಯು ಮೇಲಕೆ!

2. ಯೇಸುವನ್ನು ಆದುಕೊಂಡೆ;
ಕ್ರಿಸ್ತಮೃತಿಯಿಂದಲೆ
ಪಾಪಪರಿಹಾರಗೊಂಡೆ;
ಭಯವಿಲ್ಲ ನನಗೆ.
ನನ್ನ ಆತ್ಮದಾಪ್ತನೇ,
ಯೇಸುವೇ,
ವಾಸ ಮಾಡೆನ್ನೊಳಗೆ, ಒಳಗೆ;
ಎನ್ನನೊಯ್ಯು ಮೇಲಕೆ!

3. ಯೇಸುವನ್ನು ಆದುಕೊಂಡೆ;
ಆತ ಪರಿಶುದ್ಧನೆ;
ಬಹು ಆತ್ಮದಾಹಗೊಂಡೆ
ರಕ್ಷಾಕರ್ತನೈಕ್ಯಕೆ.
ನನ್ನ ಆತ್ಮದಾಪ್ತನೇ,
ಯೇಸುವೇ,
ವಾಸ ಮಾಡೆನ್ನೊಳಗೆ, ಒಳಗೆ;
ಎನ್ನನೊಯ್ಯು ಮೇಲಕೆ!

4. ಯೇಸುವನ್ನು ಆದುಕೊಂಡೆ;
ಆತ್ಮ ಒಪ್ಪಿಸ್ಯಾತಗೆ
ಸಾಯಲಿಕ್ಕೆ ಕಾಂಕ್ಷೆಗೊಂಡೆ;
ಆತನೆನ್ನ ಬಿಡೋನೆ?
ನನ್ನ ಆತ್ಮದಾಪ್ತನೇ,
ಯೇಸುವೇ,
ವಾಸ ಮಾಡೆನ್ನೊಳಗೆ, ಒಳಗೆ;
ಎನ್ನನೊಯ್ಯು ಮೇಲಕೆ!

5. ಯೇಸುವನ್ನು ಆದುಕೊಂಡೆ;
ಆತನಲ್ಲಿ ನಂಬಿಕೆ

ಇಟ್ಟು ಮೃತ್ಯುಂಜಯನಾದೆ;
ಮೇಲ್ವಿಶ್ರಾಂತಿ ಸೇರುವೆ.
ನನ್ನ ಆತ್ಮದಾಪ್ತನೇ,
ಯೇಸುವೇ,
ವಾಸ ಮಾಡೆನ್ನೊಳಗೆ, ಒಳಗೆ;
ಎನ್ನನೊಯ್ಯು ಮೇಲಕೆ!

೩೨

Mel. O du Liebe meiner Liebe.
M. T. 151.

1. ಯೇಸು ಕ್ರಿಸ್ತಗೆನ್ನ ಪ್ರಾಣ
ವಶ ಮಾಡಿ ಕೊಟ್ಟದೆ!
ದೇಹ ಬಿಡುವ ಪ್ರಯಾಣ
ರಮ್ಯವಾದದೆನಗೆ.
ಈ ಪ್ರಪಂಚ ತೊರೆಯೋದು
ನನಗೆ ಸಂತೋಷವು;
ಕ್ರಿಸ್ತನೈಕ್ಯ ಪಡೆಯೋದು
ನನ್ನ ಸುಖಪೂರ್ತಿಯು.

2. ಇಹಪರದಲ್ಲಿ ಭೀತಿ
ನನಗಿನ್ನು ಬಾರದು;
ಯೇಸು ಕ್ರಿಸ್ತನಾಥಪ್ರೀತಿ
ನನ್ನ ಒಂದೆ ಗೀತವು.
ಆತ ನೋಡಿ ನನ್ನ ಶಾಪ,
ಚೆಲ್ಲಿ ತನ್ನ ರಕ್ತವ,
ರಕ್ತದಿಂದ ನನ್ನ ಪಾಪ
ಪರಿಹಾರ ಮಾಡಿದ.

3. ಬುದ್ಧಿ ಕೆಟ್ಟ ಶತ್ರುವನ್ನು
ಸ್ನೇಹ ಮಾಡಲೊಲೆದು,
ತಪ್ಪಿ ಹೋದ ಕುರಿಯನ್ನು
ಹುಡುಕುತ್ತಲಿದ್ದನು.
ಆತ್ಮ, ಪೂರ್ಣ ಸ್ನೇಹದಿಂದ
ಯೇಸುವನ್ನು ಹುಡುಕು!
ನಿನ್ನ ಪೂರ್ಣ ಶಕ್ತಿಯಿಂದ
ಆತನನ್ನು ಸೇವಿಸು!

೩೩

Bleibt bei dem, der euretwillen.
M. T. 151.

1. ನಿಮಗಾಗಿ ಪರವನ್ನು
ಬಿಟ್ಟು ಪ್ರೀತಿಯಿಂದಲೇ
ಕ್ರೂಜೆಯಲ್ಲಿ ಶ್ರಮೆಯನ್ನು
ತಾಳಿದಾತನಲ್ಲಿಯೇ
ನೆಲೆಗೊಳ್ಳಿ ದೃಢವಾಗಿ.
ಸೃಷ್ಟಿಯಲ್ಲಿ ಆತನು
ಜಯ ಹೊಂದಿದವನಾಗಿ
ನಿಲ್ಲುವಾತನೊಬ್ಬನು.

2. ಮಾಯವಾಗಿ ಹೋಗೋ
ದೆಲ್ಲ,
ಸ್ಥಿರವಲ್ಲವಕಟ!
ಇಹಸುಖ ಹರ್ಷವೆಲ್ಲ,
ನೆಂಟರಿಷ್ಟರಾಸರ,
ತಂದೇ ಜೋಕೆ, ತಾಯ ಮುದ್ದು,
ಪ್ರಿಯಪುತ್ರಲಾಭವು

ಇಂದು ಇದ್ದು ನಾಳೆ ಬಿದ್ದು
ಸ್ಥಿರವಾಗಿ ನಿಲ್ಲವು.

3. ಯೇಸು ಕ್ರಿಸ್ತನೊಬ್ಬನಾಗಿ
ನಾಶಕ್ಕೊಳಗಾಗದೆ
ನಿಲ್ಲುತ್ತಾನಚಲನಾಗಿ
ಮಾಯಲೋಕದೊಳಗೆ.
ದೃಢವಾಗಿ ಆತನಲ್ಲಿ
ನೆಲೆಗೊಳ್ಳಿ ನಿತ್ಯವು;
ಮೋಕ್ಷಲೋಕಭಾಗ್ಯದಲ್ಲಿ
ಸೇರಿಸೋಸು ನಿಮ್ಮನ್ನು.

೩೪

Ach, mein Herr Jesu, dein Nahesein.—M. T. 95.

1. ಕ್ರಿಸ್ತ್ಯೇಸು, ನಿನ್ನ ಶ್ರೀ ಸಾ
ಮೀಪ್ಯ
ಅಂತರ್ಯಕ್ಕೀಯೋದು ಶಾಂತಿ
ಯ
ರಮ್ಯವಾದ ನಿನ್ನ ಕಟಾಕ್ಷದೃಷ್ಟಿ
ಸಂತೋಷಪೂರಿತ ಪ್ರಿಯ ವೃಷ್ಟಿ
ದೇಹಾತ್ಮಕೆ.

2. ನಿನ್ ನಸುನಗೆಯ ಮೋರೆ
ಯು
ಈಗೆಮ್ಮ ಕಣ್ಣಿಗೆ ಕಾಣದು;
ಆತ್ಮದಲ್ಲಿ ನಿನ್ನ ಅನಂತ ಪ್ರೀತಿ
ನಮ್ಮನ್ನು ಹರಸುವಂಥ ರೀತಿ
ಪ್ರತ್ಯಕ್ಷವು.

3. ನಿನ್ನಲ್ಲಿ ಹಗಲು ಇರುಳು
ಸಂಯುಕ್ತ ಜನರು ಮುಕ್ತರು,
ಬುದ್ಧ್ಯತೀತ ಕಾರುಣ್ಯ ತುಂಬಿ
ದಂಥ,
ಸಮಸ್ತ ಪಾಪವಂ ಮನ್ನಿಪಂಥ
ಆತ್ಮಾಪ್ತನೇ!

4. ನಿನ್ನಿಂದ ದುಃಖದ ಹರವು;
ನಿನ್ನೊರ್ತು ಸುಖವು ಕಾಣದು.
ನಿನ್ನ ಪ್ರೀತಿಧ್ಯಾನವು ಪೂರ್ಣ
ವಾಗಿ
ನಮ್ಮಲ್ಲಿ ವಾಸಿಸುತ್ತಿರಲಾಗಿ,
ತೃಪ್ತ್ಯಾಯಿತು.

5. ನಿನ್ನಿಂದ ಸುಖದ ದಾನವು
ಈ ಬಡ ಪಾಪಿಗೆ ಬಂದುದು;
ನಿನ್ನಪ್ರೀತಿ ಕಂಡು ನಾನಿಂದಿನಿಂದ
ನಿನ್ನನ್ನು ಸಂತೋಷಧ್ವನಿಯಿಂದ
ಕೊಂಡಾಡುವೆ.

೩೫

Wir sind dein Eigentum, o Lamm. M. T. 42.

1. ಕ್ರಿಸ್ತ್ಯೇಸು ಸ್ವಾಮೀ, ನಿನಗೆ
ಸ್ವಕೀಯ ಜನವಾಗಿದ್ದೇವೆ.
ನಿನ್ನರಿತವ ನಿನ್ನ ಸೇವೆ
ಸಂತೋಷ — ಸಂತೋಷ —
ಸಂತೋಷದಿಂದ ಮಾಡನೆ?

2. ನನ್ನಾತ್ಮಕ್ಕೆನ್ನ ರಾಜನೆ
ನಿನ್ನಂತೆ ಯಜಮಾನನೆಲ್ಲಿ?
ನೀ ಶ್ರಮ ತಾಳಿ, ರಕ್ತ ಚೆಲ್ಲಿ,
ವಿಮುಕ್ತಿ — ವಿಮುಕ್ತಿ —
ವಿಮುಕ್ತಿ ಗೈದಿ ನನಗೆ.

3. ವಿಸ್ತಾರ ಮಾರ್ಗವಾರಿಸಿ
ಅನೇಕರಳಿಧೋಗುವಲ್ಲಿ,
ನಾನಾಯ್ದು ಸಣ್ಣ ದಾರಿಯಲ್ಲಿ
ಸಜ್ಜೀವ — ಸಜ್ಜೀವ —
ಸಜ್ಜೀವ ನನ್ನದಾಗಲಿ!

4. ತಕ್ಕೊಳ್ಳು ನನ್ನ, ಕರ್ತನೆ!
ನಾ ಬಲಹೀನ, ನೀನು ಶಕ್ತ;
ನೀನಿದ್ದ ಮೇಲೆ, ಬಡ ಭಕ್ತ
ಸೇರೋನು — ಸೇರೋನು —
ಸೇರೋನು ನಿತ್ಯ ಸೌಖ್ಯಕೆ.

3. ಸಭೋತ್ಸವಗಳು

೧. ಯೇಸುವಿನ ಆಗಮನ

೩೬

Gottlob, ein neues Kirchenjahr.
M. T. 111.

1. ನವೀನ ಸಭಾವರ್ಷವು
ಈ ಹೊತ್ತು ಹತ್ತುವಲ್ಲಿ,
ಇನ್ನೂ ಸುವಾರ್ತಾಘೋಷವು
ಉಂಟೆಮ್ಮ ಸಭೆಯಲ್ಲಿ;
ಕೃಪಾಸಂಧಾನ ದೃಢವು;
ವಿಶ್ವಾಸಪಾಯ ಯೇಸುವು;
ಹೀಗಿರೆ ಹಿಗ್ಗುತ್ತೇವೆ.

2. ಚಿಯೋನ ಕುಲಸಭೆಯೇ,
ಕೊಡಿಂದು ಘನ ಮಾನ
ಮಹೇಶ ವಿಶ್ವಕರ್ತಗೆ;
ಮಾಡಿಂದು ಸ್ತೋತ್ರಗಾನ!
ಸದ್ಭಕ್ತರೊಂದಿಗೆಮ್ಮನು
ಸ್ವಗೃಹವೆಂತ ಗೈದನು.
ಉಂಟಲ್ಲಿ ಕ್ರಿಸ್ತವಾಸ.

3. ಕ್ರಿಸ್ತ್ಯೇಸು, ನಿನ್ನ ಕೃಪೆಯು
ಈ ವರೆಗೆಮಗಿತ್ತು.
ನಾವೆಣಿಸಿದ ಪುಣ್ಯವು
ಪೂರಾಗಿ ರದ್ದಾಗಿತ್ತು.

ಆದಾಮನ ದುರ್ಭಾವವು
ನಮ್ಮೆಲ್ಲ ಬಣ್ಣ ನುಂಗಿತು.
ನಾವಿಂದು ನಾಚುತೇವೆ.

4. ನವೀನ ಸಭಾವರ್ಷದಿ
ಪವಿತ್ರ ಆತ್ಮನಿಂದ
ನವೀನ ಭಾವ ನಿರ್ಮಿಸಿ
ಕೊಡಯ್ಯ ಕೃಪೆಯಿಂದ!
ಮಾರ್ಪಡಿಸೆಮ್ಮ, ಕರ್ತನೆ!
ಆ ಮೇಲೆ ನಮ್ಮ ನಡತೆ
ನಿನ್ನನ್ನು ಮೆಚ್ಚಿಸೀತು.

೩೭

Matth. 21, 1—11.
Wie soll ich dich empfangen.
M. T. 128.

1. ನಾನೆದುರ್ಗೊಳ್ಳುದೆಂತು,
ಆಶಾಪ್ತ, ನಿನ್ನನೇ?
ಸ್ವೀಕಾರ ಗೈಯೊದೆಂತು,
ಸರ್ವಾಶಾಪೂರ್ತಿಯೇ?
ಈಯ್ ಜ್ಞಾನಜ್ಯೋತಿಯನ್ನು
ಶ್ರೀ ಯೇಸುಸ್ವಾಮಿಯೇ!
ನಿಂಗರ್ಹ ಮಾನವನ್ನು
ನಾನಯ್ಯ ಕೊಡುವೆ.

2. ಚೀಯೋನಿನೊಳ್ ನೀನಂದು
ಪ್ರವೇಶ ಮಾಡಲು
ಪರ್ಣಪುಷ್ಪಾದಿ ತಂದು
ನಿನ್ನಡಿಗಿಟ್ಟರು.
ನಿನ್ನಾಗಮನಕಾಗಿ
ನಾ ಗೀತ ಹಾಡುವೆ.
ನಿಂಗಿಷ್ಟ ಸೇವೆಗಾಗಿ
ಅಳಿರ್ೋದು ಮನವೆ.

3. ಎನ್ನಾತ್ಮದೇಹವನ್ನು
ಸಂಕಷ್ಟ ಮುತ್ತಲು
ನೀ ಬಿಟ್ಟಿ ದಿವವನ್ನು
ಸಂತೋಷವೀಯಲು.
ನಾ ಬಿದ್ದ ಪಾಪದಿಂದ
ನೀನೆನ್ನ ಬಿಡಿಸಿ
ನಾ ಬಿದ್ದ ನಿಂದೆಯಿಂದ
ಮಾನಕ್ಕೆ ಎತ್ತಿದ್ದಿ.

4. ನೀ ಬಿಟ್ಟು ವ್ಯೆಮಾಲೋಕ
ಇಳಿದ್ದು ಯಾತಕೆ
ಅಸಂಖ್ಯ ದುಃಖ ಶೋಕ
ಸಂತಪ್ತ ಭೂಮಿಗೆ?
ಅತುಲ್ಯ ಪ್ರೇಮಪೂರ್ತಿ
ನೀ ಬಂದ ಹೇತುವೇ.
ನಂಬೀ ವಾತ್ಸಲ್ಯಮೂರ್ತಿ
ಕಂಗಾಲ ಜನವೇ!

5. ನಿಮ್ಮಘದ ನಿಮಿತ್ತ
ನೀವಂಜಬಾರದು.
ಈ ಸ್ವಾಮಿಾ ಪ್ರಾಯಶ್ಚಿತ್ತ
ಅದನ್ನು ನೀಗಿತು.
ಸಂತೈಸಿ ರಕ್ಷಿಸೋನು
ಶೋಕಾರ್ತ ಪಾಪಿಯಂ

ಮೋಕ್ಷಕ್ಕೆ ಸೇರಿಸೋನು
ನಂಬಿರ್ದ ಶಿಷ್ಯರಂ.

6. ದುರ್ವೈರಿ ಕೂಗುವಲ್ಲಿ
ನೀವಂಜೋದೇತಕೆ?
ನಿಮೇಷಮಾತ್ರದಲ್ಲಿ
ನಿವ್ನಾಶ ದೊಬ್ಬನೆ?
ಇಗೋ, ಬರೋನು ಸರ್ವ
ರಾಜಾಧಿರಾಜನು!
ಅಂದೆಲ್ಲ ಶತ್ರುಗರ್ವ
ನಿಮೂರ್ಲ ಗೈವನು.

7. ಬರೋನು ನ್ಯಾಯಾಧೀಶ
ದುಷ್ಟಾತ್ಮ ಶಿಕ್ಷಿಸ;
ಪ್ರಭಾವದೋಳ್ ಪ್ರವೇಶ
ಸ್ವಜನಕ್ಕೀಯುವ.
ಬಾ ಶೀಘ್ರ, ನವ್ಯಾದಿತ್ಯ,
ವೈಯೆಮ್ಮನ್ನೆಲ್ಲರಂ
ಪ್ರವೇಶ ಗೈಯ ನಿತ್ಯ
ಸೌಭಾಗ್ಯವಸ್ತಿಯಂ!

೩೮

Wachet auf! Es tagt, ihr Brüder.
M. T. 270. 28.

1. ಎಚ್ಚರ! ಚೀಯೋನ ಸಭೆ,
ನಿನ್ನ ಕರ್ತ ಬಪ್ಪನು;
ಆತನತಿಶಯ ಪ್ರಭೆ
ಸ್ಪಷ್ಟವಾಗಿ ಮೂಡಿತು.

2. ದೃಷ್ಟಿಸು! ದಿಗ್ದೇಶದಲ್ಲಿ
ಜನರೆದ್ದು ನೆರೆದು
ನಿನ್ನ ಸ್ವಾಮಿಮಾ ತೇಜದಲ್ಲಿ
ನಡಕೊಳ್ಳುತಿಹರು.

3. ಶೋಭಿಸು! ನಿನ್ ಗೋಡೆ
ಯನ್ನು
ಅನ್ಯರೀಗ ಕಟ್ಟಲು,
ಸಾರ್ವಭೌಮರ್ಯೇಸುವನ್ನು
ನಂಬಿ ಸೇವಿಸುವರು.

4. ಹರ್ಷಿಸು! ನಿಂಗೊಲ್ದೇನೆಂದು
ಕರ್ತ ಮಾತು ಕೊಟ್ಟನು;
ಮಾತಿನಂತೆ ನಿನಗೆಂದು
ಅಭಿವೃದ್ಧಿ ತಪ್ಪದು.

೩೯

Mel. Jesus, meine Zuversicht.
M. T. 71.

1. ದೇವರ ಕುಮಾರನು
ಸೇರುತಾನೆ ಚೀಯೋನಲ್ಲಿ!
ಸಭೆ ಸ್ತೋತ್ರ ಮಾಳ್ಪುದು
ಪೂರ್ಣ ಹೃದಾನಂದದಲ್ಲಿ;
ಲೋಕವಡ್ಡ ಬೀಳುತೆ
ಯೇಸು ಕ್ರಿಸ್ತ ನಾಮಕೆ.

2. ಆತ ನೀತಿರಾಜನು,
ದೀನ ನರನಾಗಿಬ್ಧಾನೆ;

ದಾಸಬಂಧ ಹರಿದು
ಬಿಡುಗಡೆ ಕೊಡುತಾನೆ.
ಕುರುಡಂಗೆ ಬೆಳಕು,
ಕ್ಷೇಮ ರೋಗಿಗಾತನು.

3. ಮೃತ್ಯುಬಲ ಮುರಿದು
ಹಳೇ ಹಾವ ತಲೆಯನ್ನು
ಜಜ್ಜಿ ಬಿಟ್ಟ ಶೂರನು
ಈಯುತಾನೆ ಕ್ಷೇಮವನ್ನು.
ಪಾಪ ನಾಶವಾಗುತೆ
ಯೇಸುರಾಜ್ಯದೊಳಗೆ.

4. ಶತ್ರುಸೈನ್ಯ ತುಳಿದು,
ದೇವಲೋಕಪ್ರಭೆಯಲ್ಲಿ
ಸೇರ್ದ ಜಯಶಾಲಿಯು
ಆಳುತಾನೆ ನಿತ್ಯದಲ್ಲಿ.
ಯೇಸು ಕ್ರಿಸ್ತರಾಜ್ಯವು
ಎಂದು ತೀರಿ ಹೋಗದು.

5. ನನ್ನ ಹೃದದೊಳಗೆ
ಹೀನ ಮಾಡಿ ಪಾಪವನ್ನು,
ಆಳು, ಘನರಾಜನೆ,
ನನ್ನ ಪೂರ್ಣ ಮನಸನ್ನು!
ನಿನ್ನ ಶಾಂತ ರಾಜ್ಯವೆ
ಸುಖಮಯ ನಮಗೆ.

೪೦

Tochter Zion, freue dich!
M. T. 14.

1. ಕೇಳು, ಚೀಯೋನ್, ಮೋ
ದಿಸು!
ಹರ್ಷಿಸು, ಯೆರೂಸಲೇಮ್!
ನಿನ್ನ ರಾಜನಾಗಮ
ನೋಡಿ, ಶಾನೆ ಹರ್ಷಿಸು!

2. ಹೊಸಿಯನ್ನ, ರಕ್ಷಕಾ!
ಶುಭಮಸ್ತು! ಒಡೆಯಾ!
ನಿನ್ನ ರಾಜ್ಯ ಸ್ಥಾಪಿಸು,
ಶ್ರೀಮತ್ ಅಧಿಪತಿಯೇ!

3. ಹೊಸಿಯನ್ನ, ಕ್ರಿಸ್ತನೇ!
ವಂದನೀಯ ಪ್ರಭುವೇ!
ಆಳು, ಬಾಳು ಸರ್ವದಾ!
ಹೊಸಿಯನ್ನ, ದೇವಜಾ!

೪೧

Mel. Lo! He comes.—M. T. 108.

1. ಪಾಪಿಯಲ್ಲಿ ಪ್ರೀತಿ ಇಟ್ಟು,
ದಿವ್ಯ ರಾಜಸ್ಥಾನವಂ
ಅಗಲಿ, ಮೇಲ್ಲೋಕ ಬಿಟ್ಟು,
ಯೇಸು ಪಾಪಲೋಕವಂ
ಸೇರಿ, ತನ್ನ ರಾಜ್ಯವನ್ನ
ತೆರೆದಿತ್ತನೆಮಗೆ.

2. ರಾಜಸಿಂಗೆ ಮಾರ್ಗವನ್ನು
ಸಿದ್ಧ ಗೈಯು, ಸಭೆಯೇ!
ಕ್ರಿಸ್ತನಲ್ಲಿ ಸ್ವರ್ಗವನ್ನು
ಪಡಕೊಳ್ಳಿ, ಕ್ರೈಸ್ತರೇ!
ಪಶ್ಚಾತ್ತಾಪ ಪಟ್ಟು, ಪಾಪ
ಹೇಸಿ, ಸೇರಿರಾತಗೆ!

3. ಶ್ರೇಷ್ಠ ವೈದ್ಯ, ನೀ ಪವಿತ್ರ!
ನಿತ್ಯಜೀವದಾಯಕ!
ಪ್ರೀತಿ ಇಟ್ಟು ನಮ್ಮ ಮಿತ್ರ
ಆದಿ, ಆತ್ಮನಾಯಕ!
ನರಪ್ರಿಯ! ನೀ ಸ್ವಕೀಯ
ರಾಜ್ಯ ಸ್ಥಾಪಿಸೊಡೆಯ!

೪೨

Gott sei Dank in aller Welt.
M. T. 10.

1. ದೇವಸ್ತೋತ್ರವಾಗಲಿ!
ನುಡಿದ್ದನ್ನು ನಡಿಸಿ
ಪಾಪೋದ್ಧಾರಕ್ನಾತನು
ರಕ್ಷಾವೀರನ್ನಿತ್ತನು.

2. ಪೂರ್ವ ಭಕ್ತಜನರ
ಕಾಲಜ್ಞಾನವಚನ,
ಪ್ರಾರ್ಥನೆ, ನಿರೀಕ್ಷೆಯು,
ಎಲ್ಲಾ ನೆರವೇರಿತು.

3. ಅಬ್ರಹಾಮಕಾಂಕ್ಷೆಯೇ,
ಯಾಕೋಬ್‌ವಂಶತಾರೆಯೇ,
ಕನ್ಯಾಪುತ್ರ, ದೇವಜ,
ಚೀಯೋನ್ ಪ್ರಜೇ ರಕ್ಷಕ!

4. ರಕ್ಷಕ ನೀನೆಮಗು!
ಜಯ, ಜಯ! ಶುಭವು!
ನಿಂಗೆ ನನ್ನ ಹೃದದಿ
ಸೇರೋ ಮಾರ್ಗವಾಗಲಿ!

5. ಸೇರು, ಘನರಾಜನೇ!
ನನ್ನ ಮನ ನಿನ್ನದೇ.
ಪಾಪಮಲ ತೊಳೆದು
ಹೃದದಲ್ಲಿ ವಾಸಿಸು!

6. ಶಿಕ್ಷೆಗಾಗಿ ಬಾರದೆ
ಆಗ ಶಾಂತಿಯಿಂದಲೆ
ಬಂದ ಹಾಗೆ ಈಗಲು
ಶಾಂತನಾಗಿ ರಕ್ಷಿಸು!

7. ಯುಕ್ತಿಯಿಂ ಸೈತಾನನು
ನನ್ನ ಹೊಂಚಿ ನೋಡಲು
ಸಾಲದೆನ್ನ ಬಲವು,
ಧೈರ್ಯ ನನಗಿಲ್ಲವು.

8. ಆದಿಶೇಷ ಶಿರಸಂ
ತುಳಿದೀಯಭಯವಂ!
ವರ್ಧಿಸೆನ್ನ ನಂಬಿಗೆ,
ಶರಣಾಗು ನನಗೆ!

9. ಹೀಗೆ, ಜೀವದರಸ,
ಪ್ರಭೆಯಿಂದ ಬರುವ

ನಿನ್ನನ್ನೆದುರ್ಗೊಳ್ಳುವೆ,
ಮುಕ್ತಿ ಸಿದ್ಧಿ ಹೊಂದುವೆ.

೪೩

Jesus ist kommen.—M. T. 99.

1. ಕ್ರಿಸ್ತನು ಬಂದನನಂತ ಸಂ
ತೋಷ!
ಭೂಪತಿ ಆತನು! ನೋಡಿರಹ!
ಸಾರಿರೆಲ್ಲೆಲ್ಲು ಈ ವಾರ್ತೆಯ
ಘೋಷ!
ದೈವಿಕ ಮಾನವ ಭಾವದವ!
ಆನಂದಕಾರಣ ಕ್ರಿಸ್ತನು ಬಂದ.
ನಮಿಸಿರರ್ಪಿಸಿ ಸ್ತೋತ್ರಸುಗಂಧ!

2. ದೇವಕುಮಾರನು ಸ್ವರ್ಗದ
ಪೀಠ
ತೊರೆದು ನಮ್ಮನು ಹುಡುಕುತ—
ಬನ್ನಿರಿ, ಹೊಂದಿರಿ ಜೀವಕಿರೀಟ!
ಅನ್ನುತ ನೀಚರನ್ನೇರಿಸಿದ.
ಸ್ವರ್ಗದ ಭೂಷಣ ಕ್ರಿಸ್ತನು
ಬಂದ.
ನಮಿಸಿರರ್ಪಿಸಿ ಸ್ತೋತ್ರಸುಗಂಧ!

3. ಪಾಪದ, ಶಾಪದ, ಮೃತಿಯ
ಪಾಶ
ಆತನ ಮೂಲಕ ಹರದವೆ.
ಗೈದ ಬಲಿಷ್ಠನ ದುರ್ಗ ವಿನಾಶ,
ಕೈದಿಗೆ ಬಾಗಲು ತೆರೆದದೆ.
ಪಾಪವಿನಾಶಕ ಕ್ರಿಸ್ತನು ಬಂದ.
ನಮಿಸಿರರ್ಪಿಸಿ ಸ್ತೋತ್ರಸುಗಂಧ!

4. ಸೈನ್ಯಗಳೀಶನ ಸ್ವಾಗತಕಾಗಿ
ಸೃಷ್ಟಿಯ ದ್ವಾರವು ತೆರೆಯಲಿ!
ಕ್ರೈಸ್ತರೆ, ಅಂತರ್ಯಭೂಷಿತರಾಗಿ
ಶುದ್ಧ ಸದ್ಗುಣದಿ ಶೋಭಿಸಿರಿ!
ಘನದ ರಾಜನು ಕ್ರಿಸ್ತನು ಬಂದ.
ನಮಿಸಿರರ್ಪಿಸಿ ಸ್ತೋತ್ರಸುಗಂಧ!

5. ಶಿಲುಬೆಕಂಬದಿ ಪ್ರಾಣ ಬಿಟ್ಟಾ
ಗ
ಲೋಕದ ಪಾಪವ ತೆಗೆದನು.
ನೋಡಿರೀ ತ್ಯಾಗವ! ನೋಡಿರೀ
ಯಾಗ!
ದಾಸಗೆ ಮಡಿದನೊಡೆಯನು.
ದುರಿತಹರನು ಕ್ರಿಸ್ತನು ಬಂದ.
ನಮಿಸಿರರ್ಪಿಸಿ ಸ್ತೋತ್ರಸುಗಂಧ!

6. ಎದ್ದನು ಪುನಹ ಗೋರಿಯೊ
ಳಿಂದ,
ಸಾವಿನ ಕೊಂಡಿಯ ಮುರಿದನು.
ಅಳದೆ ಬನ್ನಿ ಸಮಾಧಿಗಳಿಂದ!
ಬಿತ್ತಿದ ಗೋದಿಯು ಫಲಿಸಿತು.
ಜೀವದ ನಾಯಕ ಕ್ರಿಸ್ತನು
ಬಂದ.
ನಮಿಸಿರರ್ಪಿಸಿ ಸ್ತೋತ್ರಸುಗಂಧ!

7. ದುಃಖಿತ ಭಕ್ತರೆ, ಮೇಲಕೆ
ನೋಡಿ!
ನಿಮ್ಮ ಸಹಾಯಕ ಬರುವನು.
ಆತನನ್ನೆದುರುಗಾಣಲು ಓಡಿ!
ಬೇಗನೆ ಬರುವೆನಂದಿದ್ದನು.
ದುಃಖನಿವಾರಕ ಕ್ರಿಸ್ತನು ಬಂದ.
ನಮಿಸಿರರ್ಪಿಸಿ ಸ್ತೋತ್ರಸುಗಂಧ!

8. ಲೋಕವೆ, ಕೇಳು! ಇನ್ನೆಚ್ಚ
ರವಾಗು
ಬರುವ ನ್ಯಾಯವಿಚಾರಣೆಗೆ;
ಬರುವ ಮೊದಲು ತಿರುಗಿ ಸಾಗು,
ನಂಬುತ ನಮಿಸುದ್ಧಾರಕಗೆ!
ಪ್ರೀತಿಸ್ವರೂಪನು ಕ್ರಿಸ್ತನು
ಬಂದ.
ಹಬ್ಬಲೆಲ್ಲೆಲ್ಲು ಈ ವಾರ್ತೆಸು
ಗಂಧ!

೪೪

Mel. **Lobe den Herren, den mächtigen König.—M. T. 50.**

1. ರಾಜರ ರಾಜನೇ, ದಿವದಿಂದಿ
ಳೆಗೆ ಬಂದಿ;
ದೂತ ಪುಣ್ಯಾತ್ಮರಿಗಲ್ಲ, ನೀ
ಪಾಪಿಗೆ ತಂದಿ
ಶುಭವನ್ನೇ. ವಂದನೆ, ರಕ್ಷಕನೇ!
ನಮಗೆ ಭ್ರಾತರರಂದಿ.

2. ಜೀವಸ್ವರೂಪನೇ, ಆದಿ ನೀ
ಸಾತ್ವಿಕ ದಾಸ.
ದೀನರನ್ನೆತ್ತಲು ದೀನರೊಳ್
ಗೈದಿ ನಿವಾಸ.
ನಿನ್ನಿಳಿವು ನಮುಗುದ್ಧಾರಣೆಯು,
ನಮಗೆ ನಿತ್ಯ ವಿಲಾಸ.

3. ಇಹದಿ ಸ್ವರ್ಗದ ಸೇನೆಗಳೀ
ಶನ ಮುಖ
ನೋಡಿರೀ ನೋಟದಿ ನಿಮಗೆ
ಪರಮ ಸುಖ!
ವಂದಿಸಿರಿ! ನರರೆ, ಪ್ರಾರ್ಥಿಸಿರಿ!
ನೀಗುವನೀತನು ದುಃಖ.

4. ನಿನ್ನನ್ನು ಬಯ್ಸುವ ಮಂದೆ
ಯ ದರ್ಶಿಸಿ ಮೇಯ್ಸು!
ಸಭೆಯನ್ನೊತ್ತುವ ಶತ್ರುಸಮೂ
ಹವ ಜೈಸು!
ಒಡೆಯನೇ, ಹಿಂಸೆ ಉಂಟಾಗು
ತಲೇ,
ಇತ್ತ ವಾಗ್ದತ್ತ ಪೂರೈಸು!

5. ನಿನ್ನ ಪ್ರಸನ್ನತೆ, ಯೇಸು,
ಅಪೇಕ್ಷಿಸುತ್ತೇವೆ;
ಹರಸು ನಮ್ಮ! ನಾವೆಲ್ಲ ನಿರೀಕ್ಷಿ
ಸಿದ್ಧೇವೆ.
ಜೀವಂತನೇ, ಮಿತ್ರ, ವಿಮೋಚ
ಕನೇ,
ಹೊಂದು ನಮ್ಮೆಲ್ಲರ ಸೇವೆ!

6. ಏರಲೀ ಹಬ್ಬದಿ ನಮ್ಮ ಹೊ
ಸನ್ನ! ಹೊಸನ್ನ!
ದಯದಿ ನೀಡು ಈ ಹಸಿದ ಸಭೆಗೆ
ಮನ್ನ!
ಬೋಧಕನೇ, ಶಾಂತಿಯ ಪಾಲ
ಕನೇ,
ಶಿಷ್ಯರಿಗಾಗು ಪ್ರಸನ್ನ!

7. ಯೇಸುವೇ, ಇಹದಿ ನಮಗೆ
ಮಾಡು ಸುಶಿಕ್ಷೆ!
ನಿನ್ನ ಬರೋಣದ ದಿನವು ನಮ್ಮ
ಪ್ರತೀಕ್ಷೆ!
ರಕ್ಷಣೆ ತಾ! ನಮ್ಮ ವಿಮೋಚಿಸ
ಬಾ!
ನೀನೊಬ್ಬ ನಮ್ಮ ನಿರೀಕ್ಷೆ!

೪೫

Seit die Menschheit dich empfangen.
M. T. 272. 33.

1. ಯೇಸು, ನಿನ್ನ ಅವತಾರ
ಲೋಕಕೆಂಥ ಉಪಕಾರ!
ನಿನ್ನ ನೋಡಿ ಲೋಕವು
ದ್ವೇಷ ಮಾಡಿ ತಳ್ಳಿತು.
ನೀನು ಮೌನ ಕುರಿಯಾಗಿ
ಘೋರ ಪೀಡೆ ತಾಳಲಾಗಿ,
ನಿನ್ನ ವೇದನೆಗಳು
ಲೋಕವನ್ನು ಗೆದ್ದವು.

2. ಅಂದು ಲೋಕಪಾಪಕಾಗಿ
ನೀನು ಪ್ರಾಯಶ್ಚಿತ್ತವಾಗಿ
ಕ್ರೂಜೆಯೆಂಬ ಪೀಠದಿ
ಶಾಪಬಾಧೆ ತಾಳಿದಿ.
ನಾವು ನಂಬಿ ಬಾಳುತ್ತೇವೆ,
ನಿನ್ನ ಶಿಷ್ಯರಾಗಿದ್ದೇವೆ.
ನಿನ್ನ ಶ್ರಮ ಮರಣ
ಪಾಪರೋಗಕ್ಕೌಷಧ.

3. ಕರ್ತಾ, ನೀನಾಲೋಕದಿಂದ
ಶ್ರೇಷ್ಠ ತ್ಯಾಗಗುಣದಿಂದ
ನಮ್ಮ ಲೋಕಕಿಳಿದಿ,
ನಮ್ಮ ಸೇವೆ ಮಾಡಿದಿ;
ನೀನು ಪಟ್ಟವನ್ನು ಬಿಟ್ಟು
ನಮ್ಮ ಮೇಲ್ ಕಿರೀಟವಿಟ್ಟು—
ಬನ್ನಿ, ಪಟ್ಟವೇರಿರಿ!
ಎಂದು ಹೇಳುತಿರುತಿ.

4. ಈ ಅಪೂರ್ವವಾದ ಪ್ರೀತಿ,
ಇಂಥ ಚೋದ್ಯವಾದ ನೀತಿ
ನೋಡಿ ಮುಕ್ತಿ ಕಾಣಲು,
ನಿನಗಡ್ಡ ಬೀಳ್ವೆವು.
ಯೇಸು, ನಿನ್ನ ಹಾಗೆ ಯಾರು?
ನಿನ್ನನರಿತವರಾರು ?
ನಿನ್ನ ವೇದನೆಗಳು
ನಮ್ಮ ಮನ ಗೆದ್ದವು.

೨. ಯೇಸುವಿನ ಜನನ

೪೬

Vom Himmel hoch, da komm' ich her.—M. T. 40.

1. "ಆಕಾಶದಿಂದ ಬಂದೆನು,
ಸುವರ್ತಮಾನ ತಂದೆನು;
ನಾ ಸಾರುವೀ ಸುವಾರ್ತೆಯು
ವಿಶೇಷವಾಗಿ ದೊಡ್ಡದು."

2. "ಕನ್ಯಾಸ್ತ್ರೀಯಿಂದ ನಿಮಗೆ
ಈ ಹೊತ್ತು ಕೂಸು ಹುಟ್ಟ್ಯ
ದೆ,
ಸೌಂದರ್ಯವಾದ ಮಗುವು;
ಅದಾತ್ಮತೃಪ್ತಿಮೂಲವು."

3. "ಅದಾರು? ಕ್ರಿಸ್ತ ಯೇಸು
ವು,
ಪರಾತ್ಪರೈಕಪುತ್ರನು;
ಸಮಸ್ತ ಪಾಪಕಷ್ಟವ
ಕೊಂಡ್ಹೋಗುವಂಥ ರಕ್ಷಕ."

4. "ಸೌಭಾಗ್ಯ ನಿಮಗೋಸ್ಕರ
ಯೆಹೋವ ಸಿದ್ಧ ಮಾಡಿದ;
ನಮ್ಮಂತೆ ನೀವು ದಿವದಿ
ನಿರಂತ್ರ ಬಾಳುತಿರ್ವಿರಿ."

5. "ಆ ಗುರುತನ್ನು ನೋಡಿರಿ!
ಆ ಬಟ್ಟೆಯುಳ್ಳ ಗೋದಲಿ!
ಸಮಸ್ತ ಲೋಕದೊಡೆಯ
ಅಲ್ಲ್ಯವತಾರ ಮಾಡಿದ."

6. ನಾವೀಗಲೆದ್ದು, ಕುರ್ಬರ
ಹಿಂದಟ್ಟಿ, ಅಲ್ಲಿಗ್ಹೋಗುವ!
ಆಶ್ಚರ್ಯವನ್ನು ಕಾಣ್ಬರೆ
ನಮ್ಗೊಳಗಿಚ್ಛೆ ಇರದೆ?

7. ಚೆನ್ನಾಗಿ ನೋಡು, ಮನವೆ!
ಆ ಗೋದಲೀಲಿ ಏನದೆ?
ಆ ಚೆಲ್ವ ಕೂಸು ಯಾರದು?
ಸರ್ವೇಶಪ್ರಿಯಪುತ್ರನು.

8. ರಾಜಾಧಿರಾಜ, ವಂದನೆ!
ನೀ ಪಾಪಿ ಬೇಡವೆನ್ನದೆ
ನರಾವತಾರ ಎತ್ತಿದ್ದು
ಮಹಾಂತಪ್ರೇಮಸಾಕ್ಷಿಯು.

9. ಸಮಸ್ತ ಲೋಕದೊಡೆಯ,
ಏನಾದಿ ನನಗೋಸ್ಕರ!
ರಾಜತ್ವಸ್ಥಾನವಗಲಿ
ದೀನತ್ವದಲ್ಲಿ ಸೇರಿದಿ.

10. ಈ ಲೋಕವೆಲ್ಲ ರತ್ನದ್ದು,
ಭಂಗಾರ ತುಂಬಿದ್ದಾದರು,
ಶ್ರೀ ದೇವಪುತ್ರ, ನಿನಗೆ
ಅದೇನು? ಬರೆ ಕಸವೆ!

11. ಪ್ರಪಂಚಘನಮಹಿಮ
ಅಬದ್ಧವೆಂತ ತೋರಿಸ,
ಲೋಕೇಶ, ಗೋದ್ದಿಹುಲ್ಲಲಿ
ನೀ ಮಲ್ಗಿಕೊಂಡು ಇರುತಿ.

12. ಹೃತ್ಪ್ರಿಯವಾದ ಮಗುವೆ,
ನಿವಾಸ ಮಾಡೆನ್ನೊಳಗೆ!
ನಿನ್ನನ್ನು ಮರ್ಯದೆಂದಿಗು
ಕೊಂಡಾಡಿ ಹರ್ಷಗೊಂಬೆನು.

13. ಸ್ವಪುತ್ರನನ್ನು ನಮಗೆ
ಕೊಟ್ಟೊಡೆಯಂಗೆ ಮಹಿಮೆ!
ಸುಕಾಲ ಸುರುವಾಯಿತು;
ಜಗತ್ತೆ, ಸಲೆ ಹರ್ಷಿಸು!

3. ಆನಂದಸ್ಥಾನವಗಲಿ,
ಈ ಭೂಮಿಗವತರಿಸಿ,
ಕೃಪಾಳು ನಮ್ಮ ರಕ್ಷಕ
ನಮ್ಮೋಲು ಸಾವು ತಾಳಿದ.

4. ಮೇಲ್ಲೋಕದಿಂದ ಬಂದನು,
ಮೇಲ್ಲೋಕಕೇರಿ ಹೋದನು;
ಪಾತಾಳಕಿಳಿದರಸು
ಮಹತ್ವದಲ್ಲಿ ಕೂತನು.

5. ಕ್ರಿಸ್ತ್ಯೇಸು ದಿವ್ಯ ಮಿತ್ರನೇ,
ಪವಿತ್ರ ನರಪುತ್ರನೇ,
ಮನುಷ್ಯರಾದ ನಮ್ಮನು
ಮಹತ್ವದಲ್ಲಿ ಸೇರಿಸು!

೪೭

Mel. Vom Himmel hoch, da komm' ich her.—M. T. 40.

1. ಈಗಿಷ್ಟ ಜನರಕ್ಷಕ,
ಕೇಳ್, ಕನ್ಯೆಯಿಂದ ಹುಟ್ಟಿದ.
ಈ ಜನ್ಮ ಸರ್ವ ಲೋಕಕೆ
ಮಹಾ ಆಶ್ಚರ್ಯವಾದದೆ!

2. ನರೇಚ್ಛೆಯೇನೂ ಇಲ್ಲದೆ
ದೇವಾತ್ಮಶಕ್ತಿಯಿಂದಲೆ
ಸರ್ವೋಚ್ಚ ದೇವವಾಕ್ಯವು
ಸ್ತ್ರೀಗರ್ಭಫಲವಾಯಿತು.

೪೮

Mel. Das ist unbeschreiblich.
M. T. 113.

1. ಒಂದು ಊರಿನಲ್ಲಿ
ಒಂದು ಬೆಳಕು
ಅಂಧಕಾರದಲ್ಲಿ
ತೋರಲಾಯಿತು.
ಬೇತ್ಲೆಹೇಮಿನಲ್ಲಿ
ನೀತಿಸೂರ್ಯನು
ಪಾಪಕತ್ತಲಲ್ಲಿ
ಕಾಂತಿ ಹೊಯ್ದನು.

2. "ದೇವರಿಂಗೆ ಮಾನ
ಊರ್ಧ್ವ ಲೋಕದಿ!
ನಿತ್ಯ ಸಮಾಧಾನ
ಭೂಮಿಗಿರಲಿ!"
ಎಂಬ ಗೀತವನ್ನು
ದೂತಸೇನೆಯು
ಹಾಡಿ, ಲೋಕವನ್ನು
ಹರಸಿದುದು.

3. ಈಗ ನರರಲ್ಲಿ
ದಿವ್ಯ ಕೃಪೆಯು
ಎಲ್ಲ ಭೂಮಿಯಲ್ಲಿ
ದೊಡ್ಡದಾಯಿತು;
ಈಗ ಶುದ್ಧ ನೀತಿ,
ಸುಖಪ್ರಭೆಯು,
ಸತ್ಯವಾದ ಪ್ರೀತಿ
ನೆಲೆಗೊಂಡವು.

4. ಬೇತ್ಲೆಹೇಮಿನಲ್ಲಿ
ನಮ್ಮ ಯೇಸುವು
ಮರ್ತ್ಯ ರೂಪದಲ್ಲಿ
ಹುಟ್ಟುವಾಗಲು,
ಜೀವದ ಪ್ರಕಾಶ
ಮೂಡಿ ತೋರಲು,
ಮೃತ್ಯುಕ್ರೂರಪಾಶ
ಬಿಚ್ಚಿ ಹೋಯಿತು.

೪೯

Es ist ein Reis entsprungen.
M. T. 103.

1. ಕೋಮಲ ಬೇರಿನಿಂದ
ಶಾವಂತಿಪುಷ್ಪವು
ಆ ಯೆಸ್ಸೆಜಾತಿಯಿಂದ
ಉಕ್ಕೇವ ಹುಟ್ಟಿತು;
ಹೊತ್ತೋದ ಇರ್ಳೊಳು
ಹೇಮಂತಕಾಲದಲ್ಲಿ
ಸುಪುಷ್ಪವರ್ಳಿತು.

2. ಆ ಎಳೆ ಹೂವಿನಲ್ಲಿ
ಅತೀಷ್ಟ ವಾಸನೆ!
ಹೂಕದಿರಿರುಳಲ್ಲಿ
ತಳ್ತಳಿಸುತ್ತದೆ.
ಸದ್ದೇವನರನೇ,
ಅರಿಷ್ಟರಿಂಗೆ ಗತಿ
ನಿನ್ನಡಿ ಮಾತ್ರವೇ!

3. ಈ ಗೋಳುಹಳ್ಳದಿಂದ
ನಾವೇರುವನಕಾ
ಕಾಯ್ ಎಮ್ಮನೊಲ್ಮೆಯಿಂದ
ನೀ, ಯೇಸು, ಸರ್ವಥಾ!
ನಿರಂತ್ರ ಸ್ತೋತ್ರವು
ನಿಂಗಿಹಪರದಲ್ಲಿ!
ದೇವಾ, ಕಟಾಕ್ಷಿಸು!

೫೦

Gott wird ein Mensch.
M. T. 196.

1. ಬೇಥ್ಲೇಮು ದನಹಟ್ಟಿಯಲ್ಲಿ
ಮನುಷ್ಯಪುತ್ರ ಹುಟ್ಟಲು,
ಸಮಸ್ತ ದೇವದೂತರಲ್ಲಿ
ಮಹಾಂತ ಹರ್ಷವಾಯಿತು.
ರಾತ್ರೀಲಿ ದೊಡ್ಡ ಸೇನೆಯಾಗಿ
ಕುರುಬರೊಳ್ಗೆ ಕಾಣಲಾಗಿ,
ಆ ದಿವ್ಯ ದೂತರು
ಪ್ರಕಾಶಿಸಿದರು;
"ಕರ್ತಂಗೆ ಊರ್ಧ್ವದಲ್ಲಿ ಮಾನ!
ಈ ಭೂಮಿಯಲ್ಲಿ ಸಮಾಧಾನ!
ಮನುಷ್ಯರೊಳಗೆ
ಆನಂದ!" ಎಂದರು.

2. ಪಾಪಿಷ್ಠರಲ್ಲಿ ಪ್ರೀತಿ ಇಟ್ಟು,
ನಮ್ಮಲ್ಲಿ ಯೇಸು ಬಂದನು.
ಅತ್ಯುನ್ನತೀಯಸ್ಥಾನ ಬಿಟ್ಟು,
ಈ ಭೂಮಿಲೋಕಕಿಳಿದು,
ಸ್ವರಾಜ್ಯಸ್ಥಾಪನಾದಿ ಮಾಡಿ,
ಸೈತಾನನೊಡ ಹೋರನಾಡಿ,
ಅಘೋರ ಯುದ್ಧದಿ
ಸಜಯ ಎದ್ದನು.
ಓಲಾಗಿ ಯೇಸು ಕ್ರೂಜೆಯಲ್ಲಿ
ಪವಿತ್ರ ರಕ್ತವನ್ನು ಚೆಲ್ಲಿ,
ಸತ್ತೆದ್ದನಾಗಲೆ
ಸಜೀವಪತಿಯು.

3. ನೀ, ಯೇಸು, ಭಕ್ತರೊಳ್ಗೆ
ಹುಟ್ಟಿ
ನಿವಾಸಿಯಾಗು ನಿತ್ಯಕು!
ಅಶುದ್ಧ ನಮ್ಮ ಹೃದ ಮುಟ್ಟಿ
ಕಳಂಕವೆಲ್ಲ ಬಿಡಿಸು!
ಕಾಪಾಡಿ ನಿನ್ನ ಸಭೆಯನ್ನು,
ಮಾಡೊಳ್ಳೆ ರಾಜ್ಯಭಾರವನ್ನು!
ಅಮಿತ್ರನಾಶಕೆ
ಸಹಾಯ ಕಳುಹು!
ನಿನ್ನಂತ್ಯ ಜಯದಿನದಲ್ಲಿ
ಮಹತ್ವವುಳ್ಳ ಪ್ರಭೆಯಲ್ಲಿ
ನಿನ್ನನ್ನು ಕಂಡರೆ,
ಸಂತೋಷ ತೀರದು.

೫೧

In dulci jubilo.—M. T. 117.

1. ಮಹಾ ಸಂತೋಷವೇ!
ಕೊಂಡಾಡಿರೆಲ್ಲರೇ!
ನಮ್ಮ ಹೃದಾನಂದ
ಈ ಹೊತ್ತು ಹುಟ್ಟ್ಯದೆ!
ಸುಜ್ಞಾನಸೂರ್ಯ ಬಂದ
ಸಮಸ್ತ ಲೋಕಕೆ!
ಪ್ರಿಯ ಯೇಸುವೆ,
ನಿತ್ಯ ವಂದನೆ!

2. ಸ್ವರ್ಗೀಯ ಶಿಶುವೆ,
ಹೃತ್ಪ್ರಿಯ ಕರ್ತನೆ!
ಸತ್ಯಕ್ಷೇಮವನ್ನು
ಕೊಡಯ್ಯಾ ನನಗೆ!
ನೀ ಎಳೆ ದಾಸನನ್ನು
ನಿನ್ನಿಷ್ಟ ಪಾದಕೆ!
ಘನಪತಿಯೆ,
ನಿತ್ಯ ವಂದನೆ!

3. ಆಶ್ಚರ್ಯ ಪ್ರೀತಿಯೆ!
ವಿಚಿತ್ರ ದಯವೆ!
ಪಾಪಕರ್ಮದಿಂದ
ಕೆಟ್ಟೋದ ನಮಗೆ
ಉಂಟಾಯ್ತಾ ಶಿಶುವಿಂದ
ಅನಂತ ಹರ್ಷವೆ.
ಶೀಘ್ರವಾಗಿಯೆ
ಸೇರೋಣದಕೆ!

4. ಇನ್ನಲ್ಲಿ ಹರ್ಷವು
ಸಂಪೂರ್ಣವಹುದು;
ಪರಲೋಕಸಭೆ,
ಹೊಸ್ವಾದ ರಾಗವು,
ಯೆರೂಸಲೇಮ ಪ್ರಭೆ,
ಇವೆಮ್ಮ ಗತಿಯು!
ಶೀಘ್ರವಾಗಿಯೆ
ಸೇರೋಣಲ್ಲಿಗೆ!

೫೨

Heilige, geweihte Nacht.
M. T. 69.

1. ಅತಿ ಶುಭ ರಾತ್ರೀಲಿ
ಆದ ಕಾರ್ಯ ಕೇಳಿರಿ!
ದೇವಪುತ್ರ ನರನಾಗಿ
ಹುಟ್ಟಿದ್ದಾನೆ! ಹರ್ಷವಾಗಿ
ದೂತಸೈನ್ಯದೊಡನೆ
ಹಾಡಿರೆಲ್ಲ ಕ್ರೈಸ್ತರೆ!

2. ಪಾಪಿ, ಸೇರು ಆತನ್ನೇ!
ರಕ್ಷಾ ಕರ್ತ ಬೇಡವೇ?
ನಿನಗಾಗಿ ಬಂದನಲ್ಲ!
ನಿತ್ಯಜೀವ ಕೊಡ ಬಲ್ಲ.
ಆತನಲ್ಲಿ ನಂಬಿರು!
ನಿನ್ನ ರಾತ್ರಿ ಹೋಗೊದು.

3. "ದೇವರಿಂಗೆ ಮಹಿಮೆ!
ಸಮಾಧಾನ ಭೂಮಿಗೆ!
ದಯ ನರಪುತ್ರರಲ್ಲಿ!"
ಎಂಬದಾಯ್ತಾ ರಾತ್ರಿಯಲ್ಲಿ!
ನೋಡಿರೆಷ್ಟೊ ದೊಡ್ಡದು
ಉಂಟೀ ರಾತ್ರಿಫಲವು.

೫೩

Hallelujah! denn uns ist heut'.
M. T. 184.

ಕೊಂಡಾಡ ತಕ್ಕ ಮಗುವು
ಇಂದೆಮಗಾಗಿ ಹುಟ್ಟ್ಯದೆ;

ಅದೆಮ್ಮ ನಿತ್ಯ ಭಾಗ್ಯವು,
ಅದ್ಶೊರ್ತು ನಿತ್ಯ ನಾಶವೆ.
ಈ ಮಗು ಹುಟ್ಟದಿದ್ದರೆ,
ಇರುತ್ತಿದ್ದಿಲ್ಲ ರಕ್ಷಣೆ
ಭೂಪರಲೋಕದಲ್ಲಿ.
ಪ್ರಿಯ ಕರ್ತ ಯೇಸುವೇ,
ನಮ್ಮ ಪ್ರಿಯ ಜ್ಯೇಷ್ಠನೇ,
ಸಂಸ್ತುತಿ ನಿತ್ಯದಲ್ಲಿ!

೫೪

Freuet euch, ihr Christen alle.
M. T. 180. 181.

1. ಹರ್ಷವಾಗು, ಕ್ರೈಸ್ತಗೋತ್ರ!
ಹರ್ಷಗೊಳ್ಳು, ಸಭೆಯೇ!
ಪ್ರೀತಿಯಬ್ಧಿ ದೇವರೇ,
ನಿನಗೇಳಲೆಮ್ಮ ಸ್ತೋತ್ರ!
ದೇವಪುತ್ರ ಹುಟ್ಟಿದ,
ಸೇರಿ ನಮ್ಮ ಗೋತ್ರವ.
ಹರ್ಷ, ಹರ್ಷ, ಅತಿ ಹರ್ಷ!
ಮೂಡಿತಿಂದು ಕೃಪಾವರ್ಷ.
ಜಯ, ಜಯ, ಸುವಿಜಯ!
ಹುಟ್ಟಿತಿಂದು ದೇವದಯ.

2. ದೃಷ್ಟಿಸೋ, ನನ್ನಂತಃ
ಪ್ರಾಣ!
ಪ್ರೀತಿರಾಜ, ರಕ್ಷಕ
ಬಂದ ನಿನಗೋಸ್ಕರ,
ಮಾಡಿ ಭೂಮಿಯ ಪ್ರಯಾಣ.
ಶಿಶುವಾಗಿ ಹುಟ್ಟಿದ,
ತನ್ನ ರಕ್ತ ಚೆಲ್ಲಿದ.
ಹರ್ಷ, ಹರ್ಷ, ಅತಿ ಹರ್ಷ!
ಮೂಡಿತಿಂದು ಕೃಪಾವರ್ಷ.
ಜಯ, ಜಯ, ಸುವಿಜಯ!
ಹುಟ್ಟಿತಿಂದು ದೇವದಯ.

3. ಯೇಸು! ಹ್ಯಾಗೀ ಉಪಕಾರ
ಯೋಗ್ಯವಾಗಿ ಹೇಳಲಿ?
ಜೀವ ಕೊಟ್ಟೆ ನಿನ್ನಲಿ,
ಮಾಡಿ ಮೃತ್ಯು ಪರಿಹಾರ.
ನಾನು ಎಡೆಬಿಡದೆ
ನಿನ್ನ ದಾಸನಿರುವೆ.
ಹರ್ಷ, ಹರ್ಷ, ಅತಿ ಹರ್ಷ!
ಮೂಡಿತಿಂದು ಕೃಪಾವರ್ಷ.
ಜಯ, ಜಯ, ಸುವಿಜಯ!
ಹುಟ್ಟಿತಿಂದು ದೇವದಯ.

4. ಯೇಸು! ಸ್ವಕುಟುಂಬವನ್ನು
ಕೃಪೆಯಿಂದ ನಡಿಸು!
ಎಲ್ಲರನ್ನುದ್ಧರಿಸು!
ಸಾಕು ನಿನ್ನ ಮನೆಯನ್ನು!
ಕೊಡು ದಿವ್ಯ ಶಾಂತಿಯ
ಶುಭವಾದ ವರುಷ!
ಹರ್ಷ, ಹರ್ಷ, ಅತಿ ಹರ್ಷ!
ಮೂಡಿತಿಂದು ಕೃಪಾವರ್ಷ.
ಜಯ, ಜಯ, ಸುವಿಜಯ!
ಹುಟ್ಟಿತಿಂದು ದೇವದಯ.

೫೫

Herbei, o ihr Gläubigen.
M. T. 263.

1. ಸದ್ಭಕ್ತರೆ, ಬರ್ರಿ,
ಜಯಜಯವೆಂದು
ಹೋಗೋಣ ಬೇತ್ಲೆಹೇಮಿಗೆ!
ರಕ್ಷಕನಾದ
ಶಿಶುವನ್ನು ನೋಡಿ
|: ಪ್ರಧಾನ ಕರ್ತನನ್ನು :|
ಆರಾಧಿಸುವ!

2. ಪ್ರಭಾವದ ರಾಜ,
ಸೈನ್ಯಗಳ ಕರ್ತ,
ನೀ ಗೋದಲೀಲಿ ಮಲ್ಗುತಿ!
ಸದ್ಗುಣಶೀಲ
ನಿತ್ಯ ದೇವಪುತ್ರ!
ಪ್ರಧಾನ ಕರ್ತನನ್ನು . . .

3. ನಮ್ಮಾಶಗೆ ಹಾಡಿ
ಎಲ್ಲ ಕಾಲದಲ್ಲಿ,
ಸಮಸ್ತ ಭಾಗ್ಯವಂತರೇ!
ಭೂಪರಲೋಕ
ಕಾಯುವಂಥ ಸ್ವಾಮಿ
ಪ್ರಧಾನ ಕರ್ತನನ್ನು . . .

4. ಹೌದಿಂದೆಮಗಾಗಿ
ಜನಿಸಿಪ್ಪ ಯೇಸು
ಸಂಸ್ತುತಿ ಮಾನ ಹೊಂದಲಿ!
ಸತ್ಯಾವತಾರಿ!
ನಿತ್ಯ ದೇವವಾಕ್ಯ!
ಪ್ರಧಾನ ಕರ್ತನನ್ನು . . .

೫೬

Fröhlich soll mein Herze springen.
M. T. 138.

1. ಇಂದು ಬಂದು ನಲಿದಾಡಿ!
ಮಕ್ಕಳೇ, ವೃದ್ಧರೇ,
ನರರೆಲ್ಲ ಹಾಡಿ!
ಇಂದು ಸರ್ವ ವಿಶ್ವ ಶಾನೆ
ಹಾಡುತೆ, ಪಾಡುತೆ—
ಕ್ರಿಸ್ತ ಹುಟ್ಟಿದ್ಧಾನೆ.

2. ದಿವ್ಯ ಪ್ರಭೆಯೊಳಗಿಂದ
ಇಳಿದ ಒಡೆಯ
ಕನಿಕರದಿಂದ.
ಎಂಥಾ ದಿವ್ಯ ಮಮಕಾರ!
ನೋಡಿರಿ, ನಂಬಿರಿ—
ದೇವರವತಾರ!

3. ಹೌದು, ದೇವರ ಕುಮಾರ!
ನಮ್ಮನು ದೇವರು
ತಳ್ಳಿ ಬಿಡಲಾರ.
ಏಕಪುತ್ರನನ್ನು ಇತ್ತ
ಮನಸು ದೊಡ್ಡದು.
ಆಹಾ, ಎಂಥಾ ಚಿತ್ತ!

4. ಗೋದಲಿಲಿ ಕಂಡ ಕಂದ
ನಿನಗೂ ನನಗೂ
ಹೀಗೆ ಕರೆದಂದ—
ಚಿಂತೆ ಬಿಡು, ಪಾಪದಿಂದ
ಬಂದದು ಹೋಗೊದು
ನನ್ನ ಪ್ರೀತಿಯಿಂದ!

5. ಹಿರಿಕಿರಿ ಜನ ಬರ್ರಿ!
ಸ್ತುತಿಸಿ ಕೀರ್ತಿಸಿ
ಯುಕ್ತ ಯಜ್ಞ ತರ್ರಿ!
ನಿಮ್ಮನಿಷ್ಟು ಪ್ರೀತಿ ಮಾಡಿ-
ದಾತನ ಸತತ
ಪ್ರತಿ ಪ್ರೀತಿ ಮಾಡಿ!

6. ಕ್ರೂಜೆಹೊರೆ ಹೊತ್ತು
ಕೊಂಡು
ದಣಿದ ದಾರಿಗ,
ಬಾ, ಬಾ ಧೈರ್ಯಗೊಂಡು!
ನೋಡು, ನಿನ್ನ ಭಾರವನ್ನು
ಇಳಿಸ ಇಳಿದ;
ಸೇರೀ ಶೂರನನ್ನು!

7. ಅಂತಃಸಾಕ್ಷಿಯಿಂದ ಕಷ್ಟ,
ಪಾಪದ ತಾಪವ
ಪಡುವಂಥ ಭ್ರಷ್ಟ,
ಬಾ, ಬಾ, ಮಾಡು ನಮಸ್ಕಾರ!
ಈತನೆ ನಿನಗೆ
ಆದ ಸ್ವರ್ಗದ್ವಾರ.

8. ನರ ಮತ್ತು ದೂತ ಸೇನೆ-
ಯೊಡನೆ ನಿನಗೆ
ಅಡ್ಡಬೀಳುತ್ತೇನೆ.
ಆಹಾ, ಮುದ್ದು ಶಿಶು ಯೇಸು,
ನಿನ್ನನು ನೋಡಿದು
ನನಗಾಯ್ತು ಲೇಸು!

9. ನಿನ್ನ ನೇತ್ರಕಾಂತಿಯಿಂದ
ಹೋಯಿತು ಕತ್ತಲು
ಮನದೊಳಗಿಂದ;
ಹೋಯಿತೆನ್ನ ವ್ಯಥೆಯೆಲ್ಲ;
ಮಡಿಯು ಆಯಿತು
ತನುಮನವೆಲ್ಲ.

೫೭

Stille Nacht, heilige Nacht.
M. T. 271.

1. ಮಂಗಳ ಶ್ರೀ ರಾತ್ರಿಯಲಿ
ಬೇತ್ಲೆಹೇಮ್ ಛತ್ರದಿ
ವರಕನ್ಯೆಲಿ ಜನಿಸಿದ
ದೇವಪುತ್ರನಂ ವಂದಿಸುವ—
|: ವಂದನೆ ರಕ್ಷಕನೇ! :|

2. ಮಂಗಳ ಶ್ರೀ ರಾತ್ರಿಯಲಿ
ದೂತರು ಹೊಲದಿ
ಹಿಂಡು ಕಾಯುವ ಕುರ್ಬರಿಗೆ
ತಂದ ವಾರ್ತೆಯು ಶ್ರೇಷ್ಠವದೆ —
|: ಬಂದನು ರಕ್ಷಕನೇ! :|

3. ಮಂಗಳ ಶ್ರೀ ರಾತ್ರಿಯಲಿ
ಜಾತನ ಮುಖದಿ
ಸುಪ್ರಸನ್ನತೆ ಶೋಭಿಸುತೆ
ನೀತಿಸದ್ಗತಿಭ್ರಷ್ಟರಿಗೆ.
|: ಸ್ವಾಗತ ರಕ್ಷಕನೇ! :|

೫೮

O du fröhliche, o du selige.
M. T. 55.

1. ಇಂದು ಹರುಷ!
ಕಂದ ಹುಟ್ಟಿದ;
ತಂದನೆಮಗೆ ರಕ್ಷಣೆ.
ಬಂದ ಆ ಕೂಸು
ಸುಂದರ ಯೇಸು,
ವಂದನೀಯ ದೇವಪುತ್ರನೇ!

2. ಭಕ್ತಿಹೀನರ
ಮುಕ್ತಿ ಸಾಧಿಸ
ರಕ್ತವರ್ಪಿಸಿ ಮಾಡಿದೆ
ಯುಕ್ತ ಉದ್ಧಾರ,
ಉಕ್ತ ಪ್ರಕಾರ
ವ್ಯಕ್ತನಾದ ದೇವಪುತ್ರನೇ!

3. ಜೀವವೆಮಗೆ
ಈವ ಶಿಶುವೆ!
ಸಾವಿನಂಜಿಕೆ ನೀಗಿದೆ.
ದೇವಾರಿ ಹಾಳು
ಗೈವ ನೀ ಬಾಳು,
ಶ್ರೀ ವಿಜಯ ದೇವಪುತ್ರನೇ!

---

೩. ಯೇಸುವು ಜಗದ್ರಕ್ಷಕನೆಂದು ಪ್ರತ್ಯಕ್ಷವಾದದ್ದು

೫೯

Is. 60.
Mel. Die Gnade sei mit allen.
M. T. 7.

1. ಏಳೇ, ಚೀಯೋನ ಸಭೆ!
ಪ್ರಕಾಶಿಸೀಗಲೆ!
ಯೆಹೋವನಿಂದ ಪ್ರಭೆ
ನಿನ್ನಲ್ಲಿ ಮೂಡಿದೆ!

2. ಸಮಸ್ತ ಜನರಲ್ಲಿ
ಕಗ್ಗಾನ ಕಾವಳು,
ಸಮಸ್ತ ಪೃಥ್ವಿಯಲ್ಲಿ
ಮಹಾಂಧಕಾರವು.

3. ನಿನ್ನೋಜ ಸೇರಿಯಾರು
ನಾನಾ ಜನಂಗಳು;

ನಿನ್ನನ್ನು ವಂದಿಸ್ತಾರು
ಪ್ರಖ್ಯಾತ ರಾಜರು.

4. ಕಣ್ಣೆತ್ತಿ, ಗುಂಪು ನೋಡಿ,
ಚೆನ್ನಾಗಿ ಹರ್ಷಿಸು!
ಮಹಾ ಸಮೂಹ ಓಡಿ
ಬಂದದ್ದ ಬೀಳ್ವದು.

5. ಬಂದಾರೆ ದೂರದಿಂದ,
ಅಗೋ, ಕುಮಾರರು;
ಬಂದಾರೆ ಶೋಭೆಯಿಂದ
ಕುಮಾರಿತೆಗಳು.

6. ಹೆಚ್ಚಾದ ಬೆರ್ಗಿನಿಂದ
ನಿನ್ನಕ್ಷಿ ಅಳೊರ್ದು;
ಸಂತೋಷಪ್ರಭೆಯಿಂದ
ತುಂಬೋದು ಹೃದವು.

7. ಸಮುದ್ರದ್ವೀಪವೆಲ್ಲ
ಚೀಯೋನಿನಾಸ್ತ್ರಿಯೇ!
ಭೂಲೋಕಪ್ರಜೆಯೆಲ್ಲ
ನಿಂಗೊಳಗಾದದೇ!

8. ಒಂಟೇ ಸಮೂಹದಿಂದ
ಸಂದಣಿಯಹುದು;
ಆ ಸೇಬಸೀಮೆಯಿಂದ
ಹೇಮಾದಿ ತರ್ವರು.

9. ಅಗೋ, ಮಿದ್ಯಾನಿನಿಂದ
ಬಂದಾರೆ ದೂತರು.

ಹುಟ್ಟೋದು ಎಲ್ಲರಿಂದ
ಅನಂತ ಸ್ತೋತ್ರವು.

೬೦

Is. 60.
Mel. Es Klingt ein hoher Klang.
M. T. 118.

1. ಏಳೇಳು ನೆಲದಿಂ,
ಪ್ರಕಾಶವಾಗಿರು!
ಉಂಟಾಯ್ತು ಶೋಭೆಯಿಂ
ನಿನ್ಮೇಲೆ ಬೆಳಕು.
ಭೂಮೀಲಿ ತುಂಬ ಅಂಧಕಾರ,
ಮನುಷ್ಯ ಸೂರ್ಯ ಕಾಣಲಾರ;
ಅಘೋರ ಮೊಬ್ಬು ಕತ್ತಲು
ಭೂಚಕ್ರದಲ್ಲಿ ಸುತ್ತಲು.

2. ಎಲ್ಲೆಲ್ಲೂ ಮುಚ್ಚಿದೆ
ಕಾರ್ಗತ್ತಲಿಳೆಯಂ;
ನಿನ್ನಲ್ಲಿ ಮಾತ್ರವೆ
ಅತುಲ್ಯ ಬೆಳಕಂ,
ತಳ್ತಳಿಸುವ ಸ್ವರ್ಗಕಾಂತಿ,
ಪ್ರಕಾಶಿಸುವ ದಿವ್ಯ ಶಾಂತಿ
ಯೆಹೋವ ತಾನೆ ಕೊಡುತಾ
ನಿನ್ನಲ್ಲಿದ್ದಾನೆ ಸರ್ವದಾ.

3. ಭೂರಾಜರೆಲ್ಲರು
ಈ ಕಾಂತಿ ನೋಡುತಾ,
ನಿನ್ ಹತ್ರ ಬಪ್ಪರು,
ಗುಂಪಾಗಿ ಓಡುತಾ.

ಚೀಯೋನ್ ಕುಮಾರ್ತೆ, ಕಣ್ಣು
ಎತ್ತು!
ಸಂತೋಷ ಪಟ್ಟು ನೋಡು
ಸುತ್ತು!
ಸಮೂಹವೆಷ್ಟೊ ದೊಡ್ಡದು!
ಯಾರ್ಯಾರು ಅಲ್ಲಿ ಬರ್ವರು!

4. ಇಗೋ, ಪ್ರವಾಸದಿಂ
ಐತಪ್ಪ ಪುತ್ರರೂ
ಒಪ್ಪುತ್ತ ಶೋಭೆಯಿಂ
ಬಪ್ಪ ಪುತ್ರಿಯರೂ
ಕೊಂಡಾಡಿ ನಿನ್ನ ನಾಮವನ್ನು
ಸೇರ್ಯಾರು ನಿನ್ನ ಬಾಗಲನ್ನು.
ದ್ವೀಪಾವಳಿಯ ಜನರು
ತಮ್ಮಾಸ್ತಿ ನಿನಗೀವರು.

5. ಭೂಲೋಕಧನವು
ನಿನ್ನಲ್ಲಿ ಸೇರುತೆ.
ನಿನ್ನೀಶ ಪ್ರೀತಿಯು
ನಿನ್ನಲ್ಲಿ ಊರುತೆ.
ಯೆಹೋವ ತಾನೆ ಸೂರ್ಯ
ನಾಗಿ
ನಿನ್ನೊಳ್ ಪ್ರಕಾಶವೀಯಲಾಗಿ,
ಸುನೀತಿ ನಿನ್ನಲಾಳಲು,
ನಿನ್ನೀಶ ಚಿತ್ತಪೂರ್ತಿಯು.

೬೧

Is. 60. Matth. 2.
Werde licht, du Volk der Heiden.
M. T. 79.

1. ಏಳು ನೀ, ಯೆರೂಸಲೇಮೆ!
ಬೆಳಕಾಗು, ಚೀಯೋನೇ!
ಮೂಡಿತಲ್ಲಾ ನಿನ್ನ ಮೇಲೆ
ದಿವ್ಯ ತಾರಾಕಾಂತಿಯೇ.
ದೂರದಿಂದ ಬಂದರು
ಮೂಡಣದ ಜನರು.

2. ಸಣ್ಣ ಬೇತ್ಲೆಹೇಮಿನಿಂದ
ಒಂದು ಹೊಸ ನಕ್ಷತ್ರ
ಮೂಡಿ ದಿವ್ಯ ಕಾಂತಿಯಿಂದ,
ದೂರ ದೇಶ ತನಕ
ಹೊಯ್ದು ತನ್ನ ಕಿರಣ,
ತಂತು ದೊಡ್ಡ ಹರುಷ.

3. ಸ್ವಲ್ಪ ಮಂದಿ ಬರುತಾರೆ;
“ಯೂದ ದೇಶದರಸ
ಎಲ್ಲಿ” ಎಂದು ಕೇಳುತಾರೆ,
“ನೋಡಿದ್ದೇವಾ ನಕ್ಷತ್ರ.”
ಭೂಮಿಯ ಸಮೂಹವೆ,
ಅಡ್ಡಬೀಳು ರಾಜಗೆ!

4. ಪೂರ್ವ ದಿಕ್ಕಿನಿಂದ ಬಂತು
ನರಜಾತಿ ಜೊಚ್ಚಲು;
ಲೋಕದೆಲ್ಲ ಜನರಂತು
ಸೇರುವರೀ ಬೆಳಕು.

ಬೇಗ, ಬೇಗ ಬರಲಿ!
ನಮ್ಮ ಯೇಸು ಆಳಲಿ!

5. ಈಗ ಕೊಂಚ ಪಾಲಿನಲ್ಲಿ
ಮಿರುಗುವ ಪ್ರಭೆಯಿಂ
ಪೂರ್ಣ ಲೋಕ ತ್ವರೆಯಲ್ಲಿ
ಶೋಭಿಸಲೀ ಬೆಳಕಿಂ!
ರಾತ್ರಿಯನ್ನು ಓಡಿಸು!
ಸೂರ್ಯನೇ, ಪ್ರಕಾಶಿಸು!

೬೨

Jesu, grosser Wunderstern.
M. T. 273. 73.

1. ನೀತಿಸೂರ್ಯ ಕ್ರಿಸ್ತನು
ಲೋಕಕೆಲ್ಲ ಮೂಡಿದ್ದಾನೆ;
ಜನರೆಲ್ಲರಿಂದಲು
ಘನ ಮಾನ ಹೊಂದುತ್ತಾನೆ.
ಕ್ರಿಸ್ತ ನಿಂಗೆ ವಂದನೆ
ಮಾಡ ನಾನೂ ಬರುವೆ.

2. ನಿನ್ನ ದಾನವಾದಂಥ
ನಂಬಿಗೆಂಬ ಚಿನ್ನವನ್ನು
ನನ್ನಿಂದಂಗೀಕರಿಸ
ಅನುಗ್ರಹಿಸ್ಸೈ ನನ್ನನ್ನು!
ಕ್ರೂಜೆಯೆಂಬ ಪುಟದಿ
ಅದು ಚೊಕ್ಕವಾಗಲಿ!

3. ಮತ್ತು ಅಂಗೀಕರಿಸು
ಜಪವೆಂಬ ಧೂಪವನ್ನು!
ನಿನಗನುದಿನವು
ನಾನು ಸುಡುವೆ ಅದನ್ನು!
ನಾನು ಮೊರೆ ಇಡಲು,
ಕಿವಿಗೊಟ್ಟು ಲಾಲಿಸು!

4. ಕಡೆಯಲ್ಲಿ ತರುವೆ
ಪಶ್ಚಾತ್ತಾಪಗಂಧರಸ;
ಪಾಪ ನಂಗೆ ತೋರುತ್ತೆ
ಬರೆ ನಷ್ಟ, ಬರೆ ಕಸ.
ನಿನಗೆನ್ನ ಕಾಣಿಕೆ
ಇಷ್ಟವೆಂದು ಕೋರುವೆ.

---

೪. ಯೇಸುವಿನ ಬಾಧಾನುಭವ

೬೩

O Lamm Gottes, unschuldig.
M. T. 105.

1. ದೋಷರಹಿತವಾಗಿ
ನಿಬದ್ಧ ದೇವರ ಕುರಿ!
ತಾಳ್ಮೆಪೂರಿತವಾಗಿ
ನಿಂತಿಪ್ಪ ಹಾಸ್ಯದ ಗುರಿ!
ಅಘೋರ ನಿನ್ನ ತಾಪ;
ಅಸಂಖ್ಯ ನಮ್ಮ ಪಾಪ.

ಕಾರುಣ್ಯ ತೋರಿಸು, ಶ್ರೀ ಯೇ
ಸು!

2. ದೋಷರಹಿತವಾಗಿ
ನಿಬದ್ಧ ದೇವರ ಕುರಿ!
ತಾಳ್ಮೆಪೂರಿತವಾಗಿ
ನಿಂತಿಪ್ಪ ಹಾಸ್ಯದ ಗುರಿ!
ಅಘೋರ ನಿನ್ನ ತಾಪ;
ಅಸಂಖ್ಯ ನಮ್ಮ ಪಾಪ.
ಕಾರುಣ್ಯ ತೋರಿಸು, ಶ್ರೀ ಯೇ
ಸು!

3. ದೋಷರಹಿತವಾಗಿ
ನಿಬದ್ಧ ದೇವರ ಕುರಿ!
ತಾಳ್ಮೆಪೂರಿತವಾಗಿ
ನಿಂತಿಪ್ಪ ಹಾಸ್ಯದ ಗುರಿ!
ಅಘೋರ ನಿನ್ನ ತಾಪ;
ಅಸಂಖ್ಯ ನಮ್ಮ ಪಾಪ.
ವಿಶ್ರಾಂತಿ ಪಾಲಿಸು, ಶ್ರೀ ಯೇ
ಸು!

೬೪

Joh. 1, 29.
Christe, du Lamm Gottes.
M. T. 2.

1. ದೇವಯಜ್ಞಪಶು,
ಲೋಕಪಾಪವಾಹಿಯೇ,
ಕಾರುಣ್ಯ ಮಾಡು!

2. ದೇವಯಜ್ಞಪಶು,
ಲೋಕಪಾಪವಾಹಿಯೇ,
ಕಾರುಣ್ಯ ಮಾಡು!

3. ದೇವಯಜ್ಞಪಶು,
ಲೋಕಪಾಪವಾಹಿಯೇ,
ಈಯ್ ಸಮಾಧಾನ! ಆಮೆನ್.

೬೫

Ein Lämmlein geht und trägt die
Schuld. —M. T. 183.

1. ಈ ಲೋಕದಪರಾಧವ
ಕೊಂಡೊಯ್ವ ಕುರಿಮರಿ
ಮನುಷ್ಯಪಾಪದಂಡನ
ತಿಂದಳಿಸುತ್ತೆ ಸರಿ.
ಸಂತೋಷವೆಲ್ಲವಗಲಿ,
ತನ್ನನ್ನು ಹಿಂಸೆಗೊಪ್ಪಿಸಿ,
ಸಂಕಷ್ಟಕೊಳಗಾಗಿ
ಪೆಟ್ಟು, ಹಾಸ್ಯ, ಗಾಯ, ಶಿಲುಬೆ
ನಾ ಸೋಸಲೊಲ್ಲೆನೆನ್ನದೆ
ಸಾಯುತ್ತೆ ಬಲಿಯಾಗಿ.

2. ಆ ಕುರಿ ಯಾವದಂದರೆ—
ಅತಿಇಷ್ಟ ಯೇಸು ತಾನೆ!
ಈತನ್ನ ಪಾಪನಾಶಕೆ
ಸರ್ವೇಶ ಕೊಟ್ಟಿದ್ದಾನೆ.
"ನೀ ಹೋಗಿ, ತಾಳು ಸಾವನು!
ಪಾಪಿಷ್ಠರಂ ವಿಮೋಚಿಸು!

ಇದಕ್ಕೆ ನೀನೆ ಶಕ್ತ.
ಕೋಪಾಗ್ನಿ, ಪಾಪದಂಡನೆ
ದೊಡ್ಡದು; ಪ್ರಾಯಶ್ಚಿತ್ತಕೆ
ಉಪಾಯ ನಿನ್ನ ರಕ್ತ."

3. ಕ್ರಿಸ್ತ್ಯೇಸುವೆಂದ — "ತಂದೆ
ಯೆ,
ನಾ ತಾಳ್ವೆನೆಲ್ಲವನ್ನ;
ನಿನ್ನತಿಪ್ರಿಯ ಅಪ್ಪಣೆ
ನನ್ನೊಂದೆ ಇಷ್ಟ ಅನ್ನ!"
ಆಶ್ಚರ್ಯವಾದ ಪ್ರೀತಿಯೇ!
ನಿನ್ನಿಂದ ಏಕಪುತ್ರನೇ
ಪಿತಂಗೆ ದೂರವಾದ.
ಚೈತನ್ಯವುಳ್ಳ ಪ್ರೀತಿಯೇ!
ಪ್ರಶಸ್ತ ಜೀವರಾಜನೇ
ನಿನ್ನಿಂದ ಮೃತನಾದ.

4. ಓ ಪ್ರೀತಿ, ನಾನು ನಿತ್ಯಕೆ
ನಿನ್ನನ್ನೇ ನೆನದೇನು;
ನನ್ನಪ್ಪಿಕೊಂಡ ಪ್ರೀತಿಯೇ
ನಾ ನಿನ್ನನಪ್ಪಿಯೇನು!
ನೀನೆನ್ನ ಜೀವಕಾಂತಿಯೆ,
ನಿನ್ನಾಳು ನಾನು; ನಿನಗೆ
ನನ್ನನ್ನು ಒಪ್ಪಿಸ್ಯೇನು;
ಆ ಲೋಕವಂ ಪ್ರವೇಶಿಸಿ,
ನೀ ಕೊಟ್ಟ ಮುಡಿವಸ್ತ್ರದಿ
ನಿನ್ನೈಕ್ಯ ಪಡದೇನು.

೬೬

Schau hin! Dort in Gethsemane.
M. T. 274.

1. ಅಗೋ! ಆ ತೋಟದೊಳಗೆ
ನಮ್ಮತಿಪ್ರಿಯ ಯೇಸುವೆ
ಹೋರಾಡುತ್ತಿರುವ;
ನಮ್ಮೆಲ್ಲ ಪಾಪರಾಶಿಯ
ನಿರ್ದೋಷಿಯಾತ ಹೊರುವ.

2. ಅಗೋ, ಮತ್ತಷ್ಟು ಸಂಕಟ!
ಭೂಮಿಲಿ ಬಿದ್ದ ಬೇಡುತ್ತ —
ಈ ಪಾತ್ರೆ ಬೇಡವು!
ಆದಾಗ್ಯೂ ನೆರವೇರಿಸು
ನಿನ್ನಿಚ್ಛೆ, ತಂದೆ, ಈಗಲು!

3. ಅಗೋ, ಆ ಶೂರಸಂತೆಯೇ
ನೀ ಪ್ರಾರ್ಥಿಸಿನ್ನು, ಕ್ರೈಸ್ತನೇ,
ಹೋರಾಟ ಬರಲು!
ಆ ಜಯಶಾಲಿ ಕ್ರಿಸ್ತನು
ವಿಜಯ ನಿನಗೀಯ್ವನು.

೬೭

Du gehest in den Garten beten.
M. T. 91.

1. ನೀ ಪ್ರಾರ್ಥಿಸಲ್ಕೆ ತೋಟ
ದಲ್ಲಿ
ಪ್ರವೇಶಿಸುತ್ತಿ, ಯೇಸುವೆ!
ನಾ ಬಂದು, ನಿನ್ನ ಬಳಿಯಲ್ಲಿ
ನಿಂತಿದ್ದು, ನಿನ್ನನಗಲೆ;

ನಿನ್ನಿಂದ ತಕ್ಕ ಪ್ರಾರ್ಥನೆ
ಹ್ಯಾಗೆಂದು ಕಲ್ತುಕೊಳ್ಳುವೆ.

2. ನೀ ಸಾಯುವಷ್ಟು ದುಃಖ ಪಟ್ಟು,
ನೆಲಕ್ಕೆ ಬೊಗ್ಗಿ ನಡುಗಿ;
ಈ ದುಃಖ ನನ್ನ ಮನ ಮುಟ್ಟಿ
ದುರಾಶೆಯೆಲ್ಲ ಕೊಲ್ಲಲಿ!
ನಾನೆನ್ನ ಪಾಪವರಿತು
ಶೋಕಾರ್ತ ಬೊಗ್ಗಿಕೊಳ್ವೆನು.

3. ನೀ ಬಿಟ್ಟು ಎಲ್ಲ ಜನರನ್ನು,
ಏಕಾಂತದಲ್ಲಿ ಬೇಡಿದಿ.
ನಿನ್ನಂತೆ ಬಿಟ್ಟು ಗದ್ದಲನ್ನು,
ನಾ ಬೇಡುತೇನೇಕಾಂತದಿ.
ನನ್ನೊಡನಿರೆ ಕರ್ತನು,
ಮತ್ತಾರ್‍ಯರು ಇರಬಾರದು.

4. ನೀ "ಅಪ್ಪಾ" ಎಂದು ಕೂಗ ಲಾಗಿ,
ನಿನ್ನನ್ನು ತಂದೆ ಕೇಳ್ದನು.
ನಾ ಬೇಡಲಾತ ತಂದೆಯಾಗಿ
ಕಾರುಣ್ಯ ಮಾಡೊನೆನಗು;
ನಿನ್ನಂತೆ ನಾನು ನಂಬಿಯೇ
"ಕೇಳಪ್ಪಾ" ಎಂದು ಕೂಗುವೆ.

5. ನಿನ್ನಿಚ್ಛೆ ತಂದೇಯಿಚ್ಛೆಯಲ್ಲಿ
ಅನ್ಯೋನ್ಯ ಮಾಡಿ ಬೇಡಿದಿ.
ನಾನಾದ್ರೂ ಬೇಡಿಕೊಳ್ಳುವಲ್ಲಿ
"ನಿನ್ನಿಷ್ಟ, ತಂದೆ, ಆಗಲಿ!"
ಹೀಗಂದು ನಮ್ರನಾಗಿಯೆ
ಸ್ವಚಿತ್ತ ಬಿಟ್ಟು ಬೇಡುವೆ.

6. ನಿನ್ನನ್ನು ಮರ್ತ ಶಿಷ್ಯರನ್ನು
ನೀ, ಕರ್ತ, ಮರ್ಯಲಿಲ್ಲವು;
ಸ್ವಕಷ್ಟದಲ್ಲು ಪರರನ್ನು
ನೀ ಚಿಂತಿಸುತ್ತ ಇರಲು,
ನಾ ಪರರನ್ನು ಮರೆತು
ಬೇಡೋದು ಫಲವಿಲ್ಲದು.

7. ಓ ಯೇಸು, ನೀನು ಬೇಡಿ ದಂತೆ
ನಾ ಬೇಡಲಿಕ್ಕೆ ಬೋಧಿಸು!
ಯಥಾರ್ಥವಾಗಿ ಮಗನಂತೆ
ನಾ ಬೇಡೆ, ತಂದೆ ಕೇಳ್ವನು.
ಹೀಗಾಗಿ ಮೋಕ್ಷ ಪಡೆದು,
ಅನಂತ ಸ್ತುತಿ ಗೈವೆನು.

೬೮

Eines wünsch' ich mir vor allem andern.—M. T. 166.

1. ಒಂದೆ ಮುಖ್ಯವಾದ ಆತ್ಮ ಪೋಷ
ಮಾತ್ರ ನನಗಾದರೆ,
ಇಹಲೋಕಾರಣ್ಯವಂ ಸಂತೋಷ
ಪಟ್ಟು ದಾಟಿ ಹೋಗುವೆ.

ದುಃಖಾಕ್ರಾಂತನಾಗಿ ತೋಟ
ದಲ್ಲಿ
ಕ್ರೂರ ಶ್ರಮ ತಾಳ್ದ ಯೇಸುವಲ್ಲಿ
ಆತ್ಮದೃಷ್ಟಿ ಇಟ್ಟರೆ,
ನಾನು ಮುಕ್ತನಾಗುವೆ.

2. ನೀನು ತೋರಿಸಿದ ತಾಳ್ಮೆ
ಯನ್ನು,
ನನ್ನ ಪ್ರಿಯ ಯೇಸುವೆ,
ನಿನ್ನ ರಕ್ತಮಯರೂಪವನ್ನು
ನಾನು ಎಂದು ಮರೆಯೆ!
ನೀನು ಕ್ರಯಕೆನ್ನ ಆತ್ಮಕೊಂಡು,
ಕ್ರೂಜೆಯಲ್ಲಿ ಬಹು ದಾಹ
ಗೊಂಡು,
ಜೀವವಂ ವಿಸರ್ಜಿಸಿ,
ತೀರಿತೆಂತ ಕೂಗಿದಿ.

3. ನನಗಾಗಿ ನೀನು ಪಟ್ಟ ಕಷ್ಟ
ಎಂದು ಮರ್ತು ಬಿಡೆನು;
ಘೋರ ಕತ್ತಲಲ್ಲಿ ಅಪಭ್ರಷ್ಟ
ನಾನು ಕೂತುಕೊಳ್ಳಲು,
ಅನುಗ್ರಹಗೊಂಡು, ಬಲಿಯಾಗಿ
ನಿನ್ನ ರಕ್ತ ಚೆಲ್ಲಿ ನನಗಾಗಿ,
ಕೊಟ್ಟಮೂಲ್ಯ ಬೆಲೆಯ,
ಕೊಂಡುಕೊಂಡಿ ದಾಸನ.

4. ಇನ್ನು ನಾನು ನಿನ್ನ ದಾಸ,
ಯೇಸು!
ಆಗಲೆನ್ನು, ಪತಿಯೇ!
ನಿನ್ನ ನಾಮವೊಂದೆ ನಂಗೆ ಲೇಸು,
ಅತಿಶ್ರೇಷ್ಠ ಮಿತ್ರನೇ!
ನಿನಗಾಗಿ ಕಾರ್ಯ ನಡಿಸ್ಯೇನು,
ನಿನಗಾಗಿ ಬಾಳಿ ಮಡಿದೇನು!
ಜೀವವಿರ್ವ ವರೆಗೆ
ಈ ಪ್ರಮಾಣ ಸ್ಥಿರವೆ!

೬೯

Seht, welch ein Mensch ist das!
M. T. 121.

1. ಇಗೋ, ಮನುಷ್ಯನು!
ಕಣ್ಣಲ್ಲಿ ದುಃಖಜಲ;
ಮೋರೇಲಿ ಲಜ್ಜೆಯು;
ತುಟೀಲಿ ಶೋಕಮಲ;
ಹಣೇಲಿ ಬೆವರು;
ಸಂಕಷ್ಟ ಮನದಿ;
ಎದೇಲಿ ತಾಳ್ಮೆಯು —
ಈ ರೂಪ ನೋಡಿರಿ!

2. ಇಗೋ, ಮನುಷ್ಯನು!
ತುಂಬಾಯ್ತು ಗಾಯದಿಂದ
ಶರೀರವೆಲ್ಲವು;
ಈ ಶ್ರಮವೇತರಿಂದ?
ಪವಿತ್ರನೇತಕೆ
ಪ್ರಯಾಸ ಪಟ್ಟನು?
ನಮ್ಮಪರಾಧವೆ
ಆತನ್ನ ಕೊಂದಿತು!

3. ಇಗೋ, ಮನುಷ್ಯನು!
ನೀ ಪಟ್ಟ ಶ್ರಮೆಯನ್ನು
ನಾವೆಂದು ಮರ್ಯೆವು.
ಈ ಶ್ರಮೆ ಧ್ಯಾನವನ್ನು
ನೀ ವರ್ಧಿಸ್ಯೇಸುವೆ!
ನಮ್ಮನ್ನು ದೃಷ್ಟಿಸು!
ನೀನೊಬ್ಬ ನಮಗೆ
ಮಧ್ಯಸ್ಥಗಾರನು.

4. ಇಗೋ, ಮನುಷ್ಯನು!
ನಿನ್ನಲ್ಲಿ ನಂಬುತೇವೆ.
ಅನಂತ ಜೀವವು,
ಕ್ರಿಸ್ತ್ಯೇಸು, ನಿನ್ನ ಸೇವೆ!
ನೀ ಶಾಪ ತಾಳಿದೆ;
ಅಭಯವಾಯಿತು,
ಸಮಾಧಿ ನಮಗೆ
ವಿಶ್ರಾಂತಿಸ್ಥಳವು.

೭೦

O Welt, sieh' hier dein Leben.
M. T. 61.

1. ಓ ಲೋಕ, ನೋಡು! ಅಲ್ಲಿ
ಆ ಕ್ರೂಜೆವೃಕ್ಷದಲ್ಲಿ
ಅಘೋರ ನೋಟವೇ!
ಆ ಕಷ್ಟದಾಳು ಯಾರು?
ಆ ನಿಂದೆದಾಸನಾರು?
ಪ್ರಶಸ್ತ ಜೀವರಾಜನೇ!

2. ಈ ದೊಡ್ಡ ಪೀಡೆಯನ್ನು,
ಈ ರಕ್ತಬೆವರನ್ನು
ಚೆನ್ನಾಗಿ ದೃಷ್ಟಿಸು!
ಅಗಾಧ ಶೋಕದಿಂದ,
ನಿಟ್ಟುಸುರಾರ್ತಿಯಿಂದ
ಈ ಎದೆ ಭಿನ್ನವಾಯಿತು.

3. ಯಾರಿಂದ ಪೆಟ್ಟು ತಿಂದೆ?
ಈ ಕ್ರೂರವಾದ ನಿಂದೆ
ನೀನೇಕೆ ತಾಳಿದೆ?
ನೀನಪರಾಧಿಯಲ್ಲ,
ನಮ್ಮಂತೆ ದುಷ್ಟನಲ್ಲ;
ಪವಿತ್ರ ದೇವಪುತ್ರನೆ.

4. ನಾ ಮಳಲಷ್ಟು ಪಾಪ
ಗೈದತಿಭಾರಶಾಪ
ಹೊಂದಿರುವಾಗಲೆ,
ಅಶುದ್ಧ ಪಾಪಿಗಾಗಿ
ನೀ ಶುದ್ಧ ಹೊಣೆಯಾಗಿ
ನನ್ನೆಲ್ಲ ಶಾಪ ತಾಳಿದೆ.

5. ನಿನ್ನನುಗ್ರಹಕಾಗಿ
ಏನೇನು ಪ್ರತಿಯಾಗಿ
ನಾ ಮಾಡಬಹುದು?
ನಾ ಗೈದ ಪಾಪವನ್ನು,
ನೀ ಪಟ್ಟ ಶ್ರಮೆಯನ್ನು
ನಾನೆಂದು ಮರ್ತು ಬಿಡೆನು.

೭೧

Der Schächer fluchbeladen.
M. T. 61.

1. ಆ ಕಳ್ಳ ಕ್ರೂಜೆಯಲ್ಲಿ
ತನ್ನಂತ್ಯ ಕ್ಷಣದಲ್ಲಿ
ವಿಶ್ವಾಸಿಸುತ್ತಲೇ
ಕ್ರಿಸ್ತೊಡೆಯಂಗೆ ಬಾಗಿ,
ಕಟಾಕ್ಷ ಬೇಡಲಾಗಿ,
ಕೃತಾರ್ಥನಾದನಲ್ಲವೇ?

2. ಅಸಹ್ಯ ಪಾಪಗಾರ
ಸಂಪೂರ್ಣ ಪರಿಹಾರ
ತಕ್ಕೊಳ್ಳಬಹುದೇ?
ಹೌದ್ಹೌದು, ಕ್ರಿಸ್ತಶ್ರಮೆ
ವಿಶ್ವಾಸಿಗಳ್ಗೆ ಕ್ಷಮೆ!
ಈ ಮಾತು ಹ್ಯಾಗೂ ನಿಜವೇ!

3. ಆದಾಗ್ಯು ಒಂದೆ ಭಯ —
ಪ್ರತ್ಯಕ್ಷವಾದ ದಯ
ಆ ಒಬ್ಬ ಹೊಂದಲು,
ಮತ್ತೊಬ್ಬ ಕಳ್ಳ ತೀರಿ,
ಸಂರಕ್ಷಾಕಾಲ ಮೀರಿ,
ಅಂತ್ಯಾಜ್ಞೆ ಹೊಂದಿ ಕೆಟ್ಟನು.

4. ಜಗತ್ತು ಪೂರ್ಣ ಮಾಯ!
ಶ್ರೀ ಯೇಸು, ನೀ ಸಹಾಯ
ಭಯಾತ್ಮಗೀಯಲು
ಇನ್ನ್ಯಾಕೆ ವ್ಯರ್ಥ ಭಯ?
ಸರ್ವತ್ರ ನಿನ್ನ ದಯ
ನಂಗಿರೆ ಸಾಕು ನಿತ್ಯಕು!

೭೨

Mel. **Ringe recht, wenn Gottes Gnade.—M. T. 27.**

1. ಯೇಸು ಕ್ರೂಜೆವೃಕ್ಷದಲ್ಲಿ
ತೂಗುತಿರುವಾಗಲು,
ಆತ್ಮ ಮನ ಮೈಗಳಲ್ಲಿ
ದುಃಖ ತಾಳುತಿದ್ದನು.

2. ಕಳ್ಳರಲ್ಲಿ ಕಳ್ಳನೋಲು
ಕ್ರೂಜೆಯಲ್ಲಿ ಸತ್ತನು;
ಹದವಾದ ಈಟಿಕೋಲು
ಪಕ್ಕೆಯಲ್ಲಿ ಚುಚ್ಚಿತು.

3. ಸ್ವಲ್ಪ ಜನ ಪ್ರೀತಿಯಿಂದ
ಹತ್ರ ನಿಂತುಕೊಂಡರು;
ನಿಂತು, ಘೋರ ದುಃಖದಿಂದ
ಬಿಕ್ಕಿ ಅಳುತಿದ್ದರು.

4. ಮುಂಚೆ ಜ್ಞಾನವೃಕ್ಷದಿಂದ
ಮೃತ್ಯುಫಲ ಹುಟ್ಟಿತು;
ಈಗ ಕ್ರೂಜೆತರುವಿಂದ
ಜೀವಫಲವಹುದು.

5. ಹಗೆ ತಾಳ್ದ ಕ್ರಿಸ್ತನಲ್ಲಿ
ನಿತ್ಯ ಸ್ನೇಹಮೂಲವು;
ಆತ ಪಟ್ಟ ಶ್ರಮದಲ್ಲಿ
ನಿತ್ಯ ಸುಖವಾಯಿತು.

6. ಶುಭ ವರ್ತಮಾನವನ್ನು
ಕೇಳಿ, ಕ್ರೂಜೆ ದೃಷ್ಟಿಸಿ,
ಆ ಮನುಷ್ಯಪುತ್ರನನ್ನು
ನಂಬಿ ಸ್ತೋತ್ರ ಮಾಡಿರಿ!

೭೩

When I survey the wondrous Cross.—M. T. 39.

1. ಮಹತ್ವವುಳ್ಳ ರಾಜನ
ತಿಲುಬೆ ಶ್ರಮೆ ನೋಡಲ್,
ಈ ಲೋಕದಾಶೆ ಗರ್ವವ
ಸಂಪೂರ್ಣ ತ್ಯಾಜ್ಯ ಮಾಡುವೆ.

2. ಈ ಕ್ರೂಜೆಯಲ್ಲಿ ಅಲ್ಲದೆ
ಅನ್ಯತ್ರ ಹಿಗ್ಗಿಕೊಳ್ಳೆನು;
ಪ್ರಪಂಚಭೋಗಮೋಹಕೆ
ನನ್ನಾತ್ಮ ಒಪ್ಪಲಾರದು.

3. ನೋಡೋಣ ಮುಳ್ಳುಮಾ
ಲೆಯಂ,
ಕೈ ಕಾಲು ತಲೆಯಿಂದಲು
ಬಿದ್ದೋದ ರಕ್ತಧಾರೆಯಂ!
ಹಾ! ಎಂಥ ಪ್ರೀತಿಯಬ್ಧಿಯು!

4. ಈ ರಕ್ತಮೂಲವಾಗಿಯೇ
ನನ್ನಪರಾಧ ಹೋಗಿದೆ;
ಈ ಶ್ರಮೆ ಗಾಯದಿಂದಲೇ
ವಿಶ್ರಾಂತಿ ಕ್ಷೇಮ ಸಿಕ್ಕಿವೆ.

5. ಭೂಪರಲೋಕ ಕೊಟ್ಟರು,
ಈ ಪ್ರೀತಿಗೀಡು ಆಗದು.
ನನ್ನಾತ್ಮ ಪ್ರಾಣ ಸರ್ವವು
ನಾ ಕೊಡ ತಕ್ಕ ಬಲಿಯು.

೭೪

Mel. O sanctissima.—M. T. 55.

1. ಯೇಸು ಕ್ರಿಸ್ತನೇ,
ಮೃತ್ಯುಂಜಯನೇ,
ನಮ್ಮ ಜೀವಜೀವವೇ!
ನಿನ್ನ ಶ್ರಮೆ ನಮ್ಮ ಕ್ಷಮೆ.
ಕಾಯಿ, ಕಾಯಿ ನಮ್ಮನ್ನು!

2. ಕಳ್ಳನಂತೆಯೆ
ನಮ್ಮ ದಂಡನೆ
ಹೊಣೆಯಾಗಿ ತಾಳಿದೆ.
ನೀ, ಪವಿತ್ರ ದಿವ್ಯ ಮಿತ್ರ,
ಕಾಯಿ, ಕಾಯಿ ನಮ್ಮನ್ನು!

3. ದುಷ್ಟ ಹಾಸ್ಯವು,
ಮುಳ್ಳುಮಾಲೆಯು
ನಿನ್ನ ಘನವಾಯಿತು.
ನಮ್ಮ ನಿಂದೆ ನೀನು ತಿಂದೆ.
ಕಾಯಿ, ಕಾಯಿ ನಮ್ಮನ್ನು!

4. ಬಡ ಪಾಪಿಗೆ
ನಿನ್ನ ಕ್ರೂಜೆಯೆ
ಜೀವವೃಕ್ಷವಾಗಿದೆ.

ನಿನ್ನ ದುಃಖ ನಮ್ಮ ಸುಖ.
ಕಾಯಿ, ಕಾಯಿ ನಮ್ಮನ್ನು!

5. ದಿವ್ಯ ಪ್ರೀತಿಯೇ,
ದೇವಪುತ್ರನೇ,
ಕನ್ಯಾಸ್ತ್ರೀಯ ಮಗುವೇ!
ಜೀವದಲ್ಲು ಮೃತಿಯಲ್ಲು
ಕಾಯಿ, ಕಾಯಿ ನಮ್ಮನ್ನು!

೭೫

O Haupt voll Blut und Wunden.
M. T. 129.

1. ಓ ದಿವ್ಯ ಕಾಂತಿಮುಖ,
ಹ್ಯಾಗಾದಿ ಪಾಂಡರ!
ನಿನ್ನಲ್ಲಿ ಶೋಕ ದುಃಖ
ಆಯ್ತೆಷ್ಟೋ ಹೇರಳ!
ಸಂಕಷ್ಟ ನಿಂದೆಯಿಂದ
ಮುಚ್ಚಿರೊ ಮುಖವೆ,
ನಿಂಗಾಗಲಿ ನಮ್ಮಿಂದ
ಸಾಷ್ಟಾಂಗ ವಂದನೆ!

2. ಈ ಮುಖಪ್ರಭೆಯಿಂದ
ಸುಟ್ಟೀತು ಫಕ್ಕನೆ
ತ್ರಿಲೋಕ ಭಯದಿಂದ;
ಇಂದಾಯ್ತು ಕತ್ತಲೆ.
ಪ್ರಕಾಶ ಉಳಿದಿಲ್ಲ;
ಮಿಂಚಾದ ಕಣ್ಣಿಗೆ
ಉಜ್ಜ್ವಲ ಮಿರುಗಿಲ್ಲ;
ಮೊಬ್ಬಾಯ್ತು ದೃಷ್ಟಿಗೆ.

3. ನೀ ಸೋಸಿದೆಲ್ಲ ಕಷ್ಟ
ನನ್ನಪರಾಧವೇ.
ನಿಂಗಾದ ಎಲ್ಲ ನಷ್ಟ
ನಾ ಗೈದ ಪಾಪವೇ.
ಕೋಪಾಗ್ನಿಗೆ ನಾ ಪಾತ್ರ,
ಕೆಟ್ಟೋದ ಭ್ರಷ್ಟನು;
ವಿಮುಕ್ತಿ ನೀನೇ ಮಾತ್ರ.
ಕಟಾಕ್ಷಿಸೆನ್ನನು!

4. ಈ ನಿನ್ನ ಶ್ರಮೆಯಲ್ಲಿ
ನಾ ಸೇರ ಬಂದೆನು;
ಶ್ರೀಶ್ರಮೆಯೈಕ್ಯದಲ್ಲಿ
ನನ್ನನ್ನು ಸೇರಿಸು!
ಇದೆನ್ನ ಶ್ರೇಷ್ಠ ಯೋಗ:
ಕಣ್ಣಿಟ್ಟು ಕ್ರೂಜೆಗೆ
ಈ ಜೀವ ಬಿಟ್ಟು ಹೋಗ
ಸಂತೋಷವೆನಗೆ.

5. ನಾ ಸ್ತೋತ್ರ ಮಾಡುತೇನೆ,
ನನ್ನಾಪ್ತ ಯೇಸುವೆ!
ನಿನ್ನಾರ್ತಿ, ನಿನ್ನ ಬೇನೆ
ನಾನೆಂದು ಮರೆಯೆ.
ನನ್ನೆಲ್ಲ ಅನುರಾಗ
ನಿನ್ನಲ್ಲಿ ಇರಲಿ!
ನನ್ನಂತ್ಯ ಬರುವಾಗ
ನಿನ್ನಲ್ಲಿ ಬರಲಿ!

6. ಅಭಯ ಕೊಡೆನ್ನಲ್ಲಿ
ನಾ ಸಾಯುತಿರಲು!
ಇರೆನ್ನ ಬಳಿಯಲ್ಲಿ
ಉಚ್ಛ್ವಾಸ ತಪ್ಪಲು!
ನಿನ್ನನ್ನು ನೋಡುತೇನೆ;
ಅಮರ್ತ್ಯಾಚರಣ
ನಾನಪ್ಪಿಕೊಳ್ಳುತೇನೆ;
ಇದೊಳ್ಳೇ ಮರಣ.

೭೬

Mel. Rousseau's dream.
M. T. 107.

1. ಜೀವಕಾಂತಿಯನ್ನು ಬಿಟ್ಟ
ರಕ್ತಮಯ ಮುಖವೆ,
ಮುಳ್ಳುಮಾಲೆ ಬಿಗಿದಿಟ್ಟ
ಗಾಯವಾದ ತಲೆಯೆ,
ದ್ವೇಷವೆಷ್ಟೋ,
ನಿಂದೆಯೆಷ್ಟೋ
ನಿನ್ನ ಮೇಲೆ ಬಂದದೆ!

2. ನೀನು ಅತ್ತ ಹೇತುವೇನು ?
ನನ್ನ ದುಷ್ಟ ಪಾಪವೆ!
ಸತ್ತ ಹೇತು ನಿನ್ನಲ್ಲೇನು?
ನನ್ನ ಶಾಪರಾಶಿಯೆ!
ಕ್ರೂಜೆಯಲ್ಲಿ
ರಕ್ತ ಚೆಲ್ಲಿ,
ಜೀವ ಕೊಟ್ಟೆ ನನಗೆ.

3. ಯಾಕೆ ನಿನ್ನ ಮೇಲೆ ಕಷ್ಟ,
ದುಃಖ, ಶ್ರಮ ಬಿದ್ದವು?
ನಿತ್ಯನನ್ನು ಜೀವನಷ್ಟ
ಯಾಕೆ ಹಿಡುಕೊಂಡಿತು?
ನಿನ್ನ ಕಷ್ಟ,
ನಿನ್ನ ನಷ್ಟ
ನಂಗೆ ಮೋಕ್ಷಪ್ರಾಪ್ತಿಯು!

4. ನಿನ್ನ ಶುದ್ಧ ರಕ್ತದಿಂದ
ನನ್ನ ಪಾಪ ತೊಳೆದು,
ನಿನ್ನ ಆತ್ಮಶಕ್ತಿಯಿಂದ
ಅಂಧಕಾರ ಬಿಡಿಸು!
ನಿನ್ನ ನೀತಿ,
ನಿನ್ನ ಪ್ರೀತಿ
ನನ್ನ ನಿತ್ಯ ಸುಖವು.

೭೭

O drückten Jesu Todesmienen.
M. T. 236.

1. ಕ್ರಿಸ್ತ್ಯೇಸುವಿನ ಮೃತಿಮುಖ
ನನ್ನಾತ್ಮಧ್ಯಾನವಾಗಲಿ!
ಅತುಲ್ಯವಾದಾ ಪ್ರಾಯಶ್ಚಿತ್ತ
ಯಾವಾಗ್ಲೂ ತ್ರಾಣ ಕೊಡಲಿ!
ಆತಂಗೆ ಸ್ತೋತ್ರ ಮಾಡಲಿಕ್ಕೆ
ನಂಗೆಷ್ಟಮೂಲ್ಯ ಕಾರಣ!
ಪಾಪಾದಿ ರೋಗ ನೀಗಲಿಕ್ಕೆ
ಆ ರಕ್ತ ಶ್ರೇಷ್ಠ ಔಷಧ.

2. ಶ್ರೀ ಯೇಸುವಲ್ಲಿ ಇಟ್ಟ ಧ್ಯಾನ
ನಿರಾಶೆಯಾದ ಮನಕ್ಕೆ
ಸುಧೈರ್ಯ, ನಿಜ ಸಮಾಧಾನ,
ಸಂತೋಷವನ್ನೀಯುತ್ತದೆ.
ಕ್ರಿಸ್ತೇಸು ಶಕ್ತಿ ನೀಡುವಾಗ
ಅಶಕ್ತ ನನ್ನ ಆತ್ಮಕ್ಕೆ,
ನಿರೀಕ್ಷೆ ಪಡ ಹೊಸದಾದ
ಆಧಾರ ಪ್ರಾಪ್ತವಾಗಿದೆ.

3. ಆಹಾ! ನನ್ನಪರಾಧಕ್ಕಾಗಿ
ಕ್ರಿಸ್ತೇಸು ರಕ್ತ ಚೆಲ್ಲಿದ.
ಈ ವಾರ್ತೆಯನ್ನು ಹರ್ಷವಾಗಿ
ನಾ ಮಾಡುವೆ ಸ್ವೀಕಾರವ.
ಅತುಲ್ಯ ಬುದ್ಧ್ಯತೀತ ಪ್ರೇಮ,
ಅಗ್ರಾಹ್ಯ ದಿವ್ಯ ದಯವೇ!
ನಿನ್ನಿಂದ ಪಾಪಿಗೆ ಸುಕ್ಷೇಮ,
ಸುನೀತಿ ದೊರಕುತ್ತದೆ.

4. ದಯಾಳು ಕರ್ತ, ನಿನ್ನ ಶ್ರಮೆ
ನನ್ನೊಂದೇ ನಿತ್ಯ ಗೀತವು.
ನಿನ್ನಿಂದ ಆದ ಪಾಪಕ್ಷಮೆ,
ನಿನ್ನಿಂದ ಆದ ಶಾಂತಿಯು
ನನ್ನೊಳ್ ಕೃತಜ್ಞಭಾವವನ್ನು
ಉತ್ಪಾದಿಸೋದು ಯುಕ್ತವು.
ಹೀಗಾಗುವಂತೆ ಕೃಪೆಯನ್ನು
ನೀ, ಪ್ರಿಯ ಮಿತ್ರ, ಪಾಲಿಸು.

5. ನಾ ಲೋಕ ಬಿಟ್ಟು ಹೋಗುವಾಗ,
ನೀ ನಿನ್ನ ದಯದಲ್ಲಿಯೇ
ನನ್ನನ್ನು ಮರೆ ಮಾಡುವಾಗ,
ನಂಗೈಯ್ಯ ಭಾಗ್ಯಪೂರ್ತಿಯೇ!
ನಿನ್ನಿಂದ ಕ್ಷೇಮ ಹೊಂದಿದಾತ್ಮ
ಮತ್ತ್ಯಾತಕ್ಕಂಜುತ್ತಿರ್ವದು?
ಈ ಕಾಯ ಬಿದ್ದರೂ ನಿರ್ಭಯ
ಸುರಕ್ಷಿತಾತ್ಮಕ್ಕಿರ್ವದು.

೭೮

Ach, sieh' ihn dulden, bluten, sterben.—M. T. 97.

1. ನಮ್ಮಾತ್ಮ ಪಟ್ಟ ಶ್ರಮೆಯನ್ನು
ವಿನಯವಾಗಿ ನೋಡಿ ಧ್ಯಾನಿಸು!
ಸರ್ವೇಶ ತನ್ನ ಜೀವವನ್ನು
ಮನುಷ್ಯಜಾತಿಗಾಗಿ ಕೊಟ್ಟನು.
ಈ ದೊಡ್ಡ ಪ್ರೀತಿಗೀಡು ಆದದು
ಮತ್ತ್ಯಾವನಲ್ಲು ಕಾಣದೆಂದಿಗು.

2. ಕ್ರಿಸ್ತೇಸು, ನಿನ್ನ ಕ್ರೂಜೆಯಲ್ಲಿ
ಅನಂತ ಪ್ರೀತಿಯನ್ನು ತೋರಿಸಿ,
ಪವಿತ್ರ ನಿನ್ನ ರಕ್ತ ಚೆಲ್ಲಿ,
ವಿಮುಕ್ತಿಕಾರ್ಯ ಮುದ್ರೆ ಹಾಕಿದಿ.
ಭೂಪರಲೋಕ ನಾಶವಾದರು,
ಈ ಪ್ರೀತಿ ಎಂದು ಬಿದ್ದು ಹೋಗದು.

3. ನೀ ಕ್ರೂಜೆಯಲ್ಲಿ ತೂಗಲಾಗಿ,
ಮಧ್ಯಾಹ್ನದಲ್ಲಿ ಗಾಢ ಕತ್ತಲು
ಅಘೋರವಾದ ಗುರುತಾಗಿ
ಭಯಸ್ಥ ಭೂಮಿಯನ್ನು ಮು
ಚ್ಚಿತು.
ನಿನ್ನಲ್ಲಿ ನಂಬಿ ನಾನು ಸತ್ತರೆ,
ಅನಂತ ಕಾಂತಿಯನ್ನು ಕಾಣುವೆ.

4. ಉಂಟೆನಗೀಗ ಪರಿಹಾರ!
ಸೈತಾನನೆಂಬ ಹಳೆ ಶತ್ರುವು
ಸರ್ವೇಶನಾಜ್ಞೆಯ ಪ್ರಕಾರ
ನನ್ನಲ್ಲಿ ಪಾಲು ಹೊಂದಲಾರನು.
ನಾ ಯೇಸುಕ್ರಿಸ್ತಶಿಷ್ಯನಾದರೆ,
ಮಹಾ ಸಂತೋಷದಿಂದ ತೀ
ರುವೆ.

೭೯

Jesu, deine Passion.—M. T. 227.

1. ಕರ್ತಾ, ನಿನ್ನ ಶ್ರಮೆಯಂ
ಧ್ಯಾನಿಸ ಸಹಾಯ
ನನಗೀಯು! ಜ್ಞಾನವಂ
ನೀನೇ ಪಾಲಿಸಯ್ಯ!
ನಿನ್ನ ಕೃಪಾಸ್ಥಾನದಿಂ
ಹುಟ್ಟಿಸೆನ್ನೊಳ್ ಭಕ್ತಿ!
ಕೋರುತ್ತೇನೆ ಧೈರ್ಯದಿಂ;
ಕೊಡು ಆತ್ಮಶಕ್ತಿ!

2. ಘೋರ ಯುದ್ಧರಂಗದಿ
ತಾಳ್ದ ದುಃಖ ಭಯ,
ವೈರಿ ನಿನ್ನ ಬಂಧಿಸಿ
ಇತ್ತ ಪೆಟ್ಟುಗಾಯ,
ಮುಳ್ಳುಮಾಲೆ, ಕ್ರೂಜೆಯ
ವಾಚಾತೀತ ಭಾರ,
ಈ ನಮ್ಮಘಫಲವ
ಯಾರೂ ವರ್ಣಿಸಾರ.

3. ನನ್ನ ಪ್ರಿಯ ಕರ್ತನೆ,
ನಾನು ಗೈದ ಪಾಪ
ಇನ್ನೂ ತಂತು ನಿನಗೆ
ಶಾನೆ ಮೃತ್ಯು ಶಾಪ.
ನಾನು ಇದನರಿತು
ಮನಸ್ತಾಪ ಗೈಯ್ಯ
ನನಗನುಗ್ರಹಿಸು
ಜ್ಞಾನ ತ್ರಾಣವಯ್ಯ!

4. ದೇವಪುತ್ರ ಯೇಸುವೇ,
ನಿನ್ನ ಪ್ರೇಮಕ್ಕಾಗಿ,
ದಿವ್ಯ ಚಿತ್ತವಾದರೆ,
ನಿನ್ನ ಶಿಷ್ಯನಾಗಿ
ಕ್ರೂಜೆ ಹೊತ್ತುಕೊಳ್ಳುತ್ತಾ
ನಿನ್ನ ಹಾಗೆ ತಾಳ್ವೆ;
ನಿನ್ನ ವಶವಿರುತಾ
ನಿತ್ಯವಾಗಿ ಬಾಳ್ವೆ.

೮೦

Herzliebster Jesu, was hast du verbrochen.—M. T. 46.

1. ಹೃತ್ಪ್ರಿಯ ಯೇಸು, ನಿನ್ನ ದೋಷವೇನು?
ನೀನಿಂಥ ಶಿಕ್ಷೆಗೊಳಗಾದದೇನು?
ನಿನ್ನಲ್ಲಿ ಪಾಪಕರ್ಮ ಕಂಡರೇನು?
ನಾ ಹೇಳಲೇನು?

2. ನಿನ್ ಕೆನ್ನೆ ತಟ್ಟಿ, ಮುಖಕು ಗುಳಿಟ್ಟು,
ಮುಳ್ಮುಡಿ ರಕ್ತಮಯಮುಂಡೆ ಗಿಟ್ಟು,
ನಿಂಗಿತ್ತರಯ್ಯೊ ಅಮ್ಲ ಪಿತ್ತ ಪಾನ,
ಓ ಯಜಮಾನ!

3. ನಿನ್ನಲ್ಲಿ ಬೀಳ್ವುದಯ್ಯ ನನ್ನ ಪಾಪ;
ನಿನ್ನನ್ನು ಕಾಡ್ವುದಯ್ಯ ನನ್ನ ಶಾಪ.
ಅನಂತ ಕರ್ಮ! ನೋಡಿ ತಾಳ ಲಾರೆ
ನಿನ್ನಶ್ರುಧಾರೆ!

4. ಪುಣ್ಯಾತ್ಮ, ನೀನು ನಿತ್ಯ ಬಾಳಲಾಪಿ;
ನಾನಯ್ಯ ಸತ್ತು ಕೆಡ ತಕ್ಕ ಪಾಪಿ.
ಹೆಡ್ಡಾಳಿಗಾಗಿ ಸಾಯುತಾನೆ ರಾಯ!
ಇದೆಂಥ ನ್ಯಾಯ!

5. ನೀ, ಪ್ರೀತಿ, ನನಗೊಲ್ದ್ ಅನಾಥನಾದಿ!
ನೀ, ನೀತಿ, ನನಗೊಲ್ದು ಪಾಪ ವಾದಿ!
ನನ್ನಲ್ಲಿ ಹೆಚ್ಚಲಿಹಲೋಕಕ್ರೀಡೆ,
ನಿಂಗಾಯ್ತು ಪೀಡೆ.

6. ನಾನೇನು ಹೇಳಲೇನು ಮಾಡಲಯ್ಯ?
ನೀ ಗೆದ್ದೆ ಗೆದ್ದಿ, ನಾನು ಸೋತೆ ನಯ್ಯ!
ನನ್ನಾಳ್ಮ, ಕ್ಷಮಿಸ್ಯೋಡಿಸೆನ್ನ ಭಯ!
ಈಯ್ ನಿನ್ನ ದಯ!

7. ಅಪಾಯ, ನಿಂದೆ, ಮೃತ್ಯು ಭಯ ಬಿಟ್ಟು,
ನಿನ್ನೊಲ್ಮೆಯಲ್ಲಿ ಮಾತ್ರ ಲಕ್ಷ್ಯ ವಿಟ್ಟು,
ನಾನಿರ್ಪೆ, ಯೇಸು, ಇಹಪರ ದಲ್ಲಿ
ನೀನಿರುವಲ್ಲಿ.

೮೧

Ach, mein Herr Jesu, wenn ich dich nicht hätte.—M. T. 47.

1. ನನ್ನಾಪ್ತ ಯೇಸು, ನೀನು
ಇಲ್ಲದಿರೆ,
ನೀನೆನ್ನ ಜಾಮೀನಾಗಿ ಬೇಡ
ದಿರೆ,
ಅರಿಷ್ಟ ಪಾಪಿ ನಂಗೆ ಗತಿ ಇಲ್ಲ,
ಆಧಾರವಿಲ್ಲ.

2. ಈ ದುಃಖವನ್ನು ನಾನು
ತಾಳಲಾರೆ,
ನಿನ್ನಂಥ ಮಿತ್ರನನ್ನು ಕಾಣಲಾ
ರೆ.
ನೀ ಮಾತ್ರ, ನೀನು ನನ್ನ ನೀತಿ
ಯಾದಿ;
ನಾನಪರಾಧಿ.

3. ನೀನೆನ್ನ ಮೇಲೆ, ಯೇಸು,
ಕೃಪೆ ಮಾಡಿ,
ನನ್ನತಿದುಷ್ಟ ಪಾಪವಂ ಬಿಸಾಡಿ,
ಶ್ರೀರಕ್ತದಿಂದ ಶುಚಿ ಮಾಡಿ
ಬಿಟ್ಟಿ;
ಕಟಾಕ್ಷವಿಟ್ಟಿ.

4. ಕಟಾಕ್ಷವನ್ನು ನಾನು ನಿತ್ಯ
ಹಾಡಿ,
ನಿನ್ನತಿಶ್ರೇಷ್ಠ ರಕ್ತ ಸ್ತೋತ್ರ
ಮಾಡಿ,
ನಿನ್ನಲ್ಲಿ ಮುಕ್ತಿ ಪಡಕೊಂಡಿ
ದ್ದೇನೆ;
ಕೊಂಡಾಡುತ್ತೇನೆ.

೮೨

Der am Kreuz ist meine Liebe. M. T. 149.

1. ನನ್ನ ಪ್ರೀತಿ ಕ್ರೂಜೆಯಲ್ಲಿ!
ಬೇರೆ ಆಶೆ ಇರದು.
ಅತಿಪ್ರಿಯ ಯೇಸುವಲ್ಲಿ
ಹೃತ್ತು ದೃಢವಾಯಿತು.
ನಿತ್ಯ ಒಂದೆ ವಾಕ್ಯವು
ಹೃತ್ಸಂಗೀತವಹುದು—
"ಸುಖದುಃಖಕಾಲದಲ್ಲಿ
ಪ್ರೀತಿ ಕ್ರೂಜೆಯಾತನಲ್ಲಿ!"

2. ಪ್ರೀತಿಯಿಂದ ನಿಂದೆ, ನಷ್ಟ,
ಹಿಂಸೆ, ಬಡತನವು,
ಚಿಂತೆ ಮೊದಲಾದ ಕಷ್ಟ
ಹುಟ್ಟೊದೆಂತ ಬಲ್ಲೆನು.
ಯೇಸು ಆಜ್ಞೆ ಕೊಡಲು,
ಶೀಕ್ಷ ಮೃತಿಗಂಜೆನು.
ಸುಖದುಃಖಕಾಲದಲ್ಲಿ
ಪ್ರೀತಿ ಕ್ರೂಜೆಯಾತನಲ್ಲಿ!

3. ಆತನ್ಹೊರ್ತು ಇಹಸುಖ
ನಂಗೆ ಸುಖವಲ್ಲವು;

ಆತನಿರೆ, ಪ್ರೀತಿದುಃಖ
ದುಃಖವೆಂತ ಹೇಳೆನು.
ಈ ಪ್ರಪಂಚದವರು
ಬೈದರೇನು ಚಿಂತೆಯು?
ಸುಖದುಃಖಕಾಲದಲ್ಲಿ
ಪ್ರೀತಿ ಕ್ರೂಜೆಯಾತನಲ್ಲಿ!

4. ದುಷ್ಟವೈರಿಕೋಪವನ್ನು
ಜೈಸಲೆಂಗೆ ಧೈರ್ಯವು;
ದುಸ್ಸ್ವಭಾವ ಕ್ರಿಯೆಯನ್ನು
ಹೇಸಿ, ತಳ್ಳಿಬಿಟ್ಟೆನು.
ಯೇಸುನಾಥಪ್ರೀತಿಯು
ಪರಮೇಷ್ಟವಹುದು—
ಇರೆನೊಂದು ಚಿಂತೆಯಲ್ಲಿ;
ಪ್ರೀತಿ ಕ್ರೂಜೆಯಾತನಲ್ಲಿ!

5. ಆತ ತನ್ನ ಪ್ರಿಯರನ್ನು
ತಂದೇಮನೆಗಾಣಿಸಿ,
ಹಾಕಿ ಜಯಮಾಲೆಯನ್ನು
ಫಲವೀಯ್ವನಂತ್ಯದಿ.
ಲೋಕ ಆತನ್ನರಿತು
ಮೆಚ್ಚಲೆಂಥ ಸುಖವು!
ಹಾಡಿರಿಹಪರದಲ್ಲಿ—
"ಪ್ರೀತಿ ಕ್ರೂಜೆಯಾತನಲ್ಲಿ!"

೮೩

Zech. 13, 1.
There is a fountain filled with blood.—M. T. 22. 23.

1. ನಾನೊಂದು ತೀರ್ಥ ಬಲ್ಲೆ
ನು;
ಆ ತೀರ್ಥದಿಂದಲೆ
ಅಮೂಲ್ಯ ಶುದ್ಧ ರಕ್ತವು
ಹರ್ಯುತಲಿರುತೆ.

2. ಆಶ್ಚರ್ಯವಾದ ತೀರ್ಥವೇ!
ನನ್ನೆಲ್ಲ ಪಾಪವು
ನಿನ್ನಲ್ಲಿ ಮಿಂದ ಕೂಡಲೇ
ಸಂಪೂರ್ಣ ಹೋಯಿತು!

3. ಕ್ರಿಸ್ತ್ಯೇಸು ನನಗಾಗಿಯೆ
ಈ ರಕ್ತ ಚೆಲ್ಲಿದ.
ಈ ಮಾತು ಗಟ್ಟಿ ನಂಬುವೆ
ನಾ ಸಾಯುವನಕ.

4. ಕ್ರೂಜೇಲಿ ಸ್ವಾಮಿಾ ಬಲಕೆ
ತೂಗಿದ್ದ ಕಳ್ಳಗು
ಅಪಾರ ದಯದಿಂದಲೆ
ಈ ತೀರ್ಥ ಸಿಕ್ಕಿತು.

5. ಕ್ರಿಸ್ತ್ಯೇಸು ರಕ್ತದೊಳಗೆ
ತಾ ಮಾಡಿ ಸ್ನಾನವ
ನಿರ್ಮಲನಾಗಿ ಸಾಯುತ್ತೆ,
ಸೇರಿದ ಮೋಕ್ಷವ.

6. ನಾನೂ ಪಾಪಿಷ್ಠನಾಗಿಯೆ
ಸತ್ತೋಗುತಿದ್ದೆನು;
ಈ ರಕ್ತ ಮಾತ್ರ ನನಗೆ
ಸುಕ್ಷೇಮ ಕೊಟ್ಟಿತು.

7. ಪವಿತ್ರವಾದ ರಕ್ತವೆ!
ನಿನ್ನನ್ನು ನಿತ್ಯಕು
ಜೀವಾತ್ಮಪ್ರಾಣದೊಡನೆ
ಕೊಂಡಾಡುತಿರ್ವೆನು.

8. ಈ ಪಾಪಲೋಕದೊಳಗು
ನಿನ್ನನ್ನು ಸ್ತುತಿಪೆ.
ಹೇ ಬನ್ನಿ! ನಿತ್ಯ ಕ್ಷೇಮವು
ಪುಕ್ಸಾಟೆ ಸಿಕ್ಕುತೆ.

9. ನಾನಿದ್ದರು, ನಾ ಸತ್ತರು
ಏನೇನೂ ಅಂಜೆನು.
ಕ್ರಿಸ್ತ್ಯೇಸುವಿನ ರಕ್ತವು
ನನ್ನೊಂದೆ ಗೀತವು.

೮೪

Mel. Lobt Gott, ihr Christen, alle gleich.—M. T. 18.

1. ನಾನ್ ಊರು, ಗ್ರಾಮ,
ದೇಶವ
ಸಂಚಾರ ಮಾಡಲು,
ಯೆರೂಸಲೇಮ ನಗರ,
ನಿನ್ನೆಷ್ಟು ತಪ್ಪದು!

2. ಪವಿತ್ರ ನಿನ್ನ ಕಾಂತಿಯು
ಹೃದ್ದೃಷ್ಟಿಪ್ರಿಯವೆ!
ಉತ್ಕೃಷ್ಟ ಪಟ್ಣ, ನಿನ್ನನು
ನಾನೆಂದೂ ಮರೆಯೆ.

3. ಸರ್ವೇಶಪ್ರತಿಕಾಂತಿಯು
ಕಂಡಚಲಂಗಳೇ,
ನಿಮ್ಮನ್ನು ಏರಿ ನೋಡುವ
ಸಂತೋಷ ದೊಡ್ಡದೇ!

4. ಚೆಲೋದು ನಿನ್ನ ತೀರವು,
ಗೆನೇಜರೇತುವೇ!
ಆ ಘನವುಳ್ಳ ಕರ್ಮೆಲು
ಸೌಂದರ್ಯವಾದದೇ!

5. ಆ ಹಿಮವಂತ ಹೆರ್ಮೋನು,
ಗಿಲ್ಯಾದು, ಯೆರಿಖೋ,
ಬೆಥ್ಲೇಮ ಬೈಲು, ಕಾನವು
ಕಣ್ಗಿಂಪು ಅಲ್ಲವೋ!

6. ಆದಾಗ್ಯೂ ಶ್ರೇಷ್ಠವೆನಗೆ
ಎಲ್ಲಾದಕ್ಕಿಂತಲು
ನನ್ನೀಶ ಘೋರ ವೇದನೆ
ತಾಳಿದ್ದ ಸ್ಥಳವು.

7. ಅತೀಷ್ಟ ಇಷ್ಟೆಗುಡ್ಡವೇ!
ಪವಿತ್ರ ಗೊಲ್ಗಥ!
ನಿಮ್ಮಲ್ಲಿ ಹುಟ್ಟಿ ಬಂತೆಲೇ
ಜಗತ್ಸಂಜೀವನ!

೮೫

Ich bin durch manche Zeiten.
M. T. 61.

ಅನಂತ ಕಾಲಸ್ಥಾನ
ನಾ ಮಾಡಿದಾಗ್ಯು ಧ್ಯಾನ
ಅತೃಪ್ತಿ ಸರ್ವದಾ.
ಶ್ರೀ ಯೇಸು ಸ್ತೋತ್ರ ಹೊಂ
ದು!
ಸಂತೃಪ್ತಿಮೂಲ ಒಂದು:
ನೀ ಮೃತ ಪಟ್ಟ ಗೊಲ್ಗಥಾ.

---

೫. ಯೇಸುವಿನ ಪುನರುತ್ಥಾನ

೮೬

Mel. Wie wird uns sein.
M. T. 168.

1. ವಿಜಯವೇ! ಸಂತೋಷ
ವುಳ್ಳ ದಿನ!
ಸಜೀವಿಯಾಗಿ ಯೇಸು ಎದ್ದನು.
ಹೋಯಿತ್ತಾಗ ಸಾವು! ನಮ್ಮ
ಯೇಸುವಿನ
ಸಮಾಧಿಯಲ್ಲಿ ಜೀವ ಹುಟ್ಟಿತು.
ಪಾತಾಳವೇ, ಇನ್ನೆಲ್ಲಿ ನಿನ್ನ ಜಯ?
ಸರಾರಿ, ಎಲ್ಲಿ ನಿನ್ನ ಕೊಂಡಿಯು?
ಕ್ರಿಸ್ತ್ಯೇಸುವಾದನೆಮ್ಮ ಜೀವೋ
ದಯ;
ಶತ್ರುಂಗಳನ್ನು ಜೈಸಿ ಗೆದ್ದನು.

2. ಸಮಾಧಿಗಾಗಿ ಇನ್ನು ಭಯ
ವಿಲ್ಲ!
ಮಹಾ ಸಂತೋಷಕರ ವಚನ!
ಪಾಪಿಷ್ಠ, ಕೇಳು! ಸಾವು ಇನ್ನು
ಇಲ್ಲ,
ಅನಂತ ಜೀವ ಯೇಸು ತಂದಿತ್ತ.
ಹೀಗಾದ್ದರಿಂದ ಬನ್ನಿ, ಜೀವವ
ನ್ನು
ಸಂಪಾದಿಸೋಣ ಕ್ರಿಸ್ತನಿಂದಲೇ!
ಈ ಮಹತ್ತಾದ ಜಯವಾರ್ತೆ
ಯನ್ನು
ಸಂತೋಷದಿಂದ ಕೇಳಿ, ಭ್ರಾತ್ರ
ರೇ!

3. ಈ ಜಯಮೂಲವಾಗಿ ನಿತ್ಯ
ಜೀವ
ನಮ್ಮೆಲ್ಲರಿಂಗೆ ಸಿದ್ಧವಾಯಿತು.
ಕ್ರಿಸ್ತ್ಯೇಸು ಪಾಪಪರಿಹಾರ
ಈಯ್ದು;
ಸಂದ್ಹೋಯಿತೆಲ್ಲ ನಮ್ಮ ಸಾಲವು

ಸಂದೇಹ ಬೇಡ! ದೇವರೊಲ್ದಿ
ದ್ದಾನೆ,
ವಿರೋಧವಾಗಿ ಯಾರು ನಿಲ್ಲರು;
ಮಧ್ಯಸ್ಥ ಯೇಸು ನಮಗಿರು
ತಾನೆ;
ಸಾವಾತನಿಂದ ಜೈಸಬಹುದು.

4. ವಿಜಯವೇ! ಶಾಪಿಷ್ಟರಾದ
ಜನ,
ಈ ಜಯವಾರ್ತೆಯನ್ನು ಕೇಳಿರಿ!
ಏ ಬನ್ನಿ, ಅಡ್ಡ ಬಿದ್ದು, ಕೀರ್ತಿ
ಘನ
ಸಂಸ್ತುತಿ ಸ್ತೋತ್ರ ಆತಗ್ಗೀಳಿರಿ!
ಶ್ರೀ ಯೇಸು, ನೀನು ಜಯರಾಜ
ನಾಗಿ
ಸದಾ ಸಮೀಪವಾಗಿ ನಿಲ್ಲಲು,
ನಾವೆಲ್ಲ ಜೈಸಿ, ನಿನ್ನ ಜಯಕಾಗಿ
ಭೂಪರಲೋಕದಲ್ಲಿ ಹಾಡ್ವೆವು.

೮೭

Mel. Der Pilger aus der Ferne.
M. T. 8.

1. ಗಟ್ಟ್ಯಾದ ಬಂಡೆಯಲ್ಲಿ
ಸಮಾಧಿಯೊಡೆದು,
ಅಮೂಲ್ಯ ಬೀಜವನ್ನು
ಯೊಸೇಫನಿಟ್ಟನು.

2. ಆ ತೋಟ ಪೃಥ್ವಿಯಲ್ಲಿ
ವಿಶೇಷವಾದುದು;
ಸಮಸ್ತ ಬೀಜದೊಳ್ಗೆ
ಆ ಬೀಜ ಶ್ರೇಷ್ಠವು.

3. ತೃತೀಯ ದಿನದಲ್ಲಿ
ಹೊತ್ತೇರುವಾಗಲು,
ಆ ಬೀಜ ಮೊಳೆತೆದ್ದು,
ಭೂಗರ್ಭ ಬಿಟ್ಟಿತು.

4. ಆ ದಿನದಲ್ಲಿ ಜೀವ
ಸಾವಿಂದ ಹುಟ್ಟಿತು;
ಆ ದಿನದಲ್ಲಿ ಸಾವು
ಸತ್ತ್ವಹೀನವಾಯಿತು.

5. ಸಮಾಧಿಯಲ್ಲಿ ಸೇರಿ,
ಶ್ರೀ ಯೇಸು ಕ್ರಿಸ್ತನೆ,
ನೀ ಜೀವಮಾರ್ಗವನ್ನು
ಪ್ರಸಿದ್ಧ ಮಾಡಿದೆ.

6. ನಿನ್ನಲ್ಲಿ ದೃಢವಾಗಿ
ವಿಶ್ವಾಸವಿಟ್ಟರೆ,
ಸಮಾಧಿಯಲ್ಲಿ ಸೇರ
ನಾನೇತಕಂಜುವೆ?

7. ಸಮಾಧಿ ದೇಹಕಿನ್ನು
ವಿಶ್ರಾಂತಿಸ್ಥಳವು;
ನನ್ನಾತ್ಮ ಆಚೆ ದಾಟಿ
ನಿನ್ನೊಡನಿರ್ಪದು.

8. ಪಾತಾಳಶಕ್ತಿಯನ್ನು
ನೀ, ಕರ್ತ, ಜೈಸಿದೆ;
ನಿನ್ನಲ್ಲಿ ನಾನು ಸಂಬಿ
ವಿಜಯ ಹೊಂದುವೆ.

೮೮

Mel. Mein Glaub' ist meines Lebens Ruh'.—M. T. 163.

1. ಕ್ರಿಸ್ತ್ಯೇಸು ಜೀವರಾಜನೇ,
ನೀನೆದ್ದಿ ತೇಜದಿಂದಲೇ
ಸಮಾಧಿಯೊಳಗಿಂದ!
ನಿನ್ನನ್ನು ಶಿಷ್ಯಸಂಘವು
ಕಂಡಾಗ ಜೀವ ಹೊಂದಿತು
ಮಹಾಂತ ಹರ್ಷದಿಂದ.
ಶ್ರೀ ಯೇಸು, ನಿನ್ನ ಜೀವವೆ
ಜೀವೋದಯ ಜಗತ್ತಿಗೆ!

2. ಅಮೂಲ್ಯವಾದ ಬೀಜವ
ಯೊಸೇಫನಿಟ್ಟು ಮುಚ್ಚಿದ
ಆ ಕಲ್ಲುಗೋರಿಯಲ್ಲಿ;
ಅಮೂಲ್ಯವಾದ ಪುಷ್ಪವು
ಆ ಬೀಜದಿಂದ ಹುಟ್ಟಿತು
ಏಕಾಂತ ತೋಟದಲ್ಲಿ.
ಶ್ರೀ ಯೇಸು, ನಿನ್ನ ಜೀವವೆ
ಜೀವೋದಯ ಜಗತ್ತಿಗೆ!

3. ಕಡೇಲಿ ಸರ್ವ ಲೋಕಕು
ವಸಂತಕಾಲ ಬಪ್ಪದು
ದಿವ್ಯಾತ್ಮತ್ರಾಣದಿಂದ;
ಅಸಂಖ್ಯ ಜನಗಣವು
ಆವಾಗಲೆಚ್ಚತ್ತೇಳ್ವದು
ಭೂಗರ್ಭಕೋಣೆಯಿಂದ.
ಶ್ರೀ ಯೇಸು, ನಿನ್ನ ಜೀವವೆ
ಜೀವೋದಯ ಜಗತ್ತಿಗೆ!

4. ತುತೂರಿ ಊದುವಾಗಲು
ಮಹತ್ವದಲ್ಲಿ ಯೇಸುವು
ಈ ಭೂಮಿಗಿಳಿಯೋಸು;
ಧೂಳಿಂದ ನಮ್ಮನೇರಿಸಿ,
ತಾನಿರ್ಪ ಘನಸ್ಥಳದಿ
ನಮ್ಮನ್ನು ಸೇರಿಸೋನು.
ಶ್ರೀ ಯೇಸು, ನಿನ್ನ ಜೀವವೆ
ಜೀವೋದಯ ಜಗತ್ತಿಗೆ!

೮೯

O herrlicher Tag.—M. T. 252.

1. ಉತ್ಥಾನದ ದಿನ, ಜಯೋತ್ಸವವೇ!
ಈ ದಿನ ಕ್ರಿಸ್ತನೆದ್ದನು;
ಎದ್ದಾತನಿಂದ ನಮಗು
ಸದಾ ಸಂಜೀವ ನಿಜವು.
ಉತ್ಥಾನದ ದಿನ, ಜಯೋತ್ಸವವೇ!

2. ಉತ್ಥಾನದ ದಿನ, ಜಯೋತ್ಸ
ವವೇ!
ಎದ್ದಾತ ಸಾಲಪತ್ರವ
ವಿನಾಶ ಮಾಡಿಬಿಟ್ಟವ;
ನಮ್ಮೆಲ್ಲ ಪಾಪ ಹೋಯ್ತಹ!
ಉತ್ಥಾನದ ದಿನ, ಜಯೋತ್ಸ
ವವೇ!

3. ಉತ್ಥಾನದ ದಿನ, ಜಯೋತ್ಸ
ವವೇ!
ನೀ ಕ್ರಿಸ್ತ, ಜಯಶಾಲಿಯು!
ಈ ಹೊತ್ತಿನಿಂದ ನಿತ್ಯಕು
ಈ ಹರ್ಷವೆಮಗುಳಿಸು!
ಉತ್ಥಾನದ ದಿನ, ಜಯೋತ್ಸ
ವವೇ!

೯೦

Macht auf das Tor der Herrlichkeit.—M. T. 276.

1. ಕ್ರಿಸ್ತ್ಯೇಸು ಎದ್ದು ಬಂದನು!
ಸಮಸ್ತ ಶತ್ರುಸೈನ್ಯವು
ಕಂಗೆಟ್ಟು ನಾಚಿ ಸೋತದೆ.
ನೀ, ಯೇಸು, ಸಿಂಹಾಸನಕೇರಿದಿ;
ಇನ್ನಿಹವ ಪರವನಾಳುವಿ.
ಹಲ್ಲೆಲೂಯಾ! ರಾಜಸೂಯ
ಗೈದು ಬಂದ! ಜೀವ ತಂದ!
ಕ್ರೈಸ್ತಜನ ಹಾಡಿರೆಲ್ಲ!
ಕ್ರಿಸ್ತ ಯೇಸು ಎದ್ದನು!

2. ಐ ಮೃತ್ಯುಂಜಯಶಾಲಿಯೆ!
ನೀ ಶೇಷ ಶಿರ ಜಜ್ಜಿದೆ.
ಪ್ರವಾದಿವಾಕ್ಯಕಿಂತಲು
ಸಮಾಧಿಯುತ್ಥಾನದ ಮೂಲದಿ
ಉತ್ಕೃಷ್ಟ ಸಾಮ್ರಾಜ್ಯವ ನೆಟ್ಟಿ
ದ್ಧಿ.
ಹಲ್ಲೆಲೂಯಾ! ರಾಜ....

3. ನಮ್ಮೆಲ್ಲ ಪಾಪ, ಶಾಪವು,
ಸಂತಾಪ, ಶೋಕ, ಚಿಂತೆಯು
ಈ ಜಯದಿಂದ ತೀರಿವೆ.
ನೀ ಗೆದ್ದ ಪ್ರಕಾರ ನಾಂ ಗೆಲ್ವೆವು;
ನೀನೆದ್ದ ಪ್ರಕಾರ ನಾವೇಳ್ವೆವು.
ಹಲ್ಲೆಲೂಯಾ! ರಾಜ....

೯೧

Gelobt sei Gott im höchsten Thron.—M. T. 34.

1. ಸಂಪೂರ್ಣ ಪ್ರಾಯಶ್ಚಿತ್ತವ
ಕೊಟ್ಟಂಥ ಈಶಪುತ್ರನ
ಕೊಂಡಾಡೊದೆಂಥ ಸಂತಸ!
ಹಲ್ಲೆಲೂಯಾ!

2. ತೃತೀಯ ದಿನ ಬೆಳಿಗ್ಗೆ
ಉತ್ಥಾನವಾದ ಕರ್ತಗೆ
ತ್ರಿಲೋಕ ವಶವಾದದೆ!
ಹಲ್ಲೆಲೂಯಾ!

3. ಅಪಾರ ಸಾಲ ತೆತ್ತನು;
ಕ್ರೂಜೇಲಿ ಸತ್ತು ಗೆದ್ದನು;
ಸಮಾಧಿಯಿಂದ ಎದ್ದನು.
ಹಲ್ಲೆಲೂಯಾ!

೯೨

Preis dem Todesüberwinder.
M. T. 150.

1. ಸ್ತುತಿ ಗೊಲ್ಗಥದ್ರಿಯಲ್ಲಿ
ಸತ್ತ ಮೃತಿಂಜಯಗೆ!
ಸ್ತುತಿ, ಪಾಪಿಕುಲದಲ್ಲಿ
ಕೃಪೆ ತೋರ್ದ ಯೇಸುವೆ!
ಬಾಳು, ನಮ್ಮ ರಾಜನೆ!
ಸತ್ತು ಪುನರ್ಜೀವಿಯಾದ
ಜೀವದಧಿಪತಿಗೆ
ಹಾಡಿರೆಲ್ಲ ಭಕ್ತರೆ!

2. ಸ್ತೋತ್ರದಲ್ಲಿ ಒಡನಾಡಿ,
ಮನಃಪೂರ್ಣ ಹರ್ಷದಿ
ಮೃತಿಂಜಯಗೀತೆ ಮಾಡಿ,
ಅಡ್ಡ ಬಿದ್ದು, ಹಾಡಿರಿ!
ವಾದ್ಯವೆಲ್ಲ ನುಡಿಸಿ,
ಗಟ್ಟಿ ಧ್ವನಿಯಿಂದ ಹಾಡಿ,
ಘನವುಳ್ಳ ಕರ್ತಗೆ
ಎರಗಿರೆಲ್ಲ ಭಕ್ತರೆ!

3. ನಾ ಸಮಾಧಿ ಬಿಡಲಾಗ,
ನನ್ನ ಪ್ರಿಯ ಯೇಸುವೆ,
ನಿನ್ನ ಮುಖ ನೋಡುವಾಗ,
ದೇಹ ತೇಜವಾಗಲೆ,
ಮಧ್ಯವರ್ತಿಕರ್ತನೆ,
ಹೌದು, ನಾನು ಎಚ್ಚತ್ತಾಗ,
ನಿನ್ನ ಜೀವದೈಕ್ಯಕೆ
ಪೂರ್ಣವಾಗಿ ಸೇರುವೆ!

೯೩

Christ lag in Todesbanden.
M. T. 135.

1. ಕ್ರಿಸ್ತ್ಯೇಸು ಕ್ರೂಜೆಯಲ್ಲಿ
ಸತ್ತೆಮ್ಮ ಪಾಪಕಾಗಿ,
ತೃತೀಯ ದಿನದಲ್ಲಿ
ತಾನೆದ್ದ ಜೀವಿಯಾಗಿ.
ಇದರಲ್ಲಿ ಹರ್ಷಿಸಿ,
ಕರ್ತಂಗೆ ಸ್ತೋತ್ರ ಮಾಡಿರಿ!
ಕೊಂಡಾಡಿ! ಹಲ್ಲೆಲೂಯಾ,
ಹಲ್ಲೆಲೂಯಾ!

2. ಸಾವನ್ನು ಜೈಸೊ ಬಲ
ಭೂಜನಕಿರಲಿಲ್ಲ.
ನಮ್ಮಲ್ಲಿ ಪಾಪಮಲ;
ಎಲ್ಲೆಲ್ಲು ನೀತಿಯಿಲ್ಲ.
ಅದರಿಂದ ಮೃತ್ಯುವು
ನಮ್ಮಲ್ಲಿ ಕೈಯ ಹಾಕಿತು.
ಸಹಾಯಗಾರನಾರು?
ಹಲ್ಲೆಲೂಯಾ!

3. ಸ್ವಪಿತೃಗೃಹದಿಂದ
ಹೊಂಟವತಾರವಾಗಿ,
ಅನಂತ ಪ್ರೇಮದಿಂದ
ಸತ್ತೆಮ್ಮ ಹೊಣೆಯಾಗಿ,
ಮರಣಾಧಿಕಾರವ
ಕ್ರಿಸ್ತ್ಯೇಸುನಾಥ ಜೈಸಿದ.
ಇನ್ನೇನೂ ಭಯವಿಲ್ಲ!
ಹಲ್ಲೆಲೂಯಾ!

4. ಜೀವಕ್ಕೆ ಸಾವಿಗಲ್ಲಿ
ಅಘೋರ ಯುದ್ಧವಾಯ್ತು;
ಆ ಜೀವ ಜೈಸುವಲ್ಲಿ
ಸಾವಂತು ನುಂಗಲಾಯ್ತು.
ಸಾವ ತಾಳ್ದ ಜೀವವು
ಸಾವನ್ನು ಜೈಸಿ ಬಿಟ್ಟಿತು.
ನೀ ಸೋತಿ, ದುಷ್ಟ ಮೃತ್ಯು!
ಹಲ್ಲೆಲೂಯಾ!

5. ಸ್ವರ್ಗೀಯ ಪಸ್ಕಬಲಿ,
ನೀನೆಮಗನ್ನಪಾನ!
ಆ ಕ್ರೂಜೆವೃಕ್ಷದಲಿ
ಆಯ್ತೆಮಗೆಂಥ ದಾನ!
ನಮ್ಮ ಮನೆಕದಕೆ
ಆ ರಕ್ತ ಹಚ್ಚಿದ್ದಾದರೆ,
ಸಂಹಾರಿ ಮುಟ್ಟಲಾರ.
ಹಲ್ಲೆಲೂಯಾ!

೯೪

Wir danken dir, Herr Jesu Christ.
M. T. 48.

1. ನೀ, ಕ್ರಿಸ್ತ, ಸತ್ತು ಜೀವಿಸಿ
ಮೃತಿಯನ್ನು ಜೈಸಿದಿ;
ಮೃತೀಲಿ ಬಿದ್ದ ಜನಕೆ
ನೀ ಜೀವ ಕೊಟ್ಟಿ, ಯೇಸುವೆ!
ಹಲ್ಲೆಲೂಯಾ!

2. ನೀ, ಕ್ರಿಸ್ತ, ಕೃಪೆ ತೋರಿಸು;
ನಮ್ಮ ಪಾಪ ಮನ್ನಿಸು!
ನಮ್ಮನ್ನು ನಿನ್ನ ಆತ್ಮಕೆ
ವಿಧೇಯ ಮಾಡು, ಕರ್ತನೆ!
ಹಲ್ಲೆಲೂಯಾ!

3. ಮಹತ್ವವುಳ್ಳ ಕ್ರಿಸ್ತನೇ,
ಪ್ರೀತಿಯುಳ್ಳ ಯೇಸುವೇ,
ಕೃಪಾಳು! ನಾವು ನಿತ್ಯಕು
ನಿನ್ನನ್ನು ಸ್ತುತಿಸೋಣವು!
ಹಲ್ಲೆಲೂಯಾ!

೯೫

Mel. Wie schön leucht't uns der Morgenstern.—M. T. 194.

1. ಈ ದಿನದಲ್ಲಿ ಯೇಸುವು
ಸಮಾಧಿಯಿಂದ ಎದ್ದನು,
ಸಜೀವ ರಾಜನಾಗಿ.
ವಿಜಯಗೀತ ಹಾಡಿರಿ!

ಅನಂತ ಸ್ತೋತ್ರ ಮಾಡಿರಿ
ವಿಧೇಯ ದಾಸರಾಗಿ!
ತನ್ನ ಘನ
ಹಿಂದೆ ಬಿಟ್ಟು,
ಪ್ರೀತಿ ಇಟ್ಟು
ನರರಲ್ಲಿ,
ಕ್ರಿಸ್ತ ಸತ್ತ ಕ್ರೂಜೆಯಲ್ಲಿ.

2. ಸಮ್ಮತಿಪ್ರಿಯ ಕರ್ತನೆ,
ನೀನೆಮ್ಮ ನಿತ್ಯ ಕೋರಿಕೆ!
ನಿನ್ನಲ್ಲಿ ನಂಬಿದ್ದೇವೆ.
ನಿನ್ಹೊರ್ತು ಬೆಳಕಿಲ್ಲವು;
ನಿನ್ಹೊರ್ತು ಸುಖ ಕಾಣದು;
ನಿನ್ಹೊರ್ತು ಸಾಯುತೇವೆ.
ಆಳು, ಬಾಳು!
ಜೈಸಿ ನಿನ
ಶತ್ರುವಿನ
ರಾಜ್ಯವನ್ನು,
ಕಾಯಿ ನಿನ್ನ ಪ್ರಜೆಯನ್ನು!

3. ಈ ಮರ್ತ್ಯದೇಹದಿಂದಲೂ
ಸಮಾಧಿಯೊಳಗಿಂದಲೂ
ವಿಧೇಯ ಭಕ್ತರನ್ನು
ನೀ ತಪ್ಪಿಸ್ಯೇಸು ಕ್ರಿಸ್ತನೆ!
ಅನಂತ ಘನದೊಳಗೆ
ಕೊಡೈ ಪ್ರವೇಶವನ್ನು!
ಏರಿ, ಸೇರಿ
ನೀನಿರ್ಪಲ್ಲಿ,
ಕಾಂತಿಯಲ್ಲಿ
ನಿನ್ನ ಮುಖ
ದೃಷ್ಟಿಸೋದು ಎಂಥ ಸುಖ!

೯೬

Mel. Salvation, oh, the joyful sound. M. T. 25.

1. ಈ ಶುಭವಾದ ದಿನದಿ
ಸತ್ತೋದ ಯೇಸುವು
ಸಂಜೈಸಿ ಪುನರ್ಜೀವಿಸಿ,
ಸಮಾಧಿ ಬಿಟ್ಟನು.
ಘನ, ಮಾನ, ಕೀರ್ತಿ, ಬಲ
ಯಜ್ಞಪಶುವಿಂಗೆ ನಿತ್ಯ!
ಯೇಸು ಕ್ರಿಸ್ತ ನಮ್ಮ ಜೀವ.
ಹಲ್ಲೆಲೂಯಾ ಹಾಡಿರಿ!

2. ಈ ಶುಭವರ್ತಮಾನವು
ಸಮಸ್ತ ಲೋಕದಿ
ಸಮಸ್ತ ಜನಕುಲಕು
ಪ್ರಸಿದ್ಧಿಯಾಗಲಿ!
ಘನ, ಮಾನ, ...

3. ಮೃತೀಲಿ ಸೇರಿದಾತನು
ನಿರಂತ್ರ ಬಾಳಲಿ!
ಆಕಾಶಗತ ಪತಿಯು
ಜಗತ್ತನಾಳಲಿ!
ಘನ, ಮಾನ, ...

4. ನೀ, ಯೇಸು, ಬಂದು,
ಶಿಕ್ಷೆಯ
ವಿರೋಧಿಗೀಯಲು,
ಸದ್ಭಕ್ತರಭಿಲಾಷೆಯ
ನಿನ್ನಲ್ಲಿ ತೀರಿಸು!
ಘನ, ಮಾನ, ...

೯೮

Jesus, meine Zuversicht.
M. T. 71.

1. ನಾನು ನಂಬಿಕೊಳ್ಳುವ
ನನ್ನ ಕರ್ತ ಬಾಳುತಾನೆ;
ಮೃತ್ಯುರಾಜಭಯವ
ಪರಿಹಾರ ಮಾಡಿದ್ಧಾನೆ.
ಗಾಢ ಕತ್ತಲೊಳಗೆ
ನನ್ನ ಬೆಳಕಾತನೆ!

2. ನಿತ್ಯಜೀವದರಸ
ತನ್ನ ಮಾತು ಕೈಕೊಳೋನು;
ಆತ ತನ್ನ ಭಕ್ತನ
ತಾನಿರ್ಪಲ್ಲಿ ಸೇರಿಸೋನು.
ಅಂಗವನ್ನು ತಲೆಯು
ಎಂದು ಬಿಟ್ಟು ಹೋಗದು.

3. ಆತನೈಕ್ಯದೊಳಗೆ
ಭಕ್ತಿಯಿಂದ ಸೇರುತೇನೆ;
ಆತನಲ್ಲಿ ನಂಬಿಕೆ
ಎಂಬ ಕೈಯನಿಟ್ಟಿದ್ಧೇನೆ;
ಕ್ರೂರ ಮೃತಿ ನಮ್ಮನು
ಭೇದ ಮಾಡ ಕೂಡದು.

4. ಮಾಂಸವಾಗಿ ಹುಟ್ಟಿದೆ;
ಬೇಗ ಬೀಳ್ವೆ ಬೂದಿಯಾಗಿ;
ಅಂತ್ಯ ದಿನ ಬರಲೆ,
ಆತ ನಿತ್ಯಜೀವಕಾಗಿ
ಮಣ್ಣಿನಿಂದ ಕರೆದು
ಎಬ್ಬಿಸೋನು ನನ್ನನು.

5. ಇಲ್ಲಿ ರೋಗ, ದುಃಖವು;
ಅಲ್ಲಿ ಕ್ಷೇಮ, ಸುಖ, ತ್ರಾಣ.
ಇಲ್ಲಿ ಮಣ್ಣು, ಬೂದಿಯು;
ಅಲ್ಲಿ ನಿತ್ಯ ಘನ ಮಾನ.
ಇಲ್ಲಿ ಧೂಳಿಯಾದರು,
ಆತ್ಮವಾಗಿ ಏಳ್ವೆನು.

6. ದೇಹ, ಪಡು ಹರ್ಷವ!
ಯೇಸು ಕ್ರಿಸ್ತನಂಗವಾದಿ.
ನಂಬು! ಬಿಡು ಚಿಂತೆಯ!
ಜೀವಕಾತ ನಿನ್ನ ಹಾದಿ.
ಅಂತ್ಯತೂರ್ಯಧ್ವನಿಯು
ಎಬ್ಬಿಸೋದು ನಿನ್ನನು.

೯೯

Aus des Todes Banden.
M. T. 177.

1. ಮೃತ್ಯುಬಂಧದಿಂದ,
ಗೋರಿಯೊಳಗಿಂದ

ಯೇಸು ಎದ್ದನು;
ಜೈಸಿ ಮೃತಿಯನ್ನು,
ರಾಜಪೀಠವನ್ನು
ಏರಿ, ಕೂತನು.
ಈಗಲೆ ವಿಶ್ವಾಸಿಗೆ
ನಿತ್ಯಜೀವ ಪ್ರಾಪ್ತಿಯಾಯ್ತು;
ಭಯ ಭಂಗವಾಯ್ತು.

2. ಶತ್ರುವನ್ನು ಗೆದ್ದಿ,
ಸತ್ತುಹೋಗಿ ಎದ್ದಿ,
ಜೀವರಾಜನೆ!
ಪಾಪ ಕಳೆಯೋಣ,
ಸತ್ತು ಬದುಕೋಣ
ಜೀವನೀತಿಗೆ!
ಯೇಸುವೇ, ನೀನೊಬ್ಬನೇ
ನಮ್ಮ ಗತಿ! ಪಾದಸೇವೆ
ನಿನಗೀಯುತೇವೆ.

3. ಕರ್ತಗುಂಟು ಪೀಠ;
ಮಹಿಮೇ ಕಿರೀಟ
ಇನ್ನು ನಮ್ಮದೇ!
ಮೃತ್ಯುಕ್ರೂರಶಸ್ತ್ರ
ದೇಹವೆಂಬ ವಸ್ತ್ರ
ತಿವಿಯುತ್ತಲೇ,
ಆತನೆ ಸ್ವಪ್ರಜೆಗೆ
ಸೂರ್ಯವಸ್ತ್ರ ಕೊಡೊನಲ್ಲಿ,
ದಿವಸುಖದಲ್ಲಿ.

೯೯

Mel. Es klingt ein hoher Klang.
M. T. 118.

1. ಸತ್ಥೋದ ಕ್ರಿಸ್ತನು
ಈ ಶುಭ ದಿನದಿ
ಉತ್ಥಾನವಾದನು,
ಸಾವನ್ನು ಜಯಿಸಿ.
ಓ ಕೊಯ್ಯಲ್ಪಟ್ಟ ಕುರಿಮರಿ!
ವಿಜೈಸಿ ಬಿಟ್ಟೆ ಹಳೇ ಅರಿ.
ವಿಜಯಶಾಲಿ ಆಗಿದ್ಧೀ,
ಆ ದುಷ್ಟ ವೈರಿ ಕೊಂದಿದ್ಧೀ!

2. ಮಹಾಂತ ಜಯಕೆ
ಸ್ವಪ್ರಜೆ ಹಾಡಲಿ!
ಸಮಸ್ತ ಜನರೆ,
ಸನ್ಮಾನ ಕೊಡಿರಿ!
ಸಮಾಧಿಯಿಂದ ಎದ್ದಿದ್ಧಾನೆ.
ಸುದಿವ್ಯ ಬಲ ಹೊಂದಿದ್ಧಾನೆ.
ಆತಂಗೆ ಉಂಟು ನಿತ್ಯಕು
ಪ್ರಭಾವ ಸ್ತೋತ್ರ ಮಾನವು.

3. ಸ್ವಸ್ತ್ಯಸ್ತು, ಅರಸಾ!
ವಿಜಯಶಾಲಿಯೇ!
ನೀ ಬಾಳು, ಒಡೆಯಾ!
ತ್ರಿಲೋಕನಾಥನೇ,
ಸಾಷ್ಟಾಂಗ ಅಡ್ಡ ಬೀಳುತೇವೆ!
ಅತ್ಯಂತ ಘನ ಕೊಡುತೇವೆ
ಸತ್ತೆದ್ದ ಕುರಿಮರಿಗೆ,
ನರಾರಿ ಗೆದ್ದ ರಾಜಗೆ.

4. ನಮ್ಮಲ್ಲಿ ಮೃತಿಯ,
ಕ್ರಿಸ್ತ್ಯೇಸು, ಜಯಿಸು!
ಉತ್ಥಾನಜೀವವ
ನಮ್ಮಲ್ಲಿ ವರ್ಧಿಸು!
ಈ ನಮ್ಮ ಮರ್ತ್ಯ ಕಾಯದಲ್ಲಿ
ಸಂಜೀವವನ್ನು ನೀಡ ಬಲ್ಲಿ;
ಹೊಸ್ತಾಗಿ ಚುರುಕಾಗಲಿ!
ನಿನ್ನುಸುರಿಂದ ಬಾಳಲಿ!

5. ಸಮಾಧಿ ಸೇರ್ವರೆ
ನಾನಿನ್ನು ಹೆದರೆ;
ನಿನ್ನುರಿಬಾಣಕೆ,
ಸಾವೇ, ನಾನದರೆ;
ಹೋ! ಮೃತ್ಯು, ನಿನ್ನ ಕೊಂಡಿ ಎಲ್ಲಿ?
ಪಾತಾಳ, ನಿನ್ನ ಜಯವೆಲ್ಲಿ?
ಕ್ರಿಸ್ತ್ಯೇಸುವಿನ ಮೃತ್ಯುವು
ಆಯ್ತೆಮ್ಮ ಜೀವಮೂಲವು.

೧೦೦

Auferstanden, auferstanden.
M. T. 17.

1. ಜೀವರಾಜ ಮೃತ್ಯುತ್ರಾಣ
ಮುರಿಧಾಕಿದ,
ಗೋರಿಯೊಳಗಿಂದುತ್ಥಾನ-
|: ವಾಗಿ ಜೈಸಿದ. :|

2. ಜೀವಪ್ರಭುವೇ ಪಾತಾಳ
ಜೈಸಿ ಬಿಟ್ಟನು.
ರಾಜನಾಗಿ ನಿತ್ಯ ಬಾಳ
|: ಆತನೆದ್ದನು. :|

3. ಮೂಲಪಿತನಿಂದ ಬಂದ
ಪಾಪಕೃತ್ಯದ
ಶಾಪವೆಲ್ಲ ದೇವಕಂದ
|: ಪೂರ್ಣ ತೆಗೆದ. :|

4. ಮೃತ್ಯುವಿನ ಭಯವೆಲ್ಲಿ
ಕ್ರಿಸ್ತಪ್ರಜೆಗೆ?
ಯೇಸುವಿನ ಜೀವದಲ್ಲಿ
|: ಉಂಟು ರಕ್ಷಣೆ. :|

5. ಕರ್ತ ಯೇಸು, ನೀ ನನ್ನಲ್ಲಿ
ಇನ್ನು ಬದುಕು!
ವಾಸಸ್ಥಾನ ಪರದಲ್ಲಿ
|: ನಂಗೆ ಪಾಲಿಸು! :|

6. ಯೇಸು ಕ್ರಿಸ್ತ, ಕಷ್ಟದಾಳು,
ಜಯಶಾಲಿಯೆ,
ನಿನ್ನ ಸಾವು ನನ್ನ ಬಾಳು,
|: ನಿಂಗೆ ವಂದನೆ! :|

೧೦೧

Jesus Christ is risen to-day.
M. T. 16.

1. ಇಂದು ಯೇಸು ಎದ್ದನು!
ಹಲ್ಲೆಲೂಯಾ!

ಜಯ ಕ್ರಿಸ್ತಗಾಯಿತು!
ಹಲ್ಲೆಲೂಯಾ!
ಪಾಪಿಯಂ ವಿಮೋಚಿಸ,
ಹಲ್ಲೆಲೂಯಾ!
ಕ್ರೂಜೆಸಾವ ತಾಳಿದ.
ಹಲ್ಲೆಲೂಯಾ!

2. ಕ್ರಿಸ್ತನೆಮ್ಮ ರಕ್ಷಕ!
ಹಲ್ಲೆಲೂಯಾ!
ಸ್ತೋತ್ರಗಾನ ಮಾಡುವ!
ಹಲ್ಲೆಲೂಯಾ!
ನಮ್ಮ ಜೀವಕಾಗಿಯೇ,
ಹಲ್ಲೆಲೂಯಾ!
ಎದ್ದ ಗೋರಿಯಿಂದಲೇ!
ಹಲ್ಲೆಲೂಯಾ!

3. ಕ್ರೂಜೆಯಿಂದ ನಮಗೆ,
ಹಲ್ಲೆಲೂಯಾ!
ಪೂರ್ಣವಾದ ರಕ್ಷಣೆ!
ಹಲ್ಲೆಲೂಯಾ!
ಇಹಪರದಲ್ಲಿಯೆ,
ಹಲ್ಲೆಲೂಯಾ!
ಹಾಡಿ ರಕ್ಷಾರಾಜಂಗೆ!
ಹಲ್ಲೆಲೂಯಾ!

೧೦೨

Mel. Der Herr ist gut.—M. T. 86.

1. ನೀ ಬಾಳುತ್ತೀ! ಭೂಪರ
ಲೋಕದಿ
ನೀನಧಿಕಾರ ನಡಿಸಿದ್ದರಲ್ಲಿ
ಪ್ರಭಾವ ಪಡೆದಾಳುತ್ತಿರುವಿ.
ಅಜಿತಸಿಂಹ ನೀ ಲೋಕಾಂತ್ಯದಲ್ಲಿ
ಶತ್ರುಂಗಳನ್ನು ನಾಶ ಮಾಡುವಿ.
ನೀ ಬಾಳುತ್ತೀ!

2. ನೀ ಬಾಳುತ್ತೀ! ಈ ಮಾತು
ನನಗೆ
ಸಂತೋಷ ಕೊಡೋದು ಭೂ
ಯಾತ್ರೆಯಲ್ಲಿ;
ವಿಶ್ವಾಸದಿಂದ ನಾನು ಬಿಡದೆ
ನಿನ್ನನ್ನು ನೋಡುತ್ತೇನೆ ಪ್ರಭೆ
ಯಲ್ಲಿ.
ಅಮರ ಕರ್ತ, ಜೀವವೆನಗು
ನೀ ಪಾಲಿಸು!

3. ನೀ ಬಾಳುತ್ತೀ! ಶ್ರೀ ಯೇಸು
ಕ್ರಿಸ್ತನೇ!
ಈ ಮಾತು ಸಾಕು ಸರ್ವ ಕಷ್ಟ
ದಲ್ಲೂ;
ನೀನಿರೆ ನನಗೇನು ಕಡಿಮೆ?
ನಿನ್ನನುಗ್ರಹ ಹೊಂದಿ ಅದರಲ್ಲೂ
ನಾ ಮುಂದೆ ಹೋಗುತ್ತೇನೆ
ತಂಗದೆ
ಸಾಲೇಮಿಗೆ.

೬. ಯೇಸುವಿನ ದಿವಾರೋಹಣ

೧೦೩

Mel. Jesus, meine Zuversicht.
M. T. 71.

1. ಇಂದು ಕ್ರಿಸ್ತ ಯೇಸುವು
ಸೇರಿ ಪರಲೋಕದಲ್ಲಿ
ರಾಜನಾದ ದಿನವು.
ತಂದೆಬಲಗಡೆಯಲ್ಲಿ
ಕೂತ ಚಕ್ರವರ್ತಿಗೆ
ಅಡ್ಡ ಬೀಳು, ಪ್ರಜೆಯೆ!

2. ಎಲ್ಲ ಅಧಿಕಾರವ
ಯೇಸು ಇಹಪರದಲ್ಲಿ
ಹೊಂದಿ, ಸ್ವಂತ ಜನರ
ಆಳುತಾನೆ ಪ್ರೀತಿಯಲ್ಲಿ.
ಶತ್ರು ಶಕ್ತನಾದರು,
ಕೇಡು ಮಾಡಲಾರನು.

3. ಕೊಡು ನಿನ್ನ ಪ್ರಜೆಗೆ
ನಿನ್ನ ರಾಜ್ಯಸ್ವಾಸ್ತ್ಯವನ್ನು!
ನಿನ್ನ ಸಭೆಗ್ಯೇಸುವೆ,
ಕೊಡು ನಿತ್ಯ ಸ್ಥಾನವನ್ನು!
ನೀನು ಜೈಸಿದಂತೆಯೆ
ಜಯ ಕೊಡು ನಮಗೆ!

4. ನಿನ್ನ ದಿನ ಬಂದರೆ,
ಪೂರ್ಣ ಧೈರ್ಯವಾಗಿದ್ದೇವೆ;
ನಿನ್ನ ಸನ್ನಿಧಾನಕೆ
ಬರ ಸಿದ್ಧ ಮಾಡುತೇವೆ.
ನಿನ್ನ ಮುಖಕಾಂತಿಯೇ
ನಮ್ಮ ಜೀವ, ಕ್ರಿಸ್ತನೇ!

೧೦೪

Jesus Christus herrscht als König.
M. T. 84. 85.

1. ಕ್ರಿಸ್ತ ರಾಜ್ಯವಾಳಿ, ಶಾನೆ
ಘನದಿಂದ ಬಾಳುತಾನೆ;
ಆತ ಜಯಶಾಲಿಯು.
ಹರ್ಷವಾಗಿರಾತನಲ್ಲಿ!
ಆತಗಿಹಪರದಲ್ಲಿ
ಎಲ್ಲ ವಶವಹುದು.

2. ಗದ್ದಿಗೆಯ ಸುತ್ತಲಾಗಿ
ದೂತರೆಲ್ಲ ದಾಸರಾಗಿ
ನಿಂತು ವಂದಿಸುವರು.
"ನನ್ನ ಬಲಪಾರ್ಶ್ವದಲ್ಲಿ
ಕೂಡ್ರು!" ಎಂತ, ಮಗನಲ್ಲಿ
ಮೆಚ್ಚಿ, ತಂದೆ ಎಂದನು.

3. ತಂದೆ ಏಕ ದೇವರೆಂದು,
ಮಗ ಪಿತೃರೂಪನೆಂದು,
ಭಕ್ತರೆರಗುವರು.
ಯೇಸುವಲ್ಲಿ ನಿತ್ಯ ಪ್ರಾಣ;

ಯೇಸುವಲ್ಲಿ ಸರ್ವ ತ್ರಾಣ;
ಯೇಸು ವಿಶ್ವರಾಜನು!

4. ಆತ ಪ್ರಾಯಶ್ಚಿತ್ತವಾಗಿ
ಪಾಪಪರಿಹಾರಕಾಗಿ
ಕ್ರೂಜೆಯಲ್ಲಿ ಸತ್ತನು.
ಆತನಂತ್ಯ ದಿನದಲ್ಲಿ
ಘನವಾಗಿ ಬರುವಲ್ಲಿ
ನಮ್ಮ ನಿತ್ಯಜೀವವು!

5. ಆತ ತನ್ನ ವಾಕ್ಯವನ್ನು
ನಂಬಿಕೊಂಡ ಭಕ್ತರನ್ನು
ಮೋಕ್ಷಸ್ಥಾನಕೊಯ್ವನು.
ಕ್ಷುಧೆ, ದಾಹ, ದುಃಖ, ಕಷ್ಟ,
ಚಿಂತೆ, ಭೀತಿ, ರೋಗ, ನಷ್ಟ
ಇನ್ನು ಮುಂದೆ ಕಾಣವು.

೧೦೫

All hail the power of Jesus' name.
M. T. 26.

1. ಆರಾಧ್ಯ ಯೇಸುನಾಮವೆ!
ಶ್ರೀ ದೇವದೂತರು
ಸಾಷ್ಟಾಂಗ ಬೀಳ್ವರಾತಗೆ;
ಸಮ್ರಾಜ-ರಾಜ-ರಾಜ-
ರಾಜನಾತನು!

2. ವಿಮುಕ್ತರಾದ ಶುದ್ಧರೇ!
ಕ್ರಿಸ್ತ್ಯೇಸು ರಕ್ತವು
ನಿಮ್ಮಲಂಕಾರವಸ್ತ್ರವೇ;
ಸಮ್ರಾಜ . . . . . .

3. ಆಲೈಸಿರಿಸ್ರಾಯೇಲ್ಯರೇ!
ಈ ಪ್ರಿಯ ನಾಮವು
ನಿಮ್ಮೆಲ್ಲರಿಂಗೆ ಜೀವವೇ;
ಸಮ್ರಾಜ . . . . . .

4. ಅಜ್ಞಾನಮಗ್ನ ಜನರೆ!
ಈ ಶ್ರಮೆ ಗಾಯವು
ವಿಶ್ರಾಂತಿಕರ ನಿಮಗೆ;
ಸಮ್ರಾಜ . . . . . .

5. ಈ ಶುಭರಾಯ ಧನಿಗೆ
ಭೂಜಾತಿ ಕೊಡೋದು
ಕಿರೀಟ, ದಾನ ಮಹಿಮೆ;
ಸಮ್ರಾಜ . . . . . .

6. ಆ ಘನ ಕೂಟದೊಡನೆ
ಸಂಸ್ತುತಿ ಹಾಡಲು
ನಾವಡ್ಡ ಬೀಳ್ವಾ ಈತಗೆ!
ಸಮ್ರಾಜ . . . . . .

೧೦೬

Mel. Es klingt ein hoher Klang.
M. T. 118.

1. ಕರ್ತಂಗೆ ಸ್ತೋತ್ರವ
ಮಾಡೋಣ, ಬನ್ನಿರಿ!
ಉತ್ಸಾಹಗೀತವ
ಇಂಪಾಗಿ ಹಾಡಿರಿ!

ಸುನೀತಿಯುಳ್ಳ ಜಗನ್ನಾಥ,
ಅದ್ಭುತವುಳ್ಳ ದೇವರಾತ.
ಸಂತೋಷಪೂರ್ಣಹೃದಯ
ಉಚ್ಚರಿಸಲೀ ಗೀತವ!

2. ಕೃಪಾಳು ಒಡೆಯ
ಅಯೋಗ್ಯ ನಮಗೆ
ದಿನಾಲು ಮಾಡಿದ
ಅಮಿತ ದಯಕೆ
ನಾವಿಂದು ಸ್ತೋತ್ರ ಮಾಡು
ತೇವೆ.
ಕೃತಜ್ಞರಾಗಿ ಹಾಡುತೇವೆ.
ಸಮಸ್ತರೀಗ ಹಾಡುತಾ
ಸಂಕೀರ್ತಿಸಿ! ಹಲ್ಲೆಲೂಯಾ!

3. ನಮ್ಮಲ್ಲಿ ಆಳ್ವನು
ಸಂಪ್ರೀತಿಯರಸ,
ತಾನಾಗಿ ಇರ್ವನು
ಅತ್ಯುತ್ತಮಾಶ್ರಯ.
ಸಮಸ್ತ ನಮ್ಮ ಕ್ರೈಸ್ತಗೋತ್ರ
ಸುರಾಗವೆತ್ತಿ, ಶ್ರೇಷ್ಠ ಸ್ತೋತ್ರ
ಕ್ರಿಸ್ತ್ಯೇಸುವಿಗೆ ಹಾಡುವಾ!
ನಮೋನಮಃ! ಹೊಸೀಯನ್ನಾ!

4. ಇನ್ನೂ ನಮ್ಮೊಡನೆ
ದುರ್ವೈರಿ ಹೋರಲು,
ಮೆಸ್ಸೀಯನೆಮಗೆ
ಸೈನ್ಯಾಧಿಪತಿಯು.
ಉಂಟಾತನಲ್ಲಿ ದುರ್ಗಸ್ಥಾನ;
ತಾನಾರಿಸುತ್ತಾನಗ್ನಿಬಾಣ.
ಹಾಡೋಣ ಸೈನ್ಯಪತಿಗೆ —
ವಿಜಯ ಜಯ ನಿನಗೆ!

5. ಹೀಗಿರ ಬೇಕಲ್ಲೋ
ನಮ್ಮಲ್ಲಿ ಹರುಷ?
ನಮ್ಮೊಳಗುಂಟಿಗೋ
ಸರ್ವಾರ್ಥಸಿದ್ಧಕ.
ದೇಹಾತ್ಮ ಪ್ರಾಣಕ್ಕಿಹ ಸುಖ;
ಆ ಲೋಕದಲ್ಲಿ ಯಾವ ದುಃಖ?
ಹಾಡೀಗಲೇ ಹಲ್ಲೆಲೂಯಾ!
ವಿಜಯವು! ಹೊಸೀಯನ್ನ!

೧೦೭

Ps. 72.
Mel. Herr Gott, dich loben alle wir.—M. T. 35.

1. ರಾಜಾಧಿರಾಜ ಪುತ್ರಗೆ
ಕೊಡೀಶ ನ್ಯಾಯತೀರ್ವಿಕೆ!
ಏರ್ಪಡಿಸೋನು ನ್ಯಾಯವ,
ಭೂಮಿಾಲಿ ಸಮಾಧಾನವ.

2. ಕ್ರಿಸ್ತ್ಯೇಸು ರಾಜನಾಳುವ
ಚಂದ್ರಾರ್ಕರಿರ್ವ ತನಕ
ಸಮುದ್ರದಿಂ ಸಮುದ್ರಕು;
ಈ ರಾಜ್ಯಕಂತ್ಯವಿರದು.

3. ಸುಮಂಗಳಾಶೀರ್ವಾದವು
ಈ ಧನಿಗಾಗಿ ಏಳ್ವದು;
ಈ ನಮ್ಮ ತುಟಿ ಸಹಿತ
ಹಾಡೋದು ಘನಸ್ತೋತ್ರವ.

4. ಭೂಲೋಕಕುಲದವರು
ಆತನ್ನ ಸೇವಿಸುವರು;
ಭೂರಾಜಸಂಘವೆಲ್ಲವು
ಹೇಮಾದಿ ದಾನ ತರೊದು.

5. ಆಕಾಶ ಮಳೆ ಸುರಿಸಿ
ಈ ಭೂಮಿ ತೋಯ್ಸುವಂದದಿ
ದೇವಾತ್ಮವೃಷ್ಟಿಗರೆದು
ಹೃತ್ಕ್ಷೇತ್ರ ಹದಮಾಡಿತು.

6. ಈ ವರೆಗೆಷ್ಟೊ ಕಡಿಮೆ
ಉಂಟಾಯ್ತು ಪುಷ್ಟಿ ಪೈರಿಗೆ!
ಹೆಚ್ಚಾಗಲಿನ್ನು ಬೆಳೆಯು,
ಎಲ್ಲೆಲ್ಲೂ ಸಭಾಸಂಖ್ಯೆಯು.

7. ಗುಲಾಮಬಂಧ ಛೇದಿಸಿ
ದರಿದ್ರರಿಂಗೆ ಸಂತೃಪ್ತಿ,
ಕಂಗಾಲರಿಂಗೆ ಮೋಕ್ಷವ
ಕಟಾಕ್ಷದಿಂದ ಕೊಡುವ.

8. ಭೂಸ್ವರ್ಗಲೋಕದೊಳಗೆ
ಕ್ರಿಸ್ತ್ಯೇಸು ಘನನಾಮಕೆ
ಕೊಂಡಾಟ ಸ್ತೋತ್ರ ಮಾನವು
ಇಂಪಾಗಿ ಏಳಲೆಂದಿಗು!

---

೭. ಪವಿತ್ರಾತ್ಮಾಗಮನ

೧೦೮

Es sass ein frommes Häuflein dort.
M. T. 275.

1. ಪಂಚಾಶತ್ತಮದಿನದಿ
ಸದ್ಭಕ್ತ ಶಿಷ್ಯಮಂಡಲಿ —
ವಾಗ್ದತ್ತ ಆತ್ಮಸ್ನಾನ
ಯಾವಾಗ ಪ್ರಾಪ್ತವಾಗುತೆ
ಎಂದೆದುರ್ನೋಡಿದಂತೆಯೆ
ನಾಂ ಕೋರುತ್ತೇವಾ ದಾನ.

2. ಬೀಸೋದು ಬಿರುಗಾಳಿಯು
ಎಂಬಂತೆ ನೀನಾ ದಿನವು,
ದೇವಾತ್ಮನೇ, ಐತಂದು
ಒಬ್ಬೊಬ್ಬನೋಳ್ ಪ್ರವೇಶಿಸಿ
ಸಂಜೀವವಿತ್ತ ವಿಧದಿ
ಬೀಸಿಂದೂ ಜೀವ ತಂದು!

3. ಆ ಮನೇ ತುಂಬಾ ವ್ಯಾಪಿಸಿ
ನೀನುರಿಯಂತೆ ಕಾಣಿಸಿ
ಕೂತಿ ಪ್ರತ್ಯೊಬ್ಬನಲ್ಲಿ.
ನಮ್ಮಲ್ಲೂ ಬೆಂಕಿಯಾಗಿ ಬಾ!
ಕಲ್ಮಷ ಸುಟ್ಟು ಪ್ರೀತಿಯ
ನೀನುರಿಸಾತ್ಮದಲ್ಲಿ!

4. ನವೀನ ಭಾಷೆ ಉಸುರಿ
ದೇವಪ್ರಭಾವ ಕೀರ್ತಿಸಿ
ಮಾತಾಡೋ ಶಕ್ತಿಯನ್ನು
ನೀನಂದು ಕೊಟ್ಟಿ; ನಮಗು
ಕೊಟ್ಟಿಂದು ವರ, ವರ್ಧಿಸು
ಶ್ರೀ ಯೇಸುರಾಜ್ಯವನ್ನು!

೧೦೯

Nun bitten wir den heiligen Geist.
M. T. 95.

1. ಆಲೈಸು, ಶ್ರೀ ಪವಿತ್ರಾತ್ಮನೆ!
ವಿಶ್ವಾಸದೃಢವ ನಮಗೆ
ದಯೆಪಾಲಿಸೀಗ!
ಭೂಕಷ್ಟವನ್ನು
ಬಿಟ್ಟೋಗೊ ಕಾಲದಿ ಭಕ್ತರನ್ನು
ಕಟಾಕ್ಷಿಸೋ!

2. ಇಂಪಾದ ಜ್ಯೋತಿಯೇ!
ನಮ್ಮಲಿ
ಕ್ರಿಸ್ತ್ಯೇಸುನಾಮವ ತಿಳಿಸಿ,
ಆತನೈಕ್ಯದಿಂದ
ಸ್ವತಂತ್ರವನ್ನು
ತಕ್ಕೊಳ್ಳ ಬಯ್ಸುವ ಮಕ್ಕಳನ್ನು
ಕಟಾಕ್ಷಿಸೋ!

3. ಅಮೂಲ್ಯ ಪ್ರೀತಿಯೇ,
ನಮ್ಮೊಳು
ಪ್ರೇಮಾಗ್ನಿಜ್ವಾಲೆಯ ಹೊತ್ತಿಸು!
ಸರ್ವ ಭಕ್ತರಲ್ಲಿ
ಅನ್ಯೋನ್ಯವನ್ನು
ಹೆಚ್ಚಾಗಮಾಡುತ್ತಾ,ಸಭೆಯನ್ನು
ಕಟಾಕ್ಷಿಸೋ!

4. ನೀ ಮಾತ್ರ ಶಾಂತಿಯ ಬುಗ್ಗೆ
ಯು;
ನಿನ್ನಲ್ಲಿ ಕಷ್ಟಕೆ ಅಂಜೆವು.
ನಿನ್ನ ಮರೆಯಲ್ಲಿ
ಭಯನಿವಾರ!
ಐ, ಅಂತ್ಯವಿಘ್ನದಿ ಮಾಡು
ದ್ಧಾರ!
ಕಟಾಕ್ಷಿಸೋ!

೧೧೦

Mel. Wer ist wohl wie du.
M. T. 56.

1. ದೇವರಾತ್ಮವೆ,
ಬಂದೆನ್ನೊಳಗೆ
ದುಃಸ್ವಭಾವಮೂಲ ಕಿತ್ತು,
ಮನದೊಳ್ ಸುಬೋಧೆ ಇತ್ತು,
ನನ್ನ ಹೃದಯಾ
ಶುಚಿ ಮಾಡಯ್ಯಾ!

2. ಬೀಸು, ವಾಯುವೇ!
ಸುರಿ, ಮಳೆಯೇ!
ಕೋಲೆ, ಬಂಡೆಯನ್ನು ಸೀಳು!
ಖಡ್ಗ, ಮಾಂಸದಲ್ಲಿ ಬೀಳು!

ಉರಿ, ಅಗ್ನಿಯೇ!
ಮೂಡು, ಸೂರ್ಯನೇ!

3. ನನ್ನ ಆತ್ಮದಿ
ಜ್ಞಾನ ಹುಟ್ಟಿಸಿ,
ನನ್ನ ಇಂದ್ರಿಯಂಗಳನ್ನು,
ನನ್ನ ಪೂರ್ಣ ಮನಸ್ಸನ್ನು
ಹಿಡಿದೆನ್ನನು
ಪೂರ ವ್ಯಾಪಿಸು!

4. ನೀನು ಬೋಧನೆ
ನನಗಿತ್ತರೆ,
ಜೀವದುಪದ್ರಂಗಳನ್ನು,
ಮೃತಿಘೋರ ಭಯವನ್ನು
ಲಕ್ಷ್ಯ ಮಾಡದೆ,
ಜಯ ಹೊಂದುವೆ.

೧೧೧

O heil'ger Geist, kehr bei uns ein.
M. T. 194.

1. ಪವಿತ್ರ ದೇವರಾತ್ಮವೇ,
ನೀ ಭಕ್ತಹೃದಸೂರ್ಯನೇ.
ನಮ್ಮೊಳ್ ಪ್ರವೇಶವಾಗು!
ನಮ್ಮಂತರ್ಭಾವದೊಳಗೆ
ಉದ್ಯೈಸಿ, ನಿತ್ಯ ಕಾಲಕೆ
ಪ್ರಕಾಶಪ್ರದನಾಗು!
ಆತ್ಮ, ಆತ್ಮ,
ಸತ್ಯಜ್ಞಾನ
ನಿನ್ನ ದಾನ;
ನಿನ್ನ ಕಾಂತಿ
ನಮ್ಮ ನಿತ್ಯವಾದ ಶಾಂತಿ.

2. ಪವಿತ್ರವಾದ ಬುಗ್ಗೆಯೆ,
ನೀ ಎರೆ ಆತ್ಮದಾಹಕೆ
ಸಜ್ಜೀವಜಲವನ್ನು!
ನಮ್ಮನ್ನು ಚಂದ ತೊಳೆದು,
ನಮ್ಮೊಳಗಿಂದ ಬಿಡಿಸು
ಅಸಹ್ಯ ಮಲವನ್ನು!
ಎರೆ, ಎರೆ
ಪಾನಕಾಗಿ,
ಸ್ನಾನಕಾಗಿ
ಜಲವನ್ನು!
ಮಾಡು ಪೂರ್ಣ ತೃಪ್ತಿಯನ್ನು!

3. ಪವಿತ್ರವಾದ ಅಗ್ನಿಯೆ,
ನಮ್ಮೊಳಗಿರ್ಪ ಮೈಲಿಗೆ
ಸುಟ್ಟಾಕು ವೇಗದಿಂದ!
ಸೈತಾನನಧಿಕಾರವಂ,
ನಮ್ಮೊಳಗಿರ್ಪ ರಾತ್ರಿಯಂ
ನೀ ದಿವ್ಯ ಜ್ವಾಲೆಯಿಂದ
ಛಿನ್ನ, ಭಿನ್ನ
ಮಾಡಲಾಗಿ,
ಸಿದ್ಧರಾಗಿ
ನಿನ್ನ ಸೇವೆ
ಮಾಡ ತ್ವರೆ ಪಡುತೇವೆ.

೧೧೨

Mel. Let us with a gladsome mind.—M. T. 11.

1. ಪರಿಶುದ್ಧ ಆತ್ಮನೆ,
ಪಾಪ ಶಾಪ ತುಂಬಿದ
ನನ್ನ ಅಂತರ್ಭಾಗವನೆ
ಪೂರ್ಣ ಶುದ್ಧ ಮಾಡ ಬಾ!

2. ಜೀವವುಳ್ಳ ಆತ್ಮನೆ,
ನನ್ನಲ್ಲಾತ್ಮಶಕ್ತಿಯ
ಹೆಚ್ಚು ಮಾಡು! ಮೋಕ್ಷಕೆ
ಮುಟ್ಟ ಕೊಡು ವರವ!

3. ತ್ರಾಣವುಳ್ಳ ಆತ್ಮನೆ,
ಪಾಪಬಲ ಮುರಿದು,
ನನ್ನ ಹೃದಸಿದ್ಧಿಗೆ
ಸತ್ಯಗುಣ ಪಾಲಿಸು!

4. ಜ್ಞಾನವುಳ್ಳ ಆತ್ಮನೆ,
ಜ್ಞಾನವನ್ನು ಮೂಡಿಸ
ನನ್ನ ಹೃದದಿಂದಲೆ
ಹಾರಿಸಂಧಕಾರವ!

5. ಬುದ್ಧಿಯುಳ್ಳ ಆತ್ಮನೆ,
ದೇವವಾಕ್ಯ ಗ್ರಹಿಸ
ಬುದ್ಧಿಹೀನನೆನಗೆ
ಕೊಡು ತಕ್ಕ ಬುದ್ಧಿಯ!

6. ಶುದ್ಧ ಅಗ್ನಿಯಾತ್ಮನೆ,
ಸುಟ್ಟು ಹಾಕು ಸರ್ವದಾ
ನನ್ನ ಪಾಪಮೈಲಿಗೆ!
ಬೆಳಗಿಸು ಹೃದವ!

7. ಪ್ರಾರ್ಥನೆಯ ಆತ್ಮನೆ,
ಜಪ ಧ್ಯಾನ ಕಲಿಸು!
ಭಕ್ತಹೃದಜ್ಯೋತಿಯೆ,
ನನ್ನೊಳ್ ತಳತಳಿಸು!

8. ಸತ್ಯವಾದ ಆತ್ಮನೆ,
ಮಿಥ್ಯದಿಂದ ರಕ್ಷಿಸು!
ಎಲ್ಲಾ ಸತ್ಯದೊಳಕೆ
ನೀನು ನಡಿಸೆನ್ನನು!

9. ಶಾಂತಿದಾಯಕಾತ್ಮನೆ,
ಭಯ ಪೀಡೆ ಕಷ್ಟದೊಳ್
ಆದರಿಸು ತಪ್ಪದೆ
ಇಹಲೋಕಯಾತ್ರೆಯೊಳ್!

೧೧೩

Mel. Guide me, O Thou Great Jehovah.—M. T. 295.

1. ಬಾ ನಮ್ಮಲ್ಲಿ, ದೇವರಾತ್ಮ!
ನಿನ್ನ ಕಾಂತಿ ತೋರಿಸು!
ದಿವ್ಯ ಜ್ಞಾನದ ಪ್ರಕಾಶ
ಹೆಚ್ಚು ದಯಪಾಲಿಸು;
|: ನಮ್ಮನ್ನೆಲ್ಲ :|
ಆತ್ಮದಿಂದ ತುಂಬಿಸು!

2. ನಮ್ಮ ಕೆಟ್ಟ ಗುಣವನ್ನು
ದಯಮಾಡಿ ತೆಗೆದು,

ಅಪವಿತ್ರವಾದದನ್ನು
ಪೂರ್ಣವಾಗಿ ಶುಚಿಸು!
|: ದೇವಭಕ್ತಿ :|
ಅಭಿವೃದ್ಧಿ ಪಡಿಸು!

3. ದೇವಪ್ರೀತಿ ಹೆಚ್ಚೆಚ್ಚಾಗಿ
ಸಭೆಯಲ್ಲಿ ಬೆಳಿಸು!
ದೇವಸೇವೆ ಚುರುಕಾಗಿ
ಮಾಡ ಬಲ ಪಡಿಸು!
|: ಮನಶ್ಶಾಂತಿ :|
ಎಲ್ಲರಲ್ಲಿ ಹುಟ್ಟಿಸು!

4. ನಿನ್ನ ಹೊರ್ತು ನನ್ನ ಪ್ರಾಣ
ಭೂಮಿಗಂಟಿಕೊಳ್ಳುತೆ;
ನಿನ್ನ ಕೃಪೆ ಹೊಂದಿದಾಗ
ಮೇಲಕೇರಿ ಹೋಗುತೆ.
|:ದಿವ್ಯ ಆತ್ಮ, :|
ಬಾ ನಮ್ಮೆಲ್ಲರೊಳಗೆ!

೧೧೪

Mel. **Wie ein Hirt sein Volk zu weiden.—M. T. 31.**

1. ಕರ್ತ, ನಿನ್ನ ಆತ್ಮನನ್ನು
ಕೊಡು ನಿನ್ನ ಪ್ರಜೆಗೆ!
ಕೇಳು ನಮ್ಮ ಮೊರೆಯನ್ನು!
ಸೇರು ನಮ್ಮ ಮಧ್ಯಕೆ!

2. ನಮ್ಮ ದುಃಸ್ವಭಾವವನ್ನು
ನಮ್ಮೊಳಿಂದ ತೆಗೆದು,
ನಮ್ಮ ಕೆಟ್ಟ ಹೃದವನ್ನು
ಹೊಸದಾಗಿ ನಿರ್ಮಿಸು!

3. ನಿನ್ನ ನೀತಿಮಾರ್ಗದಲ್ಲಿ
ನಡಕೊಳ್ಳೊ ಬುದ್ಧಿಯ
ಕೊಟ್ಟದನ್ನು ನೀನೆಮ್ಮಲ್ಲಿ
ಸ್ಥಿರಪಡಿಸೊಡೆಯ!

4. ಶಾಂತಿಯನ್ನು ಹೃದದಲ್ಲಿ
ಧಾರೆಯಾಗಿ ಸುರಿಸು!
ನಾವು ಭರವಸದಲ್ಲಿ
ದೃಢವಾಗಗೊಡಿಸು!

5. ನಿನ್ನ ಪ್ರೀತಿ ಜ್ಞಾನವನ್ನು
ಹೃದದಲ್ಲಿ ಹೊಯಿದು,
ನಿನ್ನ ಮಕ್ಕಳಂತೆಮ್ಮನ್ನು
ಈಗಲೇ ಸ್ವೀಕರಿಸು!

೧೧೫

Gott, gib einen milden Regen. M. T. 148.

1. ಕರ್ತಾ, ದಿವ್ಯ ವೃಷ್ಟಿಯನ್ನ
ಮೇಲಿನಿಂದ ಸುರಿಸು!
ಒಣ ನೆಲದಂಥ ನನ್ನ
ಹೃದವನ್ನು ನೆನಸು!
ನಿನ್ನ ಆತ್ಮ, ದೇವರೇ.
ಇಷ್ಟವಾದ ಮಳೆಯೋ.
ಆತ್ಮವೃಷ್ಟಿ ಬಿದ್ದ ಮನ
ಸಿಂಗೆ ಪುಷ್ಪವೀವ ವನ.

2. ರೊಟ್ಟಿಯನ್ನು ಕೇಳುವಲ್ಲಿ,
ಮಕ್ಕಳಿಂಗೆ ಕಲ್ಲನ್ನೇ
ಕೆಟ್ಟ ನರಜಾತಿಯಲ್ಲಿ
ತಂದೆಯೊಬ್ಬ ಕೊಟ್ಟಾನೇ?
ಒಳ್ಳೇ ತಂದೆಯಾದ ನೀ
ನನ್ನ ಮೊರೆ ಕೇಳುವಿ.
ಆತ್ಮದಾನ ನಂಗೆ ದಯ-
ಪಾಲಿಸಿ ಕಟಾಕ್ಷಿಸಯ್ಯ!

3. ಇಹ ಬಿಟ್ಟು ಸ್ವರ್ಗವನ್ನು
ಏರಿದಾಗ— ನಿಮಗೆ
ತಂದೆಯಿಂದ ವರವನ್ನು
ಪಡಕೊಂಡು ಹಂಚುವೆ
ಎಂದು ಕೊಟ್ಟ ಭಾಷೆಯ
ನೆರವೇರಿಸೊಡೆಯ!
ಸತ್ಯವಾದ ಆತ್ಮನನ್ನು
ಕೊಟ್ಟು ಆದರಿಸೆನ್ನನ್ನು!

4. ಬಲಹೀನರಿಂಗೆ ಕ್ಷೇಮ,
ದ್ವೇಷಮಯ ಲೋಕಕ್ಕೆ
ಪ್ರೀತಿ ಎಂಬ ದಿವ್ಯ ನೇಮ
ಒದಗಿಸುವಾತ್ಮನೆ,
ನಿನ್ನ ಗೃಹ ನಾನಲ್ಲಾ!
ತೇಜೋಪ್ರದನಾಗಿ ಬಾ!
ಪಾಪ ಹೊರಗೆ ಬಿಸಾಡು!
ಒಳಗೆಲ್ಲಾ ಶುದ್ಧ ಮಾಡು!

5. ದಿವ್ಯ ಸದ್ಗುಣಂಗಳಿಂದ
ನನ್ನನ್ನಲಂಕರಿಸಿ,
ಆತ್ಮದಲ್ಲಿ ಸತ್ಯದಿಂದ
ತಂದೆಯನ್ನು ಸೇವಿಸಿ
ಬೇಡುವಂತೆ ಕಲಿಸು!
ಶ್ರದ್ಧೆ ದೃಢ ಪಡಿಸು!
ಬಂದೆನ್ನೊಳು ಬೀಸು, ವಾಯು!
ಪೂರ್ಣ ನವ ಸೃಷ್ಟಿಗೈಯು!

6. ಹೀಗೆ ನಿಂಗಾಧೀನನಾಗಿ
ಭೂಸಂಚಾರಗೈವೆನು.
ಸ್ವರ್ಗದ್ವಾರ ಸೇರಲಾಗಿ,
ನನ್ನ ಮುಕ್ತ ಮನವು
ಪಿತಾಪುತ್ರರೊಡನೆ
ನಿಂಗೆ, ದೇವರಾತ್ಮನೆ,
ಸ್ತೋತ್ರಧೂಪವರ್ಪಿಸೋದು,
ನಿತ್ಯದಲ್ಲಿ ಕೀರ್ತಿಸೋದು.

೧೧೬

Es ist ein Strom erflossen.
M. T. 258.

1. ನಾ ರಮ್ಯ ನದ ಬಲ್ಲೆ;
ಈ ನದಜಲವು
ಆ ಪರಲೋಕದಲ್ಲೆ
ಉಗಮವಾದದು.
ಈ ನದ ಬತ್ತಲಾರ,
ಹರ್ಯುತ್ತಲಿಹುದು;
ಈ ಜೀವಜಲಧಾರ
ಇನ್ನೇರುವಂಥಾದು.

2. ಅಬ್ರಾಮುವಂಶದಿಂದ
ಕ್ರಮೇಣ ಮುಂದಕು
ಹಯ್ರ್ಯತಲಿದ್ದರಿಂದ,
ಬಂದುಂಟು ನಮಗು.
ಇನ್ನಿಲ್ಲ ನರಭೇದ;
ಒಂದೊಂದು ಜಾತಿಗು
ಈ ಜೀವಜಲ ಸೇದ
ಬಂತನುಕೂಲವು.

3. ಈ ಜಲ ಬರುವಾಗ
ಆಹಾ, ವಸಂತವೆ!
ಈ ಜಲ ಬಿದ್ದ ಜಾಗ
ಹೂ ಹಣ್ಣು ಬಿಡುತೆ.
ಒಂದೊಂದು ತೀರದಲ್ಲಿ
ಅಸಂಖ್ಯ ವೃಕ್ಷವು,
ಒಂದೊಂದು ತಿಂಗಳಲ್ಲಿ
ಉತ್ಕೃಷ್ಟ ಫಲವು.

4. ಬಾ, ಮಿತ್ರ, ಈ ಪ್ರವಾಹ
ಸುಕ್ಷೇಮಕರವೆ!
ಬಾ, ಮಿತ್ರ, ನಿನ್ನ ದಾಹ
ಸಂಪೂರ್ಣ ತೀರುತೆ!
ನಿನ್ನೆಲ್ಲ ಪಾಪಮಲ
ನಿವಾರವಹುದು.
ಇನ್ನೊಂದು ತೀರ್ಥವಲ್ಲ,
ಈ ತೀರ್ಥ ತೀರ್ಥವು.

---

೮. ದೇವತ್ರಯ್ಯೈಕತ್ವ

೧೧೭

Wir glauben all' an Einen Gott.
M. T. 189.

1. ನಾವೇಕ ದೇವರಲ್ಲಿಯೆ
ಏಕವಾಗಿ ನಂಬುತೇವೆ;
ತ್ರಯ್ಯೈಕನೆಂಬ ಕರ್ತಗೆ
ಒಪ್ಪಲೀಗ ನಮ್ಮ ಸೇವೆ!
ತಂದೆ ಎಲ್ಲವುಂಟು ಮಾಡಿ,
ಸರ್ವರಾಜ, ಸರ್ವತ್ರಾಣಿ,
ಪರಿಶುದ್ಧ, ಸರ್ವಜ್ಞಾನಿ
ಆಗಿ, ಸೃಷ್ಟಿಯಂ ಕಾಪಾಡಿ,
ಈ ಲೋಕವನ್ನು ರಕ್ಷಿಸ
ಆದೀಲಿ ಮನ ಮಾಡಿದ.
ಆಮೆನ್!

2. ಕ್ರಿಸ್ತ್ಯೇಸು ಕರ್ತನಲ್ಲಿಯು
ನಂಬುತೇವೆ ಭಕ್ತರಾಗಿ.
ಸ್ವಕೀಯ ಪಿತಗೀತನು
ಆದಿಯಿಂ ಸಮಾನನಾಗಿ,
ಶುದ್ಧಳಾದ ಕನ್ಯೆಯಿಂದ
ಹುಟ್ಟಿ ಸನ್ಮನುಷ್ಯನಾಗಿ,

ಕೆಟ್ಟು ಹೋದ ಸಮಗಾಗಿ
ಸತ್ತು, ಗೋರಿಯೊಳಗಿಂದ
ಎದ್ದೇರಿ, ಘನದೊಡನೆ
ಬರೋನು ನ್ಯಾಯದಿನಕೆ.
ಆಮೆನ್ !

3. ಪವಿತ್ರ ಆತ್ಮನಲ್ಲಿಯು
ತದ್ವಿಶ್ವಾಸವಿಡುತೇವೆ;
ಈತಂಗು ದೇವಭಾವವು;
ತಕ್ಕದೀತಗೆಮ್ಮ ಸೇವೆ !
ಹೃದ್ವಿಶ್ರಾಂತಿಯೆಂಬ ದಾನ
ಭಕ್ತಗೀತ ಕೊಡಲಾಪ;
ಅಳಿಸೋನು ನಮ್ಮ ಪಾಪ;
ಆತನಿಂದ ದೇಹೋತ್ಥಾನ.
ಸದ್ಭಕ್ತಗಣವೇ, ಸದಾ
ಯೆಹೋವಸ್ತೋತ್ರ ಮಾಡುವಾ!
ಆಮೆನ್ !

೧೧೮

Hallelujah, Lob, Preis und Ehr'.
M. T. 194.

1. ಹಲ್ಲೆಲೂಯಾ ! ಕೊಂಡಾ
ಡುವ
ಸರ್ವಾಧಿಕಾರಿ ದೇವರ
ನಾಮಾಧಿನಾಮುವನ್ನು !
ಭೂಪರಲೋಕ ಹಾಡಲಿ,
ಸಾಷ್ಟಾಂಗ ಬಿದ್ದು ದೈನ್ಯದಿ,
ಯೆಹೋವ ಕೀರ್ತಿಯನ್ನು !
ಆತ ನಾಥ,
ಸೈನ್ಯಪತಿ;
ಆತನತಿ
ಪರಿಶುದ್ಧ,
ಪರಿಶುದ್ಧ, ಪರಿಶುದ್ಧ !

2. ಹಲ್ಲೆಲೂಯಾ ! ಸನ್ಮಾನಿಸಿ
ಕ್ರಿಸ್ತ್ಯೇಸುವಂ ಕೊಂಡಾಡಿರಿ
ಶ್ರೀದೇವಪುತ್ರನನ್ನು !
ಪವಿತ್ರ ರಕ್ತದಿಂದಲೂ
ಕಠೋರ ಮೃತ್ಯುವಿಂದಲೂ
ಸ್ವಕೀಯ ಪ್ರಜೆಯನ್ನು
ಕೊಂಡುಕೊಂಡು,
ದಿವ್ಯ ಪ್ರೀತಿ,
ಶುದ್ಧ ನೀತಿ
ತಂದಿದ್ದಾನೆ;
ರಾಜನಾಗಿ ಆಳುತಾನೆ.

3. ಹಲ್ಲೆಲೂಯಾ ! ಕೊಂಡಾ
ಡಿರಿ !
ದಿವ್ಯಾತ್ಮ ಪುನರ್ಜನ್ಮದಿ
ನಮ್ಮಲ್ಲಿ ಬಂದಿದ್ದಾನೆ.
ನಮ್ಮೊಳ್ ವಿಶ್ವಾಸ ಹುಟ್ಟಿಸಿ,
ಕ್ರಿಸ್ತ್ಯೇಸುವಿನ ಐಕ್ಯದಿ
ಸಂತೃಪ್ತಿ ಕೊಡುತಾನೆ.
ಒಪ್ಪಿ, ತಪ್ಪಿ
ಸ್ತೋತ್ರವನ್ನ !

ಪರಮಾನ್ನ,
ದಿವ್ಯ ಪೋಷ
ಹೊಂದಿ ಪಡಿರಾತ್ಮತೋಷ!

4. ಹಲ್ಲೆಲೂಯಾ! ಕೊಂಡಾ
ಡುವ
ಪಿತಾಪುತ್ರಾತ್ಮ ದೇವರ
ತ್ರಿಯೇಕ ನಾಮವನ್ನು!
ದೂತಾದಿ ಸೈನ್ಯದೊಂದಿಗೆ
ಸದ್ಭಕ್ತಿಯಿಂದ ಆತಗೆ
ಸಂಗೀತ ಸ್ತುತಿಯನ್ನು
ಮಾಡ, ಹಾಡ
ಬನ್ನಿರೆಲ್ಲ!
ಸೃಷ್ಟಿಯೆಲ್ಲ
ಹೇಳಲಾಮೆನ್!
ದೇವರೆಮ್ಮ ಪ್ರಭು! ಆಮೆನ್.

೧೧೮

Gott der Vater wohn' uns bei.
M. T. 198.

1. ತಂದೆಯಾದ ದೇವರೆ,
ನಮ್ಮಲ್ಲಿ ವಾಸಮಾಡು!
ಪಾಪ ಮನ್ನಿಸೆಮಗೆ!
ಆತ್ಮಂಗಳಂ ಕಾಪಾಡು!
ಮುಕ್ತಿ ಕೊಡು, ತಂದೆಯೆ!
ಪಿಶಾಚನನ್ನು ಜೈಸಿ,
ಸದಾ ವಿಶ್ವಾಸವಾಗಿ
ನಿನ್ನಲ್ಲಿ ನೆಲೆಯಾಗಿ,
ಎಲ್ಲ ಸಭೆಯೊಂದಿಗೆ
ದಿವ್ಯಾಯುಧಂ ಕೊಳ್ಳೋಣ!
ಹೋರಾಟ ತೀರಿಸೋಣ!
ಕಿರೀಟ ಪಡೆಯೋಣ!
ಹಲ್ಲೆಲೂಯಾ! ನಿನ್ನಲೇ
ಸಂರಕ್ಷೆ ಸ್ಥಿರವಾದದೇ!

2. ಕರ್ತ ಯೇಸು ಕ್ರಿಸ್ತನೆ,
ನೀ ಸರಿಯಾದ ಹಾದಿ;
ಸತ್ಯ ದೇವವಾಕ್ಯವೆ,
ನೀನೆಮ್ಮ ಮರೆಯಾದಿ.
ನೀನು ಸತ್ತು, ನಮಗೆ
ಆ ಜೀವರಾಜ್ಯ ಕೊಂಡಿ.
ನಿನ್ನಲ್ಲಿ ಜೀವಕಾಂತಿ;
ನಿನ್ನಲ್ಲಿ ಸತ್ಯಶಾಂತಿ;
ನೀನು ದಿವದನ್ನವೆ;
ನಿನ್ನಲ್ಲಿ ನೀತಿಜ್ಞಾನ;
ನೀನೆಮ್ಮ ಯಜಮಾನ;
ನೀನೆಮ್ಮ ಸಮಾಧಾನ.
ಶುದ್ಧ ಕನ್ಯಾಪುತ್ರನೆ,
ಅನಂತ ಸ್ತೋತ್ರ ನಿನಗೆ!

3. ಪಿತಾಪುತ್ರರೊಂದಿಗೆ
ಸಮಾನವಾದ ಮಾನ
ಹೊಂದತಕ್ಕ ಆತ್ಮನೆ,
ತಾರೈ ವಿಶ್ವಾಸದಾನ!
ಚಿಂತಾಕ್ರಾಂತ ಮನಕೆ
ನೀ ನೀಡು ಕ್ಷೇಮವನ್ನು!

"ನನ್ನಪ್ಪ, ತಂದೆ, ಕೇಳು!"
ಎಂದನ್ನ ಬುದ್ಧಿ ಹೇಳು!
ಸತ್ಯವೃದ್ಧಿಕಾರ್ಯಕ್ಕೆ
ಸದಾ ಸಹಾಯ ಮಾಡು!
ಸದ್ಭಕ್ತರಂ ಕಾಪಾಡು!
ಸೈತಾನಗೆದುರಾಡು!
ಹಲ್ಲೆಲೂಯಾ! ಆತ್ಮನೆ,
ನಿವಾಸ ಮಾಡೆಮ್ಮೊಳಗೆ!

೧೨೦

Was freut mich noch, wenn du's nicht bist.—M. T. 194.

1. ಇನ್ನುಂಟೊ ತೃಪ್ತಿ ಆತ್ಮಕೆ
ನಿನ್ನೊಳಿರ್ದು, ಪ್ರಿಯ ತಂದೆಯೆ?
ನನ್ನುತ್ತಮಾತ್ಮತೋಷ!
ನಿನ್ನನ್ನು ಬಿಟ್ಟ ಸುಖವು,
ನೀ ಕೊಡದಂಥ ಬೆಳಕು
ಇದ್ದಲ್ಲಿ ಎಂಥ ಪೋಷ?
ಸತ್ಯ ನಿತ್ಯ
ಸಮಾಧಾನ,
ವಾಸಸ್ಥಾನ
ಪಾಪಗಾರ
ನಿನ್ನ ಬಿಟ್ಟು ಹೊಂದಲಾರ.

2. ಇನ್ನುಂಟೊ ತೃಪ್ತಿ ಆತ್ಮಕೆ
ನೀನಲ್ಲದೆ, ಕ್ರಿಸ್ತ್ಯೇಸುವೆ,
ಪ್ರಪಂಚಕಾಡಿನಲ್ಲಿ?
ನೀ ನನ್ನ ಬಿಟ್ಟುಬಿಟ್ಟರೆ,
ನಾ ದಿಕ್ಕು ಕಾಣದಿರುವೆ
ಭೂಪರಲೋಕದಲ್ಲಿ.
ಯೇಸು ಲೇಸು
ಕೃಪೆಯಾಗಿ
ಕೊಡಲಾಗಿ,
ಇಲ್ಲಿ ಏನು,
ಅಲ್ಲಿ ಏನು ಆಶಿಸ್ಯೇನು?

3. ಇನ್ನುಂಟೊ ತೃಪ್ತಿ ಆತ್ಮಕೆ
ನೀನಲ್ಲದೆ, ದೇವಾತ್ಮನೆ?
ನೀ ಶಾಂತಿಕರ ಮಿತ್ರ!
ನೀ ಜ್ಞಾನತೇಜದಿಂದಲೆ
ಪ್ರಕಾಶವೀಯದಿದ್ದರೆ,
ನಾನಾಗೆನ್ನೈ ಪವಿತ್ರ.
ವರ ಪರ
ಮಿತ್ರ, ನನ್ನ
ಆತ್ಮವನ್ನ
ಕೃಪೆಯಾಗಿ
ಕಾಯಿ ನಿತ್ಯಜೀವಕಾಗಿ!

4. ದೇವರಾಜ್ಯ

೧. ದೇವರಾಜ್ಯವೃದ್ಧಿಗಾಗಿ ಪ್ರಾರ್ಥನೆ

೧೨೧

Mel. Freu' dich sehr, o meine Seele.—M. T. 148.

1. ಕರ್ತ, ನೋಡು! ಭೂಮಿಯಲ್ಲಿ
ಎಷ್ಟೊ ಅಂಧಕಾರವು!
ಬೆಳ್ಕು ಗಾಢ ಕತ್ತಲಲ್ಲಿ
ಸ್ವಲ್ಪ ಮಾತ್ರ ಕಾಣ್ಬುದು.
ಎಷ್ಟೊ ಜನ ಭ್ರಮಿಸಿ,
ಮೂಕ ಬೊಂಬೆಗೆರಗಿ,
ದಿಕ್ಕು ತಪ್ಪಿ ಹೋಗಿದ್ದಾರೆ,
ವ್ಯರ್ಥ ಕಷ್ಟ ಪಡುತಾರೆ!

2. ಎಂದುಹೋಗೊದಂಧಕಾರ?
ಎಂದು ಸೂರ್ಯನೇರ್ವನು?
ಎಂದು ಶುಭಸಮಾಚಾರ
ಬೆಳಕನ್ನು ಹೊಯ್ವುದು?
ಸತ್ಯಜ್ಞಾನ ಮರೆತು
ಮೂರ್ಖರಾದ ಜನರು
ನಿನಗೆಂದು ವಂದಿಸ್ಯಾರು?
ಕ್ಷೇಮವೆಂದು ಪಡೆದಾರು?

3. ಏಳು! ಘೋರ ಪಾಪಭಾರ
ನೀಗು, ಕೃಪೆಯರಸೇ!
ರಾತ್ರಿ ಪೂರ್ಣ ಪರಿಹಾರ
ಮಾಡು, ನೀತಿಸೂರ್ಯನೇ!
ನಿನ್ನ ವಾಕ್ಯ ಬೇಗನೇ
ಹಬ್ಬಿಸೆಮ್ಮ ಕರ್ತನೇ!
ಹೆಣ ಜೀವಿಯಾಗ ಮಾಡು!
ಸುಡು ಪಾಪವೆಂಬ ಕಾಡು!

4. ಕರ್ತ, ನೀಡು ಸಿದ್ಧಿಯನ್ನು
ನಿನ್ನ ಸೇವಾಜನಕೆ!
ವರ್ಧಿಸೊಳ್ಳೆ ಫಲವನ್ನು
ಸತ್ಯದಿಂಪು ನುಡಿಗೆ!
ಪರಿಪೂರ್ಣ ಜಯಕೆ
ಮಾರ್ಗ ಮಾಡು, ಕರ್ತನೆ!
ನಿನ್ನ ತ್ರಾಣ ಕುಂದೊದಿಲ್ಲ;
ನಿನ್ನ ರಾಜ್ಯಕಂತ್ಯವಿಲ್ಲ!

೧೨೨

Wach auf, du Geist der ersten Zeugen.—M. T. 96.

1. ಚೀಯೋನು ಕೋಟೆಗೋಡೆಯಲ್ಲಿ
ನಿಂತ್ಹಗಲಿರ್ಳು ಕೂಗುತ್ತಿದ್ದಂಥ
ಆರಂಭಸಾಕ್ಷಿಗಾರರಲ್ಲಿ

ಪ್ರವರ್ತಿಸಿದ ಕೃಪಾದಾಯಕ
ದಿವ್ಯಾತ್ಮ, ಏಳು! ದೇವತೂ
ರ್ಯವೆ
ಗಟ್ಟ್ಯಾಗಿ ಊದು ಜಗದೊಳಗೆ!

2. ನಿನ್ನಗ್ನಿ ಸರ್ವ ಲೋಕದಲ್ಲಿ
ಪ್ರಜ್ವಾಲೆಯಾದರೆಷ್ಟೊ ಒಳ್ಳೆ
ದು!
ಸಂರಕ್ಷೆ ಎಲ್ಲ ಜನರಲ್ಲಿ
ಪ್ರಖ್ಯಾತಿಯಾದರೆಂಥಸೌಖ್ಯವು!
ಐ ಬೆಳೆಯಜಮಾನ, ದೃಷ್ಟಿಸು!
ಪೈರೆಷ್ಟೊ! ಎಷ್ಟೊ ಕೊಂಚ
ಆಳ್ಗಳು!

3. ಸುವಾರ್ತೆ ಸಾರೊ ಶೂರ
ರನ್ನು
ಗುಂಪಾಗಿ, ಕರ್ತ, ಇನ್ನುಕಳುಹು!
ಈಯ್ ಶೀಘ್ರವಾಗಿ ಜಯವನ್ನು!
ಸೈತಾನರಾಜ್ಯ ಬೇಗ ಭಂಗಿಸು!
ಭೂಚಕ್ರದಲ್ಲಿ ಕಟ್ಟಿ ರಾಜ್ಯವ
ನಿನ್ ಹೆಸರೆತ್ತು ಬೇಗ, ಒಡೆಯ!

4. ಸುವಾರ್ತಾಸೂರ್ಯತೇಜ
ಮೂಡಿ,
ದುಷ್ಟಾಂಧಸೇನೆಯೆಲ್ಲ ಜೈಸಲಿ!
ಗುಂಪಾಗಿ ಜನರೆಲ್ಲ ಕೂಡಿ,
ನಿನ್ನಡಿಗಡ್ಡ ಬೀಳ ಬರಲಿ!
ಸಿದ್ದೇಲಿ ಬಿದ್ದ ಭ್ರಾಮು ಸಂತತಿ
ಸ್ವರಾಜ್ಯತೂರ್ಯ ಕೇಳಿ ಏಳಲಿ!

5. ನಿನ್ನಗ್ನಿಯಿಂದ ನಮ್ಮ ಪ್ರೀತಿ
ಹೊತ್ತಿರ್ವ ಚಿಕ್ಕ ಅಗ್ನಿಕಣವೇ.
ನಿಂಗಿರ್ವ ಮಮಕಾರರೀತಿ
ಅತುಲ್ಯ! ನೀನು, ದೇವ, ಪ್ರೀತಿ
ಯೇ!
ನಮ್ಮಲ್ಲಿ ಬೇಡೊ ಪ್ರೀತಿ ಸಣ್ಣದು;
ಅನಂತ ನಿನ್ನ ಪ್ರೀತಿಕಾರ್ಯವು!

6. ಪೂರೈಸುನಿನ್ನಕಾರ್ಯವನ್ನು,
ಭೂಲೋಕನ್ಯಾಯಾಧೀಶ,
ರಕ್ಷಕ!
ಮನುಷ್ಯಜಾತಿಬಾಧೆಯನ್ನು
ನಿವಾರಿಸ್ಯೆ, ವಿಶುದ್ಧ ಒಡೆಯ!
ವಿಶ್ವಾಸ ಬೇಡೊದನ್ನು ಬಿಡದು;
ಹೆಚ್ಚೀಯುವಿ ಬೇಡಿದ್ದಕ್ಕಿಂತಲು.

೧೨೩

Die Sach' ist dein, Herr Jesu Christ.—M. T. 179.

1. ಈ ಕಾರ್ಯ, ಕ್ರಿಸ್ತ, ನಿನ್ನದು,
ನೀ ಕೊಟ್ಟೆ ನಮಗೆ!
ವಿನಾಶ ಬಾರದೆಂದಿಗು
ನೀನಾಳ್ವ ಕಾರ್ಯಕೆ!
ನಿಂಗಿಪ್ಪ ಪ್ರತಿ ಸೇವಕ

ಭೂವಿಾಲಿ ಬಿದ್ದ ಗೋದಿಯ
ಹಾಗಿದ್ದು, ಸತ್ತು, ಫಲವ
ತಂದೀವನಿದು ಸೇವಕ!
ಬಾ, ಮರಣ!
ಬಾ, ಇಷ್ಟ ಮರಣ!

2. ನೀ ಹೋದ ಶ್ರಮಮಾರ್ಗದಿ,
ಸಮ್ರಾಜ, ನಮ್ಮನು
ವಿಶ್ರಾಂತಿವಾಸಕೊಯ್ಯುತಿ.
ನಿನ್ನಂತೆ ಶಿಷ್ಯರು!
ಹಾ, ಶ್ರಮ ಜಯ ಎರಡು
ನಮ್ಮೆಲ್ಲರಿಂಗೆ ಪಾಲಿಸು!
ನಿನ್ ಕಾರ್ಯದೊಡ ನಮ್ಮನು
ನೀನಿರ್ವ ಓಜಕೇರಿಸು,
ನಿನ್ನೋಜಕೆ,
ನಿನ್ನೋಜಸ್ಥಾನಕ್ಕೆ!

3. ನೀ ಗೋದಿಬೀಜದಂತೆಯೆ
ಭೂಗರ್ಭಕಿಳಿದು,
ಭೂರಾಜನಾಗಿ ಏರಿದೆ;
ಭೂರಾಜ್ಯ ಪಾಲಿಸು!
ಕೊಡಯ್ಯ ಹೆಚ್ಚು ಆಳ್ಗಳ!
ನಿನ್ನತಿ ಶುಭನಾಮವ
ಒಂದೊಂದು ದೇಶದಲ್ಲಿಯು
ಸಂಕೀರ್ತಿಯನ್ನು ಪಡಿಸು!
ನಮ್ಮಿಂದಲು
ಸಂಕೀರ್ತಿ ಪಡಿಸು!

೧೨೪

Der du in Todesnächten.
M. T. 132.

1. ಕಠೋರ ಶ್ರಮ ತಾಳಿ,
ನರಾರಿಯೊಡನೆ
ಹೋರಾಡಿ, ಜಯಶಾಲಿ
ಉತ್ಸಾಹದೊಂದಿಗೆ
ಮಹೋಚ್ಚ ಸ್ಥಾನದಲ್ಲಿ
ಸೇರಿರ್ವ ರಕ್ಷಕಾ!
ನೀ ದಯದಿಂದೆಮ್ಮಲ್ಲಿ
ಬಂದಿರು ಸರ್ವದಾ!

2. ಭೂಸ್ವರ್ಗಲೋಕದಲ್ಲಿ
ಸರ್ವಾಧಿಕಾರವಂ
ನೀ ಹೊಂದಿ, ಪ್ರಭೆಯಲ್ಲಿ
ವಿಜಯರಾಜ್ಯವಂ
ನೀ ಬೇಗ ಬರ ಮಾಡು,
ರಾಜಾಧಿರಾಜನೇ!
ನಿನ್ನಾಳ್ಗಳಂ ಕಾಪಾಡು,
ಸಂಸ್ತುತ್ಯ ಪ್ರಭುವೇ!

೧೨೫

Ps. 67.
Es woll' uns Gott genädig sein.
M. T. 174.

1. ದೇವಾ, ನೀನೆಮಗೊಲಿದು
ಕೊಡಾಶೀರ್ವಾದವನ್ನು!
ಪ್ರಸನ್ನಮುಖನಾಗಿದ್ದು
ಕಟಾಕ್ಷಿಸೈ ನಮ್ಮನ್ನು!

ಭೂಚಕ್ರ ನಿನ್ನ ಮಾರ್ಗವಂ,
ಜನಾಂಗಗಳ ದೇಶ
ಹೊಸ್ತಾದ ನಿನ್ನ ರಕ್ಷಣಂ
ಕಣ್ಣಾರೆ ನೋಡಲೀಶ!
ಆಶ್ಚರ್ಯ ನಿನ್ನ ನ್ಯಾಯ!

2. ಯೆಹೋವಾ, ನಿಂಗೆ ಸ್ತೋತ್ರವು!
ಕೊಂಡಾಡು, ಪ್ರಜೆಯೆಲ್ಲ!
ಸಂತೋಷದಿಂದ ಭಜಿಸು
ಇಂಪಾಗಿ, ಲೋಕವೆಲ್ಲ!
ನೀ ನ್ಯಾಯತೀರ್ಪು ಮಾಡುತಿ
ಸಮಸ್ತ ರಾಜ್ಯದಲ್ಲಿ;
ಪರಾಂಬರಿಸಿ ಆಳುತಿ
ಸಮಸ್ತ ನರರಲ್ಲಿ,
ದಯಾಪ್ರಸಿದ್ಧ ರಾಜ!

3. ಕೊಂಡಾಡು, ಪ್ರಜೆ, ಈಶನ!
ಕೊಂಡಾಡು, ಪ್ರಜೆಯೆಲ್ಲ!
ದಿವ್ಯಾನುಗ್ರಹ ಭೂಮಿಯು
ಸಫಲ ಮಾಡುತ್ತಲ್ಲ!
ಯೆಹೋವಾ, ನಮ್ಮ ದೇವರೇ,
ನಿನ್ನಾಶೀರ್ವಾದ ಕೊಡು!
ಭೂಮಂಡಲದ ಪ್ರಜೆಯೇ,
ಆತಂಗೆ ಭಯ ಪಡು!
ತಥಾಸ್ತು! ಆಮೆನ್! ಆಮೆನ್!

೧೨೬

Frühling, der die Welt verklärt.
M. T. 278.

1. ಲೋಕ ಮೈಮೆ ಪಡಿಸೋ
ಚೈತ್ರ ಬರೋದೆಂದು?
ಇಷ್ಟು ಕಾಲ ಕಾಡಿಸೋ
ಚಳಿ ತೀರೊದೆಂದು?
ಹಾಳು ಬಿದ್ದ ಹೊಲದಿ
ಸಾರವನ್ನು ಹಾಸ
ಶಾಂತಿಯನ್ನು ಪಾಲಿಸಿ
ಬಾ, ಬಾ, ಚೈತ್ರಮಾಸ!

2. ಜಲದಿಂದ ನೈದಿಲೆ
ಅರಳುವ ರೀತಿ,
ಲೋಕದಲ್ಲಿ ನಂಬಿಕೆ,
ಸತ್ಯ, ತಾಳ್ಮೆ, ಪ್ರೀತಿ,
ಈ ಪ್ರಶಸ್ತ ಹೂಗಳು
ಅರ್ಳುವಂತೆ ಧಾರೆ
ಸುರಿಸೆಂತ ಭಕ್ತರು
ದಾರಿ ನೋಡುತ್ತಾರೆ.

3. ಇನ್ನು ಬರಿಯಡವಿ
ತೋಟವಾದ ಮೇಲೆ
ಪೃಥ್ವಿ ಪುಷ್ಪ ಫಲದಿ
ತುಂಬುತಿರ್ವ ವೇಳೆ
ಸ್ತೋತ್ರಗಾನ ಏಳ್ವದು
ಪ್ರತಿ ಗೃಹದಿಂದ;
ದೇವರೊಲಿಯುವನು
ಸ್ವರ್ಗಲೋಕದಿಂದ.

4. ಸರ್ವಲೋಕ, ಕರ್ತನೇ,
ಮೂರ್ತಿಸೇವೆ ಬಿಟ್ಟು,
ಇನ್ನು ನಿನ್ನ ಮೇಲೆಯೇ
ಸದ್ವಿಶ್ವಾಸವಿಟ್ಟು,
ನಿನ್ನ ಪೀಠಕೆರಗಿ,
ನಿನ್ನ ಪಾದಸೇವೆ
ಮಾಡೊ ಕಾಲ ಬರಲಿ
ಎಂತ ಕಾಯುತ್ತೇವೆ.

---

೨. ದೇವರಾಜ್ಯಪ್ರಸರಣಪ್ರೋತ್ಸಾಹ

೧೨೭

Luke 18, 35–37.
What means this eager, anxious throng?—M. T. 250.

1. ಈ ಹೊತ್ತಿಗಿಲ್ಲಿ ಯಾತಕೆ
ಮಹಾ ಸಮೂಹ ಕೂಡಿದೆ?
ಓಡ್ಯಾಟಕೇನು ಕಾರಣಾ?
ಬಂದಾತ ಯಾರು, ಬಲ್ಲಿರಾ?
|: ಒಬ್ಬೊಬ್ಬರಿಂತು ಹೇಳ್ವರು—
ನಜರೇತೂರಿನ ಯೇಸುವು! :|

2. ಈ ಯೇಸು ಯಾರು? ಬಣ್ಣಿಸು!
ಯಾಕೀತಗಾಗೀ ಘೋಷವು?
ಪ್ರಪಂಚವೆಲ್ಲ ಕೇಳುತೆ—
ಈ ಭಾಗ್ಯದಾತ ಯಾರೆಲೆ?
|: ಒಬ್ಬೊಬ್ಬರಿಂತು ಹೇಳ್ವರು—
ನಜರೇತೂರಿನ ಯೇಸುವು! :|

3. ನಾವಾತನನ್ನು ಬಲ್ಲೆವು;
ಉದ್ಧಾರ ಮಾಡ ಬಂದನು;
ದೇಹಾತ್ಮಕ್ಕೀತ ವೈದ್ಯನು,
ಸದಾಸಂಜೀವದಾತನು.
|: ಒಬ್ಬೊಬ್ಬರಿಂತು ಹೇಳ್ವರು—
ನಜರೇತೂರಿನ ಯೇಸುವು! :|

4. ಈ ಸೀಮೆ, ಗ್ರಾಮ, ಗೃಹದಿ
ಒಬ್ಬೊಬ್ಬರಂ ಸಂದರ್ಶಿಸಿ—
ಸಂಜೀವ ಬೇಕೊ ನಿನಗು?
ಎಂತೆಂಬ ಸ್ವಾಮಿ ಯಾವನು?
|: ಒಬ್ಬೊಬ್ಬರಿಂತು ಹೇಳ್ವರು—
ನಜರೇತೂರಿನ ಯೇಸುವು! :|

5. ಸದ್ಭಕ್ತರೆಲ್ಲ, ಬನ್ನಿರಿ!
ನೀವೇನು ಸಾಕ್ಷಿ ಹೇಳ್ವಿರಿ?
ವಿಮುಕ್ತಿ, ತೃಪ್ತಿ, ಶಾಂತಿಯು
ಯಾರಿಂದ ನಿಮಗಾಯಿತು?
|: ಒಬ್ಬೊಬ್ಬರಿಂತು ಹೇಳ್ವರು—
ನಜರೇತೂರಿನ ಯೇಸುವು! :|

6. ದುರ್ಗತರೆಲ್ಲ, ಹೇಳಿರಿ—
ಅನಂತ ತಾಪ ನರ್ಕದಿ

ಯಾಕಾಯ್ತು ನಿಮ್ಮ ಪ್ರಾಪ್ತಿಯು?
"ಸ್ವೀಕಾರ ಮಾಡದಿದ್ದೆವು;
|: ಉದ್ಧಾರಿ ಹಾದು ಬಿಟ್ಟನು
ನಜರೇತೂರಿನ ಯೇಸುವು!" :|

೧೨೮

Call them in, the poor, the wretched.—M. T. 232.

1. ಸರ್ವರನ್ನು ಕರಕೊಳ್ಳಿ!
ತಪ್ಪಿ ಹೋದ ಪಾಪಿಗೆ
ಪೂರ್ಣ ಪಾಪಪರಿಹಾರ
ಕ್ರಿಸ್ತನಿಂದ ಸಿಕ್ಕುತ್ತೆ.
ಕಾಮ, ಕ್ರೋಧ, ಲೋಭ, ಮೋಹ,
ಮತ್ಸರಾದಿ ಪಾಶದಿ
ಬದ್ಧರಾದ ಜನರನ್ನು
ಕರಕೊಂಡು ಬನ್ನಿರಿ.

2. ಸರ್ವರನ್ನು ಕರಕೊಳ್ಳಿ,
ಕುಲ ವರ್ಣ ನೋಡದೆ!
ಬಾ, ಗರೀಬ, ಬಾ, ಕುಬೇರ
ಎಂಬ ಕೂಗು ಸರಿಯೆ.
ಫರಿಸಾಯ, ಸುಂಕದವ,
ಸರ್ವ ವಿಧ ಪಾತಕಿ,
ಎಲ್ಲರನ್ನು ಸಮವಾಗಿ
ಕರಕೊಂಡು ಬನ್ನಿರಿ!

3. ಸರ್ವರನ್ನು ಕರಕೊಳ್ಳಿ,
ಮಕ್ಕಳನ್ನು ಮೊದಲೇ!
ತಡ ಮಾಡ ಬೇಡಿ, ತನ್ನಿ
ಬಾಲರನ್ನು ಸ್ವಾಮಿಗೆ,
ತೊಡಕಾಗದಂತೆ ನೋಡಿ
ಪರಲೋಕಮಾರ್ಗದಿ!
ಯೇಸುಪಾದಕೆಲ್ಲರನ್ನು
ಕರಕೊಂಡು ಬನ್ನಿರಿ!

4. ಏಳು ದೆವ್ವ ಹಿಡಿದಷ್ಟು
ಕೆಟ್ಟು ಹೋದ ಹೆಂಗಸು,
ಸೀಮೋನ್, ಲೇವಿ, ಸೌಲರಷ್ಟು
ಪಾಪ ಮಾಡಿದವರು
ಯೇಸುಸ್ವಾಮೀ ಕರೆ ಕೇಳಿ
ಧೈರ್ಯಗೊಂಡು ಬರಲಿ!
ನಾಚಿಕೊಳ್ಳೊ ನೀಚರನ್ನು
ಕರಕೊಂಡು ಬನ್ನಿರಿ!

೧೨೯

Mel. Es klingt ein hoher Klang.
M. T. 118.

1. ತುತೂರಿ ಊದಿರಿ
ಗಟ್ಟ್ಯಾದ ಶಬ್ದದಿ!
ಸುವಾರ್ತೆ ಸಾರಿರಿ
ಮಹಾ ಸಂತೋಷದಿ!
ಚೀಯೋನಿನಲ್ಲಿ ಆಳುತಾನೆ
ಯೆಹೋವ ವಿಶ್ವಪಾಲ ತಾನೆ.
ಚೀಯೋನೇ, ಹತ್ತಿ ಗೋಪುರ
ಪ್ರಸಂಗಿಸು ಸುವಾರ್ತೆಯ!

2. ವಿಜಯ ಕೀರ್ತಿಯು
ರಾಜಾಧಿರಾಜಗೆ!
ನಿರ್ಭೀತಿ ಧೈರ್ಯವು
ಸ್ವಕೀಯ ಪ್ರಜೆಗೆ!
ತ್ರಿಲೋಕಪಾಲಕಾಧಿಕಾರ
ಯಾರೊಬ್ಬ ಮುರಿದ್ಹಾಕಲಾರ.
ಈ ರಾಜಸೇವೆ ಮಾಡೊದು
ಕ್ರೈಸ್ತರ್ಗೆ ಶ್ರೇಷ್ಠ ಬಿರುದು.

3. ಭೂಲೋಕದಲ್ಲೆಲ್ಲ
ಸುವಾರ್ತೆ ಹಬ್ಬಲಿ!
ಕ್ರಿಸ್ತ್ಯೇಸುಶಿಷ್ಯರು
ಬಾಯ್ದೆರೆದ್ಹೇಳಲಿ!
ಉದಯದಿಂದಾರಂಭವಾಗಿ
ಸಂಧ್ಯಾ ಪರ್ಯಂತ ಗಟ್ಟಿಯಾಗಿ
ಸುವಾರ್ತಾಘೋಷ ಕೇಳಲಿ!
ಕೊಂಡಾಡೊ ಶಬ್ದ ಏಳಲಿ!

4. ವಿಧೇಯ ಸೈನ್ಯವು
ಬೇಕೆಮ್ಮ ರಾಜಗೆ.
ಎಲ್ಲುಂಟು ಧೈರ್ಯವು
ಈ ದೊಡ್ಡ ಕಾರ್ಯಕೆ?
ನಾವೆಲ್ಲರಾತಗೇ ಪ್ರಮಾಣ
ಮಾಡೋಣ! ನಮ್ಮ ಎಲ್ಲ ತ್ರಾಣ
ಮನೋವಾಕ್ಕಾಯವೆಲ್ಲವ
ಈ ಸೇವೆಗೊಪ್ಪಿಸೀಯುವ!

5. ನಿನ್ನಾರ್ಯ ಸೇವೆಗೆ
ಅಯೋಗ್ಯರಾದೆವು;
ಕೃಪಾಳು ಕರ್ತನೆ,
ಕಟಾಕ್ಷಿಸೆಮ್ಮನ್ನು!
ಈ ನಿನ್ನ ಶ್ರೇಷ್ಠ ಕಾರ್ಯಕ್ಕಾಗಿ
ಬೇಕಾದ ವರ ರಾಶಿಯಾಗಿ
ನೀನೆಮ್ಮ ಮೇಲೆ ಸುರಿಸು!
ನಿನ್ನಾತ್ಮ ದಯಪಾಲಿಸು!

೧೩೦

From Greenland's icy mountains
M. T. 259.

1. ಏಳೇಳು, ಕ್ರೈಸ್ತಶೂರ!
ರಾಜಾಜ್ಞೆ ವಹಿಸು!
ಸಮೀಪ ಮತ್ತು ದೂರ
ಕಂಗಾಲ ಜನರು
ಆ ಮಕೆದೋನ್ಯನಂತೆ
ಇದ್ದಾರೆ ಕೂಗುತಾ —
ಸದ್ಗತಿಯಾಗುವಂತೆ
ಸಹಾಯ ಮಾಡ ಬಾ!

2. ದಯಾಳು ವಿಶ್ವಪಿತ
ಒಂದೊಂದು ನಾಡಿಗೆ
ತನ್ನಾಶೀರ್ವಾದವಿತ್ತ
ನಾನಾ ಪ್ರಕಾರವೆ;
ಉದ್ಭಿಜ್ಜ, ಪ್ರಾಣಿಕೋಟಿ
ಇತ್ಯಾದಿ ಒಳ್ಳೇವು;
ಮನುಷ್ಯ ಮಾತ್ರ ಖೋಡಿ,
ನಿಷ್ಫಲವೃಕ್ಷವು.

3. ಜಾಪಾನ, ಚೀನ ಜಾತಿ,
ಎಸ್ಕೀಮೊ, ಮಾವೊರಿ,
ಆ ನರಭಕ್ಷಕಾದಿ
ದ್ವೀಪಾಂತ್ರ ಸಂತತಿ,
ಸಮಸ್ತರಲೆದಾಡಿ
ಸನ್ಮಾರ್ಗ ತೊರೆದು,
ಕುಮೂರ್ತಿಯಂ ಕೊಂಡಾಡಿ,
ಗೋಳಾಡಿ ಸಾಯ್ವರು.

4. ನಾವಿನ್ನು ಸುಸ್ತಿಯಿಂದ
ಹಿಂದಿರಬಾರದು.
ಕ್ರಿಸ್ತ್ಯೇಸುಕೃಪೆಯಿಂದ
ವಿಮುಕ್ತಿ ಕಂಡೆವು.
ಏಳೇಳು, ಕ್ರೈಸ್ತ, ಏಳು,
ರಾಜಾಜ್ಞೆ ವಹಿಸು!
ಸುವಾರ್ತೆ ಸಾರಿ ಹೇಳು
ಸಮಸ್ತ ಸೃಷ್ಟಿಗು!

೧೩೧

Mel. Ho, my comrades! See the signal. M. T. 296.

1. ಕ್ರೈಸ್ತರಾದ ನಮ್ಮ ಮೇಲೆ
ಬಿದ್ದ ಭಾರವು
ದೊಡ್ಡದೆಂದು ಧ್ಯಾನ ಮಾಡು
ರಾತ್ರಿ ಹಗಲು!
ಭ್ರಾತ್ರರಾದ ಅನ್ಯರನ್ನ
ನಾವು ಪ್ರೀತಿಸಿ
ರಕ್ಷಕನ ಹತ್ರ ತರ
ಹಂಗಿನವರು.

2. ನಿನ್ನ ತಮ್ಮ ಎಲ್ಲಿದ್ದಾನೆ?
ಎಂದು ದೇವರು
ಪ್ರಶ್ನೆ ಕೇಳುವಲ್ಲಿ, ನಾವು
ಏನು ಹೇಳೇವು?
ಭ್ರಾತ್ರರಾದ ಅನ್ಯರನ್ನ . . .

3. ನೀನು ಇರುವಂಥ ಪ್ರತಿ
ಸ್ಥಳದಲ್ಲಿಯು
ಯೇಸುವಿನ ಮಾತಿನಂತೆ
ನಿತ್ಯ ವರ್ತಿಸು!
ಭ್ರಾತ್ರರಾದ ಅನ್ಯರನ್ನ . . .

4. ಸಾವಿರಾರು ಮಂದಿ ನಿತ್ಯ
ಸಾಯುತ್ತಿರಲು,
ಎಚ್ಚರಿಕೆ ಮಾತು ಹೇಳಿ
ಪ್ರಾಣ ಕಾಪಾಡು!
ಭ್ರಾತ್ರರಾದ ಅನ್ಯರನ್ನ . . .

5. ಪಾಪಿಯನ್ನು ರಕ್ಷಿಸುವ
ಪ್ರತಿಯೊಬ್ಬನು
ಜ್ಯೋತಿಯಂತೆ ಶೋಭಿಸುತ
ಮಾನ ಹೊಂದ್ವನು.
ಭ್ರಾತ್ರರಾದ ಅನ್ಯರನ್ನ . . .

೧೩೨

Brüder, streuet guten Samen.
M. T. 83.

1. ಬಿತ್ತೋ ಕಾಲವಿರಲಾಗಿ
ಒಳ್ಳೆ ಬೀಜ ಬಿತ್ತಿರಿ!
ಗೇಯುತಿರ್ರಿ ಧೀರರಾಗಿ
ಯೇಸುನಾಮಧೇಯದಿ!
ಕ್ರಿಸ್ತನಾಥ ಮತ್ತು ಬರುವಲ್ಲಿ,
ಬಿತ್ತಿದಾತ ಕೊಯ್ವ ವೃದ್ಧಿಯಲ್ಲಿ.

2. ಸದ್ಯ, ಕಷ್ಟಕಾಲದಲ್ಲಿ
ಮುಖ್ಯ ಕಾರ್ಯ ತಾಳ್ಮೆಯೇ.
ಆಳು ಧಸಿಸೇವೆಯಲ್ಲಿ
ದಣುಕೊಳ್ಳಬಾರದೇ?
ಇಲ್ಲಿ ತಾಳಿದಷ್ಟು ಶ್ರಮಾಯಾಸ,
ಅಷ್ಟುಕೊಯ್ಲಿನಲ್ಲಿಯೂವಿಲಾಸ.

೧೩೩

Mel. Freiheit, die ich meine.
M. T. 115.

1. ಶುಭವಾರ್ತಾ ಘೋಷ
ಎಲ್ಲ ಲೋಕಕು
ಹಬ್ಬಿಸೋ ಸಂತೋಷ
ಎಷ್ಟೊ ದೊಡ್ಡದು!
ದುಷ್ಟ ರಾಜಬಲ
ಮುರಿಧಾಕುವ!
|: ಕ್ರಿಸ್ತಗಿಳೆಯೆಲ್ಲ
ವಶ ಮಾಡುವ! :|

2. ಅತಿ ಶ್ರೇಷ್ಠ ಪ್ರೀತಿ
ಸ್ತೋತ್ರ ಮಾಡುತಾ,
ಪರಿಶುದ್ಧ ನೀತಿ
ಸಾರಿ ಹೇಳುತಾ,
ಎಲ್ಲ ದಿಕ್ಕಿಗೋಗಿ
ಸರ್ವಜನರ
|: ದೇವರಾಜ್ಯಕ್ಕಾಗಿ
ಜಗ್ಗ ನೋಡುವ! :|

3. ನಮಗೆಷ್ಟೊ ಕಷ್ಟ,
ಹಿಂಸೆ ಬಂದರೂ
ಯೇಸುಸೇವೆ ನಷ್ಟ
ಆಗದೆಂದಿಗೂ.
ಹೊರ ಕ್ರೂಜೆಯನ್ನು
ಮಾನವಲ್ಲವೋ?
|: ನಮ್ಮ ಸೇವೆಯನ್ನು,
ಕರ್ತ, ಈಸಿಕೋ! :|

4. ಯಾವನನ್ನು ನಾನು
ಕಳುಹಿಸಲಿ?
ಯಾವನು ಹೋದಾನು?
ಎಂದು ಕೇಳುತ್ತಿ.
ಕರ್ತಾ, ನಾವಿದ್ದೇವೆ;
ಕಳುಹೆಮ್ಮನ್ನು!
|: ನಿನ್ನ ಯುದ್ಧಸೇವೆ
ನಮಗಿಷ್ಟವು. :|

5. ಯಾವನು ನಿನ್ನನ್ನು
ಅರಿತಿದ್ದಾನೋ,
ಅವ ತಿಳಿದ್ದನ್ನು
ಹೇಳದಿರ್ವನೋ?
ಪಾಪಪರಿಹಾರ
ಹೊಂದಿದವನು
|: ಶುಭಸಮಾಚಾರ
ಸಾರದಿರನು ! :|

6. ಕರ್ತಾ, ನೀನೆಮ್ಮನ್ನು
ಸಿದ್ಧ ಪಡಿಸು !
ಎಲ್ಲ ದೋಷವನ್ನು
ಪರಿಹರಿಸು !
ನಿನ್ನ ಆತ್ಮಸ್ನಾನ
ಅನುಗ್ರಹಿಸು !
|: ಸೇವೆಗೊಳ್ಳೇ ದಾನ
ದಯಪಾಲಿಸು ! :|

7. ತನುಮನಧನ
ಸೇವೆಗೀಯುವ
ಒಳ್ಳೇ ಆಳು ಜನ
ದೊಡ್ಡ ಸಂಖ್ಯೆಯ
ಕಳುಹಿಸಿಕೊಡು
ನಿನ್ನ ಪೈರಿಗೆ !
|: ಅವರಲ್ಲಿ ಇಡು
ನಿನ್ನ ಮಹಿಮೆ ! :|

8. ಭ್ರಷ್ಟಲೋಕವನ್ನು
ಕರ್ತ, ದೃಷ್ಟಿಸು !
ಶಾಂತಿರಾಜ್ಯವನ್ನು
ಬಂದು ಸ್ಥಾಪಿಸು !
ನರಮನಸ್ಸನ್ನು
ತಿರುಗಿಸಯ್ಯಾ !
|: ಸೇರಿಸೆಲ್ಲರನ್ನು,
ರಕ್ಷಿಸೊಡೆಯಾ ! :|

---

೩. ದೇವರಾಜ್ಯಕ್ಕೆ ಸೇರಬೇಕೆಂಬ ಆಮಂತ್ರಣ

೧೩೪

Mel. Gott sei Dank in aller Welt.
M. T. 10.

1. ದೇವಸನ್ನಿಧಾನಕೆ
ಸೇರಿರೆಲ್ಲಾ ಜನರೆ !
ಆತ್ಮಕಿಂಪು ಶಾಂತಿಯ
ಆತನಿಂದ ಬೇಡುವ !

2. ಆತನಡಿಯೆಡೆಗೆ
ನಾವು ಸೇರಿ ಬಂದರೆ,
ಆತನೆಮ್ಮ ಹತ್ತಿರ
ಬಂದು ವಾಸ ಮಾಡುವ.

3. ಆತ ಕೊಟ್ಟ ದಾನಕೆ
ತಕ್ಕದೆಮ್ಮ ಸ್ತೋತ್ರವೆ !

ನಮ್ಮ ಹೃದಯಂಗಳ
ಆತಗಿತ್ತು ಬಿಡುವ!

4. ಧರ್ಮ, ತೀರ್ಥ, ಜಾತ್ರೆಯು
ಏನೂ ಫಲ ಕೊಡವು;
ಯೇಸು ಕ್ರಿಸ್ತನಿಂದಲೆ
ಮೋಕ್ಷ ಪ್ರಾಪ್ತಿಸುತ್ತದೆ.

5. ಮೂರ್ತಿವಿಗ್ರಹಂಗಳು
ನಮಗೇನೂ ಕೊಡವು;
ಜೀವವುಳ್ಳ ದೇವರೇ,
ನಿನ್ನ ಸೇವೆ ಸುಖವೇ!

6. ದೇವಪುತ್ರ ಯೇಸುವು
ನಮ್ಮ ಒಂದೆ ಗತಿಯು.
ಸ್ವಾಮಿಾ, ನಿನ್ನ ಸೇವೆಗೆ
ತ್ರಾಣ ಪಾಲಿಸೆಮಗೆ!

೧೩೫

Mel. Himmelan, nur himmelan.
M. T. 123.

1. ಪ್ರೀತಿ ಮಾಡಿ ಲೋಕವ,
ದೇವರದಕೆ
ತನ್ನ ಏಕ ಪುತ್ರನ
ಕೊಟ್ಟ ರಕ್ಷೆಗೆ.
ಈ ಪುತ್ರನ
ಪ್ರತಿಯೊಬ್ಬ ನಂಬಲು,
ನಶಿಸದೆ ಹೊಂದೊನು
ಸಂಜೀವನ.

2. ಹೃದಕೆ ನೀ ತಂದುಕೋ
ದೇವಪ್ರೀತಿಯ!
ನಿನಗಾಗುತವಿಗೋ
ದೊಡ್ಡ ಹರುಷ.
ಈ ಪ್ರೀತಿಯು
ಲೋಕತ್ರಯದೊಳಗೂ
ದೂತನರರಲ್ಲಿಯೂ
ಈಡಿಲ್ಲದು.

3. ಇಂಥ ಪ್ರೀತಿ ಜೈಸಲಿ
ನನ್ನ ಹೃದಯ!
ವಶ ಮಾಡಿಕೊಳ್ಳಲಿ
ಸರ್ವ ಲೋಕವ!
ಈ ವಾರ್ತೆಯು
ಮೃತ್ಯುವನ್ನು ಜಯಿಸಿ,
ಶೀಘ್ರವಾಗಿ ಹಬ್ಬಲಿ
ಎಲ್ಲೆಲ್ಲಿಯು!

೧೩೬

Mel. Ach bleib' mit deiner Gnade.
M. T. 6.

1. ದೇವಾ, ನಿಂಗಿಷ್ಟ ಪ್ರೀತಿ
ಭೂಮಿಾಲಿ ಕಾಣದು;
ನೀ ಮೆಚ್ಚುವಂಥ ನೀತಿ
ಯಾರಲ್ಲೂ ಸಿಕ್ಕದು.

2. ಕಾಮಾದಿ ಕ್ರೋಧ, ಲೋಭ
ಸರ್ವರ ರೋಗವು;

ಮಾತ್ಸರ್ಯ, ಮದ, ಮೋಹ
ಈ ಲೋಕ ತುಂಬಿತು.

3. ಅಯೋಗ್ಯ ನರಧರ್ಮ
ಕಾರ್ಯಕ್ಕೆ ಬಾರದು;
ಅಸಹ್ಯ ನರಕರ್ಮ
ಬೆನ್ನನ್ನು ಬಿಡದು.

4. ಭೂತೂಕ ಮಿಾರೋ ಪುಣ್ಯ
ಭೂಲೋಕ ತಾರದು;
ಮನುಷ್ಯಯತ್ನ ಶೂನ್ಯ,
ಲೆಕ್ಕಕ್ಕೆ ಬಾರದು.

5. ಪಾಪಾತ್ಮ, ನಿನ್ನ ಪಾಪ
ಎಷ್ಟೆಂತ ಬಲ್ಲೆಯಾ?
ಅಷ್ಟಕ್ಕೆ ಯೋಗ್ಯ ತಾಪ
ನೀನೊಮ್ಮೆ ಪಟ್ಟೆಯಾ?

6. ಶ್ರೀ ಯೇಸು ಹೊಣೆಯಾಗಿ
ಆ ಶಾಪ ತಾಳಿದ;
ಪುಣ್ಯಾತ್ಮ ಕರ್ಮಿಗಾಗಿ
ಸಾವನ್ನು ತಾಳಿದ.

7. ಸಾವನ್ನು ಗೆದ್ದ, ಯೇಸು.
ಹೀಗಲ್ಲದಿದ್ದರೆ,
ಹ್ಯಾಗಾದೀತಿನ್ನು ಲೇಸು
ಅನಾಥರೆಮಗೆ?

೧೩೭

Jesus nimmt die Sünder an.
M. T. 72.

1. ಯೇಸು ಪಾಪಿಗಾಸರ!
ಈ ಸುವಾರ್ತಾವಾಕ್ಯವನ್ನು
ಹಾದಿ ತಪ್ಪಿದವರ
ಕಿವಿಗ್ಹೇಳಿ ಅವರನ್ನು
ಯೇಸುವಲ್ಲಿಗೊಯ್ಯುವ!
ಯೇಸು ಪಾಪಿಗಾಸರ!

2. ಶಿಕ್ಷಾಪಾತ್ರರಾದರು,
ಪಾಪಿನಾಶವಿಷ್ಟವಲ್ಲ,
ಜೀವವೆನಗಿಷ್ಟವು
ಎಂದು ಆಣೆ ಇಟ್ಟನಲ್ಲ;
ನಾಕದ್ವಾರ ತೆರೆದ.
ಯೇಸು ಪಾಪಿಗಾಸರ!

3. ಕುರಿ ತಪ್ಪಿ ಹೋಗಲು,
ಕಾಯುವಾತ ಬಿಡೊದಿಲ್ಲ.
ಒಳ್ಳೆ ಪಾಲ ಯೇಸುವು
ನಮ್ಮನಿನ್ನು ಬಿಡಲಿಲ್ಲ;
ತಿರುಗೆಂದು ಕೂಗುವ;
ಯೇಸು ಪಾಪಿಗಾಸರ!

4. ದುಃಖಿಸುವ ಪಾಪಿಯೇ,
ಸೇರು ಯೇಸು ಮರೆಯಲ್ಲಿ!
ಯೇಸು ತಿದ್ದ ಶಕ್ತನೇ;
ನಿರ್ಮಿಸೋನು ಪಾಪಿಯಲ್ಲಿ
ದೇವಪುತ್ರಭಾವವ;
ಯೇಸು ಪಾಪಿಗಾಸರ!

5. ನಾನು ತಪ್ಪಿದವನೆ,
ಕೆಟ್ಟು ಹೋದೆನೆಂದು ಹೇಳಿ
ಕ್ಲೇಶ ಪಟ್ಟು ಒಪ್ಪುವೆ;
ಯೇಸುವಿನ ಧ್ವನಿ ಕೇಳಿ
ಬಂದೆನೀಗ ಸಂಬುತ—
ಯೇಸು ಪಾಪಿಗಾಸರ!

6. ಕೇಳು! ಕೇಳು! ಸ್ನೇಹಿತ!
ನೀನು ಸಹ ಧೈರ್ಯಗೊಂಡು
ನಿನ್ನ ಪಾಪಭಾರವ
ಸ್ವಾಮಿಯ ಮೇಲೆ ಹಾಕಿಕೊಂಡು
ಶುದ್ಧವಾಗಲೆದ್ದು ಬಾ!
ಯೇಸು ಪಾಪಿಗಾಸರ!

7. ತಪ್ಪಿಹೋದ ಮಗನು
ಆದ ನಾನು ಮತ್ತು ಬಂದು
ಯೇಸು ರಕ್ತವೆನಗು
ಪಾಪಕ್ಷಮೆ ಕೊಟ್ಟಿತೆಂದು
ಹರ್ಷಗೊಳ್ಳೆ ಸರ್ವದಾ—
ಯೇಸು ಪಾಪಿಗಾಸರ!

೧೩೮

What a friend we have in Jesus.
M. T. 233.

1. ಯೇಸು ನಮಗೆಂಥ ಮಿತ್ರ!
ಎಂಥ ದಿವ್ಯ ಗುರುವು!
ಎಲ್ಲಾ ಆತನ ಚರಿತ್ರ
ಪಾಪಿಗೆ ಸುವಾರ್ತೆಯು.
ತನ್ನಿ, ತನ್ನಿ, ಎಲ್ಲ ತನ್ನಿ,
ಚಿಂತೆ, ದುಃಖ, ವೇದನೆ!
ಬನ್ನಿ, ಬನ್ನಿ, ಮಾಡ ಬನ್ನಿ
ಯೇಸುವಿಂಗೆ ಪ್ರಾರ್ಥನೆ!

2. ಆತ್ಮವೈರಿ ಹತ್ರ ಬಂದು
ಮೋಸ ತಂತ್ರ ಗೈದರೆ—
ರಕ್ಷಿಸೆನ್ನ ಯೇಸು! ಎಂದು
ಬೇಡು ಭಯವಿಲ್ಲದೆ!
ನಮ್ಮ ಹತ್ರದಲ್ಲಿದ್ದಾನೆ,
ಬಲ್ಲನೆಮ್ಮ ಶೋಧನೆ;
ನಮ್ಮನಾದರಿಸುತ್ತಾನೆ
ಕೇಳಿ ನಮ್ಮ ಪ್ರಾರ್ಥನೆ.

3. ಸ್ವಂತ ಬಲ ನಿನಗಿಲ್ಲ,
ಇಲ್ಲ ಬಂಧುಪ್ರೀತಿಯು,
ನಂಬತಕ್ಕ ಪುಣ್ಯವಿಲ್ಲ,
ಸಾವು ಮಾತ್ರ ಕಾಣಲು,
ಯೇಸು ನಿನಗಿರುತ್ತಾನೆ;
ಆತ ನಂಬಿಗಸ್ತನೆ;
ನಿನ್ನನಪ್ಪಿಕೊಳ್ಳುತ್ತಾನೆ
ಕೇಳಿ ನಿನ್ನ ಪ್ರಾರ್ಥನೆ.

೧೩೯

The Great Physician now is near.
M. T. 247.

1. ಕಂಗೆಟ್ಟ ರೋಗಿ, ಹಿಗ್ಗಿಕೋ!
ಇದ್ದಾನೆ ವೈದ್ಯಗಾರ;
ಕ್ರಿಸ್ತ್ಯೇಸುವಿಂದ ಹೊಂದಿಕೋ
ಸಂಕಷ್ಟಪರಿಹಾರ.

ಸ್ತುತ್ಯ ರಮ್ಯ ನಾಮವೇ!
ಸತ್ಯಮಿತ್ರ, ನಿನಗೆ
ನಿತ್ಯ ಸ್ತೋತ್ರ ಮಾಡುವೆ,
ಯೇಸು! ಯೇಸು! ಯೇಸು!

2. ಕಂಗಾಲ ಪಾಪಿ, ಎದ್ದು ಬಾ!
ಎಂದಾತನನ್ನುತ್ತಾನೆ.
ಕಲ್ಯಾಣ ಹೊಂದಲೀಗ ಬಾ!
ಆರೋಗ್ಯ ಮಾಡುತ್ತಾನೆ.
ಸ್ತುತ್ಯ ರಮ್ಯ. . . .

3. ಸಿಂಗೀಶ, ಸ್ತೋತ್ರವಾಗಲಿ!
ನೀ ಗೈದಿ ಪ್ರಾಯಶ್ಚಿತ್ತ;
ಕ್ರೂಜೇಲಿ ಸಾವ ತಾಳಿದಿ
ಈ ಪಾಪಿಯ ನಿಮಿತ್ತ.
ಸ್ತುತ್ಯ ರಮ್ಯ. . . .

4. ಸಹೋದರರೇ, ಹಾಡಿರಿ
ಈ ಶ್ರೇಷ್ಠ ನಾಮವನ್ನು!
ಸಹೋದರಿಯರೇಳಿರಿ,
ಕೊಂಡಾಡಿರಾತನನ್ನು!
ಸ್ತುತ್ಯ ರಮ್ಯ. . . .

5. ಆ ತೇಜೋಮಯ ಲೋಕದಿ
ಆತನ್ನ ನೋಡುವಾಗ,
ಹಾಡೇವು ಹೆಚ್ಚುಲ್ಲಾಸಿಸಿ
ಲೇಸಾಗಿ ಕೀರ್ತರಾಗ.
ಸ್ತುತ್ಯ ರಮ್ಯ. . . .

೧೪೦

Mel. Freiheit, die ich meine.
M. T. 115.

1. ಒಳ್ಳೆ ಸುದ್ದಿ ಸಾರ
ಈಗ ಬಂದೆವು;
ಅದು ಎಷ್ಟೊ ಸಾರ
ಎಂತ ಬಲ್ಲೆವು.
ಕೇಳಿ ನಂಬ ಬುದ್ಧಿ
ಪ್ರೇರಿಸಾತ್ಮನೇ!
ಎಲ್ಲಾ ವಿಘ್ನಬುದ್ಧಿ
ಓಡಿಸಾಳ್ಮನೇ!

2. ಕೊಟ್ಟ ಭಾಷೆಯನ್ನು,
ಅಪ್ಪಾ, ಜ್ಞಾಪಿಸು
ಪೂರ್ತಿ ಮಾಡದನ್ನು!
ಹೊಂದು ಹೆಸರು!
ನಮ್ಮ ಮಾನಕ್ಕಲ್ಲ
ನಿನ್ನ ಮಾನಕೆ!
ಲಾಭ ನಮಗಲ್ಲ
ನಿನ್ನ ರಾಜ್ಯಕೆ!

3. ನಮ್ಮ ಬಲ ಅಲ್ಪ,
ಸರ್ವತ್ರಾಣಿಯೇ!
ನಮ್ಮ ಬುದ್ಧಿ ಸ್ವಲ್ಪ,
ಸರ್ವಜ್ಞಾನಿಯೇ!
ಬೇಕಾದಂಥ ಜ್ಞಾನ
ಪಾಲಿಸೆಮಗೆ!
ಪವಿತ್ರಾತ್ಮದಾನ
ಹೊಯ್ಯು, ದೇವರೇ!

4. ನಿನ್ನದಲ್ಲೋ ರಾಜ್ಯ,
ಯೇಸು ಕ್ರಿಸ್ತನೆ?
ನಮಗಿನ್ನು ವ್ಯಾಜ್ಯ
ಲೋಕದೊಳಗೆ.
ನಿನ್ನ ವೈರಿಕೀರ್ತಿ
ಯಾಕೆ ಹಬ್ಬೋದು?
ನಿಂಗೆ ಜಯಕೀರ್ತಿ
ಯಾಕೆ ತಪ್ಪೋದು?

5. ಸ್ವಾಮಿಸೇವೆಯಲ್ಲಿ
ಸೋಲಬಾರದು;
ಯೇಸುಕೀರ್ತಿಯಲ್ಲಿ
ಕುಗ್ಗಬಾರದು;
ಶಿಷ್ಯರಲ್ಲಿ ಕಲೆ
ಇರಬಾರದು;
ವೈರಿಗೇನು ಕಳೆ
ಸಿಕ್ಕಬಾರದು.

6. ದೀನನೇಳುವಂತೆ,
ಪಾಪಿ ಬದುಕಿ
ಕ್ಷಮೆ ಹೊಂದುವಂತೆ,
ನೀ ಕಟಾಕ್ಷಿಸಿ,
ಮಾನವಾವತಾರ
ಎತ್ತಿದಾತನೇ,
ಹಾರಿಸೆಮ್ಮ ಭಾರ,
ಅದ್ವಿತೀಯನೇ!

7. ಲೋಕದೆಲ್ಲ ಜನ
ಯೇಸುನಾಮಕೆ
ಬೊಗ್ಗಲಿಕ್ಕೆ ಮನ
ಹುಟ್ಟಿಸಾಳ್ಮನೆ!
ಅನ್ಯನಾಮಶಕ್ತಿ
ಪೂರಾ ಕುಂದಿಸು!
ಯೇಸು ಮೆಚ್ಚೋ ಭಕ್ತಿ
ಎಲ್ಲೂ ತುಂಬಿಸು!

೧೪೧

Luke. 19, 41—44.
Jerusalem, Jerusalem.—M. T. 145.

1. ಯೆರೂಸಲೆಮ್, ಯೆರೂಸ
ಲೆಮ್!
ಪ್ರಭಾವವಿರಲು,
ಯೆಹೋವನತಿಕಾಂತಿಯು
ನಿನ್ನಲ್ಲಿ ಕಂಡಿತು.
ಈಗೆಲ್ಲ ಕುಂದಿಹೋಯ್ತುಯ್ಯೋ,
ನೀ ಶಾಪವುಳ್ಳದೇ!
ಯೆರೂಸಲೆಮ್, ಯೆರೂಸಲೆ
ಮ್,
ನಿಂಗಾಗಿ ಅಳುವೆ!

2. ಯೆಹೋವನೂರ್ಧ್ವ ಕೀರ್ತಿ
ಯು
ಪ್ರಕಾಶಿಸಿದ್ದಲ್ಲಿ
ಕೂತಾರೆ ನಿನ್ನ ಮಕ್ಕಳು
ಅಗಾಧ ದುಃಖದಿ.
ಧೂಳೀಲಿ ನಿನ್ನ ವಾಸವು,
ನೀ ಶಾಪವುಳ್ಳದೇ!

ಯೆರೂಸಲೆಮ್, ಯೆರೂಸಲೆ
ಮ್,
ನಿಂಗಾಗಿ ಅಳುವೆ!

3. ಯೆರೂಸಲೆಮ್, ಯೆರೂಸ
ಲೆಮ್!
ಸಾಕಾಯ್ತು, ಎದ್ದುಕೋ!
ನೀ ಕೊಂದುಹಾಕಿದಾತನು
ನಿನ್ ಜೀವವಲ್ಲವೋ?
ನೀ ಯೇಸು ಕ್ರಿಸ್ತಗೆರಗಿ
ಕೊಂಡಾಡೊ ವರೆಗೆ,
ಯೆರೂಸಲೆಮ್, ಯೆರೂಸಲೆ
ಮ್,
ನಿಂಗಾಗಿ ಅಳುವೆ!

---

೪. ದೇವರಾಜ್ಯವಾಗಿರುವ ಸಭೆಯ ಮಹತ್ವ

೧೪೨

The Church's one foundation.
M. T. 260.

1. ಶ್ರೀ ಸಭೆಗಸ್ತಿವಾರ
ಕ್ರಿಸ್ತ್ಯೇಸುವೊಬ್ಬನೇ;
ಅದನ್ನು ಸೇರೋ ದ್ವಾರ
ಪವಿತ್ರ ಸ್ನಾನವೇ;
ಸಂರಕ್ಷೆಗಿತ್ತಾಹಾರ
ಪವಿತ್ರ ವಾಕ್ಯವು;
ವಿಮುಕ್ತಿ ಸಂಚಕಾರ
ಪವಿತ್ರ ಆತ್ಮನು.

2. ನಾನಾ ಪ್ರದೇಶದಿಂದ
ನಾವಾಯಲ್ಪಟ್ಟರು,
ಒಂದೇ ದೇಹಾನುಬಂದ
ಅವಯವಂಗಳು.
ನಾವೆಲ್ಲ ಒಂದೇ ವಂಶ,
ಕ್ರಿಸ್ತ್ಯೇಸುವಂಶವೇ;
ನಾವೆತ್ತುವಂಥ ನಾಮ
ಕ್ರಿಸ್ತ್ಯೇಸುನಾಮವೇ.

3. ಕ್ರಿಸ್ತ್ಯೇಸುವಿನ ಸಾಕ್ಷಿ
ಸತ್ಸಭೆ ಉಸುರಿ,
ಭೂರಣರಂಗದಲ್ಲಿ
ವಾಕ್ಖಡ್ಗ ಧರಿಸಿ
ಹೋರಾಡಿ, ಸಲೆ ಗೆದ್ದು
ವಿಶ್ರಾಂತಿಗೇರ್ವದು.
ಆಗೆಲ್ಲ ದಿಗ್ವಿಜಯ
ಶ್ರೀ ಕ್ರಿಸ್ತಗಾಗೊದು.

4. ಮುಂದ್ಹೋದ ಭಕ್ತರೆಲ್ಲ
ತ್ರಯೈಕ ದೇವರ

ಸಾಲೋಕ್ಯಭಾಗ್ಯವನ್ನು
ಹೊಂದಿರ್ವರಹಹ!
ನಾವಿನ್ನು ಪಡುತ್ತೇವೆ
ಉಷ್ಣಾದಿ ತಾಪವ.
ವಿಮುಕ್ತಿ ಮಾಡು, ಕರ್ತ,
ಈ ನಿನ್ನ ಸಭೆಯ!

೧೪೩

Auf den Bergen, auf den Heiden.
M. T. 139.

1. ಗುಡ್ಡದಲ್ಲಿ, ಕಾಡಿನಲ್ಲೆ
ದಣಿದ,
ಹಸಿದ
ಲಕ್ಷ ಕುರಿ ಬಲ್ಲೆ.
ಅಯ್ಯೋ! ತಪ್ಪಿ ಹೋಗಿದ್ದಾವೆ;
ಸಾಕುವ
ಕುರುಬ
ಇಲ್ಲದಿರುತಾವೆ.

2. ಯೇಸು ಕ್ರಿಸ್ತ ಅಹೋರಾತ್ರ
ಜೋಕೆಯ
ಮಾಡುವ
ಮಂದೆ ಒಂದು ಮಾತ್ರ.
ಒಂದನ್ನಾದುಕೊಂಡಿದ್ದಾನೆ;
ಅದನ್ನೆ,
ಮುಂದೆಯೆ
ಹೋಗಿ, ಮೇಯ್ಸುತಾನೆ.

3. ನಮ್ಮ ನಾಮ ಸಹ ಬಲ್ಲ;
ನಮ್ಮನು
ನಿತ್ಯಕು
ಸಾಕುತಾನೆ ಅಲ್ಲ?
ಆತನಂ ಹಿಂಬಾಲಿಸೋಣ,
ಕ್ಷೇಮವು
ಸಿಕ್ಕೊದು.
ಹಾಡಿ ಹರಸೋಣ!

4. ನೀನೇ ನಮ್ಮ ಯಜಮಾನ,
ಯೇಸುವೆ;
ನಮಗೆ
ಕೊಡು ಸಮಾಧಾನ!
ಅಂತ್ಯದಲ್ಲಿ ನಿನ್ನ ಪ್ರಭೆ
ತೋರುವ
ತನಕ
ಕಾಯಿ ನಿನ್ನ ಸಭೆ!

೧೪೪

Mel. Gott sei Dank in aller Welt.
M. T. 10.

1. ದೇವರ ಕುಮಾರರು
ಘನವುಳ್ಳ ಕೂಟವು;
ಒಂದೆ ಶುದ್ಧ ಸಭೆಯು
ಸದ್ವಿಶ್ವಾಸಭಕ್ತರು.

2. ಯೇಸು ಕ್ರಿಸ್ತನೀತಿಯು
ಅವರಲಂಕಾರವು;
ಯೇಸು ಪಟ್ಟ ಬಾಧೆಯು
ಅವರಾತ್ಮಸುಖವು.

3. ಎಲ್ಲ ಕುಲ ಪ್ರಜೆಯೊಳ್,
ಎಲ್ಲ ಪ್ರಾಂತ್ಯ ದೇಶದೊಳ್
ಮಿತ್ರರನ್ನು ಮಿತ್ರರು
ನೋಡಿಕೊಳ್ಳಲಾಗದು.

4. ಈ ಸಮಸ್ತ ಶಿಷ್ಯರು
ಕ್ರಿಸ್ತನೊಂದೇ ಸಭೆಯು;
ಆತನಲ್ಲಿ ಭ್ರಾತ್ರರು,
ದೇವರೊಳ್ಳೆ ಮಕ್ಕಳು.

5. ಯೇಸು ತನ್ನ ಮಂದೆಯ
ಅರಿಯೋನು ನಿಶ್ಚಯ;
ಇವರೆಂದಿಗಾದರು
ನಾಶವಾಗ ಕೂಡದು.

6. ನಿನ್ನ ಪ್ರೇಮದಗ್ನಿಯು
ನಮ್ಮಲುರಿಗೊಳ್ಳಲು,
ನಾವು ನಿನ್ನ ಶಿಷ್ಯರು
ಎಂದು ಲೋಕ ನಂಬೊದು.

೧೪೫

Mel. Wo ist Jesus, mein Verlangen?—M. T. 28.

1. ಕ್ರಿಸ್ತಾ, ನಿನ್ನ ಭಕ್ತರನ್ನು
ಪ್ರೀತಿಯಿಂದ ಆಳಿಕೋ!
ಪ್ರೀತಿಯಲ್ಲಿ ಸಭೆಯನ್ನು
ಪೂರ್ಣ ದೃಢ ಪಡಿಸೋ!

2. ನಿನ್ನ ಪ್ರೀತಿ ಸಭ್ಯರನ್ನು
ಐಕ್ಯದೊಳಗಿಡಲಿ!
ಅಹಂಕಾರವೆಲ್ಲವನ್ನು
ಅದು ಸುಟ್ಟುಬಿಡಲಿ!

3. ನೀನೇ ಪ್ರೀತಿ; ಪ್ರೀತಿಯಿಂದ
ಪ್ರಜೆಯೆಲ್ಲ ತುಂಬಲಿ!
ಭಕ್ತಹೃದವೇದಿಯಿಂದ
ಪ್ರೀತಿಜ್ವಾಲೆ ಏಳಲಿ!

4. ನಮ್ಮ ಸಭೆ ಒಂದೇ ವಂಶ;
ನಿನ್ನ ವಂಶ, ಯೇಸುವೆ!
ಒಂದೇ ರಕ್ತ, ಒಂದೇ ಮಾಂಸ,
ಒಂದೇ ಜೀವ ನಮಗೆ.

5. ಪ್ರೀತಿಯಿಂದ ನಿನ್ನ ಪ್ರಾಣ
ಕ್ರೂಜೆಯಲ್ಲಿ ಅರ್ಪಿಸಿ,
ಸ್ವರ್ಗಕ್ಕೋಗಿ, ವಾಸಸ್ಥಾನ
ನಮಗುಂಟು ಮಾಡಿದಿ.

6. ದಿವ್ಯ ಪ್ರೀತಿ, ಸಭೆಯಲ್ಲಿ
ವಾಸ ಮಾಡು ನಿತ್ಯಕು!
ನಿನ್ನ ಸ್ವರ್ಗರಾಜ್ಯದಲ್ಲಿ
ನಮ್ಮನೆಲ್ಲ ಸೇರಿಸು!

೧೪೬

Fahre fort, fahre fort.—M. T. 102.

1. ಚೀಯೋನೇ, ಚೀಯೋನೇ,
ನೀನು ದೇವಸಭೆಯು!
ಇಕ್ಕಟ್ಟಾದ ದ್ವಾರದಿಂದ
ಸೇರಿ, ಧೈರ್ಯವಾಗಿರು!
ನೆಟ್ಟಗಾದ ಹಾದಿಯಿಂದ
ನಡೆ, ಏನೂ ಬೇಸರಾಗದೆ,
ಮುಂದಕೆ! ಮುಂದಕೆ!

2. ಚೀಯೋನೇ, ಚೀಯೋನೇ,
ಪರಿಶುದ್ಧ ಪಟ್ಣವೆ!
ಮಾಡಬೇಡ ಚಿಂತೆಯನ್ನು
ದುಷ್ಟಲೋಕಹಿಂಸೆಗೆ!
ಮುಂದಿನಾ ಕಿರೀಟವನ್ನು
ಸದ್ವಿಶ್ವಾಸದಿಂದ ನಿತ್ಯಕು
ದೃಷ್ಟಿಸು! ದೃಷ್ಟಿಸು!

3. ಚೀಯೋನೇ, ಚೀಯೋನೇ,
ನೀನು ದೇವಗೃಹವು!
ಪಾಪಮಲಕಲೆಯೊಂದು
ನಿನ್ನಲಿರ ಬಾರದು.
ಯೇಸು ನಿನಗಾಗಿ ನೊಂದು,
ತನ್ನ ಜೀವವನ್ನು ಸುಮ್ಮಗೆ
ಕೊಟ್ಟನೆ? ಕೊಟ್ಟನೆ?

4. ಚೀಯೋನೇ, ಚೀಯೋನೇ,
ನೀ ಪವಿತ್ರ ಕನ್ನೆಯು!
ಯೇಸು ತನ್ನ ರಕ್ತವನ್ನು
ನಿನಗಾಗಿ ಹೊಯ್ದನು.
ನಿತ್ಯರಾಜ್ಯಸ್ವಾಸ್ತ್ಯವನ್ನು
ನಿಂಗನಾದಿ ತಂದೆ ದೇವರು
ಕೊಟ್ಟನು, ಕೊಟ್ಟನು.

5. ಚೀಯೋನೇ, ಚೀಯೋನೇ,
ನೀನು ಜಯಶಾಲಿಯು!
ಯೇಸುವೆಂಬ ವೀರನನ್ನು
ನಂಬಿ, ಧೈರ್ಯವಾಗಿರು!
ನಿನ್ನ ರಣಭೂಮಿಯನ್ನು
ಬಿಡಧೋರನಾಡು! ಜಯವು
ನಿನ್ನದು! ನಿನ್ನದು!

೧೪೭

Es glänzet der Christen
inwendiges Leben.—M. T. 169.

1. ಮೈಬಣ್ಣವು ಕರಿದು ಬಿಸಲಿ
ನಿಂದ,
ಸತ್‌ಕ್ರೈಸ್ತರ ಆತ್ಮವು ಮಿಂಚು
ವದು.
ಮಹೋನ್ನತನವರಿಗೊಲುಮೆ
ಯಿಂದ
ಕೊಟ್ಟೊಡವೆ ಪರರು ಅರಿಯರು.
ಮನುಷ್ಯನ ಜ್ಞಾನ,
ಮನುಷ್ಯನ ಧ್ಯಾನ

ಎಂದೆಂದಿಗು ಹೊಂದದ ಪರಮ
ದಾನ
ಯೆಹೋವನು ಇವರಿಗಿತ್ತಭಿ
ಮಾನ!

2. ಈ ಲೋಕದಿ ಹೊರಗೆ ಬಡ
ವರಾಗಿ,
ಉನ್ಮತ್ತರ ಹಾಸ್ಯವ ತಾಳು
ವರು.
ಆಂತರ್ಯದಿ ಕೃಪೆಯ ನಿಧಿಗ
ಳಾಗಿ,
ಕ್ರಿಸ್ತ್ಯೇಸುವಿಗಾಗೊರು ಮುಡಿ
ಗಳು.
ಮಹಾ ದಿನದಲ್ಲಿ,
ದುಷ್ಟಾರಿಗಳಲ್ಲಿ
ಹೋರಾಡಿದ ಬಳಿಕ, ಮಹಿಮೆ
ಯಲ್ಲಿ
ಪ್ರವೇಶಿಸಿ, ಹರ್ಷಿಪರರಸನಲ್ಲಿ.

3. ಹೀಗಾದರೂ ಕ್ರೈಸ್ತರು
ಮಾನವರಾಗಿ
ಆದಾಮನ ರೂಪದಿ ಕಾಣಿ
ಸೋರು;
ಪಾಪಿಷ್ಠರ ಅಂದದಿ ದೇಹಿಗಳಾಗಿ
ಬೇಕಾಗಲು ಕುಡಿದು ಉಣ್ಣು
ವರು;
ಕೀಳಾಳುಗಳಾಗಿ,
ಸಾಧಾರಣವಾಗಿ
ಉದ್ಯೋಗದಿ ಬಾಳೊರು ನಂಬಿ
ಕೆಯಾಗಿ,
ದುರ್ಭೋಗದ ತ್ಯಾಗವ ಗೈದವ
ರಾಗಿ.

4. ಆಂತರ್ಯದಿ ದೇವರ ವಚನ
ದಿಂದ
ಅಮೂಲ್ಯ ಸ್ವಭಾವವು ಜನಿಸಿತು;
ಪ್ರಕಾಶಿಪುದಮಲ ತೇಜಸ್ಸಿನಿಂದ
ಸದ್ಭಕ್ತರ ಹೃತ್ತಿನ ಕನ್ನಡಿಯು.
ಹೃಚ್ಚಿಂತೆಯ ತ್ಯಾಗ,
ಸತ್ಪುತ್ರರ ಭಾಗ
ಯೆಹೋವನ ದಾನವು. ಹೀಗಿ
ರುವಾಗ
ಸಿಂಹಾಸನಕ್ಕೇರುವದುತ್ಸಹ
ರಾಗ.

5. ಈ ಪೃಥ್ವಿಯಲ್ಲಿದ್ದರೂ ದ್ಯು
ಚರರಾಗಿ,
ನಿತ್ರಾಣದಿ ಕಾಯುವರಿಳೆಯನು;
ಭೂಕಾಳಗದೊಳಗು ಶಾಂತರು
ಆಗಿ,
ಬೇಡ್ಯುಣ್ಣುವ ಧನಿಗಳೆನ್ನಿಸೊರು.
ಸ್ವಭಾವದ ಕ್ಷಯ
ವಿಶ್ವಾಸದ ಜಯ!
ಶರೀರದ ಭೋಗಕೆ ಬಪ್ಪದು
ಲಯ;

ಜೀವಾತ್ಮದ ತೃಪ್ತಿಯು ದೇವರ
ದಯ.

6. ಕ್ರಿಸ್ತ್ಯೇಸು! ಪವಿತ್ರ ಪ್ರಕಾ
ಶದ ದೊರೆ!
ಅಗೋಚರ ಜೀವದ ಒಡೆಯನೆ!
ನೀ ನಮಗೆ ಕೊಡುವ ಕ್ರೂಜೆಯ
ಹೊರೆ
ಕುರೂಪವ ಮಾಡಲಿ ಮೃದ್ಘ
ಟಕೆ!
ಇಲ್ಲ್ಯಡಗಲಾಗಿ,
ನೀನರಸನಾಗಿ
ಬಪ್ಪಾಗಲೆ, ಮಹಿಮೆಯರಸರಾಗಿ
ನಿನ್ನಲ್ಲಿಯೆ ಇರ್ವೆವನಂತರವಾಗಿ.

೧೪೮

Wer ist der Braut des Lammes gleich?—M. T. 279.

1. ಆ ಕುರಿಮರೀ ವಧುವ
ನೋಡಿದರೆಂಥ ಸೋಜಿಗ!
ಕುರೂಪೆಯೂ ಸುರೂಪೆಯೂ;
ಕುಜಾತೆಯೂ ಸುಜಾತೆಯೂ;
ದೌರ್ಭಾಗ್ಯಳೂ ಸೌಭಾಗ್ಯವಂತ
ಳೂ;
ಇಂಥಾಕೆ ಎಲ್ಲೂ ಕಾಣಳೆಂದಿ
ಗೂ!

2. ತಾನಾಗಿ ಆಕೆ ಹೀನಳು;
ಆದಾಗ್ಯೂ ಮದುಮಗನು
ಸಂಪಾದಿಸಿತ್ತ ಉಡುಪು
ಉಟ್ಟಾಕೆ ಹ್ಯಾಗೆ ಕಾಣ್ಬಳು?
ಅಃಚಂದ್ರಕಾಂತಿಗಿಂತರಮ್ಯೆಯು!
ಎಷ್ಟೆಷ್ಟು ಹೇಳಿದಾಗ್ಯೂ ತೀರದು.

3. ನಿತ್ರಾಣೆ, ಮೂಢೆ ಲೋಕಕೆ!
ಸಶಕ್ತೆ, ಜಾಣೆ ಕರ್ತಗೆ!
ಈ ಲೋಕದಿಂದ ಹಿಂಸೆಯು,
ಸರ್ವೇಶನಿಂದ ಒಲ್ಮೆಯ
ಹೊಂದಿರುವಂಥ ಕನ್ಯೆ ಯಾರೆ
ಲೇ?
ಜಗತ್ತು ವ್ಯಾಪಿಸುವ ಸಭೆಯೇ.

4. ಸ್ವಭಾವದಿಂದ ನೀಚೆಯು,
ಹಾ, ಆಗಿದ್ದಾಳೆ ಊಚೆಯು!
ಈ ಮರ್ಮ ಯಾರು ಬಲ್ಲರು?
ಪವಿತ್ರರಕ್ತದ್ವಿಜರು
ವಿಶ್ವಾಸದಿಂದ ಗ್ರಹಿಸುವರು;
ಸ್ವನೀತಿಮೆಚ್ಚೋಜನವರ್ಯದು.

5. ನಿಸ್ಸತ್ವ ಕೀಟದಂತೆಯೇ
ನೀನಿದ್ದರೇನು, ಸಭೆಯೇ?
ಆಕಾಶಕೇರಿ ಹರ್ಷದಿ
ಸದಾ ಸಂಗೀತ ಹಾಡುವಿ.
ಇಕ್ಕಟ್ಟು ಬಾಗಲನ್ನು ದಾಟಿದಿ;
ಕ್ರಿಸ್ತ್ಯೇಸು ಸ್ವಾಮಿಯೊಂದಿಗು
ಣ್ಣುವಿ.

6. ಕ್ರಿಸ್ತ್ಯೇಸುವಿನ ವಧುವು
ಯೆಹೋವನ ಮಹತ್ವವು.

ವಿಶುದ್ಧ ಸ್ವಾಮಿ ಮುಖವ
ವಿಶುದ್ಧೆಯಾಗಿ ನೋಡುವ
ಆ ಕುರಿಮರೀ ಮದುಮಗಳು
ಸದಾ ಸಂತುಷ್ಟಳಾಗಿರುವಳು.

೧೪೯

Wer überwindet.—M. T. 262.

1. ವಿಜೈಸುವಾತ ಪರದೈಸಿನಲ್ಲಿ
ಪ್ರವೇಶ ಮಾಡಿ, ಅಡ್ಡಿಯಿಲ್ಲದೆ
ಆ ಜೀವವೃಕ್ಷಫಲ ತಿನ್ನುವಲ್ಲಿ
ಸದಾ ಸಂತೃಪ್ತನಾಹನಲ್ಲವೇ ?
ನಾ ಬಲ್ಲೆ ನಿತ್ಯ ನಿನ್ನೆಲ್ಲ ಕೃತ್ಯ.
|: ಕೇಳಿದು ಸತ್ಯ, ಶ್ರೀ ಸಭೆಯೇ! :|

2. ವಿಜೈಸುವಾತ ಮೃತಿದ್ವಯ
ದಿಂದ
ಏನೇನು ನಷ್ಟ ಪಡಲಾರನು;
ನೀ ನಂಬಿಗಸ್ತನಾಗಿ ನಿಷ್ಠೆಯಿಂದ
ತಾಳೆಲ್ಲ ಹಿಂಸೆ ಸಾಯೊಮಟ್ಟಿಗು!
ಸಂಜೀವವನ್ನು, ಕಿರೀಟವನ್ನು,
|: ಇವೆಲ್ಲವನ್ನು ನಿಂಗೀವೆನು. :|

3. ವಿಜೈಸುವಾತಗುಣ್ಣ ಕೊಡು
ತ್ತೇನೆ
ಬಚ್ಚಿಟ್ಟ ದಿವ್ಯ ಮನ್ನದಿಂದಲೆ;
ನವೀನ ನಾಮವಾತಗಿಕ್ಕುತ್ತೇನೆ,
ವಿಶುದ್ಧ ರತ್ನದೊಳು ಕೆತ್ತಿದೆ.
ಈ ಮನ್ನವನ್ನು, ಈ ನಾಮ
ವನ್ನು
|: ಸೋತವರಿನ್ನು ಹೊಂದುವ
ರೆ? :|

4. ವಿಜೈಸುವಾತಗಾಧಿಪತ್ಯವನ್ನು
ಜನಾಂಗಗಳ ಮೇಲೆಯಿೂವೆನು;
ಹಾ ! ಲೋಹದಂಡದಿಂದಲವ
ರನ್ನು
ತನ್ನಿಚ್ಛೆಯಂತೆ ನಡಿಸುವನು;
ಒಕ್ಕೊಟ್ಟ ಹೆಂಟೆ ಮಣ್ಣಾಗು
ವಂತೆ,
|:ದುರ್ವೈರೀ ತಂಟೆ ಅಳಿಸೋನು.:|

5. ವಿಜೈಸುವಾತ ಶ್ವೇತ ವಸ್ತ್ರ
ದಿಂದ
ನನ್ನವರಲ್ಲಿ ಮೆರ್ಯುತಿರ್ವನು;
ನಾಜೀವಗ್ರಂಥ ಲೇಖದೊಳಗಿಂದ
ಅಂಥವನನ್ನು ಕಿತ್ತು ಹಾಕೆನು.
ಇಕೊಳ್ಳಿ, ಅಲ್ಲಿ, ಆ ದಿನದಲ್ಲಿ—
|: ನಾ ನಿನ್ನ ಬಲ್ಲೆನೆಂತಂಬೆನು. :|

6. ವಿಜೈಸುವಾತನನ್ನು ಸ್ತಂಭ
ವಾಗಿ
ಪವಿತ್ರ ನನ್ನ ಗೃಹದೊಳಗೆ
ನಾನಿಟ್ಟು ಆತನಲ್ಲಿ ಘನಕಾಗಿ
ತ್ರಯೈಕ ದೇವನಾಮ ಕೆತ್ತುವೆ;
ಮತ್ತೆನ್ನ ಸ್ವಂತ ನವೀನ ನಾಮ
|: ಶ್ರೀ ಪಟ್ಣನಾಮ ಲೇಖಿಸುವೆ. :|

7. ವಿಜೈಸುವಾತ ನನ್ನ ಪಾರ್ಶ್ವದಲ್ಲಿ
ಸಿಂಹಾಸನಕ್ಕೆ ಬಾಧ್ಯನಾಗುವ.
ನಾ ಜಯಗೊಂಡು ತಂದೆ ಪಕ್ಕದಲ್ಲಿ
ಕೂತಿರುವಂತೆ, ನೀನೂ ಕೂಡ್ರಬಾ!
ಶ್ರೀ ಸಭೆ, ಕೇಳು — ಇಲ್ಲ್ಯಡ್ಡಬೀಳು!
|:ಹೋರಾಟಕ್ಕೇಳು! ವಿಜೈಸಿಬಾ!:|

5. ಕ್ರೈಸ್ತ ಸಭಾಚಾರ ಕೃಪಾಕರಣಗಳು

೧. ದೇವಾರಾಧನೆ

೧೫೦

Mel. Saft vom Felsen.—M. T. 158.

1. ದೇವರೇ, ಸುವಾರ್ತೆಯನ್ನು
ಕೇಳ ಕೂಡಿ ಬಂದೆವು.
ಒಳ್ಳೇ ಆಶೀರ್ವಾದವನ್ನು
ಕೊಡು ಪ್ರತಿ ಭಕ್ತಗು!
ಜೀವವುಳ್ಳ ರೊಟ್ಟಿಯನ್ನು
ಹಂಚಿ, ಜೀವಜಲವನ್ನು
ಪಾನಕಾಗಿ ಎರೆದು,
ಆತ್ಮ ತೃಪ್ತಿಪಡಿಸು!

2. ಆದಿಪಿತೃಪಾಪದಿಂದ
ಶಾಪಗ್ರಸ್ತರಾದೆವು;
ಸ್ವಂತ ಪಾಪಸೇವೆಯಿಂದ
ಮೃತಿ ಪ್ರಾಪ್ತವಾಯಿತು.
ತಿಳುಕೊಂಬ ಮನಸ್ಸನ್ನು,
ಲಾಲಿಸುವ ಕಿವಿಯನ್ನು,
ನೋಡುವಂಥ ಕಣ್ಣನು,
ಕ್ರಿಸ್ತ, ದಯೆಪಾಲಿಸು!

೧೫೧

Herr Jesu Christ, dich zu uns wend'.—M. T. 41.

1. ನಮ್ಮನ್ನು ನೋಡು, ಕರ್ತನೆ!
ನಿನ್ನಾತ್ಮ ಕೊಡು ನಮಗೆ!
ಸನ್ಮಾರ್ಗದಲ್ಲಿ ನಮ್ಮನು
ಕಟಾಕ್ಷದಿಂದ ನಡಿಸು!

2. ನಿನ್ನನ್ನು ಸ್ತುತಿಸೋದಕೆ
ನೀ ಸಡ್ಲಿಸೆಮ್ಮ ನಾಲಿಗೆ!
ಸಂತೋಷವುಳ್ಳ ಸೇವೆಗೆ
ನಮ್ಮನ್ನು ಎಬ್ಬಿಸಾಳ್ಮನೆ!

3. ಸದ್ವಾಕ್ಯವೆಂಬ ಬೀಜವು
ನಮ್ಮೆದೆಯಲ್ಲಿ ಮೊಳಿತು,
ನಿನ್ನಾತ್ಮನಿಂದ ವರ್ಧಿಸಿ,
ಅಮೂಲ್ಯ ಪೈರು ಕೊಡಲಿ!

4. ಪಿತಾಪುತ್ರಾತ್ಮ ದೇವರೇ!
ತ್ರಯೈಕನೇ, ಕೃಪಾಳುವೇ!
ಕಟಾಕ್ಷಪೂರ್ಣ ನಿನ್ನನು
ಕೊಂಡಾಡುತ್ತೇವೆ ನಿತ್ಯಕು!

೧೫೨

Jer. 23, 29. Is. 42, 3.
Mel. Alle Menschen müssen sterben.—M. T. 159.

1. ವಾಕ್ಯವನ್ನು ಬಲದಿಂದ,
ಕರ್ತಾ, ಸಾರಗೊಡಿಸು!
ಹೃದದಲ್ಲಿ ಆತ್ಮನಿಂದ
ವಾಕ್ಯಬಾಣ ನಾಟಿಸು!
ಕುದಿಯುವ ಮನಸ್ಸನ್ನೂ
ಜನಾಕರ್ಷ ವಾಕ್ಯವನ್ನೂ
ಕೊಟ್ಟು ಸಾರೂ ಆಳಿಗೆ
ಇರು ಅವನೊಂದಿಗೆ!

2. ಒಡೆಯಲಿ ಬಂಡೆಯನ್ನು
ವಾಕ್ಯವೆಂಬ ಸುತ್ತಿಗೆ!
ಉರಿಸಲಿ ಹೃದವನ್ನು
ವಾಕ್ಯಜ್ವಾಲೆ, ಕರ್ತನೆ!
ಕಲ್ಲಿನಂಥ ಮನಸನ್ನು
ಕರಗಿಸಿ, ಗರ್ವವನ್ನು
ಮುರಿದು, ಸುಧಾರಿಸು
ಕರಗಿದ ಮನಸು!

3. ಘೋರ ಪಾಪನಿದ್ರೆಯಲ್ಲಿ
ಬಿದ್ದ ಒಬ್ಬನಿದ್ದರೆ,
ಕರ್ತನೇ, ಈ ದಿನದಲ್ಲಿ
ಕರುಣಿಸು ಬೇಗನೆ!
ಎಚ್ಚರಿಸು ಅವನನ್ನು!
ನರಕದ ಭಯವನ್ನು
ಕಣ್ಣ ಮುಂದೆ ತೋರಿಸು!
ನಿದ್ರೆಯಿಂದ ಎಬ್ಬಿಸು!

4. ಇಂದು ನಿನ್ನ ಕೃಪೆಯನ್ನು
ಯಾವನಾಶಿಸುವನೋ,
ಅವನಾತ್ಮಗೃಹವನ್ನು
ಸೇರಿ ವಸ್ತಿ ಮಾಡಿಕೋ!
ಜಜ್ಜಿ ಹೋದ ಮನಸನ್ನು,
ನಲಗಿದ ಗಲಗನ್ನು
ನೀನು ಮುರಿದ್ಹಾಕದೆ
ಮಾಡು ಒಳ್ಳೆ ಆರೈಕೆ!

5. ಮತ್ತು ಶಿಷ್ಯರೆಲ್ಲರನ್ನು
ಆತ್ಮನಿಂದ ತುಂಬಿಸು!
ನಿನ್ನ ವಾಕ್ಯಶಕ್ತಿಯನ್ನು
ನಮ್ಮ ಮೇಲೆ ತೋರಿಸು!
ನೋಡು! ನಾವು ಬಂದಿದ್ದೇವೆ,
ನಿನ್ನನೀಗ ಕಾಯುತೇವೆ.
ನಮ್ಮನಾಶೀರ್ವದಿಸು!
ಆತ್ಮ ದಯಪಾಲಿಸು!

೧೫೩

Treuer Heiland, wir sind hier.
M. T. 253.

1. ಎಳೆ ನಿನ್ನ ಮೇಲೆಯೇ
ನಮ್ಮ ಚಿತ್ತ, ಯೇಸು!
ನಿನ್ನ ವಾಕ್ಯಧ್ಯಾನವೇ
ಆಗಲಿಂದು ಲೇಸು!
ವಾಕ್ಯಜ್ಯೋತಿ ಹಿಡಿದು
ಪೂರ್ಣವಾಗಿ ವ್ಯಾಪಿಸು
ನಮ್ಮಾಂತರ್ಯ, ಯೇಸು!

2. ನಮ್ಮ ಮಧ್ಯೆ ಬಂದಿರು!
ನೀಗು ಪಾಪವನ್ನು!
ಹೃದವಂ ಮಾರ್ಪಡಿಸು!
ಬೋಧಿಸು ನಮ್ಮನ್ನು!
ಲೋಕಬುದ್ಧಿ ತಪ್ಪುತೆ,
ಲೋಕರೀತಿ ಕೆಟ್ಟದ್ದೆ;
ಬೇರೆ ಮಾಡೆಮ್ಮನ್ನು!

3. ಯೇಸು, ನಿನ್ನ ಹಾಗೆಯೇ
ರೂಪಿಸೆಮ್ಮ ಪ್ರಾಣ!
ನಿನ್ನ ಮಾರ್ಗದಲ್ಲಿಯೇ
ನಮಗೂ ಪ್ರಯಾಣ!
ನಿನ್ನ ಸೌಮ್ಯಭಾವವು,
ಪ್ರೀತಿ, ನೀತಿ, ಶುದ್ಧಿಯು
ನಮಗೂ ಪ್ರಮಾಣ!

4. ಯೇಸು, ಪೂರಾ ನೊಂದಿಸು
ಕೆಟ್ಟ ಬೆಂಕಿಯನ್ನು!
ನಿತ್ಯ ನಮ್ಮೊಳಿರಿಸು
ನಿನ್ನ ಶಾಂತಿಯನ್ನು!
ಕೀಳು ಹೆಮ್ಮೆ ಬೇರನು!
ದಿವ್ಯ ವೈದ್ಯ, ನೀಗಿಸು
ಪಾಪರೋಗವನ್ನು!

5. ಮಕ್ಕಳಂತೆ ನಂಬಿಕೆ
ನಿನ್ನಲ್ಲಿಟ್ಟದ್ದೇವೆ;
ನಿನ್ನ ಹಿಂದೆ ನಿತ್ಯಕೆ,
ಯೇಸು, ಬರುತ್ತೇವೆ.
ಇಲ್ಲಿ ನಂಬಿದಂತೆಯೆ
ನಿನ್ನನ್ನಲ್ಲಿ ಕಾಣ್ಬರೆ
ಆಶೆಗೊಂಡಿದ್ದೇವೆ.

೧೫೪

Gott ist gegenwärtig.—M. T. 178.

1. ದೇವರೆಮ್ಮ ಮಧ್ಯೆ
ಇರುತ್ತಿರಲಾಗಿ
ಪ್ರಾರ್ಥಿಸೋಣ ಭಕ್ತರಾಗಿ!
ಹೌದು, ದೇವರಿಲ್ಲಿ!
ಆತಗಡ್ಡ ಬಿದ್ದು
ಧ್ಯಾನಿಸೋಣ, ಸುಮ್ಮನಿದ್ದು!
ಭಕ್ತರೇ,
ಆತಗೇ
ಹೃದವನ್ನು ತರ್ರಿ!
ಸೇವೆ ಮಾಡ ಬರ್ರಿ!

2. ನಿಂಗೆ ದೂತಸೈನ್ಯ
ಪರಲೋಕದಲ್ಲಿ
ನಿತ್ಯ ಹಗಲಿರುಳಲ್ಲಿ,
"ಶುದ್ಧ, ಪರಿಶುದ್ಧ
ಕರ್ತ!" ಎಂತ ಹಾಡಿ,
ಬೊಗ್ಗುತಾರೆ ಸ್ತೋತ್ರ ಮಾಡಿ.
ಇಲ್ಲಿಯು
ಲಾಲಿಸು
ನಮ್ಮ ದೀನ ಸ್ತೋತ್ರ!
ಇಕ್ಕು ನಿನ್ನ ಶ್ರೋತ್ರ!

3. ಸಾಕು ನಿನ್ನ ದಯ
ನಮಗಿರೆ, ಕರ್ತ!
ಈ ಪ್ರಪಂಚದಾಶೆ ವ್ಯರ್ಥ!
ನಿನ್ನ ವಶರಾಗಿ,
ಪರಿಪೂರ್ಣ ಸೇವೆ
ಮಾಡ ಸಿದ್ಧರಾಗಿದ್ದೇವೆ.
ದೇವರೇ,
ನಿನಗೇ
ತಕ್ಕದೆಮ್ಮ ಧ್ಯಾನ,
ತಕ್ಕದೆಲ್ಲ ಮಾನ!

4. ನಮ್ಮ ಹೃದದಲ್ಲಿ
ದಯದಿಂದ ಬಂದು,
ಪರಿಶುದ್ಧ ಜಲ ತಂದು,
ತೊಳೆ ಪಾಪಮಲ!
ಹೃದದಂಧಕಾರ
ಆಗಲಿನ್ನು ಪರಿಹಾರ!
ಕರ್ತನೇ,
ನಿನ್ನಲ್ಲೇ
ನಮಗುಂಟು ಜ್ಞಾನ,
ನಿತ್ಯ ಸಮಾಧಾನ.

೧೫೫

Zeige dich uns ohne Hülle.
M. T. 164.

1. ಈಶನೇ, ಪ್ರತ್ಯಕ್ಷನಾಗು!
ಆಶೀರ್ವಾದಪ್ರದನಾಗು!
ನಾವುದ್ಧಾರವಾಗುವಂತೆ
ಜೀವವುಳ್ಳ ಯಜ್ಞದಂತೆ
ಇರ್ವ ನೀನು ನಮ್ಮನ್ನೀಗ
ಸರ್ವ ವಿಷಯಾಶೆ ನೀಗ
ಮಾಡಿ, ತಂದೆಗೈಕ್ಯವಾಗಿ!
ಕೂಡಿಸಿಕ್ಕು ಕೃಪೆಯಾಗಿ!

2. ಪಾಪವೆಂಬ ಸಾಲ ಸಂತು,
ತಾಪ ತೀರಲಿಕ್ಕೆ ಬಂತು
ಎಂತೆಮ್ಮಲ್ಲಿ ಹೇಳಿ ಬಿಡು!
ಶಾಂತಿ ಹೃದದೊಳಗಿಡು!
ಕಡೇ ದಿನ ಸಭೆಯಲ್ಲಿ
ಮೂಡುವ ಪ್ರಕಾಶದಲ್ಲಿ
ಸಂಚಕಾರಕ್ಕಾಗಿ ಈಡು
ಹಂಚಿ, ಆತ್ಮಜ್ಯೋತಿ ನೀಡು!

3. ಮೋಕ್ಷ ದಿನ ಬರುವಲ್ಲಿ
ದೀಕ್ಷ ಸಭೇ ಪ್ರಭೆಯಲ್ಲಿ

ನಾವೂ ನಿಂತು, ಶುಭ್ರ ವಸ್ತ್ರ,
ಜೀವಮಾಲೆ, ಜಯಶಸ್ತ್ರ,
ಪರ್ಣಧ್ವಜ ಪಡಕೊಂಡು,
ಸ್ವರ್ಣನಾಮಧೇಯಗೊಂಡು,
ಸತ್ಯಸ್ವಾಮಿಯಾ ಸೇವೆ ಗೈಯ
ನಿತ್ಯ ದಯಪಾಲಿಸಯ್ಯ!

೧೫೬

Tut mir auf die schöne Pforte.
M. T. 80.

1. ಸ್ವಾಮಿಯಾ ದರ್ಶನಾರ್ಥವಾಗಿ
ಭಕ್ತಸಭೆ ಕೂಡಿದೆ;
ಆತನೇ ಪ್ರಸನ್ನನಾಗಿ
ಇಲ್ಲಿರೋದು ಸತ್ಯವೆ.
ಇಲ್ಲಿ ದೇವಗೃಹವು;
ಇಲ್ಲಿ ಸ್ವರ್ಗದ್ವಾರವು.

2. ನಿನ್ನನ್ನೀಶ, ಕಾಣ ಬಂದೆ;
ನೀನು ಬಂದು ದರ್ಶಿಸು!
ನಿಂಗೆ ಹೃದವನ್ನು ತಂದೆ;
ಅದರಲ್ಲಿ ವಾಸಿಸು!
ಎಲ್ಲಿ ನಿನ್ನ ಆಲಯ,
ಅಲ್ಲಿ ಸ್ವರ್ಗ ಸಂತಸ.

3. ತನು ಮನ ಶುದ್ಧ ಮಾಡಿ
ನಿನಗೆ ಪ್ರತಿಷ್ಠಿಸು;
ನಿನ್ನ ಐಕ್ಯದಿ ಕಾಪಾಡಿ,
ಸತ್ಯಭಕ್ತಿ ವರ್ಧಿಸು!
ಆಗಲೆನ್ನ ಪ್ರಾರ್ಥನೆ
ನಿನಗಿಷ್ಟ ಅರ್ಪಣೆ!

4. ವಾಕ್ಯವನ್ನು ಬಲದೊಡ
ಮನದೊಳ್ ಬೇರೂರಿಸು!
ನೂರರಷ್ಟು ಫಲ ಕೊಡ
ಭೂಮಿ ಸಿದ್ಧ ಪಡಿಸು!
ಅಂಧಕಾರ ಬಿಡಿಸು!
ಜ್ಞಾನತೇಜ ಮೂಡಿಸು!

5. ಬೇಕು ನಿನ್ನ ಆಜ್ಞೆ ಕೇಳಿ
ಮಾಡೊ ಸಿದ್ಧ ಬುದ್ಧಿಯು.
ನೀನದಾಗಲೆಂದು ಹೇಳಿ
ನನ್ನಲ್ಲಯ್ಯಾ ನಿರ್ಮಿಸು!
ಹೆಚ್ಚಿಸೆನ್ನ ನಂಬಿಕೆ!
ಆಗ ಕಾದಿ ಜೈಸುವೆ.

6. ಭೂಸಂಚಾರದಲ್ಲಿ ಮನ್ನ
ಕೊಟ್ಟು ನನ್ನ ಪೋಷಿಸು.
ಲೋಕಾರಣ್ಯದಿಂದೆನ್ನನ್ನ,
ಸ್ವಾಮಿಯಾ, ಪಾರುಗಾಣಿಸು!
ಸ್ವರ್ಗ ಪ್ರಸ್ತದೂಟಕು
ದಯವಿಟ್ಟು ಸೇರಿಸು!

೧೫೭

Herr Gott, dich loben alle wir.
M. T. 35.

1. ಭೂಲೋಕವೆಲ್ಲ ಕರ್ತಗೆ
ಉತ್ಸಾಹಧ್ವನಿ ಎತ್ತಲಿ!

ಆತಂಗೆ ಹರ್ಷದೊಡನೆ
ಸ್ತೋತ್ರಾದಿಸೇವೆ ಮಾಡಲಿ!

2. ಸರ್ವೇಶನೆಮ್ಮ ದೇವರು;
ನಾವಾತನ ಸ್ವಕೃತ್ಯವು.
ಬಾ, ಹಿಂಡೆ! ಎಂತ ನಮ್ಮನು
ಕಾಪಾಡಿ ಮೇಯ್ಸುತಿರ್ಪನು.

3. ಮೇಳಾಗಿ ದ್ವಾರ ಸೇರುವಾ!
ನವಿಶ್ರಾಮ ಗೃಹ ತುಂಬಲು,
ಸಂತೋಷಸ್ತೋತ್ರ ಹಾಡುವಾ!
ಇದೆಮ್ಮ ಯುಕ್ತ ಸೇವೆಯು.

4. ಸರ್ವೋಪಕಾರಿ ಆತನೆ;
ಯಾವಾಗ್ಯು ಕೃಪಾಪೂರ್ಣನು;
ನಿಲ್ಲೋದನಂತ ಕಾಲಕೆ
ಯೆಹೋವ ಕೊಟ್ಟ ವಾಕ್ಯವು!

೧೫೮

To bless Thy chosen race.
M. T. 4.

1. ಸ್ವಕೀಯ ಪ್ರಜೆಯು
ನೀ, ಕರ್ತ, ಸಲಹು!
ಪ್ರಸನ್ನಮುಖತೇಜವ
ಭಕ್ತರ್ಗೆ ಮೂಡಿಸು!

2. ಶ್ರೀ ಯೇಸು ಒಡೆಯಾ,
ನೀನೆಮ್ಮ ಜೀವವು!
ವಿಮುಕ್ತ ಸಭೆ ಸರ್ವದಾ
ಹೊಸನ್ನ ಹಾಡೋದು.

3. ಸಮಸ್ತ ಲೋಕವು
ಹೃದ್ಹರ್ಷಸ್ತೋತ್ರದಿ
ನಿಂಗಯ್ಯು ಸರ್ವ ಕಾಲಕು
ಸಂಸೇವೆ ಮಾಡಲಿ!

೧೫೯

Lass mich dein sein und bleiben.
M. T. 128.

ಐ ಸತ್ಯಸಂಧನಾದ
ನನ್ನೀಶ ದೇವರೆ,
ವಿಶ್ವಾಸದೃಢವಾದ
ಸಂಸೇವೆ ನಿನಗೆ
ನಾ ಮಾಡೋ ವರವನ್ನು
ನಂಗನುಗ್ರಹಿಸು!
ನಿರಂತ್ರ ಸ್ತೋತ್ರವನ್ನು
ನಿಂಗೈಯ್ಯು ಗೈವೆನು.

೧೬೦

Unsern Ausgang segne Gott.
M. T. 75.

ಸ್ವಾಮಿಾ, ಶುಭಗಾಣಿಸು
ನಾವು ಹೋಗೋ ಬರೋದನ್ನು!
ಪೋಷಿಸಾಶೀರ್ವದಿಸು
ನಮ್ಮ ವೃತ್ತಿ ಕೃತ್ಯವನ್ನು!

ಒಳ್ಳೇ ಮೃತಿ, ಮೋಕ್ಷಗತಿ
ಒದಗಿಸು, ರಕ್ಷಾಪತಿ!

೧೬೧

Die wir uns allhier beisammen finden.—M. T. 166.

ನಿನ್ನ ಮುಂದೆ ಒಡಂಬಡುತೇವೆ,
ಕ್ರೂಜೆ ತಾಳ್ದ ಕರ್ತನೆ!
ನಿನ್ನಲೈಕ್ಯವಾಗಿ ನಿತ್ಯ ಸೇವೆ
ನಡಿಸೋಣ ನಿನಗೆ!
ನಮ್ಮ ಬಡ ಸ್ತೋತ್ರಬಲಿಗಾಗಿ
ನೀನು ಮೆಚ್ಚಿಕೊಂಡ ಗುರು
ತಾಗಿ
ನಮಗಾಮೆನ್ ಎನ್ನಲು,
ಸಮಾಧಾನ ಪಾಲಿಸು!

೧೬೨

Mel. Herr Gott, dich loben alle wir.—M. T. 35.

ಸಮಸ್ತ ಜೀವರಾಶಿಯೇ,
ಸಮಸ್ತ ದೂತಸೈನ್ಯವೇ,
ಪಿತಾಪುತ್ರಾತ್ಮಕೆರಗಿ
ಅನಂತ ಸ್ತೋತ್ರ ಮಾಡಿರಿ!

೧೬೩

2. Cor. 13, 14.—M. T. 200.

ಕರ್ತನಾದ ಯೇಸು ಕ್ರಿಸ್ತನ
ಕೃಪೆಯೂ
ದೇವರ ಪ್ರೀತಿಯೂ
ಪರಿಶುದ್ಧಾತ್ಮನ ಐಕ್ಯವೂ
ಸದಾ ನಮ್ಮೆಲ್ಲರೊಂದಿಗಿರಲಿ!
ಆಮೆನ್!

೨. ದೇವವಾಕ್ಯ

೧೬೪

Mel. Meinen Jesum lass' ich nicht. M. T. 72.

1. ದೇವವಾಕ್ಯ, ನಿನಗೆ
ಕೊಡೊದೆಂತು ಯೋಗ್ಯ ಘನ?
ನಿನ್ನ ಹಾಲು ಕುಡಿದೆ;
ಉಣ್ಣಿಸಿದ್ಧಿ ನಿನ್ನ ಮನ್ನ.
ಕ್ಷೇಮಕರ ಔಷಧಿ
ನನ್ನ ಆತ್ಮಕೀಯುತಿ.

2. ನೀನು ಶತ್ರುಬಾಣವ
ಹಿಂದಕ್ಕಾಕುವಂಥ ಡಾಲು;
ನೀನು ದಿವ್ಯ ಖಡುಗ;
ನನ್ನ ಕೈಗೆ ಶ್ರೇಷ್ಠ ಪಾಲು;

ನೀನು ಉಕ್ಕಿಗಿಂತಲು
ಯುದ್ಧದಲ್ಲಿ ಹದವು.

3. ತುಂಬಿವೆ, ಸಮುದ್ರವೇ,
ಮುತ್ತು ನಿನ್ನ ಒಡಲಲ್ಲಿ!
ಎಷ್ಟೊ ಹೊನ್ನು, ಶೈಲವೇ,
ಉಂಟು ನಿನ್ನ ಗರ್ಭದಲ್ಲಿ!
ಹೊಲ, ನಿನ್ನ ಬೆಳೆಯು
ಹೊಟ್ಟುಸೂಡು ಇಲ್ಲದ್ದು!

4. ರಮ್ಯವಾದ ವನವೆ,
ಶ್ರೇಷ್ಠ ಹೂವು ಮಿಂಚೊ ತೋ
ಟ!
ನಿನ್ನಲುಂಟು ನನಗೆ
ಒಳ್ಳೇ ಶ್ರುತಿ, ಒಳ್ಳೇ ನೋಟ.
ಭಾರ ಹೊರೆಯಿಲ್ಲಿಗೆ
ಹಾಕಿ ಸುಖಿಯಾಗುವೆ.

5. ಬೆಳಕುಳ್ಳಾಕಾಶವೆ!
ನಿನ್ನ ನಕ್ಷತ್ರಂಗಳಿಂದ
ಇಹರಾತ್ರಿಯೊಳಗೆ
ಕಾಂತಿಯಾಗುವದರಿಂದ
ಲೋಕಕಾಡಿನೊಳಗೆ
ದಾರಿ ಸಿಕ್ಕೊದೆನಗೆ.

6. ಪ್ರಿಯ ದೇವವಾಕ್ಯವೆ,
ಕಷ್ಟದಲ್ಲಿ ನೀನೆ ಶಾಂತಿ;
ಲೋಕದಲ್ಲಿ ಕತ್ತಲೆ
ಹೆಚ್ಚುವಾಗ, ನೀನೆ ಕಾಂತಿ;
ಅಂತ್ಯಶ್ವಾಸ ಹೋಗಲು,
ನೀನೆ ನನ್ನ ಧ್ಯಾನವು!

೧೬೫

Mel. O mein Heimatland, o mein Vaterland.—M. T. 264.

1. ದಿವ್ಯ ಶಾಸನ!
ಭವ್ಯ ಭಾಷಣ!
ಮೇಲುಲೋಕ ಜೀವಸಾರವ,
ಹಾಲು ಜೇನಿನಂಥ ಪ್ರೀತಿಯ
ಕೀಳು ಲೋಕಕೀಯುತ್ತಿರುವ
ದ್ರವ್ಯನಿಧಿಯೇ!
ದಿವ್ಯ ಗ್ರಂಥವೇ!
ಮೇಲುಲೋಕ ಜೀವಸಾರವ,
ಹಾಲು ಜೇನಿನಂಥ ಪ್ರೀತಿಯ
ಕೀಳು ಲೋಕಕೀಯುತ್ತಿರುವ
ನೀ ಸತ್ಯವು!
ನೀ ನನ್ನದು,
ಶ್ರೀ ಬೈಬಲು!

2. ಇನ್ನು ಬದ್ಧವು
ನಿನ್ನ ನ್ಯಾಯವು—
ನರರೆಲ್ಲ ತಪ್ಪಿ ಹೋದರು!
ನರಜ್ಞಾನ ಮೂರ್ಖತನವು!
ನರಜಾತಿ ಶಾಪಮಯವು!
ಭ್ರಷ್ಟತನವು
ಅಷ್ಟು ಘೋರವು!
ನರರೆಲ್ಲ ತಪ್ಪಿ ಹೋದರು!

ನರಜನ್ಮನ ಮೂರ್ಖತನವು !
ನರಜಾತಿ ಶಾಪಮಯವು !
ನೀ ಸತ್ಯವು !
ನೀ ನನ್ನದು,
ಶ್ರೀ ಬೈಬಲು !

3. ಶುಭವಾರ್ತೆಯು !
ಸಭೆ ಲಾಲಿಸು —
ಸ್ತುತ್ಯನೊಬ್ಬ ಪುರುಷೋತ್ತಮ !
ಸತ್ಯನೊಬ್ಬನವತಾರಕ !
ನಿತ್ಯನೊಬ್ಬ ನರರಕ್ಷಕ !
ಅಂದು ಬಂದನು,
ಇಂದಿರುವನು !
ಸ್ತುತ್ಯನೊಬ್ಬ ಪುರುಷೋತ್ತಮ !
ಸತ್ಯನೊಬ್ಬನವತಾರಕ !
ನಿತ್ಯನೊಬ್ಬ ನರರಕ್ಷಕ !
ನೀ ಸತ್ಯವು !
ನೀ ನನ್ನದು,
ಶ್ರೀ ಬೈಬಲು !

4. ಬಡ ಪಾಪಿಗೆ,
ಜಡ ರೋಗಿಗೆ —
ನವ ಜೀವಕರ ಔಷಧಿ,
ನವ ದೇಹಾಕಾಶ ಪೃಥಿವಿ
ಈವನೀಶನೆಂದು ಹೇಳುತಿ !
ನಿತ್ಯ ಕ್ಷೇಮವು !
ನಿತ್ಯ ತೃಪ್ತಿಯು !
ನವ ಜೀವಕರ ಔಷಧಿ,
ನವ ದೇಹಾಕಾಶ ಪೃಥಿವಿ
ಈವನೀಶನೆಂದು ಹೇಳುತಿ !
ನೀ ಸತ್ಯವು !
ನೀ ನನ್ನದು,
ಶ್ರೀ ಬೈಬಲು !

೧೬೬

Holy Bible, book divine.—M. T. 65.

1. ಶುದ್ಧ ದಿವ್ಯ ಗ್ರಂಥವೇ,
ನನ್ನ ಶ್ರೇಷ್ಠ ದ್ರವ್ಯವೇ,
ತೋರಿಸೆನ್ನ ಸ್ಥಿತಿಯ,
ಬೋಧಿಸೆಂಗೆ ಮಿತಿಯ !
ಶುದ್ಧ ದಿವ್ಯ ಗ್ರಂಥವೆ
ಶ್ರೇಷ್ಠ ದ್ರವ್ಯವೆನಗೆ.

2. ನೀನೆ ನಡಿಸೆನ್ನನ !
ತೋರಿಸೆನ್ನ ಪಾಪವ !
ನೀನೆ ನನ್ನ ರಕ್ಷಣೆ,
ನನ್ನ ಜೀವಮಾರ್ಗವೆ.
ಶುದ್ಧ ದಿವ್ಯ ಗ್ರಂಥವೆ
ಶ್ರೇಷ್ಠ ದ್ರವ್ಯವೆನಗೆ.

3. ಮೋಕ್ಷಲೋಕದಾನಂದ
ಮಾಡೆನ್ನಲ್ಲಿ ಖಚಿತ !
ಮರಣಾಂಧಕಾರದಿ
ನಂಬಲಿಕ್ಕೆ ಧೈರ್ಯದಿ,
ಶುದ್ಧ ದಿವ್ಯ ಗ್ರಂಥವೆ,
ನೀನೆ ಬೋಧಿಸೆನಗೆ !

4. ನಾನು ಸತ್ತು ಏಳಲು,
ಮಹಿಮಾಕಿರೀಟವು
ದೇವರಿಂದ ಹೊಂದುವ
ಮಾರ್ಗ ಬುದ್ಧಿ ಶಕ್ತಿಯ
ನೀನು ಬೋಧಿಸೆನಗೆ,
ಶುದ್ಧ ದಿವ್ಯ ಗ್ರಂಥವೆ!

---

೩. ಸ್ನಾನ

೧೬೭*

Mel. Wir sind dein Eigentum, o Lamm.—M. T. 42.

1. ಈ ಮಂದಿ ನಿನ್ನ ಮಾತಿಗೆ
ವಿಶ್ವಾಸದಿಂದ ಒಪ್ಪಿದ್ದಾರೆ,
ಸಜ್ಜೀವವನ್ನು ಬಯ್ಸುತಾರೆ.
ಸ್ವೀಕಾರ ಮಾಡು, ಕರ್ತನೆ!

2. ಈ ಮಂದಿಯನ್ನು ರಕ್ಷಿಸು!
ಹೃದಯ ಶುದ್ಧ ಮಾಡಿ ಬಿಟ್ಟು,
ನವೀನ ನಾಮ ಬರೆದಿಟ್ಟು,
ನಿನ್ನಾತ್ಮಸ್ನಾನ ಪಾಲಿಸು!

3. ಈ ಮಂದಿ ಪಾಪ ತ್ಯಜಿಸಿ
ಕಾಲಿಟ್ಟ ನಿನ್ನ ಮಾರ್ಗದಲ್ಲಿ,
ಕ್ರಿಸ್ತ್ಯೇಸು, ಸಣ್ಣ ಹಾದಿಯಲ್ಲಿ
ದಿನಾಲು ಮುಂದೆ ಸಾಗಲಿ!

೧೬೮*

Mel. Wenn Christus der Herr. M. T. 254.

1. ಉದ್ಧಾರಕನೇ,
ಈ ಸ್ನಾತರಿಗೆ
ನೀ ತೋರಿಸಿದಿ
ಸನ್ಮಾರ್ಗವನೆ;
ಈ ಪಯಣದಲ್ಲಿ
ಮುಂದರಿಸಲು,
ಕಾಪಾಡು! ಕಾಪಾಡು
ನಿನ್ನವರನು!

2. ದುರಾಶೆಗಳಂ
ನಿರ್ಮೂಲಿಸಲು,
ನಿರಾಶೆಯನು
ನಿವಾರಿಸಲು,
ಸೈತಾನನ ಸೇನೆ
ವಿಜಯಿಸಲು
ಐ ನೀಡು! ಐ ನೀಡು
ನಿನ್ನಾತ್ಮವನು!

---

* ಪ್ರಾಯಸ್ಥರ ಸ್ನಾನ.

೧೬೯

Mel. **O Saviour, Lord, to Thee we Pray.—M. T. 38.**

1. ಕಟಾಕ್ಷವುಳ್ಳ ದೇವರೇ!
ಈ ದಾ ಸನ/ಸಿಯ ನ್ನು[1] ದೃಷ್ಟಿಸು!
ನಿನ್ನಾಶೀರ್ವಾದ, ತಂದೆಯೇ,
ಈವಾಗ ದಯೆಪಾಲಿಸು!

2. ನಿನ್ನಲ್ಲಿ, ಸಭಾಶಿರಸ್ಸೇ,
ಅನ್ಯೋನ್ಯವಾಗ ಸೇರಿಸು!
ವಿಶ್ವಾಸ, ಪ್ರೀತಿ, ನಂಬಿಕೆ
ನೀನೀ ತನ/ಕೆಯ ಲ್ಲಿ[2] ಹುಟ್ಟಿಸು!

3. ದೇವಾತ್ಮನೇ, ನೀನೀ ತನ/ಕೆಯ [3]
ಅಂತರ್ಯದಲ್ಲಿ ವಾಸಿಸು!
ಸನ್ಮಾರ್ಗ ಕಾಣಲೀಸುವ
ಪ್ರಕಾಶ ಕೊಟ್ಟು ನಡಿಸು!

4. ಆಸಕ್ತಿಯಿಂದ ಈ ತನು/ಕೆಯು [4]
ನಿನ್ನಲ್ಲಿ ಸೇವೆ ಮಾಡಲಿ!
ದೇಹಾತ್ಮ ಪ್ರಾಣ ಯಾವತ್ತು
ನಿರಂತ್ರ ನಿನ್ನವಾಗಲಿ!

೧೭೦

Christ, unser Herr, zum Jordan kam.—M. T. 174.

1. “ಸರ್ವಾಧಿಕಾರ ನನ್ನದೇ
ಭೂಪರಲೋಕದಲ್ಲಿ!
ಸುವಾರ್ತೆ ಸಾರಿ, ಶಿಷ್ಯರೇ,
ಸಮಸ್ತ ಸೃಷ್ಟಿಯಲ್ಲಿ,
ಪಿತಾಪುತ್ರಾತ್ಮನಾಮದಿ
ಕೊಟ್ಟಿನ್ನು ಸ್ನಾನವನ್ನು,
ಕೈಕೊಳ್ಳಲಿಕ್ಕೆ ಹೇಳಿರಿ
ನಾ ನಿಮಗ್ಹೇಳಿದ್ದನ್ನು!”
ಎಂಬಾಜ್ಞೆ ಯೇಸು ಕೊಟ್ಟ.

2. ಈ ಆಜ್ಞೆಗನುಸಾರವು
ಈಗಹುದಿಲ್ಲಿ ಸ್ನಾನ.
ಶ್ರೀ ಯೇಸು, ದಯೆಪಾಲಿಸು
ಪವಿತ್ರ ಆತ್ಮದಾನ!
ಈ ಅಂಗವನ್ನು ಸೇರಿಸಿ
ನಿನ್ ಸಭಾಕಾಯದಲ್ಲಿ,
ಈ ಕುಡಿಯನ್ನು ನಿನ್ನಲಿ
ಅಂಟಿಕ್ಕು, ನಿಜ ಬಳ್ಳಿ!
ಈ ಕುರಿಯನ್ನು ಕಾಯಿ!

೧೭೧

Hab' ich recht und wahr vernommen.—M. T. 140.

1. ಬಪ್ಪ ಬಾಲರನ್ನು ಕಂಡು—
“ಅಡ್ಡ ಕಟ್ಟದೆ,
ಬರಗೊಡಿಸಿರಿ” ಅಂದು
ಯೇಸು ಕೂಡಲೆ
ಮಾಡಿ ದಯೆಯ
ಚಿಕ್ಕ ಮಕ್ಕಳ

ಅಥವಾ: 1) ದಾಸರನ್ನು. 2) ನೀನಿವರಲ್ಲಿ. 3) ನೀನಿವರ. 4) ಇವರು.

ಅಪ್ಪಿಕೊಂಡು ಆಶೀರ್ವಾದ
ಕೊಟ್ಟನುತ್ತಮ ಪ್ರಸಾದ!

2. ನಾನೂ ಮಗುವಲ್ಲವೇನು?
ಬಂದೆ, ಯೇಸುವೇ!
ಆಗ ವರ ಕೊಟ್ಟ ನೀನು
ಈಗ ಕೊಡಿಯೇ?
ನಿನ್ನ ಪಾದಕೆ
ಬಿದ್ದೆ, ಯೇಸುವೇ!
ಮುಕ್ತನಾದೆನು ನಿನ್ನಲ್ಲಿ,
ಮುಕ್ತನಿಹಪರದಲ್ಲಿ!

೧೭೨

Mel. Herr Gott, dich loben alle wir.—M. T. 35.

1. "ನನ್ನಾಶೀರ್ವಾದಹೊಂದಲು
ಬಾಲರು ಬರ ಬಹುದು!"
ಹೀಗೆಂದು, ಪ್ರಿಯ ಕರ್ತನೇ,
ನೀನಾಜ್ಞೆ ಕೊಟ್ಟೆಯಲ್ಲವೇ?

2. ನಾವೀಗ ತಂದ ಕೂಸಿಗೆ
ಪ್ರಸನ್ನನಾಗು, ಕರ್ತನೆ!
ಪವಿತ್ರ ಆತ್ಮಸ್ನಾನವ
ನೀನೀಗ ಕೊಡು, ರಕ್ಷಕ!

3. ಈ ಮಗುವನ್ನು, ದೇವರೇ,
ತಕ್ಕೊಽ ನಿನ್ನಂಗವಾಗಿಯೇ!
ಇದನ್ನು ಇಲ್ಲಿ ಕಾಪಾಡು!
ಆ ಲೋಕದಲ್ಲಿ ಸೇರಿಸು!

೧೭೩

Mel. Wachet auf! ruft uns die Stimme.—M. T. 195.

ದಿವ್ಯ ಆಶೀರ್ವಾದಕಾಗಿ
ಈ ಶಿಶುವನ್ನು ತರಲಾಗಿ,
ನೀ ಪಾಲಿಸು, ಯೆಹೋವನೇ!
"ನಿನ್ನ ದೇವರಾಗಿದ್ದೇನೆ,
ನಿನ್ನನ್ನು ಮಗುವೆನ್ನುತೇನೆ"
ಎಂದುಸುರಿದ್ಧಿಯಲ್ಲವೇ?
ನವೀಕರಿಸಪ್ಪಾ!
ಪ್ರಸಾದ ನೀಡ ಬಾ!
ಹೊಸಿಯನ್ನಾ!
ವಿಶ್ವಾಸಿಗೆ
ಈಯ್, ಕ್ರಿಸ್ತನೆ,
ನಿನ್ನಾತ್ಮವೆಂಬ ಒಡವೆ!

೧೭೪

Mel. To bless Thy chosen race. M. T. 4.

1. ಸ್ವರ್ಗೀಯ ಪಿತನೇ,
ನೀ ಪ್ರೀತಿಯಬ್ಧಿಯೇ!
ನೀನೆಲ್ಲ ಉಂಟು ಮಾಡಿದೆ
ಸಂಪ್ರೀತಿಯಿಂದಲೆ.

2. ಈ ಕೂಸಿಗೀಗಲು
ಕಟಾಕ್ಷ ತೋರಿಸು!
ಸದ್ಭಕ್ತಿಯಲ್ಲಿ ಬೆಳಿಸು,
ಕಾಪಾಡಿ ರಕ್ಷಿಸು!

3. ಕ್ರಿಸ್ತ್ಯೇಸು ಒಡೆಯ,
ನೀನೊಳ್ಳೇ ಕುರುಬ!
ನಿನ್ ಮಂದೆಗೀಗ ಸೇರಿಸು
ಈ ನಮ್ಮ ಕೂಸನು!

4. ನಿನ್ನಲ್ಲಿ ಬೆಳದು,
ನಿಂಗಾಗಿ ಬಾಳಲಿ!
ಈ ಜೀವಯಾತ್ರೆ ಮಾಡಲು,
ಕರ್ತಾ, ನೀ ಸಲಹು!

5. ಪವಿತ್ರ ಆತ್ಮನೇ,
ನೀ ದಿವ್ಯ ಜೀವವೇ!
ಅನಂತ ಜೀವ ಪಾಲಿಸು
ಈ ಪ್ರಿಯ ಕೂಸಿಗು!

6. ಕಳಂಕವೆಲ್ಲವಂ
ನೀ ತೊಳೆ! ಕಾಂತಿಯಂ
ನೀ ವರ್ಧಿಸು, ತ್ರಯೈಕನೆ!
ಸಂಸ್ತುತಿ ನಿನಗೆ!

೧೭೫

Mel. **Sit down beneath His shadow.— M. T. 297. 9.**

1. ಆಲೈಸು, ಬಾಲಮಿತ್ರ
ದಯಾಳು ಯೇಸುವೇ!
ನಿನ್ನಾಶೀರ್ವಾದ ಬೇಕು
ಈ ಪ್ರಿಯ ಕೂಸಿಗೆ.

2. ಇದನ್ನು ಕೈಗಳಲ್ಲಿ
ನೀನೆತ್ತಿ ಹಿಡಿದು
ನಿನ್ನಾಶೀರ್ವಾದ ನೀಡಿ
ದೇಹಾತ್ಮ ರಕ್ಷಿಸು!

3. ತ್ರಯೈಕ ನಾಮದಲ್ಲಿ
ಶ್ರೀ ಸ್ನಾನವಾಗಲು,
ಸಂಧಾನ ಕೃಪೆಯಲ್ಲಿ
ನೀನಂಗೀಕರಿಸು!

೧೭೬

Mel. **Liebster Jesu, wir sind hier.
M. T. 75.**

1. ಸ್ನಾನ ಹೊಂದಿದವನ/ಳ[1]
ಪ್ರಿಯ ಯೇಸುವೇ, ಕಾಪಾಡು!
ನಿನ್ನ ಪ್ರಜೆಯರಿಯ
ರಾಜ್ಯವನ್ನು ಹೀನ ಮಾಡು!
ಸಭೆಯೆಂಬ ರಾಜ್ಯವಾಳು!
ಜಯಶಾಲಿಯಾಗಿ ಬಾಳು!

2. ಇಟ್ಟ ನಾಮಧೇಯವಂ
ನಿನ್ನ ಹಸ್ತದಲ್ಲಿ ಬರೆ!
ಚೀಯೋನ್ ಪಟ್ಟಣಕವನಂ/ಳಂ[2],
ಜೀವ ತೀರಿದಾಗ, ಕರೆ!
ನಂಬಿಕೊಂಡ ಜನವಲ್ಲಿ
ಹರ್ಷಿಸೋದು ನಿತ್ಯದಲ್ಲಿ.

ಅಥವಾ: 1) ಹೊಂದಿದವರ. 2) ಪಟ್ಟಣಕವರಂ.

೪. ದೃಢೀಕರಣ

೧೭೭

Erhör', o Gott, das heisse Flehn.
M. T. 280.

ಸಭೆ—

1. ಅಪ್ಪಾ, ನೀ ನಮಗೊಲಿದು
ಈ ಮಕ್ಕಳಂ ಕಟಾಕ್ಷಿಸು!
ನೀನವರನ್ನು ಸ್ನಾನದಿಂದ
ಸ್ವೀಕರಿಸಿದ್ದೀ ಕೃಪೆಯಿಂದ.
ಕಟಾಕ್ಷಿಸು! ಕಟಾಕ್ಷಿಸು!

ಮಕ್ಕಳು—

2. ಅಂದಾದ ಒಡಂಬಡಿಕೆ
ಈ ಜೀವವಿರೋ ವರೆಗೆ
ಕೈಕೊಳ್ಳ ಮನಸ್ಸಾಗಿದ್ದೇವೆ;
ಸದಾ ನಿನ್ನವರಿರುತ್ತೇವೆ.
ಸ್ವೀಕರಿಸು! ಸ್ವೀಕರಿಸು!

ಸಭೆ—

3. ನಿನ್ನಾತ್ಮವರ ಸುರಿದು
ನಿನ್ನಾಶೀರ್ವಾದ ಪಾಲಿಸು
ಈ ಮಕ್ಕಳಿಂಗೆ, ಪ್ರಿಯ ತಂದೆ!
ಸಂರಕ್ಷಿಸಿನ್ನು ನಿನ್ನ ಮುಂದೆ!
ಸಂರಕ್ಷಿಸು! ಸಂರಕ್ಷಿಸು!

ಮಕ್ಕಳು—

4. ಈ ತಂತ್ರವುಳ್ಳ ಲೋಕದಿ
ನೀನೆಮ್ಮ ಬಲ ಪಡಿಸು!
ದುರ್ಮೋಹ ಮದ ಮದ್ಯದಿಂದ,
ಸೈತಾನನಿಟ್ಟ ಬಲೆಯಿಂದ
ವಿಮೋಚಿಸು! ವಿಮೋಚಿಸು!

ಸಭೆಯೂ ಮಕ್ಕಳೂ ಒಟ್ಟಿಗೆ—

5. ಕೈ ಹಿಡಿ, ನಮ್ಮ ತಂದೆಯೆ!
ಆ ಮೇಲಿನ ಸ್ವದೇಶಕೆ
ನಮ್ಮೆಲ್ಲರನ್ನು ಪಾರು ಮಾಡು!
ನಿನ್ನಾತ್ಮದೈಕ್ಯದಿ ಕಾಪಾಡು!
ಕೇಳೆಮ್ಮನ್ನು! ಕೇಳೆಮ್ಮನ್ನು!

೧೭೮

Mel. **Trittst im Morgenrot daher**
M. T. 281.

ಸಭೆ—

1. ಬನ್ನಿ, ಬನ್ನಿ, ಮಕ್ಕಳೇ!
ನಿಮ್ಮ ಸ್ನಾನ ದೃಢವೇ!
ಯೇಸು ಕ್ರಿಸ್ತ ನಿಮ್ಮನು
ಕೊಂಡನು.

ಮಕ್ಕಳು—

ಶುಭವಾರ್ತೆ ಕೇಳಿದ್ದೇವೆ;
ಕ್ರಿಸ್ತದಾಸರಾಗುತೇವೆ.

ಆತ ನಮ್ಮ ಸ್ವಾಮಿಯು;
ಬೇಡ ಬೇರೆ ಪ್ರೇಮಿಯು.

ಸಭೆ—

2. ನೀವು ದ್ರಾಕ್ಷೆಬಳ್ಳಿಯ
ಅಂಟಿಕೊಳ್ಳಿ. ಸರ್ವದಾ!
ವಾಕ್ಯದಿ, ಪ್ರಸಾದದಿ
ಹೀರಿರಿ!

ಮಕ್ಕಳು—

ಯೇಸುಪ್ರೀತಿಗಂತ್ಯವಿಲ್ಲ;
ಯೇಸುವನ್ನು ಬಿಡೊದಿಲ್ಲ;
ಕೃಪೆ ಪಾನ ಮಾಡುತ
ಆತಗಾಗಿ ಗೇಯುವ!

ಸಭೆಯೂ ಮಕ್ಕಳೂ ಕೂಡ—

3. ಆದಿ ಶಿಷ್ಯಭಕ್ತಿಯು
ನಮ್ಮ ಮೇಲುಪಂಕ್ತಿಯು;
ಯೇಸುವೇ, ಕಟಾಕ್ಷಿಸು
ನಮ್ಮನು!
ಈಗ ಬಲಹೀನರಾದ
ನಮಗೀಯು ಆಶೀರ್ವಾದ!
ನಿನ್ನೆ, ಇಂದು, ನಿತ್ಯವು
ನೀನೆ ನಮ್ಮ ದೇವರು!

೧೭೯

Ich bin getauft auf deinen Namen.
M. T. 90.

1. ಪಿತಾಪುತ್ರಾತ್ಮನಾಮಸ್ನಾನ
ಹೊಂದಿರುವಂಥ ನಮಗೆ
ನೀ, ತಂದೆ, ಕೊಟ್ಟೆ ಪುತ್ರಸ್ಥಾನ;
ನಮ್ಮನ್ನು ನೀನು, ಯೇಸುವೆ,
ಸ್ವರಕ್ತದಿಂದ ತೊಳೆದಿ;
ದೇವಾತ್ಮಾ, ಆದರಿಸುತ್ತಿ.

2. ನಾವೋ ಸೈತಾನವಶದಿಂದ
ವಿಮುಕ್ತರಾಗಿ, ನಿನ್ನಲ್ಲೇ
ಸಂಪೂರ್ಣ ಭಯಭಕ್ತಿಯಿಂದ
ವಿಶ್ವಾಸವಿಟ್ಟು, ಕರ್ತನೇ,
ನಿನ್ನನ್ನು ಪ್ರೀತಿಸುವೆವು
ಎಂದ್ಹೇಳಿ ಮಾತು ಕೊಟ್ಟೆವು.

3. ನೀ, ಕರ್ತಾ, ಸತ್ಯಸಂಧನಾಗಿ
ವಾಗ್ದಾನವಂ ಕಾಪಾಡುವಿ;
ನಾವೋ ವಿಶ್ವಾಸಭ್ರಷ್ಟರಾಗಿ
ಕೆಟ್ಟೇವು. ನೀನು ತಿರುಗಿ
ಐತಪ್ಪ ಪಾಪೀ ಮಿತ್ರನು.
ಅಃ ನಮ್ಮನ್ನು ಕಟಾಕ್ಷಿಸು!

4. ನಾವಿಂದು ನಿಂಗೆ ಹೊಸತಾಗಿ
ಸರ್ವಸ್ವವೀಯ ಬಂದೆವು.
ಪ್ರತಿಷ್ಠಿಸಾರ್ಯಸೇವೆಗಾಗಿ
ನಮ್ಮಾತ್ಮ ಪ್ರಾಣ ಮನಸ್ಸು!
ಆರಾಧ್ಯನು ನೀನೊಬ್ಬನೇ;
ನಾವಿನ್ನು ನಿನ್ನ ದಾಸರೇ.

5. ನೀ ಮೆಚ್ಚಿ ಈ ಪ್ರತಿಜ್ಞೆಯನ್ನು,
ಪಿತಾಪುತ್ರಾತ್ಮ ದೇವರೇ,

ಪೂರೈಸೋ ಬುದ್ಧಿ ಬಲವನ್ನು
ಕೊಟ್ಟೆಮ್ಮ ಪಾಲಿಸಾಳ್ಮನೇ!
ನಿನ್ನವರಾಗಿ ನಡೆದು
ನಿಂಗಾಗಿ ಸತ್ತು ಬಾಳ್ವೆವು.

೧೮೦

Jesu, dir leb' ich.—M. T. 53.

1. ಬಾಳುವೆ, ಯೇಸು,
ಸಾಯುವೆ, ಯೇಸು,
ನಿನ್ನವನಾಗಿ
ನಿತ್ಯನಿರಂತ್ರ.
ರಕ್ಷಿಸೆನ್ನನು,
ಕ್ರಿಸ್ತ್ಯೇಸುಸ್ವಾಮಿಯೇ!

2. ನಿನ್ನಲ್ಲಿ, ಯೇಸು,
ಇರೋದು, ಯೇಸು,
ಜೀವದ ಮೂಲ.
ನೀನೆನ್ನ ಆಶೆ!
ರಕ್ಷಿಸೆನ್ನನು,
ಕ್ರಿಸ್ತ್ಯೇಸುಸ್ವಾಮಿಯೇ!

3. ಕೈ ಹಿಡಿ, ಯೇಸು!
ನಡಿಸು, ಯೇಸು!
ಹೋರಾಟದಲ್ಲಿ
ಜೀವ ಕಾಪಾಡು!
ರಕ್ಷಿಸೆನ್ನನು,
ಕ್ರಿಸ್ತ್ಯೇಸುಸ್ವಾಮಿಯೇ!

4. ಜೈಸುವೆ, ಯೇಸು,
ಹರ್ಷಿಪೆ, ಯೇಸು,
ನಿತ್ಯ ನಿನ್ನಲ್ಲಿ;
ನೀನೆನ್ನ ಗತಿ.
ರಕ್ಷಿಸೆನ್ನನು,
ಕ್ರಿಸ್ತ್ಯೇಸುಸ್ವಾಮಿಯೇ!

೧೮೧

Bei dir, Jesu, will ich bleiben.
M. T. 154.

1. ನಿನ್ನ ಹತ್ರ ನಿಲ್ಲುತೇನೆ!
ಎಂದೂ ಬಿಟ್ಟು ಬಿಡದೆ
ನಿನ್ನ ದಾಸನಾಗಿದ್ದೇನೆ,
ಅತಿ ಪ್ರಿಯ ಯೇಸುವೆ!
ನೀನು ನನ್ನ ಪ್ರಾಣತತ್ವ,
ನನ್ನ ಜೀವಬಲವೆ;
ಗಿಡ ಕೊಂಬೆಗೆಲ್ಲ ಸತ್ವ
ಕೊಡುತಿರ್ವ ಹಾಗೆಯೆ.

2. ನಿನ್ನ ಹಾಗೆ ಮಿತ್ರನೆಲ್ಲಿ,
ಪ್ರೇಮಸಿಂಧು ದೇವರೆ?
ಸ್ವಂತ ಜೀವರಕ್ತ ಚೆಲ್ಲಿ,
ಕ್ಷೇಮ ಕೊಟ್ಟೆ ನನಗೆ.
ನೀನು ಭದ್ರದುರ್ಗಸ್ಥಲ
ಧೈರ್ಯಭ್ರಷ್ಟ ಪಾಪಿಗೆ;
ಸರ್ವಲೋಕರಾಜ್ಯ ಬಲ
ಅಧಿಕಾರ ನಿನ್ನದೆ.

3. ನಿನ್ನ ಹತ್ರ ನಿಲ್ಲುತೇನೆ
ಸುಖದುಃಖಕಾಲದಿ;
ನಿನ್ನ ದಾಸನಾಗಿದ್ದೇನೆ
ಇಹಪರಲೋಕದಿ.
ಇಹದಲ್ಲಿ ಭಕ್ತರನ್ನು
ಕೃಪೆಯಿಂದ ಕಾಯುತ್ತಿ;
ಅಂತ್ಯದಲ್ಲಿ ಕ್ಷೇಮವನ್ನು
ಸ್ವರ್ಗದಲ್ಲಿ ಕೊಡುವಿ.

4. ಯೇಸು, ಜೀವದಂತ್ಯದಲ್ಲಿ
ನಿಲ್ಲು ನನ್ನ ಹತ್ರವೆ!
ಘೋರ ಮೃತ್ಯುರಾತ್ರಿಯಲ್ಲಿ
ಸೂರ್ಯನಾಗು ನನಗೆ!
ಸಾಯುವಂಥ ಕಷ್ಟದಲ್ಲಿ
ಕಣ್ಣು ಮೊಬ್ಬಾದಾಗಲೇ,
ನಿತ್ಯಜೀವಪ್ರಭೆಯಲ್ಲಿ
ಸೇರಿಸೆನ್ನ, ಯೇಸುವೇ!

೧೮೨

Stärk' uns, Mittler, dein sind wir.
M. T. 199.

1. ತ್ರಾಹಿ, ಮಧ್ಯವರ್ತಿಯೇ,
ನಿನ್ನ ಭಕ್ತರನ್ನು!
ಕಾಯಿ, ಸರ್ವನಾಥನೇ,
ನಿನ್ನ ಸಭೆಯನ್ನು!
ನಿನ್ನನ್ನು ನಂಬುತೇವೆ;
ನೀನೆಮ್ಮ ಯಜಮಾನನು,
ನಾವು ನಿನ್ನ ದಾಸರು.
ದಿವ್ಯ ನಿರ್ಮಾಣಿಕ,
ದಿವ್ಯ ಮಧ್ಯಸ್ಥನೇ,
ಬೋಧಕನೇ, ಸಂಧೈರ್ಯದಾತ,
ಉದ್ಧಾರಕನೇ,
ಜೀವದನ್ನಪಾನ
ದಯೆಪಾಲಿಸೆಮಗೆ
ಕಟಾಕ್ಷವಿಟ್ಟು!

2. ನಮ್ಮ ಪ್ರಾಯಶ್ಚಿತ್ತಕೆ
ನಿನ್ನ ಪ್ರಾಣ ಬಿಟ್ಟು,
ನಿನ್ನ ರಕ್ತ ಚೆಲ್ಲಿದೆ
ಪ್ರೀತಿ ನಮ್ಮಲಿಟ್ಟು;
ನೀನೆಮ್ಮ ಶಿಕ್ಷೆ ಹೊತ್ತಿ;
ನಮ್ಮನ್ನು ಕನಿಕರಿಸಿ,
ಕ್ರೂಜೆಯಲ್ಲಿ ತೀರಿದಿ.
ದಿವ್ಯ ನಿರ್ಮಾಣಿಕ,
ದಿವ್ಯ ಮಧ್ಯಸ್ಥನೇ,
ಬೋಧಕನೇ, ಸಂಧೈರ್ಯದಾತ,
ಉದ್ಧಾರಕನೇ,
ಪಾಪಪರಿಹಾರ
ದಯೆಪಾಲಿಸೆಮಗೆ,
ಕಟಾಕ್ಷವಿಟ್ಟು!

3. ನಿತ್ಯಜೀವರಾಜನೆ,
ಎದ್ದು ಗೋರಿಯಿಂದ
ಮೃತಿಯನ್ನು ಜೈಸಿದೆ
ದಿವ್ಯ ತ್ರಾಣದಿಂದ.

ನಿನ್ನಲ್ಲಿ ನಮ್ಮ ಜೀವ.
ಪಾತಾಳಲೋಕಕಿಳಿದು,
ದಿವಕೇರಿ ಬಾಳುತಿ.
ದಿವ್ಯ ನಿರ್ಮಾಣಿಕ,
ದಿವ್ಯ ಮಧ್ಯಸ್ಥನೇ,
ಬೋಧಕನೇ, ಸಂಧೈರ್ಯದಾತ,
ಉದ್ಧಾರಕನೇ,
ನಮ್ಮ ಆತ್ಮವನ್ನು
ಮೃತಿಯಿಂದ ತಪ್ಪಿಸು,
ಕಟಾಕ್ಷವಿಟ್ಟು!

೫. ಕರ್ತನ ಭೋಜನ

೧೮೩

Herr, du wollst uns vorbereiten.
M. T. 195.

1. ಕರ್ತ, ನಮ್ಮ ಮಧ್ಯದಲ್ಲಿ
ಬಂದಿರು! ನಿನ್ನ ಬಳಿಯಲ್ಲಿ
ಸಂತೃಪ್ತಿ ಹೊಂದ ಬಂದೆವು.
ಕೊಡು ಪಾಪಕ್ಷಮೆಯನ್ನು!
ವಿಶ್ವಾಸವಿಡುವವರನ್ನು,
ಐ, ಮೃತ್ಯುವಿಂದ ರಕ್ಷಿಸು!
ಶ್ರೀ ಯೇಸು, ನಿತ್ಯಕು
ನೀನೆಮ್ಮ ಅರಸು!
ಆಮೆನ್! ಆಮೆನ್!
ಎದ್ದಾಗಲೆ
ನಿನ್ನೊಡನೆ
ಕೂತೇವು ನಿನ್ನ ಮೇಜಿಗೆ!

2. ಯೇಸು ದಿವ್ಯ ಕೃಪೆಯಿಂದ
ಕೊಟ್ಟಂಥ ರೊಟ್ಟಿ ದೈನ್ಯದಿಂದ
ಸಂಜೀವಕ್ಕಾಗಿ ತಿನ್ನಿರಿ!
ಜೀವಪಾನಪಾತ್ರೆಯಲ್ಲಿ
ಕುಡೀರಿ! ನಿತ್ಯ ರಾಜ್ಯದಲ್ಲಿ
ಸ್ವತಂತ್ರ ನಿಮಗಿರಲಿ!
ಸತ್ತೋಗುವನಕ
ಹಿಡೀರಿ ಕರ್ತನ!
ಆಮೆನ್! ಆಮೆನ್!
ಹಾದಿಕ್ಕಟ್ಟಿ!
ಆ ಊಟಕ್ಕೆ
ಕೂತಾರು ಸ್ವಲ್ಪ ಜನರೆ.

೧೮೪

Lord, in this thy mercy's day.
M. T. 277.

1. ದೇವಪುತ್ರ ಯೇಸುವೇ!
ನಿನ್ನ ರಕ್ತ ಜೀವವೇ;
ರಕ್ಷಿಸೆಮ್ಮ, ಕರ್ತ!

2. ದಿವ್ಯ ಯಜ್ಞಮೂರ್ತಿಯೇ!
ಜೀವರೊಟ್ಟಿ ನಮಗೆ
ನೀನೆ ಆಗು, ಕರ್ತ!

3. ನೀ ಪ್ರಧಾನ ಯಾಜಕ,
ದಿವ್ಯ ಶಾಂತಿದಾಯಕ.
ಪಾಲಿಸೆಮ್ಮ, ಕರ್ತ!

4. ತೀರಿತೆಂದು ಕೂಗಿದ
ಸ್ವಾಮಿ! ನಮ್ಮ ಪಾಪವ
ನೀಗಿಸಿಂದು, ಕರ್ತ!

5. ನಿನ್ನ ಕ್ರೂಜೆ ನೆನಸಿ,
ನಿನ್ನ ನಾಮ ಸ್ತುತಿಸಿ
ಹಾಡುತೇವೆ, ಕರ್ತ!

6. ತಕ್ಕೋ ಈಗ ನಮ್ಮನು!
ನಮ್ಮ ಜೀವ ನಿನ್ನದು;
ನಿತ್ಯ ಬಾಳು, ಕರ್ತ!

೧೮೫

Mel. Gott ist gegenwärtig.
M. T. 178.

1. ದೇವಾಹಾರವನ್ನು
ನಾವು ಭಕ್ಷಿಸೋಣ,
ಬಾವಿಯಿಂದ ಕುಡಿಯೋಣ!
ಹಸಿದವರಿಂಗೆ
ಮೀಸಲೂಟ ತಾನೆ
ಯೇಸು ನೀಡ ಬಂದಿದ್ದಾನೆ.
ಆತನು
ದಾತನು,
ಆತಿಥೇಯ ತಾನೆ;
ತಾತನಂತಿದ್ದಾನೆ.

2. ರಾಜ ಮೃತಪಟ್ಟ
ಪ್ರಜಾ ರಕ್ಷೆಗಾಗಿ
ಕ್ರೂಜೆಯಲ್ಲಿ ಯಜ್ಞವಾಗಿ.
ಪರಿಶುದ್ಧ ಜಲ
ವರತೀರ್ಥದಿಂದ
ಹರಿಯುತ್ತದಂದಿನಿಂದ.
ಅನ್ನವ,
ಮನ್ನವ
ತಿನ್ನ ಕರ್ಯುತಾನೆ;
ತನ್ನ ನೀಡುತಾನೆ.

3. ನಾನು ತಿನ್ನ ಬಂದೆ;
ಏನೂ ತರಲಿಲ್ಲ;
ನೀನು ಖಾಲಿ ಬಿಡೊದಿಲ್ಲ.
ದೆಸೆಗೆಟ್ಟ ನಾನು
ಹಸಿದಿರುತ್ತೇನೆ;
ಗಾಸಿಯಾಗಿ ಸಾಯುತೇನೆ.
ತುಷ್ಟಿಯ
ರೊಟ್ಟಿಯ
ಕೊಟ್ಟು, ಸಾಕು ನನ್ನ,
ಇಟ್ಟು ಕೃಪೆಯನ್ನ!

4. ನನಗಾಗಿ ಆತ
ತನ್ನ ರಕ್ತ ಕೊಟ್ಟ;
ಮನ ಶುದ್ಧ ಮಾಡಿ ಬಿಟ್ಟ

ದುರವಸ್ಥೆಯೆಲ್ಲ,
ವರ ಕೊಟ್ಟು ಶಾನೆ,
ಪರಿಹಾರ ಮಾಡಿದ್ಧಾನೆ.
ಸ್ತೋತ್ರಕ್ಕೆ
ಮಾತ್ರವೆ
ಪಾತ್ರನಾತನನ್ನಿ!
ಸ್ತೋತ್ರವನ್ನು ತನ್ನಿ!

5. ಇನ್ನು ಮುಂದೆ, ಕರ್ತ,
ನಿನ್ನ ಸೇವೆಯಲ್ಲಿ
ನನ್ನನಿಡು ನಿತ್ಯದಲ್ಲಿ!
ಅತ್ಯಮೂಲ್ಯ ನೀನು
ನಿತ್ಯವಾಗಿ ಇರು
ಸತ್ಯವಾದ ನನ್ನ ಗುರು!
ಬಿಡದೆ
ಹಿಡಿವೆ
ಇಡಿ ನಿನ್ನ ಮಾರ್ಗ!
ಕಡೆಗೀಯು ಸ್ವರ್ಗ.

೧೮೬

Mel. Eins ist not. — M. T. 162.

1. ಹಸಿದವನಾಗಿ ಬಂದೆ
ನಿನ್ನ ದಿವ್ಯ ಮೇಜಿಗೆ;
ನನ್ನ ಪಾಪಹೊರೆ ತಂದೆ
ನಿನ್ನ ಕ್ರೂಜೆಯಡಿಗೆ.
ಈ ರೊಟ್ಟಿಯಲುಂಟು ಸಂತೃಪ್ತಿಯ ದಾನ;
ಶಿಲುಬೆಯಿಂ ಹುಟ್ಟಿತು ಆತ್ಮದ ಪಾನ;
ಸಂಜೀವದ ರಸವು ಹರಿಯುತೆ;
ಶರೀರಕು ಆತ್ಮಕು ದೊರಕುತೆ.

2. ನಿನ್ನ ಮೇಲೆ, ಪ್ರಿಯ ಯೇಸು,
ನನ್ನ ಪೂರ್ಣ ಬಯಕೆ.
ದಿವ್ಯ ಮೇವನೀಗ ಮೇಯ್ಸು
ನಿನ್ನ ಬಡ ಕುರಿಗೆ!
ನೀನೆನ್ನನು ಊಟಕ್ಕೆ ಕುಂಡ್ರಿಸುವಾಗ,
ನಿನ್ನಾಹಾರದಿಂದಲೆ ಪೋಷಿಸುವಾಗ,
ನಾ ಸಂಕಟವೆಲ್ಲವ ಮರೆಯುವೆ,
ಸಂತೋಷಸಮುದ್ರದಿ ಮುಣುಗುವೆ.

3. ನನ್ನಲ್ಲೀಗ ಸುಳ್ಳು ಅರ್ಥ,
ಕಪಟಾದಿ ದೋಷವು
ಉಂಟೋ ಎಂದು ನೋಡು, ಕರ್ತ!
ನನ್ನ ಹೃದ ಶೋಧಿಸು!
ನಾ ವಂಚಕನಾಗಿ ಸಮೀಪಿಸಲಾರೆ.
ನಾ ನಡೆದ ಮಾರ್ಗವು ಇದ್ದರೆ ವಾರೆ,
ಶ್ರೀ ಯೇಸುವೆ, ಗುಣವ ಪಡಿಸ ಬಾ!
ನಾ ನೆಟ್ಟಗೆ ಆಗುವ ತ್ರಾಣವ ತಾ!

4. ನನ್ನ ದೊಡ್ಡ ಭಾರವನ್ನು
ತೆಗೆದ್ಹಾಕು, ಕ್ರಿಸ್ತನೇ!
ಪಾಪಪರಿಹಾರವನ್ನು
ದಯಪಾಲಿಸೀಶನೇ!
ನಾ ಮಾಡಿದ ದ್ರೋಹದ ಕಲ್ಮಷದಿಂದ
ಭಯಂಕರ ನರಕಬಾಧೆಯೊಳಿಂದ
ವಿಮೋಚಿಸಿ ಶುಚಿಸಿ ಉದ್ಧರಿಸು!
ನನ್ನಾತ್ಮದೊಳೆನ್ನ ನವೀಕರಿಸು!

5. ನಿನ್ನ ದಿವ್ಯ ಆಶೀರ್ವಾದ,
ಸಮಾಧಾನ, ಹರುಷ
ನನಗಾಗಲಿ ಪ್ರಸಾದ,
ಆಳಲೆನ್ನ ಹೃದಯ!
ಉದಾರದಿ ಕೃಪೆಯ ಬಾಹುಲ್ಯವನ್ನು
ನೀ ಸುರಿಸಿ, ಚೈತನ್ಯ ಪಡಿಸೆನ್ನನ್ನು!
ದೇಹಾತ್ಮವ ನಿನ್ನಲಿ ಬದುಕಿಸು!
ಅಲ್ಲಾಡದ ಬಂಡೆಯೊಳ್ ನೆಲೆಯಿಸು!

6. ನನ್ನ ಆತ್ಮ, ಸ್ತೋತ್ರ ಮಾಡು
ದೇವಕುರಿಮರಿಗೆ!
ಹೊಸ ಗೀತವನ್ನು ಹಾಡು
ದಿವ್ಯ ರಕ್ತಾಷ್ಪ್ರೀತಿಗೆ!
ನಿರ್ಮೂಲಿಸಿ ಪಾಪದ ರಾಶಿಗಳನ್ನು,
ಸಂಪ್ರಾಪ್ತಿಸಿ ಕೊಟ್ಟನಾರೋಗ್ಯತೆಯನ್ನು!
ನನ್ನಿಂದ್ರಿಯವಾತಗೆ ಹರ್ಷಿಸುತೆ,
ನನ್ನಾಂತರ್ಯವಾತಗೆ ಕೀರ್ತಿಸುತೆ.

೧೮೭

Schmücke dich, o liebe Seele.
M. T. 164.

1. ನನ್ನಪ್ರಾಣ, ಶೋಭೆಗೊಂಡು,
ಪಾಪವನ್ನು ಹೇಸಿಕೊಂಡು,
ಬಾರೊ, ಶುದ್ಧ ಬೆಳಕಾಗಿ!
ಮೆರ್ಯ ಬೇಕು ವೈಮೆಯಾಗಿ!
ಕಂಡ್ಯಾ, ಕರ್ತನೊಲ್ಮೆಯಲ್ಲಿ
ಕರ್ಯುತಾನೆ ಊಟಕಲ್ಲಿ.
ವಿಶ್ವವಾಳುವಾತ ತಾನೆ
ನಿನ್ನಲಿರ ಬಂದಿಧಾನೆ.

2. ಮಿತ್ರರಂತೆ ನೀ ಮುಂಕೊಳ್ಳು;
ನಿನ್ನ ಕರ್ತಗೆದುರ್ಗೊಳ್ಳು!
ಆತ ತನ್ನ ಸರ್ವರಿಂಗೂ
ಕಾಣ್ಬನೊಲ್ಮೆಯಲ್ಲಿ ನಿಂಗೂ.
ತೆರೆ ನಿನ್ನ ಹೃದವನ್ನು,
ಸದ್ವಿಶ್ವಾಸದಿಂದ ಅನ್ನು;
ಕರ್ತ, ನನ್ನ ಆಶೆ ಬಲ್ಲಿ,
ಶ್ರೇಷ್ಠ ಮಿತ್ರ, ಬಾ ನನ್ನಲ್ಲಿ!

3. ನಿನ್ನ ಪ್ರೇಮುದ್ಘೋರ್ತು ನನ್ನ
ಆತ್ಮಕೆಲ್ಲಿ ಸಿಕ್ಕೊದನ್ನ?
ರಾತ್ರಿಭೋಜನಾರ್ಥಿಯಾಗಿ
ಬಂದೆ ಹಸಿದವನಾಗಿ.
ಎಷ್ಟೊ ಕೋರಿತೆನ್ನ ಪ್ರಾಣ
ಜೀವರಾಜರಕ್ತಪಾನ!
ಭೋಜನ ತಕ್ಕೊಳ್ಳುವಲ್ಲಿ
ನನಗೈಕ್ಯ ಕ್ರಿಸ್ತನಲ್ಲಿ.

4. ಯೇಸು, ನನ್ನ ಜೀವಕಾಂತಿ,
ಯೇಸು, ನನ್ನ ಹರ್ಷ, ಶಾಂತಿ!
ಆದಿ ಅಂತ್ಯ ನೀನೇ ನಾಥ,
ಜೀವಮೂಲ, ತ್ರಾಣದಾತ!
ನನಗೊಳ್ಳೆ ಮೇಲಿಗಾಗಿ,
ನಿನ್ನ ಸ್ವಂತ ಸ್ತೋತ್ರಕಾಗಿ,
ಸ್ವರ್ಗದನ್ನ ಬಡಿಸಯ್ಯ!
ನಿನಗಡ್ಡ ಬಿದ್ದೆನಯ್ಯ.

5. ಕರ್ತ, ದೊಡ್ಡ ಪ್ರೀತಿಯಿಂದ
ಬಂದಿ ಪರಲೋಕದಿಂದ;
ನನಗಾಗಿ ಪ್ರೀತಿಯಲ್ಲಿ
ಜೀವ ಕೊಟ್ಟೆ, ಕ್ರೂಜೆಯಲ್ಲಿ
ಚೆಲ್ಲಿ ನಿನ್ನ ರಕ್ತವನ್ನು.
ನಿನ್ನ ಮೇಜಿನಿಂದದನ್ನು
ಕೊಂಡು, ಪ್ರೀತಿಭಕ್ತರೆಲ್ಲ
ಸ್ಮರಿಸ್ಯಾರು ಜೀವವೆಲ್ಲ.

6. ಯೇಸು, ಸತ್ಯ ಜೀವರೊಟ್ಟಿ!
ಪ್ರೇಮದೂಟ ನೀನೆ ಕೊಟ್ಟೆ.
ನಾನದನ್ನು ವ್ಯರ್ಥವಾಗಿ
ಉಣ್ಣ ಬಾರ್ದು ಕೇಡಿಗಾಗಿ.
ಊಟದಲ್ಲಿ ತೋರಿಸಿಂದು
ನಿನ್ನಗಾಧ ಪ್ರೇಮಸಿಂಧು,
ಸ್ವರ್ಗಪಂಕ್ತಿಯಲ್ಲೂ ದಯ
ಮಾಡಿ ನನ್ನ ಕುಂಡ್ರಿಸಯ್ಯ!

---

೭. ವಿವಾಹ

೧೮೮

Mel. One thing is needful.
M. T. 38.

1. ಆ ಕಾನದಲ್ಲಿ ಮದಿವೆ
ಉಂಟಾಗಲಾಗಿ ಪ್ರಸ್ತಕೆ
ಕ್ರಿಸ್ತ್ಯೇಸು ತಾನೆ ಹೋದನು,
ತನ್ನಾಶೀರ್ವಾದ ಕೊಟ್ಟನು.

2. ಅದೇ ಪ್ರಕಾರ ಈಗಲು
ನಮ್ಮೊಂದಿಗಿದ್ದು ಹರಸು!
ಈಗಾಗುವಂಥ ಮದಿವೆ
ನೀ ಶುಭ ಮಾಡು, ಯೇಸುವೆ!

3. ವಿಶ್ವಾಸ ಭಕ್ತಿ ಹೆಚ್ಚೆಚ್ಚು
ಈ ಇಬ್ಬರಲ್ಲಿ ಬೆಳಿಸು!

ತಮ್ಮೊಳಗಿರುವೈಕ್ಯದಿ
ಸಂತೋಷವಾಗಿ ಬಾಳಲಿ!

4. ಕ್ರಿಸ್ತ್ಯೇಸು, ನೀನು ನಿತ್ಯವು
ಈ ಇಬ್ಬರನ್ನು ನಡಿಸು!
ಈ ಲೋಕ ಬಿಡುವಾಗಲು
ನೀನಿರುವಲ್ಲಿ ಸೇರಿಸು!

೧೮೯

Mel. Wie schön leucht't uns der Morgenstern.—M. T. 194.

ಅನಂತ ದಿವ್ಯ ಪ್ರೀತಿಯು
ವಿವಾಹನೇಮ ಮಾಡಿತು;
ಮನುಷ್ಯಬುದ್ಧಿ ಅಲ್ಲ.
ಸದಾ ದಯಾಳು ತಂದೆಯು
ವಿಧೇಯವಾದ ಜನಕೆ
ಸಹಾಯ ಮಾಡ ಬಲ್ಲ.
ಸುಖ
ದುಃಖ
ಕೊಡುವಂಥ,
ತೀರದಂಥ
ಪ್ರೀತಿಯಲ್ಲಿ
ನಂಬಿರಿಹಪರದಲ್ಲಿ!

೧೯೦

Mel. Let us with a gladsome mind.—M. T. 11.

1. ಆದಿಯಲ್ಲಿ ಒಡೆಯ
ನರನಿಂದ ನಾರಿಯ
ಉಂಟುಮಾಡಿ, ಅವರ
ಸತಿಪತಿ ಮಾಡಿದ.

2. ಆದಿ ಲಗ್ನ ಹೋಲುಂತೆ
ಈಗಲಾದ ಮದುವೆ.
ನೀನು ಆಶೀರ್ವದಿಸು!
ತುದಿ ಮುಟ್ಟ ನಡಿಸು!

3. ವಧುವರರೊಳಗು
ಪ್ರೀತಿ ಭಕ್ತಿ ಬೆಳಿಸು!
ಅವರನ್ನು, ನಾಯಕಾ,
ಕಾಯಿ, ಸರ್ವ ಪಾಲಕಾ!

4. ನೀನು ಕೊಡೋ ದಾನವ
ಜೋಕೆಯಿಂದ ಬಳಸ
ಬುದ್ಧಿ ಕೊಟ್ಟು ಸಾಗಿಸು!
ಸರ್ವ ಶುಭ ಸಿದ್ಧಿಸು!

5. ಶತ್ರುವಿನ ಬಾಣಕ್ಕೂ
ದುಷ್ಟಜನಯುಕ್ತಿಗೂ
ಇವರನ್ನು ತಪ್ಪಿಸು!
ಖೇಡ್ಯವಾಗಿ ರಕ್ಷಿಸು!

6. ಕಷ್ಟಕಾಲ ಬರಲೆ,
ಖಿನ್ನಭಿನ್ನರಾಗದೆ
ಬಾಲ ಭರವಸದಿ
ಮೊರೆ ನಿನಗಿಡಲಿ!

7. ಇಹವಾಸ ತೀರಿಸು
ಎಂತ ಆಜ್ಞೆಯಾಗಲು,

ನಿನಗಾತ್ಮ ಒಪ್ಪಿಸ
ಕೊಡು ಬೋಧಬುದ್ಧಿಯ!

8. ತಂದೆ ಮಗ ಆತ್ಮನೇ,
ಸದಾನಂದ ದೇವರೇ,
ಆಲೈಸೆಮ್ಮ ಬೇಡಿಕೆ!
ಹಾಕು ಸ್ವಸ್ತಿ ಮುದ್ರಿಕೆ!

೧೯೧

Mel. Nun lob', mein' Seel', den Herren.—M. T. 193.

ಈ ಗಂಡ ಹೆಂಡರನ್ನು,
ಕರ್ತಾ, ನೀನಾಶೀರ್ವದಿಸು!
ನೀನವರೈಕ್ಯವನ್ನು
ಕಾಪಾಡಿ, ಕೃಪೆಯಾಗಿರು!
ಈ ಹೊಸ ಮನೆಯಲ್ಲಿ
ಸುಕ್ಷೇಮವನ್ನು ತಾ!
ಈ ಹೃದಯಂಗಳಲ್ಲಿ
ನೀ ವಾಸ ಮಾಡ ಬಾ!
ಈ ನಿನ್ನ ಮಕ್ಕಳನ್ನು,
ನಮ್ಮಪ್ಪಾ, ಸಲಹು!
ಆ ಲೋಕಕವರನ್ನು
ಕಡೇಲಿ ಸೇರಿಸು!

೧೯೨

Mit dem Herrn fang' alles an.
M. T. 248.

1. ಕರ್ತನೊಡ ತೊಡಗು
ನಿನ್ನ ಎಲ್ಲ ಕಾರ್ಯವನ್ನು!
ಬೇಡಿ ನಂಬು ಆತನನ್ನು!
ಸ್ವಂತ ಬುದ್ಧಿ ಸಾಲದು;
|: ಕರ್ತನೊಡ ತೊಡಗು! :|

2. ಕರ್ತನೊಡ ತೊಡಗು!
ಆತ ಹೋಗೊ ದಾರಿಯಲ್ಲಿ
ಸಾಗುವಾತ ಹ್ಯಾಗು ಅಲ್ಲಿ
ಗುರಿ ತಪ್ಪಲಾರನು;
|: ಕರ್ತನೊಡ ತೊಡಗು! :|

3. ಕರ್ತನೊಡ ತೊಡಗು!
ಆತನಿಟ್ಟ ಕಾರ್ಯಕಾಗಿ
ಆತ ತ್ರಾಣ ಕೊಡಲಾಗಿ,
ಕಾರ್ಯ ಸಿದ್ಧಿಯಾಗೊದು;
|: ಕರ್ತನೊಡ ತೊಡಗು! :|

೭. ಸಭಾಪಾಲಕ ಪ್ರತಿಷ್ಠೆ

೧೮೩

Mel. Komm, lieber Heiland.
M. T. 155.

1. ಯೇಸುಸ್ವಾಮಿ, ಬಂದಿ
ದ್ದೇವೆ
ಆಶೀರ್ವಾದ ಬೇಡುತಾ;
ನಿನ್ನ ದಾಸರಾಗುತೇವೆ
ಜೀವವಿರ್ವ ತನಕ.
ಆಳು ಬೇಕು ತೋಟದಲ್ಲಿ
ಎಂದು ನೀನು ಹೇಳಿದ್ದೀ;
ನಮ್ಮ ಸ್ವೇಚ್ಛಾ ಸೇವೆಯಲ್ಲಿ
ನಿನಗಿಷ್ಟವಾಗಲಿ!

2. ನಿನ್ನ ಆದಿಶಿಷ್ಯರನ್ನು
ಹಚ್ಚಿದಾಗ ಸೇವೆಗೆ,
ಕೊಟ್ಟು ಶ್ರೇಷ್ಠ ವರವನ್ನು
ಇದ್ದಿ ಅವರೊಂದಿಗೆ.
ಇಂದೂ ನಿನ್ನ ಕಾರ್ಯವನ್ನು
ಸಾಗಿಸೋದಕೆಮಗೆ
ಆಜ್ಞೆ ಕೊಟ್ಟೆ; ಬಲವನ್ನು
ಕೊಡು ಆಜ್ಞೆಯೊಂದಿಗೆ!

3. ನಂಬಿಗಸ್ತ ಗುಣವನ್ನು
ಅಂತ್ಯವರೆಗೆಮ್ಮಲಿ
ಉಳಿಸೆಮ್ಮ ಹೃದವನ್ನು
ಸ್ಥಾಪಿಸಯ್ಯ ನಿನ್ನಲಿ!
ಶೋಧನಾದಿ ಕಾಲದಲ್ಲಿ
ಭದ್ರ ಮಾಡು ನಮ್ಮನು!
ಕಾಲು ಜಾರಿ ಹೋಗುವಲ್ಲಿ
ದೃಢ ಪಡಿಸೆಮ್ಮನು!

4. ಉರಿಕೆಂಡ ಹೃದದಲ್ಲಿ
ಕೊಡು ಯಜ್ಞವೇದಿಯಿಂ!
ಉರಿನುಡಿ ತುಟಿಯಲ್ಲಿ
ಇಟ್ಟು ನಿನ್ನ ಆತ್ಮದಿಂ
ವಾಕ್ಯವನ್ನು ಬಲವಾಗಿ
ಸಾರುವಂಥ ಸಾಮರ್ಥ್ಯ,
ಜನ ನಡಿಸೋದಕಾಗಿ
ಜ್ಞಾನ ನೀಡು, ಒಡೆಯ!

5. ಬೇಕು ದಣಿದವರನ್ನು
ಆದರಿಸೋ ಭಾಷೆಯು;
ನಿನ್ನ ಅಂತರ್ಯೋಕ್ತಿಯನ್ನು
ಕೇಳುವಂಥ ಕಿವಿಯು;
ಹೆಣದಲ್ಲಿ ಜೀವಬಲ
ನಿರ್ಮಿಸೋ ವಿಶ್ವಾಸವು;
ಬಂಡೆಯಿಂದ ಜೀವಜಲ
ತರುವಂಥ ಪ್ರಾಣವು!

6. ಆಶೆಯೆಲ್ಲ ಹೋಗುವಲ್ಲಿ
ಇನ್ನು ಆಶೆ ಪಡೊದು;
ಹಾಸ್ಯ ಮಾಡೊ ಜನರಲ್ಲಿ
ಇನ್ನು ಪ್ರೀತಿ ಇಡೊದು,
ಕಷ್ಟ ವ್ಯರ್ಥವಾಗುವಲ್ಲಿ
ಬೇಸರಿಲ್ಲದಿರೊದು
ಸಾಧ್ಯವಾಗುವಂತೆನ್ನಲ್ಲಿ
ಧೈರ್ಯ ಸ್ಥೈರ್ಯ ವರ್ಧಿಸು!

7. ಕುರಿಮಂದೆಗೊಳ್ಳೆ ಪೋಷ
ಇಕ್ಕುವಂಥ ಚಿಂತನೆ,
ಅದಕ್ಕೇನೂ ಕಳೆ ದೋಷ
ಹತ್ತದಂತೆ ಜಾಗ್ರತೆ,
ಭಯಭಕ್ತಿಯುಳ್ಳ ಹಾಡು,
ಲೋಕಕೊಳ್ಳೇ ಮಾದರಿ
ನನ್ನಲ್ಲೆಲ್ಲ ಕಾಣ ಮಾಡು!
ಲಾಲಿಸನುಗ್ರಹದಿ!

8. ಸ್ವಾಮಿನಾ, ವರಶ್ರೇಷ್ಠವನ್ನು
ಬೇಡುತಾರೆ ದಾಸರು.
ಪವಿತ್ರಾತ್ಮದಾನವನ್ನು
ಕೊಡು ಪ್ರತಿಯೊಬ್ಬಗು!
ಆಗ ಸೇವೆಯೇ ಸಾಫಲ್ಯ.
ಭಲಾ, ಒಳ್ಳೇ ಆಳು ನೀ!
ಸೇರು ಧನಿಯ ಕೈವಲ್ಯ
ಎಂದು ನಮಗ್ಹೇಳುವಿ.

೧೯೪

Mel. Gott erhalte. –M. T. 153.

1. ಮೃತ್ಯುವಿನ ಬಂಧವನ್ನು
ಬಿಡಿಸಿದ ಮನುಜ!
ಶತ್ರು ತಂದ ಸೇನೆಯನ್ನು
ಓಡಿಸಿದ ನಾಯಕ!
ತ್ರಾಣದಿಂದ ಲೋಕವಾಳು,
ಕ್ರೂಜೆ ತಾಳಿದವನೇ!
ಜಯಪ್ರದನಾಗಿ ಬಾಳು,
ಘನವುಳ್ಳ ರಾಜನೇ!

2. ಜಯಶಾಲಿ ಕ್ರಿಸ್ತ, ನನ್ನ
ಸೇರಿಸಿಕ್ಕು ದಂಡಿಗೆ!
ಡಾಲು ಖಡುಗಂಗಳನ್ನ
ಇಡು ನನ್ನ ಹಸ್ತಕೆ!
ಧೀರ ಯುದ್ಧಧ್ವನಿ ಎತ್ತಿ,
ನಿನ್ನ ಹೆಜ್ಜೆ ಹಿಡಿದು
ದುಷ್ಟ ವೈರಿ ನಡುನೆತ್ತಿ
ಸೀಳಿ ಜಯಿಸುವೆನು.

3. ಕ್ಷೇಮವಾಗಿ ಸಾಯುತ್ತೇನೆ,
ತಂದೆಗಾತ್ಮವೊಪ್ಪಿಸಿ;
ಗೋರಿದ್ವಾರ ಹಾಯುತ್ತೇನೆ,
ನಿನ್ನ ಗೋರಿ ನೆನಸಿ.
ಈ ಶರೀರವನ್ನು ಕೀಟ
ತಿಂದರೇನು ಚಿಂತೆಯು?
ನಿತ್ಯ ಮಹಿಮೇ ಕಿರೀಟ
ಹೊಂದಿ, ಹರ್ಷಗೊಂಬೆನು.

೧೯೫

Mel. Ich bete an die Macht der Liebe.—M. T. 94.

1. ಕ್ರಿಸ್ತ್ಯೇಸು ನಿನ್ನ ಮಾನಕ್ಕಾಗಿ
ನಾನೊಂದು ಪಾತ್ರೆ ಆಗಲಿ!
ನೀ ಮೆಚ್ಚುವಂಥ ಸೇವೆಗಾಗಿ
ನನ್ನನ್ನು ನಿನ್ನ ರಕ್ತದಿ
ವಿಶುದ್ಧ ಪಡಿಸ್ಸೈ ಪವಿತ್ರ!
ಈಯ್ ನಿನ್ನ ದಾನ, ದಿವ್ಯ ಮಿತ್ರ!

2. ಭೂದ್ರವ್ಯ ಬೇಡ, ಬೇಡ ಮಾನ,
ಈ ಲೋಕಭಾಗ್ಯ ಬೇಡವು!
ನೀ ನನ್ನನ್ನಿಡುವಂಥ ಸ್ಥಾನ,
ಆ ಸ್ಥಾನದಲ್ಲಿ ನಿನ್ನನ್ನು
ಸನ್ಮಾನಿಸುವ ಶಕ್ತಿ, ಯೇಸು,
ಇಷ್ಟೆಂಗೆ ಸಾಕು, ಇಷ್ಟೇ ಲೇಸು.

3. ಈ ಕಾಡಿನಲ್ಲಿ ಅಲೆದಾಡಿ,
ನಿನ್ನನ್ನಪಾನವಿಲ್ಲದೆ,
ಹೆಚ್ಚೆಚ್ಚು ಬಲಗುಂದಿ ಬಾಡಿ
ಹೋದಂಥ ಹೀನ ಪಾಪಿಗೆ
ಸಂಜೀವಕರ ನಿನ್ನ ದಯ
ಈ ಪಾತ್ರೆಯಲ್ಲಿ ಬಡಿಸಯ್ಯ!

4. ಈ ಸೇವೆಯಲ್ಲಿ ನನ್ನ ತ್ರಾಣ
ಸಂಪೂರ್ಣ ವೆಚ್ಚವಾಗಲು,
ಕ್ರಿಸ್ತ್ಯೇಸು, ನನ್ನ ಬಡ ಪ್ರಾಣ
ನಿನ್ನೆದೆಗಪ್ಪಿಕೊಂಡಿರು!
ನಾನಿಲ್ಲಿ ನಿನ್ನ ಪ್ರತಿಕಾಂತಿ!
ನೀನಲ್ಲಿ ನನ್ನ ನಿತ್ಯಶಾಂತಿ!

೧೯೬

Mel. At even, ere the sun was set.—M. T. 298. 41.

1. ಪ್ರಧಾನ ಗುರು ಯೇಸುವೇ!
ಪವಿತ್ರ ಸಭಾಶಿರಸ್ಸೇ!
ಪ್ರಸನ್ನನಾಗು ನಮಗೆ,
ಆಲೈಸು ನಮ್ಮ ಪ್ರಾರ್ಥನೆ!

2. ಈ ಸಭೆ ಕಾಯುವದಕೆ
ಈಗಿಡಲ್ಪಟ್ಟ ದಾಸಗೆ
ಬೇಕಾದ ವರ ಪಾಲಿಸು!
ನಿನ್ನಾತ್ಮನಿಂದ ತುಂಬಿಸು!

3. ನಿನ್ನವರನ್ನು ಪೋಷಿಸ,
ಸನ್ಮಾರ್ಗವನ್ನು ತೋರಿಸ
ಸಹಾಯ ಮಾಡು ನಿತ್ಯವು!
ಸುಫಲವನ್ನು ಹುಟ್ಟಿಸು!

4. ಈ ಸೇವೆ ತೀರಿಸೀತನು
ಮೇಲ್ಲೋಕದಲ್ಲಿ ಸೇರಲು,
ಕಿರೀಟ ದಯಪಾಲಿಸು!
ಮಹತ್ತಿನಲ್ಲಿ ಸೇರಿಸು!

೧೯೭

Mel. Freiheit, die ich meine.
M. T. 115.

1. ದೇವಸೇವೆ ಮಾಡು!
ಕಾಲ ನೀಗುತೆ;
ಜಾಗರೂಕನಾಗು!
ಜನ ಸಾಯುತೆ.
ವಾಕ್ಯ ಸಾರಿ ಹೇಳು
ತಡ ಮಾಡದೆ!
ಹೋಗಿ ಸಾರಿ ಹೇಳು!
ರಾತ್ರಿ ಬರುತೆ.

2. ದೇವಕಾರ್ಯ, ನೋಡು,
ಘನವುಳ್ಳದೇ!
ಮನಸಿಟ್ಟು ಮಾಡು
ಪ್ರೀತಿಯಿಂದಲೇ!
ದಿವ್ಯ ಬಹುಮಾನ
ಯೋಗ್ಯ ದಾಸಗೆ
ಯೇಸು ಕರ್ತನಿಂದ
ದೊರಕುತ್ತದೆ.

3. ಜನರೆಲ್ಲ ಕೂಡಿ,
ಸರ್ವ ಕಾಲವು
ದೇವಸ್ತೋತ್ರ ಮಾಡಿ
ಅಡ್ಡ ಬೀಳಲು,
ತನ್ನ ಪೀಠದಲ್ಲಿ
ನಿನಗಂಬಸು —
ನೀನು ನಂಬಿಗಸ್ತ
ಒಳ್ಳೇ ದಾಸನು!

೮. ಮರಣ

೧೯೮

Mag auch die Liebe weinen.
M. T. 241.

1. ಸಮಾಧಿ ಬಳಿಯಲ್ಲಿ
ನೀ ನಿಂತು ಅಳುತ್ತೀ;
ನೀ ಮತ್ತು ನಗುವಿ
ನಿನ್ನವರೇಳುವಲ್ಲಿ.

2. ವಿಶ್ವಾಸದಿಂದ ಭಕ್ತ
ಅರಣ್ಯ ದಾಟಲು,
ಸ್ವಪಟ್ಟಣ ಸೇರ್ವನು;
ಕಾಪಾಡ ಯೇಸು ಶಕ್ತ.

3. ಮೃತ್ಯಾದಿ ಭಯ ಬಿಟ್ಟು
ನಿರೀಕ್ಷೆ ಪಡಕೋ!
ಮುಂಬೆಳಕು ಅಗೋ!
ತಾಳ್ ತಾಳು ಧೈರ್ಯವಿಟ್ಟು!

೧೯೯

Aller Gläub'gen Sammelplatz.
M. T. 13.

1. ಯೇಸು ಕ್ರಿಸ್ತ ನಮಗೆ
ಕೊಟ್ಟ ಸ್ವರ್ಗದಲ್ಲಿಯೆ
ನಮ್ಮ ಪಟ್ಣವಾಸವು,
ನಮ್ಮ ಹೃದಯಾಶೆಯು.

2. ಇಲ್ಲಿ ಅಲ್ಲಿ ಒಬ್ಬನು
ನಿತ್ಯ ಗೃಹ ಸೇರಲು,
ಮಿತ್ರಬಂಧುಜನರು
ದುಃಖಗೊಂಡು ಅಳೋರು.

3. ಆದರೆಮ್ಮ ದೇವರು
ತಪ್ಪು ಮಾಡಲಾರನು;
ಅದಕೆಮ್ಮ ಹೃದವು
ಶಾಂತವಾಗ ತಕ್ಕದು.

4. ಅತಿಪ್ರಿಯವಾದದು
ಒಂದು ಹೃತ್ತು ಸತ್ತರು,
ಸ್ವಂತ ಜೀವ ಹೋದರು,
ಯೇಸು ಪ್ರೀತಿ ಹೋಗದು.

5. ಸಾವು ಬರೇ ನಿದ್ರೆಯು
ಎಂದು ಧೈರ್ಯಗೊಳ್ವೆವು.
ಸ್ವರ್ಗದಲ್ಲಿ ನಿತ್ಯವು
ಮಿತ್ರರೈಕ್ಯವಹುದು.

೨೦೦

Mel. Aller Gläub'gen Sammelplatz.
M. T. 13.

1. ಅಕ್ಕ ತಂಗಿಯಂದಿರ
ಶಾಂತಮಯ ಮನೆಯ
ಜಡ ಸೇರಿ ಕಾಡಿತು;
ಮುದ್ದು ಪ್ರಾಣ ಹೋಯಿತು.

2. ಮರಿಯಳು ಮಾರ್ಥಳು
ದುಃಖದಲ್ಲಿ ಬಿದ್ದರು;
ಮಿತ್ರನಾದ ಕ್ರಿಸ್ತನು
ಬಹು ದೂರವಿದ್ದನು.

3. ಯೇಸು ಜಡವಾರ್ತೆಯ
ಕೇಳಿ ತಡ ಮಾಡಿದ;
ಯಾಕೆ ಕೇಳಿದಾಕ್ಷಣ
ಬರಲಿಲ್ಲ ರಕ್ಷಕ?

4. ಸರ್ವ ರೋಗ ಪೀಡೆಯ
ಮೂಲ ಬಲ್ಲ ಒಡೆಯ
ತಡ ಮಾಡಿ ಹೊರಟು
ಕರ್ತ ಹೀಗೆ ಹೇಳಿದ್ದು —

5. "ಸಾಯಲಿಲ್ಲ ಮಿತ್ರನು,
ನಿದ್ದೆಗೈಯುತಿರ್ಪನು."
ಹೀಗೆ ಹೇಳಿದಾತನು
ಈಗ ಬೇರೆ ಹೇಳನು.

6. ಅಳಬೇಡಿ, ಪ್ರಿಯರೇ,
ದುಃಖಾಕ್ರಾಂತ ಭಕ್ತರೇ!

ಯೇಸುವಿನ ನುಡಿಯು
ಎಂದೂ ಹುಸಿಯಾಗದು.

7. ಯೇಸು ಅಲ್ಲಿ ಬಂದನು.
ಬಾರೋ ಲಾಜರನ್ನಲು,
ಅಣ್ಣ ಗೋರಿಯಿಂದಲೇ
ಎದ್ದು ಬಂದನೀಚೆಗೆ.

8. ಸರ್ವ ಸೃಷ್ಟಿಕರ್ತನು
ನಿದ್ದೆಗೈಸಿದವನು;
ತಾನೇ ನಾಳೆ ಬಪ್ಪನು —
ಏಳು! ಎಂತ ಹೇಳ್ವನು.

9. ಯೇಸುವಿನ ಕರೆಯ
ಕೇಳಿ ನಮ್ಮ ಸ್ನೇಹಿತ
ತನ್ನ ಗೋರಿ ಒಡೆದು
ಜೀವದಿಂದಲೇಳ್ವನು.

10. ಅದು ನೆಪ್ಪು ಮಾಡುವಾ!
ಯೇಸುವಾಕ್ಯ ನಂಬುತಾ
ಕಡು ದುಃಖ ಶೋಕವ
ಬಿಟ್ಟಾ ದಿನ ಕಾಯುವ!

೨೦೧

Mel. O du Liebe meiner Liebe.
M. T. 151.

1. ಸ್ವಾಮೀ, ನೀನು ನನ್ನ ಪ್ರಾಣ
ಕೊಟ್ಟು ರಕ್ಷಿಪ್ಪಾತನು;
ಮತ್ತು ಪ್ರಾಣ ವೈಯೊ ತ್ರಾಣ
ಬೇರೆ ಯಾರಿಗಿಲ್ಲವು;
ಕೂಡು ಮಣ್ಣಿಗನ್ನಲಿಕ್ಕೆ
ನಾವು ಶಕ್ತರಾದೇವೋ?
ನಿನ್ನ ಚಿತ್ತವಾಗಲಿಕ್ಕೆ
ಅಡ್ಡಿ ಮಾಡಬಹುದೋ?

2. ಸ್ವಾಮಿ ತನ್ನ ಚಿತ್ತದಂತೆ
ಇಂದು ಇಲ್ಲಿ ಮಾಡಿದ.
ನಾವು ಕೋರಿ ಬೇಡಿದಂತೆ
ಎಲ್ಲ ಕಾಲ ನಡಿಸ.
ಮಗುವಿನ ಹಿತವನ್ನು
ತಾಯಿ ಕೊಂಚ ಬಲ್ಲಳು.
ಎಷ್ಟೋ ಹೆಚ್ಚಿಗೆ ಅದನ್ನು
ತಂದೆ ದೇವ ಬಲ್ಲನು.

3. ಆಶಾಹೀನ ಜನರಾಗಿ
ದುಃಖ ಮಾಡಬಾರದು!
ಯೇಸು ಮೃತ್ಯುಂಜಯನಾಗಿ
ನಾಳೆ ಎಬ್ಬಿಸುವನು.
ಇದನ್ನೀಗ ನಂಬಿಕೊಂಡು
ಮನಶ್ಯಾಂತಿಗೊಳ್ಳುತಾ
ಸ್ವಾಮಿದಿನ ಕಾದುಕೊಂಡು
ಮೌನವ್ರತ ತಾಳುವಾ!

4. ನಾವು ಯೇಸುವೋರೆ
ಯನ್ನು
ಇಹದಲ್ಲಿ ಕಾಣೆವು;
ಜಡಮಯಲೋಕವನ್ನು
ಬಿಟ್ಟುಹೋದಸಂತ್ರವು

ಆತನನ್ನು ನಮ್ಮ ದೃಷ್ಟಿ-
ಯಿಂದ ನೋಡಿಕೊಂಬೆವು;
ಆಗ ಪರಿಪೂರ್ಣ ತುಷ್ಟಿ
ಹೊಂದಿ ಧನ್ಯರಹೆವು.

೨೦೨

Ruhet wohl, ihr Totenbeine.
M. T. 81.

1. ಈ ಶರೀರ ಭೂಮಿಯಲ್ಲಿ
ಶಾಂತ ನಿದ್ದೆ ಮಾಡಲಿ!
ಚಿಂತೆ ಇಲ್ಲ! ಕಡೆಯಲ್ಲಿ
ಕರ್ತನದನೆಬ್ಬಿಸಿ
ಗೋರಿಯಿಂದ ಕರೆಯೋನು,
ತಾನಿರ್ಪಲ್ಲಿ ಸೇರಿಸೋನು.

2. ಸ್ವಾಮ್ಯವಯವಂಗಳನ್ನು
ಮೃತ್ಯು ಹಿಡುಕೊಳ್ಳದು;
ಕರ್ತ ತನ್ನ ಶ್ವಾಸವನ್ನು
ಬೂದಿ ಮೇಲೆ ಬಿಡಲು,
ಕೊಳತದ್ದು ಚಿಗುರೀತು,
ಸತ್ತ ದೇಹ ಜೀವಿಸೀತು.

3. ಯೇಸು ಸಾವಿನಿಂದಲೆದ್ದು,
ಸಾವಿನಧಿಕಾರವ
ಹೊಂದಿದವನನ್ನು ಗೆದ್ದು,
ತನ್ನ ಭಕ್ತಜನರ
ನಿತ್ಯಕ್ಷೇಮಪೂರ್ತಿಯಲ್ಲಿ
ಸೇರಿಸೋನು ದಿವದಲ್ಲಿ.

೨೦೩

Ei, wie so selig schläfest du.
M. T. 19.

1. ಸುಶಾಂತ ನಿದ್ರೆ ಮಾಡುತಿ,
ಹೋರಾಟ ತೀರಿಸಿ!
ವಿಶ್ರಾಂತಿಗೊಂಡಿ, ಮಲಗಿ
ಕ್ರಿಸ್ತ್ಯೇಸುಹಸ್ತದಿ.

2. ಸಂಕಷ್ಟ ನಿನಗೋಸ್ಕರ
ತಾಳ್ದಂಥ ರಕ್ಷಕ—
ಸಮಾಪ್ತ! ಎಂತ, ಜೋಗುಳ
ನಿನ್ನಾತ್ಮಕ್ಹಾಡಿದ.

3. ನೀನೀಗ ಭೂಮಿಯೊಳಗೆ
ಕಾಳಾಗಿ ಬೀಳುತಿ;
ಸೌಂದರ್ಯರೂಪವಾಗಿಯೆ
ಆ ಮೇಲೆ ಏಳುವಿ.

4. ನಿನ್ನತಿಪ್ರಿಯ ಮುಖವ
ಮಣ್ಣಡಗಿಸಲಿ!
ನಿನ್ನಾತ್ಮಕೀಗಲುತ್ತಮ
ತೃಪ್ತ್ಯಾಯ್ತು ಪರದಿ.

5. ನಾವಿನ್ನು ಕೀಳ ಲೋಕದಿ
ದೇಶಾಂತ್ರಜನರೆ;
ನಮ್ಮನ್ನು, ಕರ್ತ, ದಾಟಿಸಿ,
ವೈ ನಿನ್ನ ಕಡೆಗೆ!

೨೦೪

Sleep on, beloved, sleep and take thy rest. M. T. 299.

1. ನಮ್ಮಾಪ್ತನೇ,* ವಿಶ್ರಾಂತಿ
ಯಾಗಿರು!
ಸುಶಾಂತಿಯಿಂದಲೀಗ ಮಲಗು!
ಕ್ರಿಸ್ತ್ಯೇಸು ಕರೆಯುವ ಮಟ್ಟಿಗು
ನಿದ್ದೆ ಮಾಡು, ಮಾಡು!

2. ನೀ ಕೂಸಿನಂತೆ ತಾಯಿ
ಯೆದೆಗೆ
ಈಗಾತುಕೊಂಡಿರು, ನಮ್ಮಾಪ್ತ
ನೇ!*
ಇನ್ನೆಂದೂ ತಾಗದೊಂದೂ ವೇ
ದನೆ;
ನಿದ್ದೆ ಮಾಡು, ಮಾಡು!

3. ಈ ಲೋಕದಂಧಕಾರ ಮು
ಗಿದು,
ಸಮಾಧಿ ಸೀಳಿ ಹೋಗುವಾ
ಗಲು,
ಸಜ್ಜೀವ ಹೊಂದಿ ಏಳೊ ಮಟ್ಟಿಗು
ನಿದ್ದೆ ಮಾಡು, ಮಾಡು!

4. ಮೇಲ್ಲೋಕದಲ್ಲಿ ಕೂಡೊ
ಮಟ್ಟಿಗೂ
ಸುದಾಸರೆಲ್ಲರಿಂಗೆ ಕರ್ತನು
ನಿರ್ಣಯ ಮುಡಿ ಇಡೊ ಮಟ್ಟಿ
ಗೂ
ನಿದ್ದೆ ಮಾಡು, ಮಾಡು!

*ಅಥವಾ ನಮ್ಮಾಪ್ತಳೇ.

೨೦೫

Mel. Unter Lilien jener Freuden. M. T. 214.

1. ತೀರಿತು ಈ ಭೂಸಂಚಾರ,
ತೀರಿತು ಈ ಜೀವದಲ್ಪ ಓಟವು;
ತೀರಿತೆಲ್ಲ ಕಷ್ಟ ಭಾರ,
ತೀರಿತು ಸಂಕ್ಷಿಪ್ತ ಯಾತ್ರಾಕಾ
ಲವು.

2. ತೀರಿತು ಸಂಕಷ್ಟ, ಚಿಂತೆ,
ತೀರಿತೆಲ್ಲ ರೋಗ, ಬೇನೆ, ಬೇಸರ;
ತೀರಿತಿನ್ನು ಲೋಕವ್ಯಥೆ,
ಮರಣಾಂಧಕಾರ ಭೀತಿ ವ್ಯಸನ.

3. ಮೂಡಿತುಸುಜ್ಯೋತಿಯಿಂದ
ನಿತ್ಯ ದಿನ ಸಾಲೆಂ ಪಟ್ಟದೊಳಗೆ;
ತಂದೆಯು ನಿಂಗೊಲ್ಮೆಯಿಂದ
ಸುಪ್ರವೇಶ ಕೊಟ್ಟನದರೊಳಗೆ.

4. ಹಲ್ಲೆಲೂಯಾ! ಕರ್ತನನ್ನು
ನಿತ್ಯ ನೋಡಿ ಹಾಡಿ ಪಾಡುತ್ತಿ
ರುವಿ;
ನಿತ್ಯಜೀವಮಾಲೆಯನ್ನು
ಕೊಟ್ಟ ಕರ್ತನೈಕ್ಯದಲ್ಲಿ ಬಾಳುವಿ.

೨೦೬

O wie selig seid ihr doch, ihr Frommen.—M. T. 43.

1. ಜೀವಯಾತ್ರೆಯಲ್ಲಿ ಎಷ್ಟೊ
ದುಃಖ!
ಭ್ರಾತ, ಸತ್ತ ನಿನಗೆಷ್ಟೊ ಸುಖ!
ನಾ ಕಷ್ಟದಾಳು!
ನಿನಗ್ಯೇಸುವಲ್ಲಿ ಒಳ್ಳೆ ಬಾಳು!

2. ಕೆಟ್ಟ ಸೆರೆಯಲ್ಲಿ ಬಿದ್ದೆನಲ್ಲ?
ನನ್ನ ದುಃಖ ಎಣಿಸಾರು ಬಲ್ಲ?
ಈ ಜೀವ ಅತಿ
ಚಿಂತೆಯುಳ್ಳ ವ್ಯಥೆಮಯ ಗತಿ.

3. ನಿಂಗೆ, ಭ್ರಾತ, ತೀರಿತೆಲ್ಲ
ಭ್ರಾಂತಿ;
ನಿನಗಾಯ್ತು ನಿತ್ಯವಾದ ಶಾಂತಿ.
ವಿಶ್ರಾಂತಿಯಲ್ಲಿ
ಸೇರಿ, ಸತ್ಯ ಸುಖ ಪಡ ಬಲ್ಲಿ.

4. ಯೇಸು ಒರಸೋನು ಅಶ್ರು
ವನ್ನು;
ಈಯ್ವನಾತನಿಷ್ಟಪೂರ್ತಿಯನ್ನು.
ಆ ಸ್ಥಾನದಲ್ಲಿ
ನಿದ್ದೆ ಮಾಳ್ಪೆ ಯೇಸುಜೋಕೆ
ಯಲ್ಲಿ.

5. ವ್ಯರ್ಥ ಚಿಂತೆ ಪಡುತಿರ್ಪ
ದೇಕೆ?
ಮೋಕ್ಷದಲ್ಲಿ ಸೇರದಿರೋದೇಕೆ?
ಸಾಕಾಯ್ತು ಕಷ್ಟ!
ಬೇಡ ನಂಗೆ ನಿಜಪ್ರಾಣನಷ್ಟ.

6. ಕರ್ತ, ಬಂದು ನೊಗ ಬಿಚ್ಚಿ
ಹಾಕು!
ಬಿಡಿಸೆನ್ನ! ಹೊತ್ತ ಹೊರೆ ಸಾಕು!
ನಿನ್ನೈಕ್ಯ ಲೇಸು!
ಹೃದದಿಷ್ಟ ಸೂರ್ಯ ನೀನೆ.
ಯೇಸು!

೨೦೭

Tod, mein Hüttlein kannst du brechen.—M. T. 78.

1. ಮೃತ್ಯುವೇ, ಈ ಘಟವನ್ನು
ನೀನು ಒಡೆದಿಟ್ಟರು,
ಕೊಲ್ಲಲಾರಿ ಆತ್ಮವನ್ನು.
ನನ್ನ ಸಾಲ ಸಂದಿತು!
ಯೇಸು ಮಧ್ಯವರ್ತಿಯು
ನನಗಾಗಿ ಸತ್ತನು.

2. ಆತ ತನ್ನ ರಕ್ತ ಚೆಲ್ಲಿ,
ನೀತಿಗಾಗಿ ಏಳಲು,
ರಕ್ತಬಂಧುಜನರಲ್ಲಿ
ಸ್ಥಳವೆನಗಾಯಿತು.
ರಕ್ತಬಲಿಯಿಂದಲೆ
ನಾನು ಜೀವ ಹೊಂದಿದೆ.

3. ನನ್ನ ಮರ್ತ್ಯ ದೇಹವನ್ನು
ರೋಗ ತಿಂದು ಬಿಟ್ಟರೆ

ಹ್ಯಾಗು ಒಂದೆ ನುಡಿಯನ್ನು
ಗಟ್ಟಿ ಹಿಡುಕೊಳ್ಳುವೆ—
"ಜೀವವುಳ್ಳ ಕರ್ತನು
ನನ್ನ ಜೀವಮೂಲವು."

4. ಸಾಯುವಾಗ ಜೀವಪಾನ
ಕೊಡು, ಪ್ರಿಯ ಕರ್ತನೆ!
ನಿನ್ನ ಪಂಚ ಗಾಯ ಧ್ಯಾನ
ಮಾಡಿ, ನಿದ್ರೆ ಗೈಯುವೆ.
ಯೇಸು, ನಿನ್ನ ನೀತಿಯು
ನನ್ನ ಶ್ವೇತ ವಸ್ತ್ರವು!

೨೦೮

Auferstehn, ja auferstehn wirst du.—M. T. 49.

1. ನನ್ನ ದೇಹವೇ, ನೀನೇಳುವಿ,
ವಿಶ್ರಾಂತಿ ತೀರಿಸಿ!
ನಿರ್ಭಯವಾಗಿ
ನೀ ಕರ್ತಗೆದುರಾಗಿ
|: ನಿಂತಿರುವಿ. :|

2. ಭೂಮಿಯಲ್ಲಿ ಬಿದ್ದ ಬೀಜವು,
ವಸಂತ ಬರಲು,
ಉಜ್ಜೀವಿಸೋದು;
ಈ ದೇಹಕೂ ಬರೋದು
|: ವಸಂತವು. :|

3. ಹರ್ಷಸ್ತೋತ್ರವಾಗೊ ದಿನವೇ,
ನನ್ನಾತ್ಮದಾಶೆಯೇ!
ತುತೂರಿರಾಗ
ಸಮಾಧಿಗಿಳಿದಾಗ,
|: ನಾನೇಳುವೆ. :|

4. ಸ್ವಪ್ನ ಕಂಡ ಹಾಗೆ ಇರುವೆ,
ಆ ದಿನ ಬರಲೆ;
ಈ ಪಾಪಭಾರ,
ಈ ಕಾಡಿನ ಸಂಚಾರ
|: ತೀರುತ್ತದೆ. :|

5. ನನ್ನ ಕರ್ತನನ್ನು ನೋಡುವೆ,
ಆ ಲೋಕದೊಳಗೆ
ಪ್ರವೇಶ ಮಾಡಿ;
ಕಾರುಣ್ಯವಂ ಕೊಂಡಾಡಿ
|: ನಾ ಹಾಡುವೆ. :|

೨೦೯

Mit Fried' und Freud' ich fahr' dahin.—M. T. 76.

1. ನನ್ನಾಪ್ತದೇವಚಿತ್ತಕೆ
ನಾನೊಡಂಬಟ್ಟು,
ಈ ಲೋಕ ಬಿಟ್ಟು ಹೋಗುವೆ,
ಶಾಂತಿ ಪಟ್ಟು.
ಮೃತ್ಯು ಒಳ್ಳೆ ನಿದ್ರೆಯೇ;
ವಿಶ್ವಾಸಿ ಸಾಯೊದಿಲ್ಲ.

2. ಕ್ರಿಸ್ತ್ಯೇಸು, ದೇವಪುತ್ರನೆ,
ನಿನ್ ಹತ್ರ ಬಂದೆ!

ನಿನ್ನಲ್ಲಿ ದೇವರೆನಗೆ
ಪ್ರಿಯ ತಂದೆ.
ಸತ್ತರೇನು ಚಿಂತೆಯು?
ನಿನ್ನಲ್ಲಿ ಮೃತ್ಯು ಜೀವ!

೨೧೦

Wer weiss, wie nahe mir mein Ende.—M. T. 91.

1. ಜೀವಾಂತ್ಯಕಾಲ ಯಾರು ಬಲ್ಲ?
ಮೃತ್ಯೆನ್ನ ಬೆನ್ನು ಬಿಡದು;
ಇಂದೂ ಶರೀರ ಸ್ಥಿರವಲ್ಲ;
ನಾ ತೃಣಪ್ರಾಯದವನು.
ಕ್ರಿಸ್ತ್ಯೇಸುರಕ್ತಕಾಗಿಯೇ
ಸುಮೃತಿ ಕೊಡು, ದೇವರೇ!

2. ಹೊತ್ತಾರೆ ನಿದ್ದೆ ತಿಳಿದಾಗ
ಸಂಜೇ ಪ್ರಸ್ತಾಪವರಿಯೆ.
ಭೂಮೀಲಿ ವಾಸ ಮಾಡುವಾಗ
ಬಿಡಾರ ಸ್ಥಿರವಹುದೆ?
ಕ್ರಿಸ್ತ್ಯೇಸುರಕ್ತಕಾಗಿಯೇ
ಸುಮೃತಿ ಕೊಡು, ದೇವರೇ!

3. ನನ್ನಾತ್ಮ, ಜೀವಕಾಲದಲ್ಲಿ
ಜೀವಾಂತ್ಯವನ್ನು ನೆನಸು!
ಕ್ರಿಸ್ತ್ಯೇಸುನಾಥಮೃತಿಯಲ್ಲಿ
ವಿಶ್ವಾಸಿಯಾಗಿ ಮುಣುಗು!
ಕ್ರಿಸ್ತ್ಯೇಸುರಕ್ತಕಾಗಿಯೇ
ಸುಮೃತಿ ಕೊಡು, ದೇವರೇ!

4. ನಾ ಬಾಳುತೇನೆಯೇಸುವಲ್ಲಿ.
ಯಾರಗಲಿಸ ಬಲ್ಲರು?
ಕೈ ಹಾಕಿ ಯೇಸುಪಕ್ಕೆಯಲ್ಲಿ,
ನನ್ನೀಶ! ದೇವ! ಅಂಬೆನು.
ನೀ ಹೊಯ್ದ ರಕ್ತಕಾಗಿಯೇ
ಸುಮೃತಿ ಕೊಡು, ಯೇಸುವೇ!

5. ಪಿತಾ, ಪವಿತ್ರ ಸ್ನಾನದಿಂದ
ನಿಂಗಿಷ್ಟ ಪುತ್ರನಾದೆನು;
ಅಂದ್ಯೇಸುನಾಥಕೃಪೆಯಿಂದ
ನಿನ್ನೊಳ್ಮೆ ಸ್ಥಿರವಾಯಿತು.
ಸ್ವಪುತ್ರರಕ್ತಕಾಗಿಯೇ
ಸುಮೃತಿ ಕೊಡು, ದೇವರೇ!

6. ಕ್ರಿಸ್ತ್ಯೇಸುದೇಹರಕ್ತವನ್ನ
ನಾನಿಲ್ಲಿ ತಿಂದು ಕುಡಿದೆ;
ನನ್ನವನಾಗಿದ್ದಾನೆ ಇನ್ನು,
ನಾನಾತನನ್ನು ಬಿಟ್ಟೇನೆ?
ಕ್ರಿಸ್ತ್ಯೇಸುರಕ್ತಕಾಗಿಯೇ
ಸುಮೃತಿ ಕೊಡು, ದೇವರೇ!

7. ನಾನಿಂದು, ನಾಳೆ ಸತ್ತರೇನು?
ವಿಶ್ವಾಸ ಕಳೆದಂಜಲೋ?
ನನ್ನಲ್ಲಿ ಕಾಣ್ಬ ದೋಷವೇನು?
ಕ್ರಿಸ್ತ್ಯೇಸುನೀತಿ ಸಾಲದೋ?
ಕ್ರಿಸ್ತ್ಯೇಸುರಕ್ತಕಾಗಿಯೇ
ಸುಮೃತಿ ಕೊಡು, ದೇವರೇ!

8. ಸಂತೃಪ್ತನಾಗಿ ಬಾಳುತೇನೆ,
ಸ್ವಚಿಂತೆಯೆಲ್ಲ ಮರೆತು.
ನಿನ್ನಲ್ಲಿ ದೃಢನಾಗಿದ್ದೇನೆ;
ನಿನ್ನಿಚ್ಛೆ ನನ್ನ ಸುಖವು.
ಅಮೂಲ್ಯ ಕ್ರಿಸ್ತರಕ್ತವೆ
ಸುಮೃತಿಯಾಯ್ತದೆನಗೆ!

೨೧೧

Mel. Wer ist wohl wie du.
M. T. 56.

1. ನಮ್ಮ ಆಯುಸು
ಬಹು ಸ್ವಲ್ಪವು;
ಬೇಗ ಬಪ್ಪದಂತ್ಯಶ್ವಾಸ;
ಲೋಕ ಕೊಡುವೀ ವಿಲಾಸ
ಬಹು ಕಾಲವು
ನಿಲ್ಲಲಾರದು.

2. ವ್ಯರ್ಥ ಭ್ರಮೆಯು
ಇನ್ನು ಬೇಡವು.
ಚುರುಕಾದ ಬುದ್ಧಿಯನ್ನು,
ಹೃದ್ವಿಶುದ್ಧಭಾವವನ್ನು
ಕೊಡು ನಮಗೆ,
ಪ್ರಿಯ ಕರ್ತನೆ!

3. ಇಂದು ನಮ್ಮದು;
ನಾಳಿನಾಪತ್ತು
ಪೂರ್ಣ ಮರ್ಮವಿರಲಾಗಿ,
ನಿತ್ಯ ಆತ್ಮಸುಖಕಾಗಿ
ನೋಡದವನೇ
ಮೂಢನಲ್ಲವೇ?

4. ನನ್ನ ಆತ್ಮಕೆ
ಒಂದೆ ಯೋಚನೆ—
"ಈ ಪ್ರಪಂಚವೆಲ್ಲ ಲಯ;
ಏಕ ಗತಿ ನಿನ್ನ ದಯ!"
ದಯವೆನಗೆ
ಕೊಡು, ಯೇಸುವೆ!

೨೧೨

Days and moments quickly flying.
M. T. 300.

1. ಕಾಲ ಶೀಘ್ರ ದಾಟಿ ಹೋಗಿ
ಜೀವಿತರು ಸಾಯ್ವರು;
ನಾನೂ ನೀನೂ ತೀರಿಹೋಗಿ
ಗೋರಿಯೊಳಗಿರ್ವೆವು.

2. ನಮ್ಮ ಆತ್ಮ ದೇವರ್ಹತ್ರ
ಶೀಘ್ರ ತಿರುಗುವದು;
ಪ್ರಾಣರಕ್ಷೆಯನ್ನು ಮಾತ್ರ
ನಾವು ಮರ್ಯಲಾಗದು.

3. ಯೇಸು, ನಿತ್ಯ ರಕ್ಷಾಪತಿ,
ಈ ಶರೀರಕ್ಕೀಶನೆ,
ನಮ್ಮ ಸ್ಥಿತಿ, ನಮ್ಮ ಗತಿ
ನೆಪ್ಪು ಕೊಡು ನಮಗೆ!

4. ನಮಗ್ಯಾವ ಸ್ಥಿತಿ ಪ್ರಾಪ್ತಿ
ಶೀಘ್ರ ತೀರಿ ಹೋಗಲು?
ಅಗ್ನಿಬಾಧೆ, ಮೋಕ್ಷತೃಪ್ತಿ
ಇವುಗಳಲ್ಲಾವದು?
ಜೀವಾಂತ್ಯವು ಬರುತ್ತಲೇ
ಕೈ ಬಿಡದೆ ಸಂರಕ್ಷಿಸು!
ಕ್ರಿಸ್ತ್ಯೇಸುವೇ, ನಿನ್ ಹತ್ರವೇ
ನಿತ್ಯವಿಶ್ರಾಂತಿಗೆಸೇರಿಸು! ಆಮೆನ್.

6. ರಕ್ಷಣಾಮಾರ್ಗ

೧. ಪಶ್ಚಾತ್ತಾಪಪ್ರೇರಣೆ

೨೧೩

Sieh, wer steht vor deiner Tür.
M. T. 301.

1. ಯಾರಿದ್ದಾನೆ ಕರ್ಯುತ್ತಾ?
(ಒಳ) ಕರಕೋ!
ನಿನ್ನ ಕದ ತಟ್ಟಿದ! (ಒಳ) ಕರ
ಕೋ!
ನಿನ್ನ ಪ್ರಿಯ ರಕ್ಷಕ
ಬಂದ, ಯೇಸು ಒಡೆಯ.
ಎದ್ದು ಸೇರಿಸಾತನ! (ಒಳ) ಕರ
ಕೋ!

2. ತಡ ಮಾಡಬೇಡವು! (ಒಳ)
ಕರಕೋ!
ಮುಂದೆ ಹೋಗಿಬಿಟ್ಟಾನು!
(ಒಳ) ಕರಕೋ!
"ನನ್ನ ಮನದಲ್ಲಿ ಬಾ!
ನಿನ್ನ ಸಮಾಧಾನ ತಾ!"
ಎಂದು ಹೇಳು ಬೇಡುತ್ತಾ!
(ಒಳ) ಕರಕೋ!

3. ದಿವ್ಯ ಭಾಗ್ಯ ಬೇಡವೋ?
(ಒಳ) ಕರಕೋ!
ಒಳ್ಳೇ ಪಾಲು ಪಡಕೋ!
(ಒಳ) ಕರಕೋ!
ತೆರೆ, ತೆರೆ ಬಾಗಲ!
ಆತ ಮನ್ನ ನೀಡುತ್ತಾ
ನಿನ್ನ ಕೂಡ ಉಣ್ಣುವ. (ಒಳ)
ಕರಕೋ!

4. ಯೇಸುವನ್ನು ಈಗಲೇ
(ಒಳ) ಕರಕೋ!

ಅಂಗೀಕರಿಸಿದರೆ.— (ಒಳ)ಕರ
ಕೋ!—
ಇನ್ನು ಮುಂದೆ ಆತನು
ಪರಲೋಕದೂಟಕು
ನಿನ್ನ ಕರೆಯುವನು. (ಒಳ)
ಕರಕೋ!

೨೧೫

Kehre wieder, kehre wieder.
M. T. 266.

1. ತಿರುಗಿಂದು, ತಿರುಗೀಗ
ಮಾರ್ಗ ತಪ್ಪಿದವನೆ!
ಪಾಪಭಾರ ಇಳಿಸೀಗ
ಯೇಸುವಿನ ಪಾದಕೆ!
ಶಂಕೆ ಬಿಡು, ಬಡ ಪಾಪಿ!
ಇದ್ದ ಹಾಗೆ ಬರಲಾಪಿ;
ಬಂದರಾತ ಹರ್ಷಗೊಂಡು
ನಿನ್ನನಪ್ಪಿಕೊಳ್ಳುವ.
ನೀನು ಧೈರ್ಯ ತಂದುಕೊಂಡು
ತಿರುಗೀಗ, ಹಿಂದೆ ಬಾ!

2. ತಿರುಗೀಗ, ಬೆನ್ನು ಹಾಕು
ಲೋಕದಾಟ ಡಂಭಕೆ!
ಹಂದಿ ಕಾಯ್ವ ಸೇವೆ ಸಾಕು;
ಊಟ ಸಿದ್ಧವಾಗಿದೆ
ನಿನ್ನ ತಂದೆ ಮನೆಯಲ್ಲಿ.
ಆಹಾ, ತೃಪ್ತನಾಗ ಬಲ್ಲಿ!
ನಿನ್ನ ಪಾಪ ಮನ್ನಿಸೋನು,
ಪೂರ್ಣ ಗುಣ ಮಾಡುವ;
ಮಗನೆಂತ ಕರೆಯೋನು.
ತಿರುಗೀಗ, ಹಿಂದೆ ಬಾ!

3. ತಿರುಗೀಗ ಕತ್ತಲಿಂದ
ದಿವ್ಯ ತೇಜದೊಳಗೆ,
ಆದಿವೈರಿಮೋಸದಿಂದ
ಸತ್ಯ ದೇವರಾಜ್ಯಕೆ,
ಮೃತಿಯಿಂದ ಜೀವದಲ್ಲಿ,
ಯುದ್ಧದಿಂದ ಶಾಂತಿಯಲ್ಲಿ!
ಬಾ, ಬಾ! ನೋಡು, ಕ್ರಿಸ್ತ ತಾನು
ಎದುರ್ಗೊಳ್ಳ ಓಡುವ;
ಇಂದು ನಿನ್ನ ಸೇರಿಸ್ಯಾನು,
ತಿರುಗಿಂದು, ಇಂದೇ ಬಾ!

೨೧೬

To-day the Saviour calls.—M. T. 3.

1. ಕ್ರಿಸ್ತ್ಯೇಸು ಕರೆದ,
ಪಾಪಾತ್ಮನೇ!
ಈಗೀಗ ಕರೆದ;
ಕೇಳ್, ಪಾಪಿಯೇ!

2. ಈಹೊತ್ತು ಕರೆದ;
ಓಡ್ಯೋಡಿ ಬಾ!
ಬಿಟ್ಹೋಗು ಮೂರ್ಖರ
ದುರ್ಮಾರ್ಗವ!

3. ಈಹೊತ್ತು ಕರೆದ
ನಿನ್ನೊಡೆಯ!
ಕೇಳಾತ ನಿನ್ನನು
ಕಾಪಾಡುವ.

4. ಈಹೊತ್ತು ಕರೆದ
ಕಾರುಣ್ಯಾದಿ!
ನೀ ಕೇಳದಿದ್ದರೆ,
ಕೆಟ್ಟ್ಹೋಗುತಿ.

5. ಈಹೊತ್ತು ಕರೆದ;
ನಾ ಕೇಳಿದೆ.
ನನ್ನನ್ನು ರಕ್ಷಿಸು,
ಕ್ರಿಸ್ತ್ಯೇಸುವೆ!

೨೧೬

Mel. Rock of Ages.—M. T. 63.

1. ಈಹೊತ್ತಿನ ದಿನದೊಳ್
ದೇವ ಶಬ್ದ ಕಿವಿಯೊಳ್
ಬೀಳುವಾಗ, ಎಚ್ಚರ!
ತೆರೆ ನಿನ್ನ ಹೃದವ!
ಆತ ಕರ್ಯುತಾನಲ್ಲಾ;
ಆತನ್ಹತ್ರ ಓಡಿ ಬಾ!

2. ನಾಳೆ ಹೃದ ಕಠಿಣ-
ವಾಗಿ ಹೋದೀತಕಟ!
ಸ್ಥಿರವಲ್ಲ ಜೀವವು,
ಕೃಪಾಕಾಲ ತೀರ್ವದು,
ನಾಳೆ ನ್ಯಾಯತೀರ್ಪಿನ
ಕಾಲ ಬಂತು ಹತ್ತರ.

3. ಇಂದು ಕೃಪಾಸಮಯ
ಇನ್ನು ಇರೊ ಕಾರಣ,
ನಿನ್ನ ಪ್ರಾಣರಕ್ಷೆಗೆ
ಓಡಿ ಹೋಗು ಬೇಗನೆ!
ಇಂದು ಹೊಗು ಶರಣ!
ದೇವ ಶಬ್ದ ಕೇಳಿ ಬಾ!

೨೧೭

Mel. Rock of Ages.—M. T. 64.

1. ನಾಳೆಯೆಂತ ನಿತ್ಯವು
ಬುದ್ಧಿಗೇಡಿ ಹೇಳ್ವನು!
ಈಹೊತ್ತನುಕೂಲವು
ನನಗಾಗಲೊಲ್ಲದು
ಅನ್ನುವಾಗ, ಈಹೊತ್ತು
ಹೋಯ್ತು, ಇನ್ನು ಬಾರದು.

2. "ನಾಳೆ ಪಾಪಕೋಸ್ಕರ
ಪಶ್ಚಾತ್ತಾಪ ಪಡುವ!
ನಾಳೆ ಯೇಸು ಕ್ರಿಸ್ತನ
ನಂಬಿ ಕ್ಷೇಮಹೊಂದುವ!"
ಅನ್ನುವಲ್ಲಿ ಜೀವವು
ಹೋಗಿ, ಸಾವು ಬಪ್ಪದು.

3. ಯಾಕೆ ಈಹೊತ್ತಾಗದು?
ಎಂಬ ಪ್ರಶ್ನೆ ಯೋಗ್ಯವು!

ಇಂದು ತಕ್ಕ ದಿನವು;
ಈಗ ಕಾರ್ಯ ತೀರಿಸು!
ನಾಳೆ ಮಾಡೇನೆಂಬದು
ವ್ಯರ್ಥವಾಗಬಹುದು.

4. ನಿಂತು ಹಿಂದೆ ಬೀಳೊದು
ಪ್ರಾಣನಷ್ಟವಹುದು.
ಆದ್ದರಿಂದ, ಪ್ರಿಯರೆ,
ಉದಾಸೀನ ಮಾಡದೆ,
ದಿನವಿರುವನಕ
ಮುಂದೆ, ಮುಂದೆ ಹೋಗುವ!

೨೧೮

We're travelling to heaven above.
M. T. 141. 142.

1. ಮೇಲಾದ ಮೋಕ್ಷಕ್ಕೋಗು
ವಾ! — |: ಬಂದೀಯಾ? :|
ಸವಿಶ್ರಾಮಸನ್ನು ನೋಡುವಾ! —
|: ಬಂದೀಯಾ? :|
ನೂರಾರು ಮಂದಿ ಭಾಗ್ಯದಿ
ಸೇರಿರುತಾರೆ ಹರ್ಷದಿ.
ಇನ್ನೂಂಟು ಜಾಗ ಸ್ವರ್ಗದಿ. —
|: ಬಂದೀಯಾ? :|

2. ಈ ಸ್ವರ್ಗಮಾರ್ಗ ಚಲೊ
ದು! — |: ಬಂದೀಯಾ? :|
ಬಿಟ್ಟಾಕಿ ಪಾಪ, ನಂಬೊದು! —
|: ಬಂದೀಯಾ? :|
ಇದ್ದಾನೆ ಯೇಸು ಕರ್ಯುತಾ —
"ನೀನೆನ್ನ ಬೆನ್ನು ಹತ್ತಿ ಬಾ,
ತಿಲುಬೆ ಹೊತ್ತುಕೊಳ್ಳುತಾ!" —
|: ಬಂದೀಯಾ? :|

3. ವಿಮುಕ್ತಿ ಅಲ್ಲಿ ಸಿಕ್ಕೊ
ದು! — |: ಬಂದೀಯಾ? :|
ಉಲ್ಲಾಸ ಮಿಗಿಲಾದದು! —
|: ಬಂದೀಯಾ? :|
ಪ್ರಪಂಚ ನಿಂಗೆ ಸಾಲದು,
ಸಂತೃಪ್ತಿ ಎಂದಿಗಾಗದು,
ಪಾಪಾತ್ಮಗಾಜ್ಞೆ ತಪ್ಪದು. —
|: ಬಂದೀಯಾ? :|

4. ಈಗೀಗ ಹೀಗೆ ಹೇಳಿರಿ —
|: "ಬಂದೆನು. :|
ನಂಗಡ್ಡಿ ಮಾಡಬೇಡಿರಿ! —
|: ಹೋದೆನು. :|
ನಿಮ್ಮೊಡನೆ, ನನ್ನಾಪ್ತರೆ,
ನಾನಿನ್ನು ಹೋಗೆ ನಾಶಕೆ!
ನನ್ನಾಸರ ನೀ, ಯೇಸುವೆ! —
|: ಬಂದೆನು." :|

---

೨. ರಕ್ಷಣಾರ್ಥಕ ಪ್ರಾರ್ಥನೆ

೨೧೯

Ps. 130.
Aus tiefer Not schrei' ich zu dir.
M. T. 220.

1. ಪಾಪಿಷ್ಠ ನಾನು ತಾಪದ
ಅಗಾಧದಲ್ಲಿದ್ದೇನೆ;
ಸಹಾಯ ಮಾಡು, ರಕ್ಷಕ!
ಐ, ಮೊರೆಯಿಡುತ್ತೇನೆ.
ನೀ ಕಿವಿಗೊಟ್ಟು, ಕರ್ತನೆ,
ಆಲೈಸು ನನ್ನ ಪ್ರಾರ್ಥನೆ!
ನಿನ್ನನ್ನು ನಂಬಿದ್ದೇನೆ.

2. ಪವಿತ್ರನೇ, ನೀ ಮಾಡುವ
ವಿಚಾರದಲ್ಲಿ ಯಾರು
ನಿನ್ನೆದುರಲ್ಲಿ ನಿಲ್ಲುವ?
ನಿರಪರಾಧಿ ಯಾರು?
ನೀನೆಮ್ಮ ಪಾಪ ಬಿಡೋದೇ
ನಮ್ಮೊಂದೇ ಗತಿ, ಸ್ವಾಮಿಯೇ!
ನಿಂಗಂಜದವರ್ಯಾರು?

3. ನೀನೆನ್ನ ಒಂದೇ ಕೋರಿಕೆ,
ನನ್ನಲ್ಲಿ ಪುಣ್ಯವಿಲ್ಲ;
ನಾ ನಿನ್ನ ದಾರಿ ನೋಡುವೆ,
ನೀನೆನ್ನ ಬಿಡೋದಿಲ್ಲ.
ನೀನಿತ್ತಮೂಲ್ಯ ವಾಕ್ಯವು
ನಿರೀಕ್ಷೆಗಾಯ್ತಾಧಾರವು;
ಅದೆಂದೂ ತಪ್ಪೋದಿಲ್ಲ.

4. ಸಹಾಯ ತಡವಾದರು
ನಾ ಕಾಯುತ್ತಿರುತ್ತೇನೆ.
ಯಾವಾಗಹೊತ್ತುಮೂಡೋದು
ಎಂದೆಚ್ಚರಾಗಿದ್ದೇನೆ.
ತಾನಾಯ್ದ ಸ್ವಂತ ಪ್ರಜೆಯು
ಯೆಹೋವನೆಂದೂ ಮರೆಯು
ಎಂದಾತುಕೊಂಡಿದ್ದೇನೆ.

5. ನಂಗೆಷ್ಟು ಪಾಪವಿದ್ದರು
ಆತಂಗಿನ್ನಷ್ಟು ದಯ.
ನಾ ಕೆಟ್ಟೆ. ಆತಗಿರೋದು
ರಕ್ಷಾಬಲಾತಿಶಯ.
ಯೆಹೋವ ಪ್ರಜಾಪಾಲನು,
ಸರ್ವಾಪರಾಧಹರನು.
ಆಹಾ! ಇನ್ನ್ಯಾಕೆ ಭಯ?

೨೨೦

Ach Gott und Herr.—M. T. 52.

1. ಪವಿತ್ರನೇ,
ಅಪಾರವೇ
ನಾ ಮಾಡಿದಂಥ ಪಾಪ!
ಸೃಷ್ಟ್ಯೊಳಗೆ
ಯಾರೆನಗೆ
ಸಹಾಯ ಮಾಡಲಾಪ?

2. ಯಾರಿಂದಲು
ಅದಾಗದು;
ನೀನೊಬ್ಬನೆನ್ನ ತಂದೆ!
ನೀನೆನ್ನನು,
ಐ, ಮನ್ನಿಸು!
ನಿನ್ನಾಸರಕ್ಕೆ ಬಂದೆ.

3. ನನ್ನಪ್ಪನೆ,
ಸುದಂಡನೆ
ಕೊಟ್ಟಾಗ್ಯು, ಯೇಸುವಲ್ಲಿ
ಸಂಧೈರ್ಯವ,
ಸುಶಾಂತಿಯ
ಇಡಂಜುವಾತ್ಮದಲ್ಲಿ!

4. ನಿನ್ನಲ್ಲಿಯೆ
ವಿಮೋಚನೆ;
ನೀ, ಕರ್ತ, ದಯೆಮಾಡು!
ನಿನ್ನೈಕ್ಯದ
ಸಂತೃಪ್ತಿಯ
ಕೊಟ್ಟಾತ್ಮವಂ ಕಾಪಾಡು!

5. ಉದ್ಧಾರಕ,
ನನ್ನಾಸರ
ನಿನ್ನೈದು ಗಾಯದಲ್ಲಿ!
ಅಲ್ಲಿಹುದು
ಸುಕ್ಷೇಮವು
ಸಮಸ್ತ ವ್ಯಥೆಯಲ್ಲಿ.

೨೨೧

Mel. Du mein einzig Licht.
M. T. 57.

1. ಪರಿಶುದ್ಧನೇ,
ನಿತ್ಯ ದೇವರೇ!
ನಿನ್ನ ಮುಂದೆ ನಾನು ಬಂದೆ,
ನನ್ನ ಪಾಪಭಾರ ತಂದೆ;
ನಾನಯೋಗ್ಯನು,
ಕೆಟ್ಟ ದಾಸನು.

2. ಇಷ್ಟು ವರುಷ
ನಿನ್ನ ಆಜ್ಞೆಯ
ಮೀರಿ, ನಿನ್ನಸಡ್ಡೆ ಮಾಡಿ,
ಪಾಪದಲ್ಲಿ ಹೊರಳಾಡಿ,
ಭ್ರಷ್ಟನಾದೆನು,
ಬಿಟ್ಟು ನಿನ್ನನು.

3. ನುಡಿ ನಡೆಯು,
ಇಚ್ಛೆಯಾಶೆಯು
ಎಲ್ಲ ಕೇಡಿಗೊಳಗಾಗಿ,
ಬರೆ ಪಾಪಮಯವಾಗಿ,
ನಿನ್ನ ಹತ್ರವು
ಸಲ್ಲಲಾರವು.

4. ನನ್ನ ಮನಸು
ಬರೆ ಕತ್ತಲು;
ಅದರಲ್ಲಿ ದೇವಪ್ರೀತಿ,
ಚೊಕ್ಕ ಗುಣ, ನ್ಯಾಯ, ನೀತಿ

ಕಾಣಲೊಲ್ಲವು,—
ಬರೇ ಸ್ವೇಚ್ಛೆಯು.

5. ಸುಳ್ಳು, ಕಪಟ,
ಕಾಮದಾತುರ,
ಕೋಪ, ಗರ್ವ, ಅಹಂಕಾರ,
ಉಪಕಾರಕಪಕಾರ,
ಮೋಸ, ಕಳವು
ನನ್ನಲಿರೊದು.

6. ದ್ವೇಷ, ಹಗೆಯು,
ಚಾಡಿ, ಬೈಗಳು,
ಹೊಟ್ಟೆಕಿಚ್ಚು, ಡಂಭ, ನ್ಯಾಯ,
ವ್ಯರ್ಥವಾದ ಕಾಲವ್ಯಯ,
ಲೆಕ್ಕವಿಲ್ಲದೆ
ಪಾಪ ಮಾಡಿದೆ.

7. ದಿವ್ಯ ತಂದೆಯೆ,
ಮಾತು ಕೇಳದೆ,
ನಿನಗೆ ವಿರೋಧವಾಗಿ
ಪಾಪ ಮಾಡಿದವನಾಗಿ,
ಪುತ್ರನಾಮಕೆ
ನಾನಯೋಗ್ಯನೆ.

8. ಪಾಪ ನನಗೆ
ಕಡು ರೋಸಿಕೆ.
ನನ್ನ ಹೇಸಿಕೊಳ್ಳುತ್ತೇನೆ.
ಧೂಳಿಗಂಟಿಕೊಂಡಿದ್ದೇನೆ;
ನಾನಸರಿಷ್ಟನು;
ನೋಡು ನನ್ನನು!

೨೨೨

Mel. Du mein einzig Licht.
M. T. 57.

1. ದೇವಶಾಪವು
ಎಷ್ಟಘೋರವು!
ನನ್ನ ವಜ್ಜೆ ಎಷ್ಟಪಾರ!
ತಾಳಲಾರದಂಥ ಭಾರ!
ಎಲ್ಲಿ ಹೋದರು,
ಶಾಪ ತಪ್ಪದು.

2. ನನ್ನ ರೋಗವು
ಗುಣವಾಗದ್ದು.
ರಕ್ತ ಸೋರ್ವ ನನ್ನ ಗಾಯ
ಮಾಯೋದಿಲ್ಲ; ಏನುಪಾಯ?
ಯಾವ ವೈದ್ಯನು
ವಾಸಿ ಮಾಡೊನು?

3. ದೇವಬಾಣವು
ನಂಗೆ ನಾಟಿತು.
ಅದು ನನ್ನ ಆತ್ಮದಲ್ಲಿ
ತಿವ್ಯಲಾಗಿ, ಕ್ಷೇಮವೆಲ್ಲಿ
ಸಿಕ್ಕೀತೆನಗೆ
ಅಂಬುಗಾಯಕ್ಕೆ?

4. ಸಮಾಧಾನವು
ಆಗಲೊಲ್ಲದು;

ಮನದಲ್ಲಿ ಮಹಾ ಭಯ,
ಶರೀರಾತ್ಮಕ್ಕಾಯ್ತು ಕ್ಷಯ,
ನಿನ್ನ ಚಿತ್ತವು
ನಂಗೆ ತಾಗಲು.

5. ನರಕಾಗ್ನಿಗು
ನಾನು ಪಾತ್ರನು;
ನಿತ್ಯ ಮೃತಿಗಾದೆ ಗುರಿ.
ನರಕದ ನಿತ್ಯ ಉರಿ
ದಹಿಸುತ್ತದೆ,
ಶಾಂತಿ ಕೊಡದೆ.

6. ಎಲ್ಲಿ ಹೋಗಲಿ?
ಲೋಕತ್ರಯದಿ
ಯಾರಿಂದಾಗೋದು ಸಹಾಯ?
ನಿನ್ನ ಕೃಪೆಯೇ ಉಪಾಯ.
ಸ್ವಾಮಿ, ನನ್ನನ್ನು
ನೀ ಕಟಾಕ್ಷಿಸು!

೨೨೩

Sieh', hier bin ich, Ehrenkönig.
M. T. 106.

1. ಬಡ ಪಾಪಿ ನಾನು ಬಂದೆ
ನಿನ್ನ ಮುಂದೆ, ದೇವರೆ!
ನೀನೆ ನೀತಿಯುಳ್ಳ ತಂದೆ;
ಕೊಡು ಶಾಂತಿಯೆನಗೆ!
ಕೇಳು ನನ್ನ
ಮೊರೆಯನ್ನ!
ಭಯಭ್ರಾಂತಿ ಕಾಡುತೆ.

2. ತ್ರಾಣ ಕುಂದಿ ನನ್ನ ಭಾರ
ಇನ್ನು ಮೇಲೆ ತಡೆಯೆ.
ಕೊಡು ಪಾಪಪರಿಹಾರ,
ಕೊಡು, ಪ್ರಿಯ ಯೇಸುವೆ!
ಕೇಳು ನನ್ನ
ಮೊರೆಯನ್ನ!
ಪಾಪ ಹತ್ತಿತೆನಗೆ.

3. ದೇವರಾತ್ಮ, ಅಂಧರಲ್ಲಿ
ದಿವ್ಯ ಕಾಂತಿ ಹೊತ್ತಿಸು!
ನನ್ನ ಅಂತರ್ಭಾವದಲ್ಲಿ
ಸೇರಿ, ವಾಸಿಸೆಂದಿಗು!
ಕೇಳು ನನ್ನ
ಮೊರೆಯನ್ನ!
ನಾನು ಶುದ್ಧಹೀನನು.

೨೨೪

Gott, der du allen gütig.
M. T. 195.

1. ದೇವರೇ! ಕಟಾಕ್ಷವುಳ್ಳ,
ಕಾರುಣ್ಯ ತಾಳ್ಮೆ ಕ್ಷಮೆಯುಳ್ಳ,
ಕೃಪಾಳು ಪ್ರೀತಿಯಬ್ಧಿಯೇ!
ಘೋರ ಪಾಪಮಲಕಾಗಿ,
ಅಸಂಖ್ಯ ಕರ್ಮರಾಶಿಗಾಗಿ
ನಾ ಸುಯ್ಯುತೇನೆ, ಆಳ್ಮನೇ!

ನಾ ಪಾಪಿಯೆ, ಅಯ್ಯೋ!
ನೀ, ಕರ್ತ, ದೃಷ್ಟಿಸೋ!
ನಿನ್ನ ದಯ
ನಾ ತಳ್ಳಿದೆ,
ನನ್ನೀಶನೆ!
ನಿನ್ನನ್ನಸಡ್ಡೆ ಮಾಡಿದೆ.

2. ಕ್ಷಮಿಸು ಈ ಕರ್ಮವನ್ನು!
ನೀ, ಕರ್ತ, ಮಾಡಲುಗ್ರವನ್ನು,
ಯಾರುಳಿದಾರು ಲೋಕದಿ?
ನಿನ್ನ ಪ್ರೀತಿ ಎಳವನ್ನು
ಅಲಕ್ಷ್ಯ ಮಾಡೊ ಮನಸನ್ನು
ಕಾರ್ಗತ್ತಲಿಂಗೆ ದೊಬ್ಬುವಿ.
ನೀ, ತಂದೆ, ಕ್ಷಮಿಸು!
ಭಯಾತ್ಮಗುಳಿಸು
ನಿನ್ನ ದಯ!
ಹೃತ್ಪೀಡೆಯಿಂ,
ವಿನಾಶದಿಂ
ಕಾಪಾಡೆನ್ನನ್ನು ಕೃಪೆಯಿಂ!

3. ಇರ್ವೆನಂಧಕಾರದಲ್ಲಿ,
ನೀನೆನ್ನ ಎದೆಗುಂಡಿಯಲ್ಲಿ
ಪ್ರಕಾಶ ಕೊಡದಿದ್ದರೆ.
ಪಾಪಭ್ರಮೆ ಬಿಡೊದಿಲ್ಲ;
ನವೀನ ಭಾವ ಹುಟ್ಟೊದಿಲ್ಲ,
ನಿನ್ನಾತ್ಮ ವೃತ್ತಿ ಗೈಯದೆ.
ನನ್ನಪ್ಪ, ನಡಿಸು!
ಕೈ ಬಿಡಬಾರದು!
ಕ್ರಿಸ್ತನೊಲ್ಮೆ,
ಸುಬೋಧನೆ
ನಂಗಿತ್ತರೆ,
ಅಂಧತ್ವ ಹಾರಿಹೋಗುತೆ.

4. ದಯ ಹೊಂದದಿರುವಾಗ,
ದುರ್ಮಾರ್ಗದಲ್ಲಿಹೋಗುವಾಗ,
ನಾ ಪಾಪಗ್ರಸ್ತ ನಿಜವೆ.
ಜೀವಸತ್ವ, ಆತ್ಮಜ್ಞಾನ
ಅದೆಲ್ಲ, ಕರ್ತ, ನಿನ್ನ ದಾನ;
ಅದಿಲ್ಲದಿರೆ ಸಾಯುವೆ.
ನನ್ನಾತ್ಮ ಕುಂದುತೆ;
ಕೃಪಾಳು ದೇವರೆ,
ದಯಮಾಡು!
ನೀ ವೈದ್ಯನು,
ನಾ ರೋಗಿಯು;
ನಿನ್ನಿಂದ ವಾಸಿಯಾಹೆನು.

5. ದಯದಿಂದೆನ್ನಂತಃಪ್ರಾಣ,
ಎನ್ನುಡಿ ನಡೆ, ಶಕ್ತಿ ತ್ರಾಣ,
ನೀ, ಕರ್ತ, ಶುಚಿ ಪಡಿಸು!
ಇಚ್ಛೆಭ್ರಮೆಕರ್ಮವನ್ನು
ಹುಟ್ಟಿಸೊ ಸ್ವಂತ ಬುದ್ಧಿಯನ್ನು
ಕಿತ್ತಾಕು ಬೇಗ ನನ್ನೊಳು!
ಸದ್ಭಕ್ತಿಕಾರ್ಯಕೆ
ಕೊಡೆನ್ನ ಹೃದಕೆ
ಕೃಪಾದಾನ!
ಸ್ವಕರ್ಮವು,

ಸ್ವಜ್ಞಾನವು
ಸದ್ಗುಣ ಕೊಡಕೂಡದು.

6. ಕರ್ತನೇ, ವಿಶ್ವಾಸಬಲ,
ನಿರೀಕ್ಷಾಧಾರ, ಪ್ರೀತಿಜಲ
ಉಚಿತ ನಿನ್ನ ವರವೆ!
ಸಮಾಧಾನ, ಹೃತ್ಸಂತೋಷ,
ವಿಶ್ರಾಂತಿ, ಆತ್ಮಜೀವಪೋಷ,
ಉದಾರ ನಿನ್ನ ದಯವೆ!
ಕಟಾಕ್ಷವಿದ್ದರೆ,
ಸಾಕಾಯ್ತು ನನಗೆ.
ನಿನ್ನ ದಯ
ಒಂದಿರಲು,
ನಿರಂತ್ರಕು
ಆಧಾರ ನನಗಿರೊದು.

7. ಕರ್ತ, ನೀನು ಕೃಪಾಕರ!
ನೀ ಗುಣದಾತ, ನ್ಯೂನಹರ,
ಕಟಾಕ್ಷ ಧರ್ಮಮೂಲನು.
ಶ್ರಮೆಯನ್ನು ತಾಳೋ ಪ್ರಾಣ,
ಸತ್ಕ್ರಿಯೆಯನ್ನು ಗೈವ ತ್ರಾಣ,
ವಿಶ್ವಾಸ, ನೀತಿ, ಭಕ್ತಿಯು,
ಪವಿತ್ರ ಬಾಳಿಕೆ,
ಇವೆಲ್ಲವಾಗಿವೆ
ದಯಾಫಲ;
ಅದಿರದೆ
ಹೃತ್ಪೀಡೆಯೇ!
ಅದಿರೆ ನಿತ್ಯ ಮೋಕ್ಷವೇ!

8. ನಾವೆ ಗಟ್ಟಿ ಲಂಗ್ರದಿಂದ
ನಿಂತಿರುವಂತೆ, ದಯದಿಂದ
ನೀ ದೃಢ ಪಡಿಸೆನ್ನನು!
ಇಹಲೋಕತಾಪತ್ರಯ
ಬಂದಾಗ್ಯು, ನಿನಗೆನ್ನ ದಯ
ಸಾಕೆಂದು ಧೈರ್ಯಗೊಳ್ಳಿಸು!
ಕಹ್ಯಾದ ಕಷ್ಟವು
ಮಧುರವಹುದು,
ಯೇಸು ನೀನು
ಕೈಕೊಡಲು.
ನೀ ಮೆಚ್ಚಲು,
ನಾ ನಿತ್ಯವಾಗಿ ತೃಪ್ತನು.

9. ಹೋಗುವೆಲ್ಲಾ ಸ್ಥಳದಲ್ಲಿ,
ನಾ ಕೂಡ್ರುವಲ್ಲಿ ನಿಲ್ಲುವಲ್ಲಿ,
ದಿನಾಲು ಹಗಲಿರುಳು,
ಜೀವದಲ್ಲು ಮೃತಿಯಲ್ಲು,
ನನ್ನನ್ನು ಇಹಪರದಲ್ಲು
ಕಟಾಕ್ಷ ಹಿಂದಟ್ಟಿಪುದು.
ನನ್ನಾಶಾಬಂಧವೂ
ನನ್ನೊಂದೆ ಗತಿಯೂ
ದಯ ಮಾತ್ರ!
ನಾ ತೀರುವೆ
ನಿನ್ನಲ್ಲಿಯೆ.
ಕಟಾಕ್ಷಮೂಲ ಯೇಸುವೆ!

೨೨೫

Mel. Du mein einzig Licht.
M. T. 57.

1. ಯೇಸು ಕ್ರಿಸ್ತನೇ!
ಮಧ್ಯವರ್ತಿಯೇ!
ನೀನು ತಾಳಿ ನನ್ನ ಶಾಪ,
ಹೊತ್ತುಕೊಂಡು ನನ್ನ ಪಾಪ,
ಪ್ರಾಯಶ್ಚಿತ್ತವ
ಕೊಟ್ಟೆ, ರಕ್ಷಕ!

2. ನಿನ್ನ ಮೇಲೆಯೆ
ನನ್ನ ಕೋರಿಕೆ;
ನಿನ್ನ ಹೊರ್ತು ಗತಿಯಿಲ್ಲ,
ನೀನೆನ್ನನ್ನು ಬಿಡೊದಿಲ್ಲ.
ನಿನ್ನ ರಕ್ತವು
ನನ್ನಾಧಾರವು.

3. ಸಾಲ ದೊಡ್ಡದು!
ತೆರಲಾರೆನು.
ನೀನು ಹೊಣೆಗಾರನಾಗಿ
ನೀಚ ನನ್ನ ಬದಲಾಗಿ
ತೆತ್ತಿ ಸಾಲವ;
ಕೊಡು ಮುಕ್ತಿಯ!

4. ಚಾಚಿ ಕೈಯನು,
ತಪ್ಪಿಸೆನ್ನನು
ನರಕದ ಬೆಂಕಿಯಿಂದ!
ಮೃತಿಕರ ರೋಗದಿಂದ
ಗುಣ ಪಡಿಸು!
ನೀನೆ ವೈದ್ಯನು.

5. ನಾನು ಹೇಸುವ
ಹೊಲೆ ವಸ್ತ್ರವ,
ಯೇಸುವೆ, ನನ್ನಿಂದ ಕಳೆ!
ನಿನ್ನ ರಕ್ತದಲ್ಲಿ ತೊಳೆ
ನನ್ನ ಹೃದವ!
ಬಿಳಿ ವಸ್ತ್ರ ತಾ!

6. ದಿವ್ಯ ಕೋಪದ
ಉಗ್ರಜ್ವಾಲೆಯು
ತಾಳಿಕೊಂಡು ಜಾಮೀನಾಗಿ,
ಆರಿಸಿನ್ನು ಕೃಪೆಯಾಗಿ!
ನರಕಾಗ್ನಿಗು
ತಪ್ಪಿಸೆನ್ನನ್ನು!

೨೨೬

Herr Jesu, Gnadensonne.
M. T. 104.

1. ಸುನೀತಿಸೂರ್ಯನಾದ
ಸಜ್ಜೀವಬೆಳಕೆ!
ಕಟಾಕ್ಷಪೂರ್ತಿಯಾದ
ಕ್ರಿಸ್ತ್ಯೇಸು ಕರ್ತನೆ!
ಕೊಡಯ್ಯ ಜೀವವನ್ನು,
ಸುಜ್ಞಾನಬೆಳಕನ್ನು
ಕೆಟ್ಟೋದ ಪಾಪಿಗೆ!

2. ನನ್ನಘರಾಶಿಯನ್ನು
ನೀ ಮನ್ನಿಸೆನಗೆ;
ಬಿಟ್ಟೆಲ್ಲ ಕೋಪವನ್ನು,
ಬಾ, ಬಾ ಸಹಾಯಕೆ!
ನೀ ಕೊಟ್ಟ ಸಮಾಧಾನ
ನನ್ನಾತ್ಮಕನ್ನಪಾನ.
ಆಲೈಸೊ, ಕರ್ತನೆ!

3. ನನ್ನಾತ್ಮದೊಳಗಿಂದ
ನೀ ದುಷ್ಟ ಗುಣವ
ಕಿತ್ತಾಕಿ, ಇಂದಿನಿಂದ
ನಾ ನಿನ್ನ ಪರಮ
ಸುಭಕ್ತಿಯನ್ನು ಮಾಡ,
ಸುರಾಗವೆತ್ತಿ ಹಾಡ
ಕೊಡಭಿಲಾಷೆಯ!

4. ಆತ್ಮಾಪ್ತ, ಜ್ಞಾನವನ್ನ
ಹೆಚ್ಚಾಗಿ ಕಳುಹು!
ಸದ್ವಾಕ್ಯದಿಂದ ನನ್ನ
ಸಂಪೂರ್ಣ ವ್ಯಾಪಿಸು!
ವಿಶ್ವಾಸದೈಕ್ಯದಲ್ಲಿ,
ಸಹೋದ್ರಪ್ರೀತಿಯಲ್ಲಿ
ಸಂವರ್ಧಿಸೆನ್ನನು!

5. ನಾ ನಿನ್ನ ವಶವಾಗಿ,
ದುರಾಶೆ ತ್ಯಜಿಸಿ,
ಪಾಪಕ್ಕೆ ಮೃತನಾಗಿ,
ನಿನ್ನಲ್ಲಿ ಬಾಳಲಿ!
ನಿನ್ನೈಕ್ಯವೆನ್ನ ಗುರಿ!
ನಾ ತಾಳ್ವೆ ಕ್ರೂಜೆಯುರಿ
ನೀ ಕೊಟ್ಟ ಬಲದಿ.

6. ನಾನಾಗದಂತೆ ಭ್ರಷ್ಟ,
ನನ್ನನ್ನು ದೃಷ್ಟಿಸು!
ನನ್ನಾಳ್ಮ, ಆತ್ಮನಷ್ಟ
ನಾ ಪಡಬಾರದು!
ನಿನ್ನಾಜ್ಞೆಯರ್ಥವನ್ನು
ಪೂರೈಸ ಶಕ್ತಿಯನ್ನು
ಕೊಟ್ಟೆನ್ನ ಸಲಹು!

೨೨೭

Mel. **Auf dich seh' ich, mit dir geh' ich.—M. T. 29.**

I. ನನ್ನ ದಯೆಯುಳ್ಳ ಮಿತ್ರ,
ನನ್ನ ಪ್ರಿಯ ರಕ್ಷಕಾ,
ಪ್ರೀತಿಯಿಂದ ನೀ, ಪವಿತ್ರ,
ನನ್ನ ಶುದ್ಧ ಮಾಡ ಬಾ!

2. ದೊಡ್ಡ ಪಾಪಹೊರೆಯನ್ನು
ಪರಿಹರಿಸ್ಯೇಸುವೇ!
ದುಷ್ಟನಧಿಕಾರವನ್ನು
ಮುರಿಧಾಕು, ಶಕ್ತನೇ!

3. ನಾನು ರೋಗಿ; ತ್ರಾಣವನ್ನು
ದಯೆಪಾಲಿಸೆನಗೆ!
ಸಾಯುತೇನೆ; ಪ್ರಾಣವನ್ನು
ಕೊಡು, ಎದ್ದ ಯೇಸುವೆ!

4. ನಿನ್ನ ದಿವ್ಯ ಆತ್ಮಸ್ನಾನ
ಮಾಡಿಸೆನ್ನ ಆತ್ಮಕೆ!
ನಿನ್ನ ಜೀವದನ್ನಪಾನ
ಬಡಿಸಯ್ಯ ದೀನಗೆ!

೨೨೮

Mel. Wer ist wohl wie du.
M. T. 56.

1. ಪ್ರಿಯ ರಕ್ಷಕಾ,
ಕೃಪೆಯಿಂದ ಬಾ!
ಪಾಪದಲ್ಲಿ ಬಿದ್ದಿದ್ದೇವೆ;
ಧೂಳಿಯಲ್ಲಿ ಮುಳುಗ್ತೇವೆ.
ಕರ್ತ, ನಮ್ಮನು
ಶಾಂತಿಪಡಿಸು!

2. ನಮ್ಮ ಸ್ಥಳದಿ
ಶಾಪ ಸೈರಿಸಿ,
ಮೃತಿಯನ್ನು ತಾಳಿ, ಎದ್ದಿ;
ಕ್ರೂರಯುದ್ಧದಲ್ಲಿ ಗೆದ್ದಿ.
ಕೊಡು, ಶೂರನೆ,
ಜಯವೆಮಗೆ!

೨೨೯

Mel. Burgundy.—M. T. 152.

1. ನನ್ನ ಮೇಲೆ ದಯವಿಡು,
ನನ್ನ ಪ್ರಿಯ ಯೇಸುವೇ!
ನನ್ನ ಪಾಪ ಸುಟ್ಟು ಬಿಡು
ಪರಿಶುದ್ಧ ಕರ್ತನೇ!
ಕೀಳು ಪಾಪಮೂಲವನ್ನು
ನನ್ನಲಿಂದ, ಕ್ರಿಸ್ತನೆ!
ನಿನ್ನ ಕೃಪಾಕಾಂತಿಯನ್ನು
ಮೂಡ ಮಾಡು ನನಗೆ!

2. ನನ್ನ ಬಡ ಮೊರೆಯನ್ನು
ಕೇಳು, ಪ್ರಿಯ ಕರ್ತನೆ!
ಕಾಡಿನಿಂದ ಭಕ್ತನನ್ನು
ನಿನ್ನ ಸನ್ನಿಧಾನಕೆ
ತರುವಾಗ, ನಿನ್ನ ಮುಖ
ನಿತ್ಯ ನೋಡುತಿರುವೆ;
ನಿನ್ನ ಹತ್ರ ಪೂರ್ಣ ಸುಖ,
ಅತಿಪ್ರಿಯ ಯೇಸುವೆ!

೨೩೦

Rock of Ages, cleft for me.
M. T. 64.

1. ಕ್ರಿಸ್ತ, ನಿತ್ಯಶೈಲವೆ,
ಶರಣಾಗು ನನಗೆ!
ನಿನ್ನ ಪಕ್ಕೇ ರಕ್ತದಿ
ಮನಶುದ್ಧಿಯಾಗಲಿ!
ಪಾಪ ಜೈಸೊ ಶಕ್ತಿಯ
ಹುಟ್ಟಿಸೋದೀ ನೆತ್ತರ.

2. ಆಜ್ಞೆಗನುಸಾರವು
ನಾನು ನಡಕೊಳ್ಳಲು
ಎಷ್ಟು ಯತ್ನ ಪಟ್ಟರೂ,
ಬಿಕ್ಕಿ ಬಿಕ್ಕಿ ಅತ್ತರೂ,

ನನ್ನ ಪಾಪ ಹೋಗದು—
ನಿನ್ನ ಕೃಪೆ ಗತಿಯು.

3. ಪುಣ್ಯವೇನು ತಾರದೆ
ನಿನ್ನ ಕ್ರೂಜೆಗಂಟುವೆ.
ಕೃಪೆದೋರು, ರಕ್ಷಕ!
ನೀಡು ನೀತಿವಸ್ತ್ರವ!
ಸಾಯುವಂಥ ನನಗೆ
ಜೀವವೀಯು ಕರ್ತನೆ!

4. ಜೀವವಿರ್ವ ಮಟ್ಟಿಗೂ
ಯಾತ್ರೆ ತೀರಿದಾಗಲೂ
ಸಾಯೋ ಕಷ್ಟದಲ್ಲಿಯೂ
ನ್ಯಾಯತೀರ್ಪಿನೊಳಗೂ,
ಕ್ರಿಸ್ತ, ನಿತ್ಯಶೈಲವೆ,
ಶರಣಾಗು ನನಗೆ!

೨೩೧

Just as I am, without one plea.
M. T. 244.

1. ಇದ್ದಂತೆ ಬಂದೆ, ಯೇಸುವೆ!
ಎದ್ದೇಳು, ಬಾ! ಈ ಅಪ್ಪಣೆ
ನೀನಾಗಿ ಕೊಟ್ಟೆ, ಕರ್ತನೇ!
ಕ್ರೂಜೇಲಿ ನೊಂದ ಯೇಸುವೇ!

2. ನಾ ಕುರ್ಡ, ಮರ್ತ್ಯ; ದಯದಿ
ಬೇಕಾದದೆಲ್ಲ ಕೊಡುವಿ.
ಇದ್ದಂತೆ ಬಂದೆ, ವೈದ್ಯನೇ!
ಕ್ರೂಜೇಲಿ ನೊಂದ ಯೇಸುವೇ!

3. ನೀನಾದಿ ಪಾಪಯಾಗವು;
ನಾ ನಂಬಿ ಕ್ಷಮೆ ಕೇಳ್ವೆನು.
ಇದ್ದಂತೆ ಬಂದೆ, ಸ್ವಾಮಿಯೇ!
ಕ್ರೂಜೇಲಿ ನೊಂದ ಯೇಸುವೇ!

4. ಕಾರುಣ್ಯಮೂರ್ತಿ, ಲಾಲಿಸು!
ಈ ರೋಗಿಯನ್ನು ರಕ್ಷಿಸು!
ಇದ್ದಂತೆ ಬಂದೆ, ಮಿತ್ರನೇ!
ಕ್ರೂಜೇಲಿ ನೊಂದ ಯೇಸುವೇ!

೨೩೨

Jesus, refuge of my soul.
M. T. 133.

1. ಯೇಸು, ನಿನ್ನ ಪಾದವೆ
ನನ್ನ ಆತ್ಮಸ್ಥಾನವು!
ಲೋಕದಬ್ಧಿಘೋಷಕೆ
ಅತಿಭಯ ಪಟ್ಟೆನು;
ನಿನ್ನ ಕೈಯ, ಯೇಸುವೆ,
ಚಾಚಿ, ನನ್ನ ಸಲಹು!
ಅಂತ್ಯದಲ್ಲಿ ರೇವಿಗೆ
ನನ್ನ ದೋಣಿ ಸೇರಿಸು!

2. ನೀನೆ ಸಾಕು, ಕರ್ತನೆ!
ನಿನ್ನಲೆಲ್ಲ ಸಿಕ್ಕಿತು.
ಕ್ಷೇಮ ಕೊಡು ರೋಗಿಗೆ!
ಕುರ್ಡನನ್ನು ನಡಿಸು!
ನಾನು ಪಾಪಮಯನೆ,
ನೀನೆ ಪರಿಶುದ್ಧನು;

ಮಲ ಹತ್ತಿತೆನಗೆ,
ನೀನೆ ಕೃಪಾಪೂರ್ತಿಯು.

3. ನನ್ನ ಪಾಪವೆಲ್ಲವ
ಮನ್ನಿಸನುಗ್ರಹದಿ!
ನನಗಾತ್ಮಶುದ್ಧಿಯ
ನಿನ್ನ ಆತ್ಮ ಕೊಡಲಿ!
ನಿನ್ನ ಜೀವಜಲವು
ಪಾಪ್ತವಾಗಲೆನಗೆ!
ನಿತ್ಯವಾದ ಸ್ತುತಿಯು
ನಿನಗೆನ್ನ ಕರ್ತನೆ!

---

೩. ವಿಶ್ವಾಸಫಲವಾದ ರಕ್ಷಣಾನುಭವ

೨೩೩

Look away to Jesus,—M. T. 224.

1. ಯೇಸುವನ್ನು ನೋಡು,
ಸೋತ ಪಾಪಿಯೇ!
ನಿನ್ನ ಪಾಪವೆಲ್ಲ
ಹೊತ್ತನಲ್ಲವೇ?
ನಿನಗಾಗಿ ಯೇಸು
ಬಾಧೆ ಪಟ್ಟನು;
ಯೇಸುವನ್ನು ನೋಡಿ
ನಂಬಿ ಜೀವಿಸು!

2. ಯೇಸುವನ್ನು ನೋಡು
ಯುದ್ಧದೊಳಗೆ!
ಶತ್ರುಬಲ ಸುತ್ತ
ಮುತ್ತಿ ಬಂದರೆ,
ಅಲ್ಪತ್ರಾಣಿ, ಹೋರು
ವಾಕ್ಯಶಸ್ತ್ರದಿ!
ಯೇಸುವನ್ನು ನೋಡಿ
ನಂಬಿ ಗೆಲ್ಲುವಿ.

3. ಯೇಸುವನ್ನು ನೋಡು
ನಿನ್ನ ಕಾರ್ಯದಿ!
ಒಳ್ಳೇ ಬೀಜ ಬಿತ್ತು!
ಮುಂದೆ ಕೊಯ್ಯುವಿ.
ಗೇಯುವವಗಾತ
ಅನ್ನ ಕೊಡನೇ?
ಯೇಸುವನ್ನು ನೋಡಿ
ಮಾಡು ಬಿತ್ತನೆ!

4. ಯೇಸುಕ್ರೂಜೆ ನೋಡು,
ನನ್ನ ಪ್ರಾಣವೆ!
ಮೇಲೆ ಮೇಜುವಾನಿ
ಸಿದ್ಧವಾಗಿದೆ.
ಗೇದು ಗೆದ್ದ ಮೇಲೆ
ಪರಲೋಕದಿ
ಯೇಸುಮುಖವನ್ನು
ನಿತ್ಯ ನೋಡುವಿ.

೨೩೪

Mel. Go, bury thy sorrow.
M. T. 205.

1. ಪಾಪಂಗಳ ಸಾಲ
ಸಲ್ಲಿಸೊದುಂಟೋ?
ವಿಚಾರಣೇ ಕಾಲ
ಬಿಟ್ಹೋಗುವದೋ?
ಸ್ವಶಕ್ತಿಯಿಂದಲ್ಲ
ವಿಮೋಚನೆಯು.
ಶ್ರೀ ಕ್ರಿಸ್ತನಿಂದೆಲ್ಲ
ಪಾರಾಗುವದು.

2. ತಾ ಜಾಮಿನಾನು ನಿಂತು
ಹೋರಾಡಿದನು.
ಪಾಪಿಷ್ಠರನ್ನಿಂತು
ಕಾಪಾಡಿದನು.
ಅಚಂಚಲವಾಗಿ
ವಿಶ್ವಾಸಿಸುವೆ.
ಸುರಕ್ಷಿತನಾಗಿ
ಸಂತೋಷಿಸುವೆ.

3. ಶ್ರೀ ಯಾಜಕನಾಗಿ
ವಿಜ್ಞಾಪಿಸುವ,
ನ್ಯಾಯಾಧಿಪನಾಗಿ
ಮುಂಬಪ್ಪವನ
ವಿಶ್ವಾಸದಿಂ ಬಾಗಿ
ಬಿನ್ನೈಸುವೆನು.
ಸಮಾಧಾನವಾಗಿ
ನಾ ಸಾಯುವೆನು.

೨೩೫

Mel. Ringe recht, wenn Gottes Gnade.—M. T. 27.

1. ದೇವದತ್ತ ಶಕ್ತಿಯಾದ
ಸದ್ವಿಶ್ವಾಸ ಯಾವದು?
ಅಂಥ ದೇವರ ಪ್ರಸಾದ
ಹ್ಯಾಗೆ ಪ್ರಾಪ್ತಿಯಾಗೊದು?

2. ಕೂಸು ತನ್ನ ತಾಯಿಯನ್ನು
ಹ್ಯಾಗೆ ನಂಬುತಿಹುದೋ,
ಹಾಗೆ ನೀನು ಯೇಸುವನ್ನು
ಬಾಲನಂತೆ ಅಪ್ಪಿಕೋ!

3. ನೋಡು! ನೋಡು! ಕ್ರಿಸ್ತ
ನಿಂದ
ಬಿಡುಗಡೆ ಪಾಪಿಗೆ.
ಅಗೋ ಅಲ್ಲಿ! ಕ್ರೂಜೆಯಿಂದ
ಲೋಕದ ವಿಮೋಚನೆ!

4. ಕ್ರೂಜೆ ಸ್ಥಿರವಾಗಿ ನೋಡಿ,
ಅದನ್ನಾತುಕೊಂಬೊದು,
ಆಸರವೆಂತಲ್ಲಿಗೋಡಿ
ಸೇರೋದೇ ವಿಶ್ವಾಸವು.

5. ನಿನ್ನ ಮನ ಪಾಪದಿಂದ
ಕಪ್ಪು ಬಣ್ಣವಾದರು,

ಕ್ಷಣದಲ್ಲಿ ಕ್ರಿಸ್ತನಿಂದ
ಬಿಳೀ ಬಣ್ಣವಾಗೋದು.

6. ಜೀವರಾಜಸಾವಿನಿಂದ
ನಿಂಗೆ ಸಾವು ತಪ್ಪಿತು.
ಮೇಲಕೇರಿದಾತನಿಂದ
ಜೀವದಾತ್ಮ ಸಿಕ್ಕೋದು.

7. ಇನ್ನು ವೈರಿಗಂಜೋದೇಕೆ?
ಕ್ರಿಸ್ತನಿಂದ ಸೋತನು.
ನನ್ನಿಂದಾಗದನ್ನೋದೇಕೆ?
ಯೇಸುವಿಗೆ ಪ್ರಾರ್ಥಿಸು!

8. ಆತಗುಂಟು ಸರ್ವತ್ರಾಣ;
ಆತ ಪ್ರೀತಿಸಾಗರ;
ಆತ ನೀತಿಯಜಮಾನ;
ಆತನೇ ವಿಮೋಚಕ!

9. ಆತನದನೆಲ್ಲವನ್ನು
ದಯದಿಂದ ಕೊಡುವ.
ಚಾಚು ಹೊಂದಲಿಕ್ಕದನ್ನು
ಸದ್ವಿಶ್ವಾಸಹಸ್ತವ.

೨೩೬

Mel. Sollt' es gleich bisweilen scheinen.—M. T. 33.

1. ಸದ್ವಿಶ್ವಾಸಸ್ಥೈರ್ಯವನ್ನು,
ಗಟ್ಟಿಯಾದ ಧೈರ್ಯವನ್ನು,
ಪೂರ್ಣವಾದ ನಂಬಿಕೆ,
ಅಪ್ಪ, ಕೊಡು ನನಗೆ!

2. ಆಗ ಬಿರುಗಾಳಿಯಲ್ಲಿ,
ಘೋರ ಬೆಂಕಿಯುರಿಯಲ್ಲಿ
ಅಪಧೈರ್ಯ ಪಡದೆ,
ನಿಲ್ಲುವೆ ಅಲ್ಲಾಡದೆ.

3. ಕಡಲುಕ್ಕೆ ನೀನೇ ಅಂಡೆ!
ನೀನು ಕದಲದ ಬಂಡೆ!
ಹೊಕ್ಕು ನಿನ್ನ ಶರಣ,
ಉಳಿಸೇನು ಪ್ರಾಣವ.

4. ಘೋರ ತೆರೇ ನೊರೆ ಏರಿ
ಮೇಲೆ ಬೀಳೆ, ಬಂಡೆ ಸೇರಿ-
ಕೊಂಡು ನಿಂತು ಭದ್ರದಿ,
ಮುಣುಗೆನಗಾಧದಿ.

5. ದುಸ್ಸಂದೇಹಭಾವವನ್ನು,
ದುಷ್ಟ ಚಂಚಲಾತ್ಮವನ್ನು
ನನ್ನೊಳಿಂದ ತೆಗೆದು,
ದಿಟ್ಟ ಗುಣ ಹುಟ್ಟಿಸು!

೨೩೭

Mel. Ringe recht, wenn Gottes Gnade.—M. T. 27.

1. ಕ್ರೂಜೆ ಹತ್ರ ಹೋಗಲಾಗಿ
ಸಿಕ್ಕುತಾಶೀರ್ವಾದವು.
ಯೇಸುವನ್ನು ಬೇಡಲಾಗಿ
ಜೀವಕಾಂತಿ ತಪ್ಪದು.

2. ಅಲ್ಲೇ ನಿಂತು ನೋಡುತೇನೆ
ದಿವ್ಯ ರಕ್ತಧಾರೆಯಂ;

ನಾನು ಬೇಡಿ ಹೊಂದಿದ್ದೇನೆ
ಆತ್ಮಕಿಂಪು ಶಾಂತಿಯಂ.

3. ಅಲ್ಲೇ ನಿಲ್ಲೊದೆಂಥ ಭಾಗ್ಯ!
ಯೇಸು ಕಾಣ್ಬನೆನ್ನನು.
ಆತನಿಂದಲೇ ಸೌಭಾಗ್ಯ
ನನಗಲ್ಲಿ ಸಿಕ್ಕಿತು.

4. ನಿನ್ನ ಮೇಲೆ ನನ್ನ ಧ್ಯಾನ
ಸ್ಥಿರ ಮಾಡು, ರಕ್ಷಕಾ!
ನಿತ್ಯಜೀವ, ಸಮಾಧಾನ
ಕಾಣಮಾಡು, ಒಡೆಯಾ!

೨೩೮

Mel. Brüder, streuet guten Samen.
M. T. 83.

1. ಪಾಪ, ಶಾಪ, ಪೀಡೆಯನ್ನು
ಹೊತ್ತು, ಪ್ರಿಯ ಯೇಸುವು
ಕ್ರೂಜೆಯಲ್ಲಿ ಜೀವವನ್ನು
ನಮಗಾಗಿ ಬಿಟ್ಟನು.
ತೆತ್ತನಾತ ನಮ್ಮ ಸಾಲವನ್ನು;
ತಂದನಾತ ದೇವಪ್ರೀತಿಯನ್ನು.

2. ನಿನ್ನ ಶ್ರಮದಿಷ್ಟ ಫಲ
ನಮ್ಮ ನಿತ್ಯಶಾಂತಿಯೆ ;
ಸೌಖ್ಯವಾದ ವಾಸಸ್ಥಲ
ನೀನು ಕೊಟ್ಟೆ ನಮಗೆ.
ಪ್ರಿಯ ಕರ್ತ, ನಿನ್ನ ಪಾದಸೇವೆ
ಪೂರ್ಣಮನದಿಂದ ಮಾಡು
ತೇವೆ!

೨೩೯

Es ist das Heil uns kommen her.
M. T. 110.

1. ಸಂರಕ್ಷೆ ಬಂದದೆಮಗೆ
ಬರೇ ಕಟಾಕ್ಷದಿಂದ.
ಉಂಟಾಗದೆಂದು ಪ್ರಾಣಕೆ
ಸಹಾಯ ಕ್ರಿಯೆಯಿಂದ.
ವಿಶ್ವಾಸ ಕಾಣ್ಬುದ್ಯೇಸುವ;
ಕೊಂಡ್ಹೋದನೀತ ಶಾಪವ;
ಮಧ್ಯಸ್ಥನೀತನಾದ.

2. ದಿವ್ಯಾಜ್ಞೆ ಸಾಧಿಸೋದಕೆ
ಸಮರ್ಥರಾರು ಇಲ್ಲ;
ಹೀಗಾಗಿ ಬಂದ ವ್ಯಥೆಗೆ
ಪ್ರಮಾಣವಿರಲಿಲ್ಲ.
ದಿವ್ಯಾಜ್ಞೆಗಾತ್ಮ ಮೆಚ್ಚದೆ,
ಮಾಂಸಾಶೆಯೊಳಗಿರಲೆ,
ನಾವೆಲ್ಲ ಕೆಟ್ಟೆವಯ್ಯ!

3. ದೇವಾಜ್ಞೆಯನುಸರಿಸ
ಸಾಮರ್ಥ್ಯ ಸ್ವೇಚ್ಛೆಯಲ್ಲಿ
ಉಂಟೆಂಬ ಮೋಸ ಪ್ರಬಲ
ಮಳಾರ್ದ ನರರಲ್ಲಿ.
ನಮ್ಮೊಳಗಿರ್ವ ದುಸ್ಥಿತಿ

ತೋರ್ಪಡಿಸುವ ಕನ್ನಡಿ
ಎಂಬಂತೆ ದೇವರಾಜ್ಞೆ.

4. ದುರ್ಭಾವ ಸ್ವಂತ ಶಕ್ತಿಯಿಂ
ಬಿಡೋದಸಾಧ್ಯವಾಯ್ತು;
ದುಷ್ಕರ್ಮ ವ್ಯರ್ಥಯತ್ನದಿಂ
ಭೂಮೀಲಿ ಮಿಗಿಲಾಯ್ತು.
ಸ್ವಪುಣ್ಯ ಮಿಥ್ಯ! ಶಪಿತ
ನರಂಗೆ ಪಾಪಕಲ್ಮಷ
ಸಜಾತವಾದ ದೋಷ.

5. ಆದಾಗ್ಯು ನೇಮ ನಡಿಸ
ಯಾರಿಲ್ಲದಿರಲಾಗಿ,
ಮನುಷ್ಯರೆಲ್ಲ ಕೆಡದ
ಹಾಗವತಾರವಾಗಿ
ಕ್ರಿಸ್ತ್ಯೇಸು ಹುಟ್ಟಿ, ನಮ್ಮಲಿ
ಬಂದೆಲ್ಲವನ್ನು ನಡಿಸಿ,
ತಾ ಪ್ರಾಯಶ್ಚಿತ್ತ ಗೈದ.

6. ನನ್ನತಿಪ್ರಿಯ ಯೇಸುವೇ,
ನೀನೆಲ್ಲ ಸಾಲ ತೆತ್ತೆ.
ನೀ ಸತ್ತು ಹೋದ್ದರಿಂದಲೇ
ನಾ ಸಾವಿನಿಂದ ಎದ್ದೆ.
ನಾನಿನ್ನು ಮೇಲೆ ನಿನಗೆ
ಸದ್ಭಕ್ತಿಯಿಂದ ನಡೆವೆ.
ನೀ ಮುಕ್ತಿಯನ್ನು ಕೊಡು!

೨೪೦

Christi Blut und Gerechtigkeit.
M. T. 37.

1. ಕ್ರಿಸ್ತ್ಯೇಸು, ನಿನ್ನ ನೀತಿಯೆ
ನನ್ನಲಂಕಾರವಸ್ತ್ರವು;
ಜಗತ್ತು ಸುಟ್ಟು ಹೋದರೆ,
ಅದನ್ನು ಹೊದ್ದು ನಿಲ್ವೆನು.

2. ನಾ ಗೋರಿಯಿಂದ ಹೊರಟು,
ಸ್ವಪಟ್ಣಕೇರಿ ಹೋಗಲು,
ಕ್ರಿಸ್ತ್ಯೇಸು ನನಗಾಗಿಯು
ಸತ್ತಿದ್ದನೆಂತ ನಾಜೆನು.

3. ಆ ದಿನದಲ್ಲಿ ನನಗೆ
ಯಾರೂ ವಿರೋಧ ನಿಲ್ಲರು;
ಕ್ರಿಸ್ತ್ಯೇಸುರಕ್ತದಿಂದಲೆ
ದುಷ್ಕರ್ಮ, ಭಯ ಹೋದವು.

4. ಸಜ್ಜೀವವಿಲ್ಲದವರೇ,
ಈ ವಾಕ್ಯ ಕೇಳತಕ್ಕದು—
"ಕ್ರಿಸ್ತ್ಯೇಸುರಕ್ತನೀತಿಯೇ
ನಿಮ್ಮಲಂಕಾರವಸ್ತ್ರವು!"

೨೪೧

Mir ist Erbarmung widerfahren.
M. T. 90.

1. ಕಟಾಕ್ಷ ನಾನು ಹೊಂದಿ
ದ್ದೇನೆ;
ಇದೇನು ನನ್ನ ಪುಣ್ಯವೋ?

ಆಶ್ಚರ್ಯವೆಂದು ಹೇಳುತೇನೆ;
ನಾ ಕೃಪೆಯಾಶಿಸಿದೆನೋ?
ಕಟಾಕ್ಷವನ್ನು ನೆನೆದು,
ಕೊಂಡಾಡುತೇನೆ ನಿತ್ಯಕು.

2. ನಾ ದೇವಕೋಪಪಾತ್ರನಾಗಿ
ಪಾತಾಳಪುತ್ರನಾದೆನು;
ಕ್ರಿಸ್ತ್ಯೇಸುರಕ್ತ ನನಗಾಗಿ
"ಕಾರುಣ್ಯ"ವೆಂದು ಕೂಗಿತು.
ಕಟಾಕ್ಷವನ್ನು ನೆನೆದು,
ಕೊಂಡಾಡುತೇನೆ ನಿತ್ಯಕು.

3. ಮನುಷ್ಯರೆನ್ನ ಕೇಳುವಾಗ,
ನಾ ದೇವಕೃಪೆ ಸಾರುವೆ;
ಇದೊಂದೆ ನನ್ನ ನಿತ್ಯರಾಗ—
"ನಾ ಕೃಪೆಯಿಂದ ಜೈಸಿದೆ."
ಕಟಾಕ್ಷವನ್ನು ನೆನೆದು,
ಕೊಂಡಾಡುತೇನೆ ನಿತ್ಯಕು.

4. ಈ ಕೃಪೆಯಂ ಲೋಕಾಧಿ
ಕಾರ
ನನ್ನಿಂದ ನೀಗಲಾರದು;
ಇದೆನ್ನ ಪಾಪಪರಿಹಾರ,
ಇದೆನ್ನ ನಿತ್ಯಮೋಕ್ಷವು.
ಕಟಾಕ್ಷವನ್ನು ನೆನೆದು,
ಕೊಂಡಾಡುತೇನೆ ನಿತ್ಯಕು.

5. ದಯಾತ್ಮನಾದ ದಿವ್ಯ ತಂದೆ,
ಕಟಾಕ್ಷ ಬಿಡಬೇಡವು!
ಕ್ರಿಸ್ತ್ಯೇಸುನಾಮದಲ್ಲಿ ಬಂದೆ,
ವಿಮುಕ್ತಿ ದಯಪಾಲಿಸು!
ಕಟಾಕ್ಷಪೂರ್ತಿ ನೆನೆದು,
ಕೊಂಡಾಡುತೇನೆ ನಿತ್ಯಕು.

೨೪೨

Ich habe nun den Grund gefunden.
M. T. 90.

1. ನಾನೀಗ ಭದ್ರರೇವಿನಲ್ಲಿ
ತಂದಿಟ್ಟೆ ನನ್ನ ಹಡಗ;
ಕ್ರಿಸ್ತ್ಯೇಸುರಕ್ತಗಾಯದಲ್ಲಿ
ಹಾಕಿಟ್ಟೆ ನನ್ನ ಲಂಗರ.
ಭೂಪರಲೋಕ ಬಿದ್ದರು,
ನಾನೇನೂ ಭಯ ಪಡೆನು.

2. ಯೆಹೋವನನುಗ್ರಹವನ್ನು
ಶೋಧಿಸ ಯಾರಿಂದಾದೀತು?
ಆ ಅನುಗ್ರಹ ಪಾಪಿಯನ್ನು
ಕಟಾಕ್ಷಿಸೋದು ನಿತ್ಯಕು.
ಪಾಪಿಷ್ಠನೆಡವಿದರು,
ದಿವ್ಯಾನುಗ್ರಹ ತೀರದು.

3. ನಿತ್ಯಾನುಗ್ರಹಪೂರ್ತಿಯಿಂದ
ಕ್ರೂಜೇಲಿ ಯೇಸು ಸತ್ತನು;
ದೇವಾತ್ಮ ಅನುಗ್ರಹದಿಂದ
ನಂಗ್ಹಿತ ಶಿಕ್ಷೆ ಕೊಡೋದು;
ಅನಾದಿಯಿಂದ ತಂದೆಯು
ನಂಗೊಲೆಯುತ್ತಲಿದ್ದನು.

4. ಪಾಪಂಗಳನ್ನು ತೊಳೆವಂಥ
ಪವಿತ್ರವಾದ ನೆತ್ತರೇ,
ಗಾಯಂಗಳನ್ನು ಮಾಯ್ಸುವಂಥ
ಸ್ವರ್ಗೀಯ ಶುದ್ಧಲೇಪವೇ,
ದೇವಾನುಗ್ರಹ ನನಗೆ
ನಿನ್ನಿಂದ ಪ್ರಾಪ್ತವಾದದೆ!

5. ಈ ರಕ್ತದ ಪ್ರವಾಹದಲ್ಲಿ .
ವಿಶ್ವಾಸಸ್ನಾನ ಮಾಡುವೆ.
ಈ ರಕ್ತ ನನ್ನ ಹಣೆಯಲ್ಲಿ
ಗುರ್ತಾಗಿ ಕಾಣಿಸಿದರೆ,
ದೇವಾನುಗ್ರಹವೆಂದಿಗು
ನನ್ನನ್ನು ಬಿಡಲಾರದು.

6. ಈ ಮಾರ್ಗದಲ್ಲಿ ನಡದೇನು
ಭೂವಾಸ ಮಾಡೊ ವರೆಗೆ;
ಈ ಮರ್ಮವನ್ನು ಧ್ಯಾನಿಸೇನು
ನನ್ನುಸುರಾಡೊ ಮಟ್ಟಿಗೆ.
ದೇವಾನುಗ್ರಹ ನನಗೆ
ನಿರಂತ ನಿಜ ಮುಕ್ತಿಯೇ!

೨೪೩

Mel. Gott ist getreu.—M. T. 170.

1. ಈಗೀಗಲು
ಸಮಸ್ತ ಶೋಕವ
ನಾ ಬಿಟ್ಟೆನಂಜದೆ;
ಸರ್ವೇಶನು
ಸಂಪೂರ್ಣಶಾಂತಿಯ
ತಂದಿತ್ತನೆನಗೆ.
ವಿಶ್ವಾಸದಿಂದ ತೃಪ್ತಿಯನ್ನು,
ಸಂಸ್ಥಿರ ಹೃತ್ಸಂತೋಷವನ್ನು
ನಾ ಹೊಂದಿದೆ.

2. ಸರ್ವೇಶನು
ನನ್ನನ್ನು ಬಿಡದೆ,
ಈ ಜೀವವಿದ್ದರು,
ಅದ್ದೋದರು,
ಆಶ್ಚರ್ಯವಾಗಿಯೆ
ಸಂರಕ್ಷಿಸುವನು.
ಕಡೇಲಿ ನಿತ್ಯನೀತಿಯನ್ನು,
ಅನಂತವಾದ ಜೀವವನ್ನು
ನಾ ಪಡೆವೆ.

೨೪೪

Friede, ach Friede, ach göttlicher Friede.—M. T. 100.

1. ಶಾಂತಿಯು, ಶಾಂತಿಯು ಯೇಸುವಿನಿಂದ
ಶುದ್ಧಾತ್ಮಗೆ ತಂದೆಯು ಕೊಡುವನು.
ಭಕ್ತರು ಶಾಂತಿಯ ಹೊಂದಿದರಿಂದ
ಕ್ರಿಸ್ತ್ಯೇಸುವಿನ್ಯೈಕ್ಯದಿ ಹರ್ಷಿಪರು.
ಪ್ರಪಂಚದ ಭೋಗಿಗೆ ಶಾಂತಿಯು ಇಲ್ಲ;

ಸದ್ಭಕ್ತನ ಶಾಂತಿಯು ತೀರುವ
ದಿಲ್ಲ.

2. ಶಾಂತಿಯ ಬಯ್ಸುವ ನೀ
ಮೊದಲಾಗಿ
ವಿಶ್ವಾಸಿಸಿ ದೃಷ್ಟಿಸು ಯೇಸುವ
ನು!
ಧ್ಯಾನಿಸು ಯೇಸುವನಚಲವಾಗಿ!
ಅಸಂಹಿಸು ಸ್ವಾರ್ಥದ ಮಾಯೆ
ಯನು!
ಉಂಟಾತನ ದಾಸನಿಗುತ್ತಮ
ಶಾಂತಿ;
ಯಥಾರ್ಥವೈರಾಗಿಗೆ ಸತ್ಯ
ವಿಶ್ರಾಂತಿ.

3. ದುಷ್ಟಅನಾಥರ ರಕ್ಷಣೆಗಾಗಿ
ಕ್ರಿಸ್ತ್ಯೇಸುವು ಶಾಪವತಾಳಿದನು;
ಕಳ್ಳರ ನಡುವೆ ತೂಗಿರಲಾಗಿ,
ಅಘೋರಸಂತಾಪವು ಪೀಡಿ
ಸಿತು.
ಆ ಗಾಯದಿಂದೇರಿತು ಶಾಂತಿ
ಯ ಜಲ;
ಆ ಮರದಿ ಹುಟ್ಟಿತು ಶಾಂತಿಯ
ಫಲ.

4. ಶಾಂತಿಯ ರಾಜ, ಕೃತಜ್ಞತೆ
ಯಿಂದ
ನಿನ್ನಾಳುಗಳಾದೆವು. ಸ್ವೀಕರಿಸು!
ಕ್ರಿಸ್ತನ ವಾಕ್ಯದ ಖಡುಗದಿಂದ
ನಮ್ಮರಿಯ ಸಂಗಡ ಹೋರು
ವೆವು.
ನಿನ್ನಾಳಿಗೆ, ರಾಜನೆ, ಇರದು
ಭಯ;
ನೀನಿದ್ದರೆ, ತಪ್ಪದು ಶಾಂತರ
ಜಯ.

5. ಯೇಸುವೇ, ಶಾಂತಿಯ ಬಂ
ಧಗಳಿಂದ
ನಮ್ಮಾತ್ಮಗಳಿರಿಸು ಐಕ್ಯದಲಿ!
ಆಗ ಅಚಂಚಲ ನಂಬಿಕೆಯಿಂದ
ನಿಂತಿರ್ವೆವು ಶಾಂತಿಯ ವಚನದಿ!
ಕಡೇಲಿ ಸುಶಾಂತಿಯ ಪಟ್ಟಣ
ದಲ್ಲಿ
ನಮ್ಮೇರಿಸಿ, ಸೇರಿಸು ಮಹಿಮೆ
ಯಲ್ಲಿ!

೨೪೫

In the rifted rock I'm resting.
M. T. 157.

1. ನಿನ್ನಲೆನಗುಂಟಾಶ್ರಯ;
ಏನೂ ಅಂಜದಿರ್ವೆನು.
ಶಾಂತನಾದೆ; ನಿನ್ನ ದಯ
ಒಂದೆ ಸಾಕು ನಿತ್ಯಕು!
ಯೇಸು, ನಿನ್ನಲೇ ವಿಶ್ರಾಂತಿ
ಸಮಾಧಾನ ಹೊಂದಿದೆ;
ಕಡೆವರೆಗಿನ್ನು ಕಾಂತಿ
ದಯಮಾಡು, ಯೇಸುವೆ.

2. ನಿನ್ನ ಕೈಗೆ ತಪ್ಪಿ ಹೋಗಿ,
ದೂರವಾದೆ ನಿನಗೆ.
ಕಾಡಿನಲ್ಲಿ ಬಡರೋಗಿ
ಆಗಿ ಬಿದ್ದೆ; ಅಲ್ಲಿಯೆ
ನಿನ್ನ ದೊಡ್ಡ ದಯದಿಂದ
ಗೊಲ್ಗೊಥಂಬ ಸ್ಥಳವ
ಕಂಡು, ನಿನ್ನ ಕೃಪೆಯಿಂದ
ಪಡಕೊಂಡೆ ಶಾಂತಿಯ!

೨೪೭

Safe in the arms of Jesus.
M. T. 265.

1. ಶ್ರೀ ಯೇಸುವಿನ ಎದೆ,
ಯೋಹಾನನಂತೆಯೆ,
ನಾನಾತು ಧನ್ಯನಾಗಿ
ಆರಾಮಗೊಳ್ಳುವೆ.
ಸಂದೇಹ, ಚಿಂತೆ, ಪೀಡೆ,
ಈ ಲೋಕಲೀಲೆಯು,
ಸೈತಾನ ಬಿಡೋ ಬಾಣ
ಇಲ್ಲೇನೂ ತಟ್ಟದು.
ನಾ ಯೇಸುಮರೆ ಹೊಕ್ಕೆ;
ಇನ್ನೇನೂ ಬೇಡವು.
ಶ್ರೀ ಯೇಸು ಗೈದ ಮುಕ್ತಿ
ಕೊಂಡಾಡ್ವೆ ನಿತ್ಯಕು.

2. ಶ್ರೀ ಯೇಸುನಾಮದುರ್ಗ
ನಾ ಕಂಡು ಸೇರಿದೆ;
ಈ ಲೋಕತಂತ್ರ, ಕಾಟ
ತಾತ್ಸಾರ ಮಾಡುವೆ.
ಅಃ ಕೇಳಿರೆಂಥ ಮೇಳ!
ಮೇಲ್ಲೋಕಗಾನವೆ!
ವಿಜಯಗೊಂಡ ಸೇನೆ
ಸಂಗೀತ ಹಾಡುತೆ.
ನಾ ಯೇಸುಮರೆ. . . .

3. ಶ್ರೀ ಯೇಸುಕೈಗಳಲ್ಲಿ
ಸುಭದ್ರನಾಗಿಯೆ
ನಾನಾತ್ಮತೃಪ್ತನಾದೆ.
ನಿಶ್ಚಿಂತಬಾಳಿಕೆ!
ಇನ್ನಲ್ಪಕಾಲ ಕಷ್ಟ,
ಕಣ್ಣೀರು ಬಂದರು,
ನಾ ತಾಳಿಕೊಂಡು, ಬೇಗ
ಆ ಮೇಳ ಸೇರ್ವೆನು.
ನಾ ಯೇಸುಮರೆ . . . .

೪. ಕ್ರೈಸ್ತ ಸದ್ವರ್ತನೆ

೨೪೭

I am thine, O Lord.—M. T. 302.

1. ನಾನು ನಿನ್ನವ,ಪ್ರಿಯ ಕರ್ತನೆ;
ನಿನ್ನ ವಾಕ್ಯ ಕೇಳಿದೆ.
ಇನ್ನು ಕೇವಲ ನಿನ್ನನ್ಯೋನ್ಯಕ್ಕೆ
ಸೇರೋದೆನ್ನ ಕೋರಿಕೆ.
ಎಳೆ ನನ್ನ, (ಎಳೆ) ಪ್ರಿಯ
ಕರ್ತನೇ,
ನಿನ್ನ ಕ್ರೂಜೇ ಕಂಬಕ್ಕೆ!
ಎಳೆ ನನ್ನ,ಎಳೆ, ಪ್ರಿಯ ಕರ್ತನೇ,
ನಿನ್ನ ತಿವಿದೆದೆಗೆ!

2. ನಿನ್ನ ಸೇವೆಗೆ, ಪ್ರಿಯ ರಕ್ಷಕ,
ನೀ ಪ್ರತಿಷ್ಠಿಸೆನ್ನನ್ನು!
ದಯಪಾಲಿಸು ದೃಢನಿಶ್ಚಯ!
ನಿನ್ನ ಚಿತ್ತ ನನ್ನದು.
ಎಳೆ ನನ್ನ........

3. ನಾನು ಒರಗಿ ನಿನ್ನ ಪಾದಕ್ಕೆ
ಸುಸಂವಾದ ಮಾಡುತ
ನಿನ್ನ ಸಂಗಡ ಇರ್ವ ಗಳಿಗೆ
ಎಂಥಮೂಲ್ಯ ಸಂತಸ!
ಎಳೆ ನನ್ನ.........

4. ತಳವಿಲ್ಲದ ಪ್ರೀತಿಸಾಗರ!
ಬುದ್ಧ್ಯತೀತ ಹರ್ಷವೆ!
ನನಗಾಗಲು ನಿನ್ನ ದರ್ಶನ
ನಿತ್ಯಸ್ತೋತ್ರ ನಿನಗೆ!
ಎಳೆ ನನ್ನ.........

೨೪೮

At the feet of Jesus.—M. T. 218.

1. ಯೇಸುಪಾದದಲ್ಲಿ
ಕೂತು, ಮರ್ಯಳು
ಜ್ಞಾನ ಪಡಕೊಂಡು
ಧನ್ಯಳಾದಳು.
ದಿವ್ಯಜ್ಞಾನಬೋಧವು
ಬೇರೆ ಎಲ್ಲೂ ಕಾಣದು.
ಯೇಸುಪಾದದಲ್ಲೆ
ನನ್ನ ಸ್ಥಾನವು;
ಆತನುಪದೇಶ
ಕೇಳಿ ಬಾಳ್ವೆನು.

2. ಯೇಸುಪಾದದಲ್ಲಿ
ನಾನು ಕೂಡ್ರಲೆ
ಲೋಕದಾಟ ಕಾಟ
ದೂರ ಓಡುತೆ.
ಬೇರೆ ಯಾವ ಸ್ವಾಮಿಯು
ಆತ್ಮತೃಪ್ತಿ ನೀಡನು.
ಯೇಸುಪಾದದಲ್ಲಿ
ಸಮಾಧಾನವೆ.
ಲೋಕಭ್ರಾಂತಿ ನಿಂತು
ಶಾಂತಿ ಹೊಂದುವೆ.

3. ಯೇಸುಪಾದದಲ್ಲಿ
ನಾನು ಸೇರಲೆ,
ಕೆಟ್ಟ ಇಚ್ಛೆಯಾಶೆ
ತೀರಿ ಹೋಗುತೆ.
ಬೇರೆ ಯಾವ ಸ್ವಾಮಿಯು
ಚಿತ್ತಶುದ್ಧಿ ಮಾಡನು.
ಯೇಸುಪಾದದಲ್ಲಿ
ಗರ್ವ ತಗ್ಗುತೆ;
ಯೇಸುಸ್ನೇಹದಿಂದ
ಶುದ್ಧಿ ಹೊಂದುವೆ.

೨೪೯

I heard the voice of Jesus say.
M. T. 261.

1. ಶ್ರೀ ಯೇಸು ಅಂದ ನನಗೆ—
"ಬಾ, ಬಾ, ವಿಶ್ರಮಿಸು!
ನನ್ನೆದೇ ಮೇಲೆ, ಮಗನೆ,
ಆಯಾಸ ತೀರಿಸು!"
ನಾನಿದ್ದಪ್ಪಂದ ಬಂದೆನು
ಪಾಪಾತ್ಮನಾಗಿಯೆ;
ವಿಶ್ರಮವನ್ನು ಕೊಟ್ಟನು
ಈ ನೊಂದ ಆತ್ಮಕೆ.

2. ಶ್ರೀ ಯೇಸು ಅಂದ ನನಗೆ—
"ನೀ ಪಾನ ಮಾಡಿಕೋ!
ನಾ ಜೀವಜಲಬುಗ್ಗೆಯೇ;
ನೀ ಬಂದು ಸೇದಿಕೋ!"
ಈ ಜೀವಜಲಬುಗ್ಗೆಲಿ
ನಾ ಸೇದಿಕೊಳ್ಳಲು,
ನನ್ ದಾಹ ತೀರಿ, ಮನದಿ
ಸಂತೃಪ್ತನಾದೆನು.

3. ಶ್ರೀ ಯೇಸು ಅಂದ ನನಗೆ—
"ನನ್ನನ್ನು ದೃಷ್ಟಿಸು!
ಕಾರ್ಗತ್ತಲಾದ ಲೋಕಕೆ
ನಾ ನೀತಿಸೂರ್ಯನು!"
ನಾ ದೃಷ್ಟಿಯಿಟ್ಟಾಕ್ಷಣವೇ
ಪ್ರಕಾಶ ಕಂಡೆನು,
ಹೌದಿಂದೂ,ಎಂದೂ,ಯೇಸುವೇ,
ನೀ ನನ್ನ ಜ್ಯೋತಿಯು.

೨೫೦

Mel. Holy Spirit, faithful Guide.
M. T. 65.

1. ದೇವಪುತ್ರರೆಲ್ಲರು
ಎಷ್ಟೋ ಭಾಗ್ಯವಂತರು!
ಪಾಪ, ದುಃಖ, ಭಯವು
ಪರಿಹಾರವಾಯಿತು.
ನಾನು ಅವರೊಂದಿಗೆ
ಪಾಲುಗಾರನಾಗುವೆ.

2. ಕ್ರಿಸ್ತನಿಂದಲವರೋ
ನೀತಿವಂತರಲ್ಲವೋ?
ಮನಶ್ಶಾಂತಿ ತೃಪ್ತಿಯು
ಅವರನುಭವವು.

ನಾನು ಅವರೊಂದಿಗೆ
ಪಾಲುಗಾರನಾಗುವೆ.

3. ತಂದೇ ಹತ್ರ ಹೋಗಲು
ಮಕ್ಕಳಂಜಲಾರರು;
ದೇವರನ್ನು ಭಕ್ತರು
ನೋಡಿ ಹರ್ಷಿಸುವರು.
ನಾನು ಅವರೊಂದಿಗೆ
ಪಾಲುಗಾರನಾಗುವೆ.

4. ಬಾಧೆ ಕಷ್ಟ ಬಂದರು,
ನಷ್ಟ ಹೊಂದಲಾರರು;
ಶ್ರಮೆ ದೇವಜನಕ್ಕೆ
ಮೇಲು ಉಂಟುಮಾಡುತ್ತೆ.
ನಾನು ಅವರೊಂದಿಗೆ
ಪಾಲುಗಾರನಾಗುವೆ.

5. ಇಹದಲ್ಲಿ ಕೃಪೆಯು,
ಸಾಯುವಲ್ಲಿ ಜಯವ,
ಪರದಲ್ಲಿ ಜೀವವ
ಹೊಂದ್ವರೆಂಥ ಸಂತಸ!
ನಾನು ಅವರೊಂದಿಗೆ
ಪಾಲುಗಾರನಾಗುವೆ.

೨೫೧

Nicht eine Welt, die in ihr Nichts vergeht.—M. T. 45.

1. ಅಸ್ಥಿರಲೋಕ ಬೇಡವೆನಗೆ!
ಪ್ರಪಂಚವನ್ನಸಡ್ಡೆ ಮಾಡುತೇನೆ.
ಅಬದ್ಧ ಕೀರ್ತಿ ನನಗೇತಕೆ?
ನಾ ಕ್ರೈಸ್ತನು, ನಾ ಕ್ರೈಸ್ತ; ಮೋ
ಕ್ಷಾಸಕ್ತನಾಗಿದ್ಧೇನೆ.

2. ರಾಜಾಧಿರಾಜ ಯೇಸು ಕ್ರಿ
ಸ್ತನು
ನನ್ನರಸೆಂತ, ಅಡ್ಡಬೀಳುತೇನೆ.
ವಿಶ್ರಾಂತಿರಾಜ ನನ್ನ ಅರಸು;
ನಾ ಕ್ರೈಸ್ತನು, ನಾ ಕ್ರೈಸ್ತ; ಹೌ
ದು, ಬಂಟನಾಗಿದ್ಧೇನೆ.

3. ಬಾ! ನಮ್ಮ ಕೂಡ ಭೋಗ
ಮಾಡಿಕೋ!
ಎಂದೊದರುತ್ತೆ ಲೋಕಭ್ರಾಂತ
ಸೇನೆ.
ಆ ಕೂಗು ಬಿಡಿ! ನಿಮ್ಮ ಕೇಳ
ಲೋ?
ನಾ ಕ್ರೈಸ್ತನು; ನಾ ಕ್ರಿಸ್ತಪಾದ
ದಲ್ಲಿ ಕೂಡ್ರುತೇನೆ.

4. ಕೈಸನ್ನೆ, ಕಣ್ಣುಸನ್ನೆ ನೋ
ಡೆನು!
ನಿಮ್ಮಲ್ಲಿ ಇದ್ದರೆನ್ನ ಮಾರ್ಗ ಬೇರೆ.
ನಿಮ್ಮಾಶೆ ಭುಕ್ತಿ; ಮುಕ್ತಿ ನನ್ನದು.
ನಾ ಕ್ರೈಸ್ತನು, ನಾ ಕ್ರೈಸ್ತ; ನಿಮ್ಮ
ಮರುಳಲ್ಲಿ ಸೇರೆ.

5. ಅರಿಷ್ಟನೆಂಗೆ ಕಷ್ಟ ಬಹಳ;
ಕಣ್ಣೀರು ಬಿಟ್ಟು ಯಾತ್ರೆ ಮಾಡು
ತೇನೆ.

ಇದೇನು? ಕ್ರಿಸ್ತ ಹೆಚ್ಚು ತಾಳಿದ!
ನಾ ಕ್ರೈಸ್ತನು, ನಾ ಕ್ರೈಸ್ತ; ಕ್ರಿಸ್ತ
ಜೊತೆಯಲ್ಲಿದ್ಧೇನೆ.

6. ಹೋರಾಟ ಬಹು ಉಗ್ರವ
ಹುದು;
ಆದಾಗ್ಯು ನಂಗೆ ಜಯ ತಪ್ಪೊ
ದಿಲ್ಲ.
ಈ ಜೀವ ತೀರೆ, ಸುಖಿಯಹೆನು.
ನಾ ಕ್ರೈಸ್ತನು, ನಾ ಕ್ರೈಸ್ತ; ನಂಗೆ
ಮೃತಿಭಯವಿಲ್ಲ.

7. ಅನಂತ ಜೀವಸೂರ್ಯ
ಮೂಡಲು,
ಉತ್ಥಾನಸ್ಯೈನ್ಯದಲ್ಲಿ ನಾನು ಇರ್ವೆ;
ಸಮಾಧಿಯಿಂದ ಹಾರಿ ಏಳ್ವೆನು.
ನಾ ಕ್ರೈಸ್ತನು, ನಾ ಕ್ರೈಸ್ತ; ನಿತ್ಯ
ವಾಗಿ ಬಾಳುತಿರ್ವೆ.

೨೫೨

Christen sind ein göttlich Volk.
M. T. 136.

1. ಸಭೆ ದೇವಪ್ರಜೆಯೇ!
ದಿವ್ಯ ಆತ್ಮಜನ್ಮದಲ್ಲಿ
ಅವರಲ್ಲಿ
ಹೊಸ ಜೀವವಾಯಿತು.
ಕರ್ತನು
ಅವರರಸಾಗಿದ್ಧಾನೆ,
ಅವರನ್ನು ಕಾಯುತ್ತಾನೆ,
ಆತನಲ್ಲಿ ಬಾಳೊರು.

2. ನನ್ನ ಪ್ರಿಯ ಕರ್ತನೇ,
ನೀನೆನ್ನನ್ನು ಪ್ರೀತಿಯಿಂದ
ಲೋಕದಿಂದ
ಕೊಂಡುಕೊಂಡಿ. ನಿನಗೆ,
ಯೇಸುವೆ,
ನಾನು ಬಡ ಪಾಪಿಯಾಗಿ
ನಿನ್ನ ದೊಡ್ಡ ಪ್ರೀತಿಗಾಗಿ
ನಿತ್ಯ ಸ್ತೋತ್ರ ಮಾಡುವೆ.

3. ನೀನು ಮೇಲಕ್ಕೇರಿದ್ಧಿ,
ಕೂತುಕೊಂಡಿ ಪೀಠದಲ್ಲು.
ಭೂಮಿಯಲ್ಲು
ಎಲ್ಲವನ್ನು ಆಳುತಿ.
ನಮ್ಮಲಿ
ನಿನ್ನ ಕಾರ್ಯ ತೀವ್ರವಾಗಿ
ನಿನ್ನ ಕೀರ್ತಿ ಘನಕಾಗಿ
ಅಭಿವೃದ್ಧಿಯಾಗಲಿ!

4. ಈ ಪ್ರಪಂಚ ಹೋಗಲಿ!
ಹೋಗಲೆಲ್ಲ ಮಾಂಸಪೋಷ!
ಈ ಸಂತೋಷ
ಕ್ರೈಸ್ತರಿಂಗೆ ಬೇಡವು.
ಮೋಕ್ಷವು
ಇಂಥ ಮಾಂಸಭೋಗದಲ್ಲಿ
ಸಿಕ್ಕೊದಿಲ್ಲ; ನಮಗಲ್ಲಿ
ತೃಪ್ತಿ ತಪ್ಪ ಬಾರದು!

5. ನಿನ್ನ ಆತ್ಮ ನಮಗೆ
ಕೊಡು! ಆದರಿಕನಾಗಿ
ನಿತ್ಯವಾಗಿ
ವಾಸಮಾಡಲೆಮ್ಮಲಿ!
ಕ್ರಿಸ್ತನೆ,
ನಾವು ನಿನ್ನ ಪಾದಸೇವೆ
ಪ್ರೀತಿಯಿಂದ ಮಾಡುತೇವೆ,
ಜೀವವಿರೊ ವರೆಗೆ.

6. ಕ್ರಿಸ್ತ. ತಂದೆಮನೆಗೆ
ಸೇರಲಾಶೆ ಮಾಡುತೇವೆ.
ಶುದ್ಧ ಸೇವೆ
ಆಗಲಿಲ್ಲಿ ನಿನಗೆ
ನಿತ್ಯಕೆ!
ದಿವ್ಯಭಾಗ್ಯದತಿಶಯ,
ಸಮಾಧಾನರಾಜ್ಯ, ಜಯ
ತೋರಮಾಡು, ಕರ್ತನೆ!

೨೫೩

Mel. Ich will dich lieben, meine Stärke.—M. T. 88.

1. ಸದ್ಗುಣಶಿರೋಮಣಿಯಾದ
ಸ್ವರ್ಗೀಯ ಗುರು ಯೇಸುವೇ!
ಸುನೀತಿಗ್ಗಸಿದವನಾದ
ನನ್ನನ್ನು ಸೆಳೆ ಮೇಲಕೆ!
ಸಂಪೂರ್ಣ ನಿನ್ನ ಶೀಲತೆ
ಆದರ್ಶವೆನಗೆ.

2. ನೀ ನಡೆ ನುಡಿ ಬಗೆಯಲ್ಲಿ
ಅತೀತ ಪರಂಜ್ಯೋತಿಯು;
ನಿನ್ನಾತ್ಮಶುದ್ಧಿ ಸರ್ವರಲ್ಲಿ
ಪವಿತ್ರಸಾಕ್ಷಿ ಕೊಟ್ಟಿತು.
ಆಹಾ! ನಾನಾಗತಕ್ಕದ್ದು
ನಿನ್ನಂತೆ ಶುದ್ಧನು.

3. ಕಾರುಣ್ಯನಿಧಿ, ಪುಣ್ಯಸೂರ
ಆಧಾರಹೀನ ಪಾಪಿಗೆ;
ನೀನೊಲಿದು ಕಟಾಕ್ಷಪೂರ
ಕೈಕೊಡುತ್ತಿದ್ದಿ ನಿತ್ಯವೆ.
ನಾನೂ ಹಾಗಾಗತಕ್ಕದ್ದು
ಕಾರುಣ್ಯಶೀಲನು.

4. ನಿನ್ನವತಾರಚರ್ಯೆಯಲ್ಲಿ
ಎಳ್ಳಷ್ಟು ಹಮ್ಮು ಕಾಣದು;
ನೀ ತಗ್ಗಿಕೊಂಡಿ ದೈನ್ಯದಲ್ಲಿ
ಅಘೋರ ಕ್ರೂಜೆ ಮಟ್ಟಿಗು.
ಆಹಾ! ನಾನಾಗತಕ್ಕದ್ದು
ನಿನ್ನಂತೆ ದೀನನು.

5. ಸಮಸ್ತ ನಿನ್ನ ಕೃತ್ಯದಲ್ಲಿ
ಸಾತ್ವೀಕಭಾವ ತೋರುತೆ;
ಶ್ರೀ ಯೇಸು, ಎಲ್ಲ ಜನರಲ್ಲಿ
ನೀನಿದ್ದಿ ಸತ್ಯವಂತನೆ.
ನಿನ್ನಂತೆ ಆಗ ಮನಸ್ಸು
ನನ್ನಲ್ಲಿ ಇಹುದು.

6. ನೀ ಸೌಮ್ಯಗುರು, ಶಾಂತ
ಮೂರ್ತಿ,
ಸಂಕಷ್ಟ ತಾಳ್ದ ಯೇಸುವೆ!
ನಿನ್ನಲ್ಲಿ ಸ್ಥೈರಣೆಯ ಪೂರ್ತಿ
ಸುರತ್ನದಂತೆ ಮಿಂಚುತೆ.
ಆಹಾ! ನಾನಾಗತಕ್ಕದ್ದು
ನಿನ್ನಂತೆ ಶಾಂತನು.

7. ವಿಧೇಯಯೇಸು, ಎಲ್ಲ ವೇಳೆ
ನೀ ದೇವರಾಜ್ಞೆಗೊಪ್ಪಿದಿ;
ಸ್ವಚಿತ್ತವನ್ನು ಕೊಟ್ಟ ಮೇಲೆ
ಸ್ವಜೀವದಾನ ಮಾಡಿದಿ.
ಆಹಾ! ನಾನಾಗತಕ್ಕದ್ದು
ಅಂಥ ವಿಧೇಯನು.

೨೫೪

Mel. Mir nach! spricht Christus, unser Held.—M. T. 82.

1. ಕ್ರಿಸ್ತ್ಯೇಸು ನನ್ನ ಹೃದವಂ
ನೀ ಗೆದ್ದುಕೊಂಡು ತಿದ್ದು!
ನನ್ನಿಷ್ಟ ಪಾಪವೃತ್ತಿಯಂ
ನೀ ದಯಮಾಡಿ ಕಿತ್ತು
ದುರಾಶೆ ನೊಂದಿಸೆನ್ನೊಳು!
ನಿನ್ನಧಿಕಾರ ಸ್ಥಾಪಿಸು!

2. ಇನ್ನೊಬ್ಬನಾಳಬಾರದು
ಈ ಹೃದಪೀಠದಲ್ಲಿ;
ಪಿಶಾಚಗೊಳಗಾಗೆನು
ನೀನಾಳುವಷ್ಟರಲ್ಲಿ;
ಬಂದೀಗ ಶಾಂತಿರಾಜನೆ,
ನಿವಾಸ ಮಾಡೆನ್ನೊಳಗೆ!

3. ವಿಶ್ವಾಸ ಭಕ್ತಿ ಹುಟ್ಟಿಸಿ
ಕೊಡೆಂಗೆ ನಿನ್ನ ತತ್ವ!
ನಿನ್ನಾತ್ಮದಿಂದ ಹೀರಲಿ
ನನ್ನಾತ್ಮ ಹೊಸ ಸತ್ವ!
ಅದಾಗಿ ನಿನ್ನ ಮರವು
ಹೂ ಹಣ್ಣು ಬಿಡದಿರದು.

4. ಕಠಿಣವಲ್ಲವೆನ್ನುವೆ
ನೀನಾಜ್ಞೆ ಕೊಡುವಾಗ;
ನಾ ಹೊತ್ತುಕೊಂಡು ಬರುವೆ
ನೀ ಕ್ರೂಜೆ ಹೊರಂದಾಗ;
ನನ್ನಾಳ್ಮ ನಿನ್ನ ಚಿತ್ತವೆ
ಮೃಷ್ಟಾನ್ನ ನಿನ್ನ ಆಳಿಗೆ.

೨೫೫

Mel. Himmelan, nur himmelan. M. T. 123.

1. ಪುನರ್ಜನ್ಮವಿಲ್ಲದೆ
ದೇವರಾಜ್ಯವ
ಸೇರ್ರೋ ಮಾರ್ಗ ನರಗೆ
ಇಲ್ಲವಕಟ!
ದಿವ್ಯಾತ್ಮನು

ಹೃದದೊಳು ಸೇರೋದೂ
ನವಸೃಷ್ಟಿಯಾಗೋದೂ
ಅವಶ್ಯವು.

2. ಪಾಪ ಮಾಡಿ ಎಲ್ಲರು
ಭೇದವಿಲ್ಲದೆ
ಕಳಕೊಂಡು ಬಿಟ್ಟರು
ದೇವಮಹಿಮೆ.
ಪುಣ್ಯಾತ್ಮರು
ನರರಲ್ಲಿ ಸಿಕ್ಕರು.
ತಪ್ಪಿ ಹೋಗಿ ಆದರು
ಪಾಪಾತ್ಮರು.

3. ಮಾಂಸದಿಂದ ಹುಟ್ಟಿದ್ದು
ಮಾಂಸವಾಗಿದೆ.
ಸ್ವಚ್ಛ ಗುಣವಿರದು
ಆತ್ಮನಿಲ್ಲದೆ.
ಈ ನುಡಿಯ
ನಂಬಿಗಸ್ತ ಸಾಕ್ಷಿಯು
ತಾನೇ ಹೇಳಿ ಕೊಟ್ಟನು,
ನಿರುತ್ತರ.

4. ಪ್ರಿಯ ಯೇಸು ಕ್ರಿಸ್ತನೇ,
ಹೊಸ ಹೃದಯ
ನಿನ್ನ ಬಡ ಬಾಲಗೆ
ಕೃಪೆಯಿಂದ ತಾ !
ವಿಮೋಚಕ,
ಕಿತ್ತು ಪಾಪಬೇರನ್ನು
ಹೊಸತಾಗಿ ಸೃಷ್ಟಿಸು
ನನ್ನಾತ್ಮವ !

5. ದಯಪಾಲಿಸೆನಗೆ
ನಿನ್ನ ಆತ್ಮವ,
ಕೊಡು ನನ್ನ ಹೃದಕೆ
ಸಮಾಧಾನವ !
ಉದ್ಧಾರಕಾ,
ನೀನು ಜಯ ಕೊಟ್ಟರೆ
ನಿತ್ಯವೂ ನಾ ಹಾಡುವೆ
ಹಲ್ಲೆಲೂಯಾ !

೨೫೬

Mel. The heavenly Canaan.
M. T. 144.

1. ಕರ್ತಾ, ನಾ ನಿನ್ನ ತೊರೆದು
ಅಪಾತ್ರನಾದೇನೋ ?
ಆರಂಭಪ್ರೀತಿಜಳವು
ತಂಪಾಗಿ ಹೋದೀತೋ?
ಅದನ್ನು ಮತ್ತೆ ಉರಿಸಿ
ಸದ್ಭಕ್ತಿ ವರ್ಧಿಸು !
ಕೈ ಹಿಡಿದೆನ್ನ ನಡಿಸಿ
ವಿಮುಕ್ತಿ ಕಾಣಿಸು !

2. ನನ್ನಲ್ಲಿ ಪಾಪಬೀಜವೆ
ಇನ್ನುಂಟು ಸತ್ಯವು.
ನಾ ನಿದ್ರೆ ಮಾಡಿ, ಕಾಯದೆ
ಮೈಮರೆತಿರಲು,

ಅದ್ದೊಸದಾಗಿ ಮೊಳೆತು
ಸದ್ಬೀಜ ಅಣಗಿ
ಕೆಟ್ಟೇನು. ಸ್ವಾಮಿಾ, ನನ್ನನ್ನು
ಕಾಪಾಡು ದಯದಿ !

3. ಹಣ್ಣಿಲ್ಲದಂಥ ಮರವು
ನಾನಾಗಲೊಲ್ಲೆನು.
ತಂಪುಳ್ಳ ಪ್ರಾಣಸ್ಥಿತಿಯು
ಸಂಗಿರಬಾರದು.
ವಿಶ್ವಾಸ ಬಲಪಡಿಸಿ
ಹೃದ್‍ಜ್ವಾಲೆ ಹೊತ್ತಿಸು !
ನನ್ನಲ್ಲಿ ನಿನ್ನ ಕಾರ್ಯದಿ
ವಾತ್ಸಲ್ಯ ಹುಟ್ಟಿಸು !

4. ನೀ ಶಿಕ್ಷೆ ರಕ್ಷೆ ನಡಿಸಿ
ನನ್ನನ್ನು ಪಾಲಿಸು.
ಇನ್ನಾಗೋ ಎಲ್ಲ ಯುದ್ಧದಿ
ವಿಜಯಗೊಳ್ಳಿಸು.
ಹೀಗಾಗಿ ಮೋಕ್ಷಸ್ಥಳಕ್ಕೆ
ನಾ ಯೋಗ್ಯನಾಗುವೆ.
ಸಮಸ್ತ ಸ್ತೋತ್ರ ಕೃಪೆಗೆ
ಎಂದಲ್ಲಿ ಹಾಡುವೆ.

೨೫೭

Ich will streben.—M. T. 190.

1. ಜೀವವನ್ನ
ಹೊಂದ ನನ್ನ
ಆಶೆ ಇಹುದು ;
ದೃಢದಿಂದ
ಇಂದಿನಿಂದ
ತಡ ಮರೆತು,
ಹೋಗುತೇನೆ ಗುರಿಗೆ ;
ಹಿಂದಕೆಂದು ದೃಷ್ಟಿಸೆ.
ಎಲ್ಲ ಬಿಟ್ಟು,
ಮನಸಿಟ್ಟು
ಅರ್ಸಿಕೊಂಬೆನು.

2. ಪೀಠಕಾಗಿ
ಓಡಲಾಗಿ
ತ್ವರೆ ಪಡುವೆ.
ಲಾಭವೇನು,
ಕೀರ್ತಿಯೇನು
ಉದಾಸೀನಗೆ ?
ಯುದ್ಧದೊಳ್ ವೈಗಳ್ಳನು
ಜಯ ಹೊಂದ ಕೂಡದು,
ನಿದ್ರೆಗಾರ
ಗೆಲ್ಲಲಾರ.
ನೆನೆ, ಮನವೆ !

3. ಮಾರ್ಗದಲ್ಲಿ
ಕುಂದುವಲ್ಲಿ
ಮೋಕ್ಷದಶೆಗೆ
ನೋಡಿ, ನನ್ನ
ದೃಷ್ಟಿಯನ್ನ
ತಪ್ಪಗೊಡದೆ,
ಮುಂದೆ ಮುಂದೆ ನಡೆದು,

ಮೋಕ್ಷ ಅರ್ಸಿಕೊಂಬೆನು.
ಯೇಸು, ದಯ
ಮಾಡಿ, ಜಯ
ಕೊಡು ನನಗೆ.

4. ಕೇಳು, ನಿನ್ನ
ಶಿಶುವಿನ
ಮೊರೆ, ತಂದೆಯೆ!
ಶಕ್ತಿಯಾದ
ಆಶೀರ್ವಾದ
ಕೊಡು, ಕ್ರಿಸ್ತನೆ!
ಜ್ಞಾನ ತ್ರಾಣವೆರಡೇ
ಕೊಡು, ದೇವರಾತ್ಮನೇ!
ಜೀವವನ್ನ
ಹೊಂದ ನನ್ನ
ಆಶೆಯಾದದೆ!

೨೫೮

Himmelan, nur himmelan.
M. T. 123.

1. ಪರಲೋಕಕೆಂದಿಗು
ಮಾರ್ಗ ಹಿಡಿದು
ಹೋಗು! ಅಲ್ಲಿ ತುಂಬೋದು
ಭಕ್ತರಾಶೆಯು.
ಭೂಲೋಕದಿ
ಸುಖದುಃಖವಾಗುತೆ;
ಮಹಿಮೆಯ ಕಡೆಗೆ
ಕಣ್ಣಿರಲಿ!

2. ನಿತ್ಯ ನೀನು ಅಲ್ಲಿಯೆ
ಮನವಿರಿಸು!
ಈ ಪ್ರಯಾಣ ಶೀಘ್ರವೆ
ತೀರಿ ಹೋಗೊದು.
ಯಾವಾಗಲು
ಪರಮಾರ್ಥಮುಕ್ತಿಗೆ
ಸಿದ್ಧನಾಗಿರೋದಕೆ
ಎಚ್ಚತ್ತಿರು!

3. ಪರಲೋಕದಾಲಯ
ನಿನ್ನ ಗತಿಯು.
ಈ ಪ್ರಪಂಚಮಾಯದ
ಚಿಂತೆ ಬೇಡವು.
ವಿಸರ್ಜಿಸು
ಲೋಕದಾಶೆ, ಮನವೇ!
ಪರಲೋಕದಾಸ್ತಿಯೇ
ನಿರ್ಣಯವು!

4. ಕರ್ತನನ್ನು ದೃಷ್ಟಿಸಿ,
ಮೋಕ್ಷ ಸೇರಲು,
ಹಲ್ಲೆಲೂಯಾ ಹಾಡುವಿ;
ಎಂಥ ಸುಖವು!
ವಿಜಯವು!
ಕ್ರೂಜೆಯಿಂದ ಪೀಠಕೆ
ಎದ್ದ ಜಯಶಾಲಿಗೆ
ವಿಜಯವು!

೨೫೯

Mel. Fröhlich soll mein Herze springen.—M. T. 138.

I. ದೇವಪುತ್ರಮೂಲವಾಗಿ
ನಮಗೆ
ರಕ್ಷಣೆ
ಬಂದು ಇರಲಾಗಿ,
ಇನ್ನು ಬೇಡ ಪಾಪಸೇವೆ!
ನಿನಗೆ,
ಯೇಸುವೆ,
ಒಪ್ಪಿಕೊಳ್ಳುತೇವೆ.

2. ನಾವು ದಾಸರಾದ ಕಾಲ
ತೀರಿತು;
ಕ್ರಿಸ್ತನು
ತೆತ್ತನೆಮ್ಮ ಸಾಲ.
ಯೇಸು ಬಲಹೀನನಲ್ಲ;
ಭಕ್ತರ
ರಕ್ಷೆಯ
ಪೂರ್ಣ ಮಾಡ ಬಲ್ಲ.

3. ನಮಸ್ಕಾರ ಮಾಡುತೇವೆ,
ಕರ್ತನೆ,
ನಿನಗೆ!
ನಿನ್ನದೆಮ್ಮ ಸೇವೆ!
ಇಹಜೀವದಂತ್ಯದಲ್ಲಿ
ನಮ್ಮನು
ಏರಿಸು
ಚೀಯೋನ್ ಗಿರಿಯಲ್ಲಿ!

೨೬೦

Grosser Gott, wir loben dich. M. T. 73.

1. ಕ್ರಿಸ್ತನ ಸಂಗತರಾಗುವ!
ಆತನು ಮಹಿಮೆಯಿಂದಲೆ ಬಂದ;
ತೊಳಲಿ ತಪ್ಪಿದ ಪ್ರಾಣಿಯ
ಹುಡುಕಿ ಬಿಡಿಸಿ ಹಿಂಡಿಗೆ ತಂದ;
ಆತನು ಉತ್ತಮ ಕುರುಬ;
ಕ್ರಿಸ್ತನ ಸಂಗತರಾಗುವ!

2. ಕ್ರಿಸ್ತನ ಸಂಗಡ ತಾಳುವ!
ಆತನು ಕ್ರೂಜೆಯನ್ನಾರಿಸಿ
ಕೊಂಡ;
ನಿಂದೆಗೆ ಮಾಡದೆ ನಿಂದೆಯ
ತಾಳಿದ ಬಳಿಕ ಹರುಷಗೊಂಡ.
ಆತನ ಹಿಂದೆಯೇ ಹೋಗುವ;
ಕ್ರಿಸ್ತನ ಸಂಗಡ ತಾಳುವ!

3. ಕ್ರಿಸ್ತನ ಸಂಗಡ ಸಾಯುವ!
ಆತನು ಪಾಪಕ್ಕೆ ಸತ್ತ ಪ್ರಕಾರ
ಪಾಪವ ಕ್ರೂಜೆಗೆ ಹಾಕುವ!
ಭೋಗಿಯು ಸ್ವರ್ಗದಿ ಬದುಕ
ಲಾರ,
ಹೊಂದುವನಿಮ್ಮಡಿ ಮೃತ್ಯುವ.
ಕ್ರಿಸ್ತನ ಸಂಗಡ ಸಾಯುವ!

4. ಕ್ರಿಸ್ತನ ಸಂಗಡ ಬಾಳುವ!
ತಲೆಯು ತಿರಿಗಿ ಎದ್ದದರಿಂದ
ಅಂಗವು ಏಳೋದು ನಿಶ್ಚಯ;
ನಮ್ಮನ್ನು ತಾಯಿಯ ಮಮತೆ
ಯಿಂದ
ತಾನಿರುವಲ್ಲಿಗೆ ವೈಯ್ಯುವ.
ಕ್ರಿಸ್ತನ ಸಂಗಡ ಬಾಳುವ!

೨೬೧

Mir nach! spricht Christus, unser Held.—M. T. 82.

1. ಕೇಳೆಮ್ಮ ಗುರು ಯೇಸುವು
ಒಬ್ಬೊಬ್ಬ ಭಕ್ತನನ್ನು—
"ನಿನ್ನನ್ನು ಅಲ್ಲಗಳೆದು,
ನೀ ತಾಳು ಕ್ರೂಜೆಯನ್ನು!
ಹೀಗೆನ್ನ ಬೆನ್ನು ಹತ್ತ ಬಾ!"
ಎಂದೆಚ್ಚರಿಸಿ ಕರೆದ.

2. "ನಾ ಬೆಳಕೇ, ಈ ಲೋಕವು
ಕಾರ್ಗತ್ತಲ್; ಇಲ್ಲಿ ಭ್ರಾಂತಿ
ನಿನ್ನನ್ನು ಹಿಡಿದಿರಲು,
ನಾ ಕೊಡುತ್ತೇನೆ ಶಾಂತಿ.
ನೀನೆನ್ನ ಬೆನ್ನು ಹತ್ತ ಬಾ!"
ಎಂದ್ಹೇಳಿ ಯೇಸು ಕರೆದ.

3. "ನಾ ಮಾರ್ಗ, ಸತ್ಯ, ಜೀವ
ವು;
ತಂದೇ ಸಮೀಪ ಸೇರ
ನನ್ನನ್ನು ಬಿಟ್ಟರಾಗದು;
ವಿಶ್ವಾಸಿಯನ್ನುದ್ಧಾರ
ನಾನೊಬ್ಬ ಮಾತ್ರ ಮಾಡುವೆ.
ನೀವೆಲ್ಲಾ ಬರ್ರಿ ಬೇಗನೆ!"

4. ಈ ನಿನ್ನ ಮಾತು ಕೇಳಿದೆ,
ನನ್ನತಿ ಪ್ರಿಯ ಯೇಸು!
ನಾ ನಿನ್ನ ಹಿಂದೆ ಬರುವೆ;
ನಂಗಿನ್ನು ಕ್ರೂಜೆ ಲೇಸು.
ನನ್ನನ್ನು ತಂದೆಮನೆಗೆ
ವೈ, ನನ್ನ ಗುರು ಯೇಸುವೆ!

೨೬೨

Es kostet viel, ein Christ zu sein. M. T. 86.

1. ಸತ್‌ಕ್ರೈಸ್ತಧರ್ಮ ಕಷ್ಟವು;
ದುರ್ಲಭ್ಯವಾದ್ದು ಶುದ್ಧ ಆತ್ಮನೀತಿ.
ಕ್ರಿಸ್ತ್ಯೇಸುವೊಡನಿತ್ಯ ಸಾಯೊದು
ಸ್ವಭಾವಬುದ್ಧಿಗೊಪ್ಪದಂಥ ರೀತಿ.
ಈ ಯುದ್ಧದಲ್ಲಿ ಒಂದೆ ಜಯವು
ಸಾಕಾಗದು.

2. ಹಾದೀಲಿ ಹಾವ ಚಾಳಿಗೆ
ನಿನ್ನಡಿ ಕಚ್ಚಲಾಗಿ, ಪ್ರಾಣಲಯ
ನಿವಾರಿಸೋದು ಕಷ್ಟವಾದದೆ!
ಉಂಟ್ಹುಗಲಿರುಳಲ್ಲಿ ವಿಷಭಯ;
ತಾತ್ಸಾರ ಮಾಡೆ, ನಷ್ಟ ತಪ್ಪದು.
ಎಚ್ಚತ್ತಿರು!

3. ಈ ಕಷ್ಟಕಂಜ ಬಾರದು.
ನಿರಂತ್ರವಾದ ಮಹಿಮಾತಿಶಯು
ಕಡೇಲಿ ನಿನ್ನದೇ. ವಿಶ್ವಾಸಿಸು!
ಚನ್ನಾಗಿ ಹೋರುತ್ತಿರೆ ನಿಂಗೆ
ಜಯ.
ಸಾಮರ್ಥ್ಯವನ್ನು ದಿವ್ಯ ಕೃಪೆಯೆ
ಈಯುತ್ತದೆ.

4. ಸರ್ವೇಶಪುತ್ರನಾಗುವಿ,
ಅನಾದಿ ಪ್ರಭೆ ನಿನ್ನೊಳ್ ಮಿಂಚ
ಲಾಗಿ;
ವಿಶುದ್ಧ ತೇಜದೇಹಿಯಾಗುವಿ,
ಮಹಾಪ್ರಕಾಶಪ್ರತಿಕಾಂತಿಯಾ
ಗಿ;
ಸಾರೂಪ್ಯನಾಗಿ ತಂದೆಯೈಕ್ಯದಿ
ಇದ್ದಿರುವಿ.

5. ಆ ಲೋಕದಲ್ಲಿ ಮುಕ್ತಿಯ
ಮಗಂಗೆ ತಂದೆ ಇಟ್ಟುಕೊಂಡಿ
ದ್ದಾನೆ;
ಅಪಾರವಾದ ಬಹುಮಾನವ
ಭಕ್ತಂಗೆ ಆತ ಸಿದ್ಧ ಮಾಡುತಾನೆ.
ಕಿರೀಟವನ್ನು ಭ್ರಾತಗೀಯ್ವನು
ಕ್ರಿಸ್ತ್ಯೇಸುವು.

6. ಎಚ್ಚತ್ತು ಏಳು ಮನವೇ!
ಪ್ರಪಂಚಭ್ರಾಂತಿ ಇನ್ನು ನಿನ
ಗ್ಯಾಕೆ?
ಬೇಕಾದ ತ್ರಾಣವಾತ ಕೊಡನೇ?
ಅಧೈರ್ಯ ಅವಿಶ್ವಾಸ ನಿನಗ್ಯಾ
ಕೆ?
ಈ ಕಷ್ಟ ತೀರೆ, ಎಷ್ಟೊ ಒಳ್ಳೆದು
ವಿಶ್ರಾಂತಿಯು!

೨೬೩

Es ist nicht schwer, ein Christ zu sein.—M. T. 86.

1. ಸತ್‌ಕ್ರೈಸ್ತಧರ್ಮ ಸೌಖ್ಯವೆ!
ಸುಲಭ್ಯವಾದ್ದು ಶುದ್ಧ ಆತ್ಮನೀತಿ.
ಕ್ರಿಸ್ತ್ಯೇಸುವೊಡ ಸಾಯೊ ಕಟ್ಟಳೆ
ಸ್ವಭಾವಬುದ್ಧಿಗೊಪ್ಪದಂಥ ರೀತಿ
ಆದಾಗ್ಯು, ದೇವಕೃಪೆ ಎಂದಿಗು
ಸೋತ್ಹೋಗದು.

2. ಬಾಲಂಗೆ ಚಿಂತೆ ಬೇಡವು!
ಸತ್ಪ್ರೀತಿನೇಮ ಕೆಟ್ಟ ನೊಗವಲ್ಲ.
ಅಧೈರ್ಯ ನಿನಗ್ಯಾಕೆ? ನೆನಸು!
ತಾಯ್ಯನ್ನು ಮಗು ಪ್ರೀತಿ ಮಾಡ
ಬಲ್ಲ.
ಈ ಭಯ ಬಿಡು! ನಿನ್ನ ಕಷ್ಟವು
ಹೆಚ್ಚಾಗದು.

3. ಕೃಪಾಬ್ಧಿ ಹೊಯ್ಯ ತಂದೆಯು
ನಿನ್ ಹೃದವನ್ನು ಕೇಳಿಕೊಳ್ಳು
ತಾನೆ.
ಸ್ವಚಿತ್ತ ಮಾತ್ರ ನಿನ್ನ ಕಾಡ್ಪುದು;
ನಿನ್ನಪ್ಪಪ್ರೀತಿಪೂರ್ಣನಾಗಿದ್ದಾನೆ.

ಸ್ವಚಿತ್ತಭ್ರಾಂತಿ ಹೋಗೆ, ತೊಂ
ದರೆ
ಬಿಟ್ಟೋಗುತೆ.

4. ಸ್ವಜೀವ ತಿಂಬೊ ಚಿಂತೆಯ
ಹೃದ್ಗೃಹದಿಂದ ಕಿತ್ತು ಬಿಸು
ಟಾಡು !
ಭಯಾದಿ ವೈರಿಗಳ ಸಂಗಡ
ನೀನೆದೆಗೊಂಡು ದೃಢ ಹೋರ
ನಾಡು !
"ಕಟಾಕ್ಷವಿಡು!" ಎನ್ನಲಾಯಿತು
ಇಷ್ಟಾರ್ಥವು.

5. ಸಹಾಯ ಕಾಣದಿದ್ದರು,
ನೀ ಬೇಗ ಬಿಡ ಬೇಡ ತಾಳ್ಮೆ
ಯನ್ನು !
ಅಶಕ್ತನಾಗಿ ಬಿದ್ದು ಹೋಗಲು,
ನೀ ಹಿಡುಕೊಳ್ಳು ಹೊಸ ಧೈ
ರ್ಯವನ್ನು!
ಸಂಪೂರ್ಣ ಕ್ಷಮೆ, ನಂಬು,
ಕೊಟ್ಟದೆ
ವಿಶ್ವಾಸಿಗೆ!

6. ಕಗ್ಗಾನಕಾವಳಿದ್ದರು
ಸುಭದ್ರನಾಗಿದ್ಧೀ ವಿಶ್ವಾಸದಿಂದ.
ತುಫಾನು ಬಂದರೇನು? ತಂದೆ
ಯು
ನಿನ್ನನ್ನು ಕಾಯುತಾನೆ ಪ್ರೀತಿ
ಯಿಂದ.

ನಂಬಲ್ಕೆ ದಾರಿ ಕಾಣದ್ಹೋದರು
ನೀ ನಂಬಿರು !

7. ಮೂಡೀತು ಹೊಸ ಬೆಳಕು.
ಸಂರಕ್ಷೆತೇಜವನ್ನುಕಂಡು ಬಾಳ್ವೆ;
ನಾನೀಯುತೇನೆ!ಎಂತ,ತಂದೆಯು
ನಿಂಗ್ಹೇಳಿದಧಿಕಾರ ಹೊಂದಿ ಆಳ್ವೆ.
ಹಾ! ಎಂಥ ಹರ್ಷ, ನೋಡು,
ಮನವೆ,
ಸತ್ಕ್ರೈಸ್ತಗೆ!

8. ಏಳೇಳು, ತಡ ಮಾಡದೆ!
ಆಶ್ರೈಸು, ಪುತ್ರ, ನಿಜ ಪಿತನನ್ನು!
ಸಂದೇಹವೆಲ್ಲ ಬಿಟ್ಟು, ಹೃದವೆ,
ಸೇರ್, ಸೇರು ಭಕ್ತಿಯಿಂಪು
ಶಾಂತಿಯನ್ನು!
ಬಾ! ಚಿಂತಾಭಾರ ಒಪ್ಪಿಸಂಜದೆ
ನಿನ್ನೀಶಗೆ!

೨೬೪

Mache dich, mein Geist, bereit,
M. T. 124.

1. ಸಿದ್ಧನಾಗು! ಪ್ರಾರ್ಥಿಸು!
ಸಿದ್ರೆ ತಿಳಿದೇಳು!
ಫಕ್ಕನಾಪತ್ಕಾಲವು
ಬಂದರೇನು? ಹೇಳು!
ಕಾಣದೆ
ಶೋಧನೆ

ಮುತ್ತ ಬಹುದಲ್ಲ?
ಹೊತ್ತು ಯಾರು ಬಲ್ಲ?

2. ಈಗಲೇಳು ಎಚ್ಚತ್ತು
ಪಾಪನಿದ್ರೆಯಿಂದ!
ಅಲ್ಲಿ ತಪ್ಪ ಕೂಡದು
ಘೋರ ಶಾಪದಿಂದ.
ಕಾಲವು
ತುಂಬಲು,
ಪರಿಹಾರವಿಲ್ಲ;
ಆಚೆ ಕ್ಷಮೆಯಿಲ್ಲ!

3. ಎಚ್ಚರಕ್ಷಿ ತೆರೆದು
ಕಾಣ್ಬೆ ಕ್ರಿಸ್ತನನ್ನು.
ನಿದ್ರಾಲೋಲ ನೋಡನು
ದಿವ್ಯ ಬೆಳಕನ್ನು.
ದೇವರ
ಕೃಪೆಯ
ವ್ಯರ್ಥ ನಿದ್ರೆಗಾರ
ಎಂದು ಹೊಂದಲಾರ.

4. ಎಚ್ಚರಾಗು! ಕೆಡಕ
ಹೊಂಚಿ ನೋಡುತಾನೆ;
ನಿನ್ನ ನುಂಗಿ ನಶಿಸ
ಸಿದ್ಧನಾಗಿದ್ದಾನೆ.
ಎಚ್ಚರ
ಇರುವ
ಭಕ್ತ ಜಯಿಸೋನು,
ಜೀವ ಪಡೆಯೋನು.

5. ದುಷ್ಟ ಮಿತ್ರಗೆಚ್ಚರ!
ಉರ್ಲನೊಡ್ಡಿದ್ದಾನೆ.
ಎಚ್ಚರಾತ್ಮವಂಚಕ
ಸುತ್ತು ಕಾಯುತಾನೆ,
ಜಾಗ್ರತೆ!
ಪಕ್ಕನೆ
ನೀನು ಕ್ಷಣದಲ್ಲಿ
ಬಿದ್ದೀ ಮೋಸದಲ್ಲಿ.

6. ನಿದ್ರೆ ಬಿಟ್ಟು ಪ್ರಾರ್ಥಿಸು
ನಿನ್ನ ದೇವರನ್ನು!
ಆತ ರಕ್ಷೆ ಮಾಡೋನು
ಬೇಡುವವನನ್ನು.
ಬೇಡದೆ
ಇದ್ದರೆ,
ಗತಿ ನಿನಗಿಲ್ಲ;
ಗರ್ವಿ ಬಾಳೋದಿಲ್ಲ!

7. ಬೇಡುತೆಚ್ಚರಾಗಿರು!
ಬೇಡಿ, ಕಷ್ಟ ಮಾಡು!
ಬೇಡಿ, ಉಂಡು, ಮಲಗು!
ಬೇಡಿ, ಹೋರನಾಡು!
ಒಡೆಯ
ಬೇಡುವ
ಭಕ್ತಗೆ ದಯಾಳು.
ಬೇಡಿ, ಬೇಡಿ, ಬಾಳು!

೨೬೫

Mel. Nun danket all und bringet Ehr'.—M. T. 19.

1. ಎಚ್ಚತ್ತು ಬೇಡಿಕೊಳ್ಳಿರಿ,
ಸದ್ಭಕ್ತ ಜನರೇ!
ನಿಮ್ಮಾತ್ಮ ಕಾದುಕೊಳ್ಳಿರಿ
ದೇಹಾಂತ ವರೆಗೆ!

2. ಸೈತಾನ ನಿಮ್ಮ ಮಾನವ
ಕಾಪಾಡ ಬಿಡನು;
ಸಂಪೂರ್ಣಮಾನಹಾನಿಯ
ದುರ್ಗತಿಗೊಯ್ವನು.

3. ಹೀಗಿದ್ದ ಮೇಲೆ ಜಾಗರ
ಅಗತ್ಯವಾಗಿದೆ;
ಸನ್ಮಾನ ಕೆಟ್ಟ ಪುರುಷ
ಸತ್ಪಾತ್ರನಲ್ಲವೆ?

4. ಸತ್ತೋದ ಆತ್ಮ ಯಾವನು
ಎಬ್ಬಿಸಲಾರನು.
ಕ್ರಿಸ್ತ್ಯೇಸು ಘನವೈದ್ಯನು
ಅದಕ್ಕೆ ಶಕ್ತನು.

5. ಸನ್ಮಾನ ಕಳಕೊಳ್ಳದೆ
ಮರ್ಯಾದೆ ಕಾಯಿರಿ!
ಕಾದಾಡ ಕಾಲ ಬಂದದೆ,
ಸುಬೋಧೆ ಕೇಳಿರಿ!

6. ಸಾರಾಯಿಯಾಶೆ ತೊರೆದು,
ದುಷ್ಕಾಮ ತ್ಯಜಿಸಿ,
ಸನ್ಮಾನಮಾರ್ಗ ಹಿಡಿದು
ನೀವೆಲ್ಲ ಬಾಳಿರಿ!

7. ಸುಬೋಧೆ ಕೇಳಿ ನಡೆದು-
ಕೊಂಡಿರ್ವ ನರನು
ಕ್ರಿಸ್ತ್ಯೇಸು ಒಲ್ಮೆ ಪಡೆದು
ನಿರಂತ್ರ ಬಾಳ್ವನು.

೨೬೬

Mel. O sanctissima.—M. T. 55.

1. ಬನ್ನಿ ಶಿಷ್ಯರೇ!
ಯೇಸುದಾಸರೇ!
ಸತ್ಯದೇವಭಕ್ತರೇ!
ನಂಬಿಕೊಳ್ಳಿ, ನೆಲೆಗೊಳ್ಳಿ
ಯೇಸುವಾಕ್ಯದಲ್ಲಿಯೇ!

2. ಎಷ್ಟೋ ಜನರು
ಕೆಟ್ಟುಹೋದರು
ಮದ್ಯಪಾನದಿಂದಲೇ!
ಮಹಾಮಾರಿ ಮೋಕ್ಷದಾರಿ
ತಪ್ಪಿಹೋಗ ಮಾಡುತೆ.

3. ಬಹು ಮೋಹದಿ,
ಚಂದ ವೇಷದಿ
ಭಕ್ತಗುರ್ಲು ಒಡ್ಡಲು,
ಅಪ್ಪಿತಪ್ಪಿ ಬುದ್ಧಿತಪ್ಪಿ
ಬಿದ್ದರಾಯ್ತು ನಷ್ಟವು.

4. ಯೇಸುಭಕ್ತನು
ಜಾರಿ ಬೀಳಲು,
ವೈರಿಗಾಯ್ತುಲ್ಲಾಸವೇ.
ನಮ್ಮಪಾಯ ವೈರಿಗಾಯ;
ತಿದ್ದೀ ಸ್ಥಿತಿ, ದೇವರೇ!

5. ವೈರಿಮಂತ್ರವ,
ಎಲ್ಲ ತಂತ್ರವ
ಬಲ್ಲ ಯೇಸುಸ್ವಾಮಿಯೇ,
ತಿಳುಕೊಳ್ಳ, ತಪ್ಪಿಕೊಳ್ಳ
ಬುದ್ಧಿ ತಾರೈ, ಕರ್ತನೇ!

6. ಪ್ರಿಯ ತಂದೆಯೆ,
ನಿನ್ನ ಮಂದೆಗೆ
ಎಷ್ಟೋ ಮೋಸವಾಯಿತು!
ನೆಂಟ ಯಾರು, ತುಂಟ ಯಾರು?
ಭೇದಾಭೇದ ತಿಳಿಸು!

7. ಶತ್ರುಮೋಹಕೆ,
ಎಲ್ಲ ಮೋಸಕೆ
ತಪ್ಪಿ, ಗೆದ್ದ ಯೇಸುವೇ,
ನಿನ್ನ ಭಕ್ತಿ, ನಿನ್ನ ಶಕ್ತಿ
ಆಸರಾಗಲೆಮಗೆ!

೨೬೭

Mel. Warum sind der Tränen.
M. T. 114.

1. ನಿನ್ನ ಆತ್ಮಕ್ಕಿನ್ನು
ಬಲವಿಲ್ಲದೆ,
ಯುದ್ಧದಲ್ಲಿ ಇನ್ನು
ಜಯ ಹೊಂದದೆ
ನೀನು ಇರುವಲ್ಲಿ
ಎಚ್ಚರಾಗಿರು.
ವೃದ್ಧಿಗಡ್ಡಿ ಎಲ್ಲಿ?
ಮನ ಶೋಧಿಸು.

2. ಮಳೆ ಬಿಟ್ಟು ಹೋಗೆ
ಹೊಲನಷ್ಟವು;
ಆತ್ಮವೃಷ್ಟಿ ಹೋಗೆ
ಪ್ರಾಣನಷ್ಟವು,
ಹೊಂದು ಮೇಲಿನಿಂದ
ದಿವ್ಯ ವೃಷ್ಟಿಯ;
ನಿತ್ಯ ಬುಗ್ಗೆಯಿಂದ
ಆತ್ಮತೀರ್ಥವ.

3. ಸೂರ್ಯತೇಜದಿಂದ
ಶೋಭೆ ದೇಹಕ್ಕೆ;
ಶ್ರೀಸನ್ನಿಧಿಯಿಂದ
ಕಾಂತಿ ಆತ್ಮಕ್ಕೆ;
ದೇವಪ್ರಭೆಯಲ್ಲಿ
ನಿಂತುಕೊಂಡಿರು.
ಪ್ರೇಮಸಿಂಧುವಲ್ಲಿ
ಐಕ್ಯವಾಗಿರು.

4. ಹುಳ ಕೊರೆದಾಗ
ಮರ ಬಾಳದು;
ಕಪಟವಿದ್ದಾಗ
ಭಕ್ತಿ ಹೆಚ್ಚದು.

ಇಂದ್ರಿಯಂಗಳನ್ನು
ಬಿಗಿ ಹಿಡಿದು,
ಗುಪ್ತ ಬಂಧವನ್ನು
ಹೋಗಲಾಡಿಸು.

5. ಯೇಸುಜ್ಯೋತಿಯಲ್ಲಿ
ನಡೆಯುತ್ತಿರು;
ಯೇಸುಕಿವಿಯಲ್ಲಿ
ಪಾಪ ತಿಳಿಸು.
ಯೇಸುರಕ್ತದಲ್ಲಿ
ಮನಶ್ಶುದ್ಧಿಯು;
ಯೇಸುಐಕ್ಯದಲ್ಲಿ
ಜಯ ಶಕ್ತಿಯು.

6. ಹೀಗೆ ಬೇರು ಸಲೆ
ಊರಿಕೊಳ್ಳಲು,
ದಿವದಿಂದ ಮಳೆ
ಸುರಿಯುತ್ತಲು,
ಆತ್ಮಕ್ಕೆ ಆಹಾರ
ದೊರಕುತ್ತಲು,
ಮರವಿನ್ನು ಭಾರ
ಫಲ ಕೊಡೊದು.

೨೬೮

Mel. Warum sind der Tränen.
M. T. 114.

1. ಶೋಧನೆಯು ಬಂತು
ಎಂದು ಕಂಡರೆ
ಅದರಲ್ಲಿ ಅಂತು
ಸೋತು ಹೋಗದೆ,
ಶೂರನಾಗಿ ನಿಲ್ಲು,
ಹೊರನಾಡುತಾ,
ದಿವ್ಯ ಬಲದಲ್ಲು
ಜಯ ಹೊಂದುತಾ!

2. ನಿನ್ನ ಮೇಲೆ ಕಷ್ಟ
ಭಾರ ಬೀಳಲು,
ಅಂಜಿ ಧೈರ್ಯಭ್ರಷ್ಟ
ಆಗ ಬಾರದು!
ಶಕ್ತಿಯುಳ್ಳ ಬೆನ್ನು
ಹೊರೆ ತಾಳೊದು.
ಹೊರುವಲ್ಲಿ ಇನ್ನು
ತ್ರಾಣ ಹೆಚ್ಚೊದು.

3. ವೈರಿ ಹಾದಿಯಲ್ಲಿ
ಉರುಲೊಡ್ಡಲು,
ನೀನು ಅದರಲ್ಲಿ
ಬೀಳ ಬಾರದು!
ಅವನು ಅಭ್ಯಂತ್ರ
ಮಾಡುತ್ತಿದ್ದರು
ಸಾಗದೀ ಕುತಂತ್ರ;
ಜಯ ನಮ್ಮದು.

೨೬೮

Wer will ein Jünger Jesu sein.
M. T. 143.

1. ಯಾವಾತ ಕ್ರಿಸ್ತಸೈನ್ಯದಿ
ಸೇರಿದ್ದು, ಯುದ್ಧವ
ಸುಧೈರ್ಯದಿಂದ ಸಹಿಸಿ
ಹೋರಾಡ ಬರುವ?
ಅಂಥವ ಸೇರಲಿ
ಆ ರಣರಂಗದಿ!
ಚೆನ್ನಾಗಿ ಲಕ್ಷ್ಯವಿಡಲಿ
ಸೈನ್ಯೇಶವಾಕ್ಯದಿ!

2. ಲೋಕಾನುಭೋಗ ಸಿಕ್ಕೀತು
ಈ ಸೈನ್ಯ ಸೇರಲು
ಎಂದೆಣಿಸಿದರಾದೀತು
ಅಘೋರ ಮೋಸವು.
ಶರೀರಸುಖವು,
ಪ್ರಖ್ಯಾತ ಹೆಸರು,
ಈ ಲೋಕದಂತೆ ವೈಭವ
ಕೊಟ್ಟಾನೊ ಅರಸ?

3. ಮೈಗಳ್ಳನಿರ ಕೂಡದು
ಈ ಘನಸಂಘದಿ!
ಸೋಮಾರಿಯನ್ನು ತೆಗೆದು
ಬಿಟ್ಟಾರು ಹಾಸ್ಯದಿ.
ಹುಶಾರಿ ಎಲ್ಲರು
ಇಲ್ಲಿದ್ದು ಗೈವರು,
ಆಯಾಸ ಬೇಸರಿಲ್ಲದೆ,
ತವಿಶ್ರಾಮಶನಪ್ಪಣೆ.

4. ನಿಶಾನಿ ಉಂಟೀ ಸೈನ್ಯಕು
ಕೆಂಪಾಗಿ ಮೆರ್ಯುತಾ;
ಈ ಧ್ವಜ ಕಡೆಗೆಲ್ಲರು
ಬರುತ್ತಾರೋಡುತಾ.
ಕ್ರೂಜೇಲಿ ಕ್ರಿಸ್ತನು
ಸ್ವರಕ್ತ ಕೊಟ್ಟನು.
ಈ ಕ್ರೂಜೆ ಪ್ರತಿಯೊಬ್ಬಗು
ವಿಜಯಧ್ವಜವು.

5. ನೀನೀಗ ಕ್ರಿಸ್ತಸೈನಿಕ
ಗುರಾಣಿ, ಖೇಡ್ಯವು,
ಇಬ್ಬಾಯಿಕತ್ತಿ, ಕವಚ,
ಇವನ್ನು ಧರಿಸು!
ಸದ್ವೇದಜ್ಞಾನವು,
ಸುನೀತಿ, ಜಪವು,
ವಿಶ್ವಾಸ, ತಾಳ್ಮೆ ನಿನಗೆ
ಶಸ್ತ್ರಾಸ್ತ್ರ ನಿಜವೆ.

6. ದುರ್ವೈರಿಗುಂಪು ದೊಡ್ಡದು
ಎಷ್ಟೋ ಭಯಂಕರ!
ಸದ್ಭಕ್ತಮುಂದೆ ಸಣ್ಣದು,
ಮಹಾ ಶಾಂತಿಕರ!
ಪಾತಾಳರಾಜನು,
ಪ್ರಾರಂಭದುಷ್ಟನು
ನಿನ್ನಾತ್ಮ ಕೊಂದು ಹಾಕುವ
ಪ್ರಯತ್ನ ಮಾಡುವ.

7. ತನ್ನುರಿಬಾಣ ಎಸೆದು
ನಿನ್ನೆದೆ ಕಡೆಗೆ,
ನೀ ನಿದ್ರೆ ಮಾಡುತಿರಲು,
ಬಂದಾನು ಫಕ್ಕನೆ.
ನೀ ನಿದ್ರೆ ತಿಳಿದು,
ಶೂರಾತ್ಮನಾಗಿದ್ದು,
ಚೆನ್ನಾಗಿ ಹೋರದಿದ್ದರೆ,
ಸೋತ್ಹೋದೀ ತಪ್ಪದೆ.

8. ಈ ಕೆಟ್ಟ ಲೋಕ ತಂತ್ರದಿ
ಉಲ್ಲೋರ್ಡಿ ಹೊಂಚೊದು ;
ನಿನ್ನನ್ನು ಮೋಸಗೊಳಿಸಿ,
ಕೆಟ್ಹೋಗ ಮಾಡೊದು ;
ಬೇರೊಂದು ಸಮಯ
ಹಿಂಸಾದಿ ಭಯವ
ಪ್ರಯೋಗ ಮಾಡಿ, ನಿನ್ನನು
ಸ್ವಾಧೀನ ಮಾಡೊದು.

9. ಒಮ್ಮೊಮ್ಮೆ ತಾಪತ್ರಯವು,
ರೋಗಾದಿ ದುಃಖವು,
ಆಪತ್ತು, ಬಡತನವು
ಬಂದೊದಗುವವು.
ವಿಶ್ವಾಸ ಕುಂದುತಾ,
ಪ್ರೀತ್ಯಗ್ನಿ ನೊಂದುತಾ,
ಸದ್ಭಕ್ತಿ ಹೋಗೆ, ಮರಣ
ಬಂತೆಷ್ಟೊ ಹತ್ತರ !

10. ವಿಶ್ವಾಸದಲ್ಲಿ ಊರುತ್ತಾ,
ಪೌರುಷ ತೋರಿಸು !
ಪ್ರಾಣಾತ್ಮನಾಗಿ ಹೋರುತಾ,
ಎಚ್ಚತ್ತುಕೊಂಡಿರು !
ನಿನ್ನೀಶ ಬೇಗನೆ
ನಿನ್ನಡಿ ಕೆಳಗೆ
ವೈರಾಳುಗುಂಪು ಜಜ್ಜೊಸು,
ವಿಜಯ ಕೊಡೊನು.

11. ಪ್ರತ್ಯೊಬ್ಬ ನಂಬಿಗಸ್ತನು
ಹೋರಿದನಂತರ,
ಆ ಲೋಕದಲ್ಲಿ ಹೊಂದ್ವನು
ಅತ್ಯಂತ ಸಂಬಳ.
ಎಲೋ, ಸುದಾಸನೆ !
ಎಂದ್ಹೇಳಿ ಆತಗೆ,
ಭಂಗಾರದ ಕಿರೀಟವ
ಕೊಡೋನೀ ಅರಸ.

12. ಶ್ರೀ ಯೇಸು ! ನಿನ್ನ ಸೈನ್ಯಕೆ
ನಾ ಸೇರ ಬಂದೆನು.
ಸ್ವಕೀಯ ಪರಿವಾರಕೆ
ನನ್ನನ್ನು ನೇಮಿಸು !
ಈ ಯುದ್ಧದೊಳಗೆ
ನಾ ಧೈರ್ಯ ಬಿಡದೆ
ಹೋರಾಡಿ, ಜಯ ಹೊಂದಲು,
ಕರ್ತಾ, ನೀ ನಡಿಸು !

7. ದೇವಪ್ರಾರ್ಥನೆ

೨೭೦

Ach bleib' mit deiner Gnade.
M. T. 6.

1. ಕ್ರಿಸ್ತ್ಯೇಸು, ದಯವಿಟ್ಟು
ನಮ್ಮಲ್ಲಿ ವಾಸಿಸು!
ಆಗೆಲ್ಲ ಭಯ ಬಿಟ್ಟು
ಸಂಧ್ಯೆಯರ್ಗೊಂಬೆವು.

2. ನಮ್ಮೀಶ, ನಿನ್ನ ಮಾತು
ಪೂರೈಸಿ ಸಲಹು!
ಅದಿರಲೆಮ್ಮ ಧಾತು
ಎಂದೆಂದೂ ಕುಂದದು.

3. ನೀ ಸೂರ್ಯ, ನಿನ್ನ ಕಾಂತಿ
ನಮ್ಮಲ್ಲಿ ಸುರಿಸು!
ಅದೆಸೆವಾಗ ಭ್ರಾಂತಿ
ಏನೊಂದು ಹತ್ತದು.

4. ಈಯ್ ನಿನ್ನ ಆಶೀರ್ವಾದ,
ಸುಧನಿ, ಸರ್ವಥಾ!
ಈಯ್ ಮಿಗುಮಿಗಿಲಾದ
ಐಶ್ವರ್ಯವರವಾ!

5. ವೀರೇಶ, ನೀ ಸಹಾಯ
ಕೊಟ್ಟೆಮ್ಮ ಪಾಲಿಸು!
ಅರ್ಯಂಬುಗಳ ಗಾಯ,
ನೀನಿರೆ, ತಾಗದು.

6. ನೀ ಕೊಟ್ಟ ಭಾಷೆಯನ್ನು
ಈಡೇರಿಸರಸೆ!
ವಿಶ್ವಾಸಶೀಲವನ್ನು
ಕೊಡೆಲ್ಲ ಕಾಲಕೆ.

7. ಮೃತೀಲಿಯೂ ವಿಶ್ರಾಂತಿ
ತಾ ಒಡ ಪಾಪಿಗೆ!
ನಿಂಗಾಗಲಿನ್ನು ಶಾಂತಿ
ಎಂದನ್ನು, ಯೇಸುವೇ!

೨೭೧

Lord, I hear of showers of
blessing.—M. T. 303.

1. ಎಲ್ಲಾ ಒಳ್ಳೇ ದಾನಗಳ
ಮೂಲಕರ್ತ ದೇವರೇ!
ನಿನ್ನ ದಿವ್ಯ ಆಶೀರ್ವಾದ
ದಯಮಾಡು ನನಗೆ!
ನನಗೆ, ನನಗೆ,
ದಯಮಾಡು ನನಗೆ!

2. ಪಾಪಿಯಾಗಿದ್ದೇನೆ ಹೌದು,
ಯೋಗ್ಯನಲ್ಲ, ತಂದೆಯೇ!
ಕ್ರಿಸ್ತಗಾಗಿ ಕ್ಷಮೆಯನ್ನು
ದಯಮಾಡು ನನಗೆ!
ನನಗೆ . . . . .

3. ನಿನ್ನ ಮೇಲೆ ಭರವಸ
ಇಟ್ಟಿದ್ದೇನೆ, ಯೇಸುವೇ!
ನಿನ್ನ ಸ್ಥಿರ ಸಮಾಧಾನ
ದಯಮಾಡು ನನಗೆ!
ನನಗೆ . . . . .

4. ಜ್ಞಾನ, ಶಕ್ತಿ, ಸತ್ಯಶಾಂತಿ
ಕೊಡುವಂಥ ಆತ್ಮನೇ!
ನನ್ನ ಆತ್ಮದಲ್ಲಿ ಶಕ್ತಿ
ದಯಮಾಡು, ಸ್ವಾಮಿಯೇ!
ನನಗೆ . . . . .

5. ಅತಿಶಯ ಕೃಪೆಯನ್ನು
ಪಾಲಿಸುವ ಪ್ರಭುವೇ!
ತಳ್ಳ ಬೇಡ ಪಾಪಿಯನ್ನು,
ದಯಮಾಡು ನನಗೆ!
ನನಗೆ . . . . .

೨೭೨

Ach Gott, gedenke mein.
M. T. 120.

1. ದೇವಾ, ನೀ ನೆನಸು!
ನಿನ್ನಾತುಕೊಂಡಿದ್ದೇನೆ.
ನಾ ಮೊರೆ ಇಡಲು,
ನಿರ್ಭೀತನಾಗಿದ್ದೇನೆ.
ಸಂಕಷ್ಟ ಬಂದರು,
ಅಧೈರ್ಯ ಪಡೆನು;
ಗಟ್ಟ್ಯಾಗಿ ಕೂಗುವೆ—
ನನ್ನನ್ನು ನೆನಸು!

2. ದೇವಾ, ನೀ ನೆನಸು!
ಕೃಪಾಳು, ಪ್ರಿಯ ತಂದೆ,
ಕಾಪಾಡು! ನಿನ್ನನು
ಆಶ್ರೈಸಿಕೊಳ್ಳ ಬಂದೆ.
ಈಗೇನು ಕಡಿಮೆ?
ಸಂತೃಪ್ತನಾದೆನು;
ಇದೊಂದೆ ಭಾವನೆ—
ನನ್ನನ್ನು ನೆನಸು!

3. ದೇವಾ, ನೀ ನೆನಸು!
ಮಹಾಪರಾಧಿಯಾದೆ.
ನಿನ್ನಾಜ್ಞೆ, ತಂದೆಯೆ,
ನಾ ಮೀರಿ, ದೂರವಾದೆ.
ನಾ ಕೆಟ್ಟೆನಾದರು,
ಕ್ರಿಸ್ತ್ಯೇಸು ಶುದ್ಧನು;
ನಂಗಾತ ರಕ್ಷಕ!
ನನ್ನನ್ನು ನೆನಸು!

4. ದೇವಾ, ನೀ ನೆನಸು!
ನನ್ನೆಲ್ಲ ಸಾಲವನ್ನು
ಕ್ರಿಸ್ತ್ಯೇಸು ತೀರಿಸಿ,
ಅಶುದ್ಧ ಪಾಪಿಯನ್ನು
ವಿಮೋಚಿಸಿಹನು.
ನನ್ನಾಪ್ತ ಯೇಸುವು
ನಿನ್ನಾಪ್ತನಲ್ಲವೋ?
ನನ್ನನ್ನು ನೆನಸು!

5. ದೇವಾ, ನೀ ನೆನಸು!
ಆಪತ್ತು ಬರುವಾಗ
ನೀನೆನ್ನ ಬಿಡದೆ,
ಜೀವಾಂತ್ಯ ಮುಟ್ಟಿದಾಗ
ಕಟಾಕ್ಷ ತೋರಿಸಿ,
ನನ್ನಾತ್ಮ ಉಳುಹು!
ಕಡೇ ಸಂಕಷ್ಟದೊಳ್
ನನ್ನನ್ನು ನೆನಸು!

6. ದೇವಾ, ನೀ ನೆನಸು!
ನೀ ನಿಜ ನೆಪ್ಪುಗಾರ!
ಕ್ರೂಜೇಲಿ ಕಳ್ಳನು
ನೀ ನುಡಿದಾ ಪ್ರಕಾರ
ಪರ್ದೈಸ ಸೇರಿದ
ವಿಮುಕ್ತಿ ಪಡೆದು.
ನನ್ನನ್ನು ಹಾಗೆಯೆ,
ದೇವಾ, ನೀ ನೆನಸು!

7. ದೇವಾ, ನೀ ನೆನಸು!
ನಿನ್ನಾತುಕೊಂಡಿದ್ದೇನೆ.
ನಾ ಮೊರೆ ಇಡಲು,
ನಿರ್ಭೀತನಾಗಿದ್ದೇನೆ.
ಸಂಕಷ್ಟ ಬಂದರು,
ಅಧೈರ್ಯ ಪಡೆನು;
ಗಟ್ಟ್ಯಾಗಿ ಕೂಗುವೆ—
ನನ್ನನ್ನು ನೆನಸು!

೨೭೩

Ach Gott, verlass mich nicht.
M. T. 120.

1. ಕೈ ಹಿಡಿ, ದೇವರೇ!
ನೀ ಬಿಡ ಬೇಡ, ಅಯ್ಯ!
ನನ್ನನ್ನು ಕಡೆಗೆ
ಸೌಭಾಗ್ಯಕ್ಕೈದಿಸಯ್ಯ!
ಅನಾದಿ ಭಾಸ್ಕರ!
ಅನಂತ ಪ್ರೀತಿಯೇ!
ಕೃಪಾಳು ಒಡೆಯ!
ಕೈ ಹಿಡಿ, ದೇವರೇ!

2. ಕೈ ಹಿಡಿ, ದೇವರೇ!
ವಿಶ್ವಾಸದೃಢವನ್ನು
ನನ್ನಲ್ಲಿ ಹುಟ್ಟಿಸು!
ಭಯಸ್ಥ ಭಕ್ತನನ್ನು
ಸಂತೋಷ ಪಡಿಸು!
ಸಮಸ್ತ ಪಾಪಕೆ
ನೀ ತಪ್ಪಿಸೆನ್ನನು!
ಕೈ ಹಿಡಿ, ದೇವರೇ!

3. ಕೈ ಹಿಡಿ, ದೇವರೇ!
ಹೃದಂತರಂಗದಿಂದ
ನಾ ಬೇಡಿ, ಸುಯ್ಯುವೆ.
ಕಟಾಕ್ಷಪೂರ್ತಿಯಿಂದ
ಸಹಾಯ ಕಳುಹು!
ಸಂಕಷ್ಟಶೋಧನೆ
ನನ್ನನ್ನು ಮುತ್ತಲು
ಕೈ ಹಿಡಿ, ದೇವರೇ!

4. ಕೈ ಹಿಡಿ, ದೇವರೇ!
ಅಧೀನ ಪುತ್ರನನ್ನು,
ನೀ, ತಂದೆ, ಪಾಲಿಸು!
ನಾ ಗೆಯ್ವ ಕೃತ್ಯವನ್ನು
ಚನ್ನಾಗಿ ಸಾಗಿಸು!
ದಯಾಳು ಪಿತನೇ,
ನಂಗೊಲ್ದು, ಸಲಹು!
ಕೈ ಹಿಡಿ, ದೇವರೇ!

5. ಕೈ ಹಿಡಿ, ದೇವರೇ!
ಸದ್ಭಕ್ತಶೀಲವನ್ನು
ನನ್ನಲ್ಲಿ ನಿರ್ಮಿಸಿ,
ಅನಂತ ಮುಕ್ತಿಯನ್ನು
ಈಯ್ ನಿನ್ನ ಮಗಗೆ!
ನಿನ್ನನ್ನು ನಂಬುವೆ
ನಿರಂತಕಾಲಕೆ.
ಕೈ ಹಿಡಿ, ದೇವರೇ!

೨೭೪

So nimm denn meine Hände.
M. T. 257.

1. ಕೈ ನೀಡು, ಸರ್ವತ್ರಾಣಿ!
ಸೋತ್ಹೋಗುತೆ
ಈ ಬಡ ನರಪ್ರಾಣಿ
ತನ್ನಷ್ಟಕೆ.
ಇನ್ನೆನ್ನ ಜೊತೆಯಲ್ಲಿ
ನೀ ಬಂದರೆ,
ಸೇರೇನು ಅಂತ್ಯದಲ್ಲಿ
ಸಂಜೀವಕೆ.

2. ನನ್ನಲ್ಪ ಭಕ್ತಿಯನ್ನು
ಸಂವರ್ಧಿಸು!
ಅಸ್ಥಿರ ಚಿತ್ತವನ್ನು
ನೆಲೆಗೊಳ್ಳಿಸು!
ನಿನ್ನಾತ್ಮತ್ರಾಣದಿಂದ
ವಿಜೈಸುವೆ;
ಶತ್ರುಂಗಳೆಲ್ಲರಿಂದ
ಪಾರಾಗುವೆ.

3. ನಾ ಸುಖದುಃಖದಲ್ಲಿ
ನಿನ್ನೊಂದಿಗೆ
ಪ್ರಯಾಣ ಮಾಡಿ, ಅಲ್ಲಿ
ವಿಶ್ರಮಿಪೆ.
ಈ ಬಡ ನರಪ್ರಾಣಿ
ಬಿನ್ನೈಸೋದು —
ಕೈ ನೀಡು, ಸರ್ವತ್ರಾಣಿ!
ಐ, ದಾಟಿಸು!

೨೭೫

So lang ich hier noch walle.
M. T. 7.

1. ಈ ಭೂಸಂಚಾರದಲ್ಲಿ
ನಾ ಜಪಿಸುವೆನು —
ಸಮಸ್ತ ಸ್ಥಿತಿಯಲ್ಲಿ
ಉದ್ಧರಿಸೆನ್ನನ್ನು!

2. ನಾ ರಾತ್ರಿ ನಿದ್ದೆ ಮಾಡಿ
ಮುಂಜಾನೆ ಏಳಲು,
ಯಾವಾಗಲೂ ಕಾಪಾಡಿ
ಉದ್ಧರಿಸೆನ್ನನ್ನು!

3. ಉದ್ಯೋಗಕಷ್ಟದಲ್ಲೂ
ನೀ ನಡಿಸೆನ್ನನ್ನು!
ಸಂಸಾರಚಿಂತೆಯಲ್ಲೂ
ಉದ್ಧರಿಸೆನ್ನನ್ನು!

4. ದುರಿಚ್ಛೆ ಆಶೆಯಿಂದ
ಗಂಡಾಂತ್ರವಾಗಲು,
ನೀ, ಕರ್ತಾ, ದಯದಿಂದ
ಉದ್ಧರಿಸೆನ್ನನ್ನು!

5. ಕಳಂಕ, ಪಾಪ, ದೋಷ
ನನ್ನಲ್ಲಿ ಕಾಣಲು
ನೀ ತೋರಿಸಾತ್ಮಪೋಷ;
ಉದ್ಧರಿಸೆನ್ನನ್ನು!

6. ನಾ ಧೈರ್ಯಹೀನನಾಗಿ
ಸಂದೇಹ ಪಡಲು,
ನಿನ್ನಾತ್ಮಮೂಲವಾಗಿ
ಉದ್ಧರಿಸೆನ್ನನ್ನು!

7. ನಾ ಕಷ್ಟ ಶ್ರಮೆಯಲ್ಲಿ
ಸುಶಿಕ್ಷೆ ಪಡಲು,
ನೀ ನೆನದದರಲ್ಲಿ
ಉದ್ಧರಿಸೆನ್ನನ್ನು!

8. ಸೈತಾನತಂತ್ರದಿಂದ
ನೀ ಕಾಯಿ ನನ್ನನ್ನು!
ದುಸ್ಸಂಗವೋಸದಿಂದ
ಉದ್ಧರಿಸೆನ್ನನ್ನು!

9. ದುರ್ಬುದ್ಧಿ, ಅವಿವೇಕ,
ಮದ್ಯಾಶೆ ಹುಟ್ಟಲು
ಕೊಡೆನಗಭಿಷೇಕ!
ಉದ್ಧರಿಸೆನ್ನನ್ನು!

10. ನಾ ಮೃತಿಗೆದುರಾಗಿ
ನಿನ್ನನ್ನು ಕೂಗಲು,
ನಿನ್ನೈದು ಗಾಯಕ್ಕಾಗಿ
ಉದ್ಧರಿಸೆನ್ನನ್ನು!

೨೭೬

Herr, habe acht auf mich.
M. T. 60.

1. ಕರ್ತಾ, ನೀನೆನ್ನನ್ನು
ಕಾಪಾಡಿ ರಕ್ಷಿಸು!
ಅಸತ್ಯವೆಲ್ಲ
ಐ, ಹೋಗಲಾಡಿಸು!
ಸಂಪೂರ್ಣ ಛೇದಿಸು
ಸಂಕೋಲೆಯೆಲ್ಲ!

2. ಕರ್ತಾ, ನೀನೆನ್ನನ್ನು
ಕಾಪಾಡಿ ರಕ್ಷಿಸು!
ಕಟಾಕ್ಷದಿಂದ
ನೀ ಶಾಪ ತೆಗೆದು,

ನನ್ನನ್ನು ಶುಚಿಸು
ನಿನ್ನಾತ್ಮನಿಂದ!

3. ಕರ್ತಾ, ನೀನೆನ್ನನ್ನು
ಕಾಪಾಡಿ ರಕ್ಷಿಸು!
ದುರ್ವೈರಿ ಯುಕ್ತಿ
ನಾ ತಿಳಕೊಳ್ಳೆನು.
ನೀನೆಲ್ಲ ಜಯಿಸು!
ಕೊಡೆಂಗೆ ಮುಕ್ತಿ!

4. ಕರ್ತಾ, ನೀನೆನ್ನನ್ನು
ಕಾಪಾಡಿ ರಕ್ಷಿಸು!
ಪ್ರಪಂಚವೆಲ್ಲ
ಸಂಪೂರ್ಣ ತ್ಯಜಿಸ
ಸಹಾಯ ಮಾಡ ಬಾ!
ನೀ ನಡಿಸೆಲ್ಲ!

5. ಕರ್ತಾ, ನೀನೆನ್ನನ್ನು
ಕಾಪಾಡಿ ರಕ್ಷಿಸು!
ಸ್ವಪ್ರೀತಿಯನ್ನು,
ಕಾಮಾದಿ ಗುಣವ
ಕಿತ್ತಾಕ, ರಕ್ಷಕ,
ಈಯ್ ಬಲವನ್ನು!

6. ಕರ್ತಾ, ನೀನೆನ್ನನ್ನು
ಕಾಪಾಡಿ ರಕ್ಷಿಸು!
ಶರೀರ ಪ್ರಾಣ
ನಾ ಕೊಟ್ಟೆ ನಿನಗೆ;
ನಿನ್ನಲ್ಲಿ ಬಾಳುವೆ;
ನೀ ಯಜಮಾನ!

7. ಕರ್ತಾ, ನೀನೆನ್ನನ್ನು
ಕಾಪಾಡಿ ರಕ್ಷಿಸು!
ನಾ ಸಾಯುವಾಗ,
ವೈ ನಿನ್ನ ಲೋಕಕೆ!
ನಾನಲ್ಲಿ ಹಾಡುವೆ
ಆನಂದರಾಗ!

೨೭೭

O Thou from whom all goodness flows.—M. T. 24.

1. ಕಟಾಕ್ಷಮೂಲ, ಕರ್ತನೆ,
ನೀನೆನ್ನ ಆಶೆಯು!
ಸಮಸ್ತ ಕಷ್ಟದೊಳಗೆ
ನನ್ನನ್ನು ನೆನಸು!

2. ಅಘೋರ ಪಾಪಭಾರವ
ನಾ ತಾಳಲಾರೆನು.
ನೀ ಮನ್ನಿಸೈ! ಸುಶಾಂತಿಯ
ಕೊಟ್ಟೆನ್ನ ನೆನಸು!

3. ಜೀವಾತ್ಮಪ್ರಾಣ ಕುಂದುವ
ಸಂಕಷ್ಟ ಹುಟ್ಟಲು,
ದಿನಕ್ಕೆ ತಕ್ಕ ಶಕ್ತಿಯ
ಕೊಟ್ಟೆನ್ನ ನೆನಸು.

4. ಈ ಬಲಹೀನ ದೇಹವ
ರೋಗಾದಿ ತಿನ್ನಲು,
ಸಹಾಯ, ಶಾಂತಿ, ತಾಳ್ಮೆಯ
ಕೊಟ್ಟೆನ್ನ ನೆನಸು!

5. ನಾ ನಿನಗಾಗಿ ನಿಂದೆಯ
ತಾಳೋವನಾದರು,
ಅದೇನು? ನಿನ್ನ ದಾಸನ
ನೀ ಮಾತ್ರ ನೆನಸು!

6. ಅಘೋರ ಸಾವುಗಳಿಗೆ
ಕಡೇಲಿ ಬರಲು,
ನನ್ನನ್ನು ರಕ್ಷಿಸ್ಯೇಸುವೆ!
ನೀ ನನ್ನ ನೆನಸು!

೨೭೮

Nearer, my God, to Thee.
M. T, 255.

1. ಮತ್ತಷ್ಟು ಹತ್ತರ
ನನ್ನ ತಕ್ಕೋ!
ಸುತ್ತಲು ಬಂಧನ!
ಬಿಡಿಸಿಕೋ!
ಮುದ್ದಿನಿಂದಾಗಲಿ
ಬೆತ್ತದಿಂದಾಗಲಿ
ಮತ್ತಷ್ಟು ಹತ್ತರ
ಎಳೆದುಕೋ!

2. ಕಾರ್ಗತ್ತಲಾದರೂ
ಸಾಗುವೆನು.
ಮಾರ್ಗದಿ ನೊಂದರೂ
ಹಾಡುವೆನು.
ನಿಂದೆಯು, ತೊಂದರೆ
ಬಂದರೆ ಬೇಡುವೆ—
ಮತ್ತಷ್ಟು ಹತ್ತರ
ಎಳೆದುಕೋ!

3. ನಿನ್ನಿಚ್ಛೆ ನಿತ್ಯವು
ಉತ್ತಮವೇ;
ತಂದೆಯ ಶಿಕ್ಷೆಯು
ರಕ್ಷಣೆಯೇ.
ಕರುಣೆಯೊಂದಿರೆ
ಕುಂದಿಲ್ಲ ನನಗೆ;
ಮತ್ತಷ್ಟು ಹತ್ತರ
ಎಳೆದುಕೋ!

4. ಇಲ್ಲಿಯ ಡಂಭವ
ತ್ಯಜಿಸಿದೆ;
ಅಲ್ಲಿಯ ಭಾಗ್ಯವ
ಹಂಬಲಿಪೆ.
ಪಾಲಿಸು, ದೇವರೇ!
ಲಾಲಿಸೀ ಪ್ರಾರ್ಥನೆ—
ಮತ್ತಷ್ಟು ಹತ್ತರ
ಎಳೆದುಕೋ!

೨೭೯

Mit tausend Gaben.—M. T. 54.

1. ಕರುಣಾವುಳ್ಳ,
ಮಹಿಮೆಯುಳ್ಳ
ದೇವರೆ, ನನ್ನ
ಬಿನ್ನಹವನ್ನ

ಲಾಲಿಸು! ಪ್ರಿಯ ತಂದೆಯೆ,
ಪಾಲಿಸಾತ್ಮವ ಮಗನಿಗೆ!

2. ಬೇಡುವ ನನ್ನ
ಹೃದಯವನ್ನ
ಸಂತಸದಲ್ಲಿ
ಯೇಸುವಿನಲ್ಲಿ
ಸೇರಿಸು ಬೇಗ! ತಂದೆಯೆ,
ಪಾಲಿಸಾತ್ಮವ ಮಗನಿಗೆ!

3. ಆತನು ಬಳ್ಳಿ,
ಕುಡಿಗಳಲ್ಲಿ
ಕ್ರಿಸ್ತನ ಸಾರ
ಏರಲು, ಭಾರ
ಫಲವು ನಿಜ್ಜ ಬಾರದೆ?
ಪಾಲಿಸಾತ್ಮವ ಮಗನಿಗೆ!

4. ಕ್ರಿಸ್ತನ ಭಕ್ತಿ,
ಕ್ರಿಸ್ತನ ಶಕ್ತಿ
ಫಲಗಳಲ್ಲಿ
ಮೆರೆಯುವಲ್ಲಿ
ನಿನಗೆ ಸ್ತೋತ್ರ, ತಂದೆಯೆ!
ಪಾಲಿಸಾತ್ಮವ ಮಗನಿಗೆ!

೨೮೦

O Durchbrecher aller Bande.
M. T. 153.

1. ಎಂದಿಗೂ ಸಮೀಪವಾದ
ಸರ್ವಬಂಧ ಹರನೆ,
ನಿತ್ಯಸುಖಪೂರ್ತಿಯಾದ
ಬುಗ್ಗೆ ನೀನೆ ನಮಗೆ!
ಮಾಡಿಬಿಡು ಅಂತ್ಯವನ್ನು
ನಮ್ಮ ಹಳೆ ಬುದ್ಧಿಗೆ!
ತಪ್ಪಿಸೆಮ್ಮ ಸೆರೆಯನ್ನು,
ಕರುಣಾಬ್ಧಿ ದೇವರೆ!

2. ತಂದೆ ಕೊಟ್ಟ ಮಂದೆಯಲ್ಲಿ
ಸಾಯದೊಂದೂ ಕುರಿಯು;
ಭಕ್ತರೆಲ್ಲ ರಾಜ್ಯದಲ್ಲಿ
ಸೇರಿ, ಹರ್ಷಗೊಂಬರು.
ಕಾರ್ಯ ತೀರಿಸೋದಕಾಗಿ
ಶುದ್ಧ ಪ್ರಾಯಶ್ಚಿತ್ತವ
ನಮ್ಮ ಪಾಪಗಳಿಗಾಗಿ
ಯೇಸು ಸತ್ತು ಮಾಡಿದ.

3. ನಮ್ಮ ಆತ್ಮಸಿದ್ಧಿ ಗೆಯ್ಯ
ನಿನ್ನ ಚಿತ್ತ ಸ್ಥಿರವೆ;
ಸುಖನಿಧಿ ನಿನ್ನಲಯ್ಯ
ನೆಲೆಯಾಗಿರುತ್ತವೆ.
ಕ್ರೂರಜೆವರ್ತಮಾನಕಾಗಿ
ಲೋಕವೆಲ್ಲ ಬೈದರು,
ನೀನು ಮಿತ್ರನಿರಲಾಗಿ
ನಮಗೇನು ಚಿಂತೆಯು?

4. ನೋಡು! ಬಂಧದಲ್ಲಿದ್ದೇವೆ;
ನಾವು ನೀಚ ದಾಸರು.
ಮೂಲ್ಗಿ, ಕೂಗಿ, ಬೇಡುತ್ತೇವೆ—
ನಮ್ಮ ನೊಗ ತಪ್ಪಿಸು!

ಈ ಪ್ರಪಂಚಸೇವೆಯನ್ನು
ಮಾಡೋದೆಷ್ಟೊ ಕಷ್ಟವು!
ನಿನ್ನ ಮುಕ್ತಿಕಾರ್ಯವನ್ನು
ನಮ್ಮಲನುಕೂಲಿಸು!

5. ನಮ್ಮ ದುಷ್ಟ ವೈರಿಯನ್ನು
ನೀಸು ಜೈಸು, ಕರ್ತನೆ!
ಕೊಡು ಹೊಸ ಬಲವನ್ನು
ಕುಂದಿ ಹೋದ ನಮಗೆ!
ಹೋಗಲ್ಯೆ ಮನುಷ್ಯಸ್ನೇಹ!
ಹೋಗು, ನರಭಯವೇ!
ಹೋಗಲ್ಯೆ ಮನಸ್ಸಂದೇಹ!
ಹೋಗು, ಮಾಂಸಪ್ರೀತಿಯೇ!

6. ಕರ್ತ, ಮುರಿ, ಜಜ್ಜು, ಕುಟ್ಟು
ಅಂಧಕಾರಶಕ್ತಿಯ!
ನಿನ್ನ ಪ್ರೀತಿಯಿಂದ ಸುಟ್ಟು
ಹಾಕು ನಮ್ಮ ಪಾಪವ!
ಸರ್ಪಬೀಜವಂ ಬಿಸಾಡು
ಅಗ್ನಿಕುಂಡದೊಳಗೆ!
ತಂದೆಮನೆ ಸಿದ್ಧ ಮಾಡು
ಭಕ್ತಸಮುದಾಯಕೆ!

7. ನಮ್ಮ ಮಾಂಸಕುಪಚಾರ
ಇಹದಲ್ಲಿ ಬೇಡವು.
ನಿನ್ನ ಚಿತ್ತಕನುಸಾರ
ಮಾತ್ರ, ಕರ್ತ, ನಡಿಸು!
ನಿನ್ನ ಬಾಯ್ಯ ಸತ್ಯ ಮಾತು
ಪೂರ್ತಿಯಾಗೊ ವರೆಗೆ
ನಮ್ಮ ಆತ್ಮ ನಿನ್ನನಾತು-
ಕೊಂಡು ದೃಢವಾಗಿದೆ.

8. ರಾಜ, ನಿನ್ನ ರಾಜ್ಯವಾಳು!
ನಿನ್ನ ಪ್ರಜೆ ಸಲಹು!
ಸರ್ವಪ್ರಭುವಾಗಿ ಬಾಳು
ಘನದಿಂದ ನಿತ್ಯವು!
ಭಾರ ಹೊತ್ತು, ಒಂದು ದಾನ
ಬೇಡುತೇವೆ, ಯೇಸುವೆ!
ನಿಜಮುಕ್ತಿವಾಸಸ್ಥಾನ
ತೋರ ಮಾಡು ನಮಗೆ!

9. ಕೊಂಡುಕೊಂಡಿ ಭಕ್ತರನ್ನು
ನೀನಮೂಲ್ಯ ಕ್ರಯಕೆ;
ನಿನ್ನ ಕ್ರೂಜೆಫಲವನ್ನು
ಕೊಡು ನಿನ್ನ ಸಭೆಗೆ!
ನಿನ್ನ ರೂಪಕವರನ್ನು
ಸರಿಯಾಗಿ ರೂಪಿಸು!
ನಿನ್ನ ಆತ್ಮಪೂರ್ತಿಯನ್ನು
ಕೊಟ್ಟು ತೃಪ್ತಿಗೊಳಿಸು.

10. ಪ್ರೀತಿ, ನಿನ್ನ ಸಭ್ಯರನ್ನು
ಕೃಪೆಯಿಂದ ಸಲಹಿ,
ಪರದೈಸಸುಖವನ್ನು
ಅಂತ್ಯದಲ್ಲಿ ಕೊಡುವಿ.
ಹೊಂದಿ ಜಯಕೀರ್ತಿಯನ್ನು
ನಿನ್ನ ಐಕ್ಯ ಸೇರಲು,
ನಾವು ಶುಭ ಸ್ವಪ್ನವನ್ನು
ಕಂಡ ಹಾಗೆ ಇರ್ವೆವು.

೨೮೧

Mel. Wer nur den lieben Gott lässt walten.—M. T. 89.

1. ನಾ ಕುರಿ, ದಾರಿ ತಪ್ಪಿದ್ದೇನೆ;
ನೀ, ಕ್ರಿಸ್ತ, ಒಳ್ಳೇ ಕುರುಬ!
ನನ್ನೆಲ್ಲ ಪಾಪ, ಕಷ್ಟ, ಬೇನೆ
ನೀ ನೋಡಿ, ಬಿಟ್ಟು ದಿವವ,
ಈ ನರಲೋಕಕಿಳಿದಿ.
ಸಂಸ್ತುತಿ ನಿನಗಾಗಲಿ!

2. ಈ ಪಾಪಲೋಕಕಾಡಿನಲ್ಲಿ
ನಾನಲೆದಾಡುತ್ತಿದ್ದೆನು;
ಸೈತಾನನಿಟ್ಟ ಬಲೆಯಲ್ಲಿ
ಒದ್ದಾಡಿ ಸಾಯುತಿದ್ದೆನು;
ನೀ ನೋಡಿ, ಪಟ್ಟು ಕರುಣ,
ಪೂರಾಗಿ ಬಿಚ್ಚಿದೆನ್ನನ.

3. ಪ್ರಪಂಚವ್ಯವಹಾರದಲ್ಲಿ
ಸಂಗೀಯು ನಿನ್ನ ಕಾಂತಿಯು!
ಸಮಸ್ತ ನನ್ನ ಮಾರ್ಗದಲ್ಲಿ
ನೀನಾಗು ನನ್ನ ನಾಯಕ!
ನೀ ಕೊಟ್ಟ ವಾಕ್ಯದಂತೆಯೇ
ಇರೆಂದು ನನ್ನ ಹತ್ರವೇ!

4. ಕ್ರಿಸ್ತ್ಯೇಸು, ಹಣದಾಶೆಯನ್ನ
ವಿನಾಶಿಸೆನ್ನ ಮನದೊಳ್!
ನಿನ್ನತಿಶುದ್ಧ ಮನಸನ್ನ
ನೀ ಹುಟ್ಟಿಸೆನ್ನ ಹೃದದೊಳ್!
ಸಂಪೂರ್ಣ ನಾನು ಹೊಂದಲಿ
ಸಂತೃಪ್ತಿ, ಯೇಸು, ನಿನ್ನಲಿ!

5. ನೀ ರೂಪಿಸಿದಿ ದೇಹವನ್ನು
ಈ ಭೂಮಿಮಣ್ಣಿನಿಂದಲೇ;
ಕುಟುಂಬ ಮಕ್ಕಳೆಲ್ಲರನ್ನು
ನೀ ಕೊಟ್ಟಿ ಕೃಪೆಯಿಂದಲೇ;
ಆಹಾರ ವಸ್ತ್ರ ಉಚಿತ
ಸಿಕ್ಕೋದು, ಯೇಸು, ಖಚಿತ.

6. ಎಂದೆಂದು ತಪ್ಪಲಿಲ್ಲವಲ್ಲ
ನೀ ಕೊಟ್ಟ ದಿವ್ಯ ವಚನ;
ನೀನೆಂದು ಬಿಟ್ಟುಬಿಡಲಿಲ್ಲ
ನಿನ್ನನ್ನು ನಂಬಿದಾತನ;
ಮತ್ತ್ಯಾಕೆ ಧೈರ್ಯಗೆಡಲಿ
ಈ ಘೋರ ಕಷ್ಟಕೊಳ್ಳದಿ?

7. ನಿನ್ನಲ್ಲೆ ನಾನು ನಂಬುತೇನೆ
ಸಮಸ್ತ ನನ್ನ ಕಷ್ಟದಿ;
ವಿಶ್ವಾಸದಿಂದ ಹಾಕುತೇನೆ,
ಶ್ರೀ ಯೇಸು, ನಿನ್ನ ವಾಕ್ಯದಿ
ನನ್ನಾತ್ಮನಾವೆಲಂಗರ;
ಅಲ್ಲ್ಯೆನ್ನ ನಿತ್ಯ ಆಸರ.

8. ನಿಂಗೆನ್ನ ಯೇಸು, ಸ್ತುತಿ ಸ್ತೋತ್ರ
ಭೂಪರಲೋಕಗಳಲ್ಲಿ!
ನನ್ನಾತ್ಮ ದೇಹ ನಿಂಗೆ ಮಾತ್ರ
ಸಂಪೂರ್ಣ ಹೊಂದಿಕೊಳ್ಳಲಿ!
ನನ್ನಂತ್ಯತಾಸು ಬರಲೆ,
ತಕ್ಕೋ ನನ್ನನ್ನು ನಿನ್ನಲೆ!

೨೮೨

Jesu, hilf siegen, du Fürste des Lebens.—M. T. 99.

1. ಆತ್ಮದ ಶತ್ರುವು ವಂಚನೆ
ಯಿಂದ
ನಮಗೆ ಶೋಧನೆ ಮಾಡುವನು;
ಇರುಳು ಹಗಲು ಮೋಸಗಳಿಂದ
ಅವನು ಕಷ್ಟವ ಪಡಿಸಲು,
ಯೇಸುವೆ, ತ್ರಾಹಿ, ಪ್ರಕಾಶವ
ಚಲ್ಲಿ
ಸುತ್ತಲು ಮುಚ್ಚುವ ಕತ್ತಲೆ
ಯಲ್ಲಿ!

2. ನಮಗೆ ಯೌವನಪಾಪಗ
ಳಿಂದ
ಆತ್ಮದ ಸಂಕಟ ಹುಟ್ಟಿರಲು,
ನಿನ್ನ ಸಂರಕ್ಷೆಯ ಪೂರ್ಣತೆ
ಯಿಂದ,
ಯೇಸುವೆ, ಪಾಲಿಸು ಶಾಂತಿ
ಯನು!
ಯೇಸುವೆ, ತ್ರಾಹಿ! ಸಹಾಯಕ
ನಾಗು!
ಮೋಕ್ಷದ ಮಾರ್ಗದಿ ನಾಯಕ
ನಾಗು!

3. ಬಿಡದೆ ನಮಗೆ ಹತ್ತುವ
ಪಾಪ,
ಸಾವಿರ ವಿಧದ ಆಶೆಗಳು
ನಿತ್ಯದಲೆಬ್ಬಿಸಿ ದೇವರ ಶಾಪ,
ಅಧಿಕ ಸಂಕಟ ಪಡಿಸಲು,
ಯೇಸುವೆ, ತ್ರಾಹಿ! ದುರಾಶೆಗ
ಳನ್ನು
ನೊಂದಿಸಿ, ಮಾಡು ವಿಮೋಚನೆ
ಯನ್ನು!

4. ಪ್ರಾರ್ಥನೆ ಮಾಡುವ ಶಕ್ತಿ
ಯು ಕುಂದೆ,
ಎಚ್ಚರ ತಪ್ಪುವ ನಿದ್ದೆಯೊಳು,
ಅರ್ಪಿಸು, ಯಾಜಕ, ದೇವರ
ಮುಂದೆ
ನಿನ್ನ ವಿಜ್ಞಾಪನೆಧೂಪವನು!
ಯೇಸುವೆ, ತ್ರಾಹಿ! ನೀನೆಬ್ಬಿಸೆ
ನ್ನನ್ನು!
ಕಲಿಸು ಸತ್ಯದಿ ಬೇಡುವದನ್ನು!

5. ಕೊನೆಯ ಕದನ ಎಸಗು
ವಲ್ಲಿ,
ಮರಣಸಂಕಟ ಒದಗಲು,
ಬಲವು ದೇಹಪ್ರಾಣಾತ್ಮಗಳಲ್ಲಿ
ಸವೆದು ಸವೆದು ನಿಂತಿರಲು,
ಯೇಸುವೆ, ತ್ರಾಹಿ! ಸಂಪೂರ್ಣ
ವಿಜಯ
ನನ್ನೊಳು ಸಿದ್ಧಿಸಿ ನೀಡು ನಿರ್ಭ
ಯ!

೨೮೩

O Gottes Sohn, du Licht und Leben.—M. T. 187.

1. ಸರ್ವೇಶ ಪುತ್ರ, ಜೀವ, ತೇಜ,
ನೀ ಭಕ್ತರಾತ್ಮಪಾಲನೆ!
ನಾನೆನ್ನ ದೇಹ ಆತ್ಮ ಪ್ರಾಣ
ನಿಂಗೈಯ್ಯ ವಶ ಮಾಡುವೆ.
ನಂಗಾಗಿ ನಾನು ಬಾಳಲಾರೆ,
ನೀನಿಲ್ಲದೆ ನಾ ಹೋಗಲಾರೆ
ಹಾದೀಲಿ ಹೆಜ್ಜ ಮುಂದಕೆ.
ಆಲೈಸಿ ನನ್ನ ಮೊರೆಯನ್ನು
ಸನ್ಮಾರ್ಗದಲ್ಲಿ ನೀನೆನ್ನನ್ನು
ದಿನಾಲು ನಡಿಸೀಶನೆ!

2. ನೀ ನಡಿಸಲು ನಾನು ಬೀಳೆ;
ನೀ ಕಣ್ಣುಸೌಜ್ಞೆಯಿಂದಲೇ
ನಮ್ಮನ್ನು ನಡಿಸುವದಕ್ಕೆ
ವಾಗ್ದಾನ ಕೊಟ್ಟಿಯಲ್ಲವೇ?
ನೀ ದಯವಿಟ್ಟರೆಂಗೆ ಸಾಕು;
ಗುರಾಣಿ ಸೂರ್ಯ ನೀನೆ ಆಗು
ಅಶಕ್ತನಾದ ನನಗೆ!
ಎಲ್ಲಾದರಲ್ಲಿ ನಿನ್ನಾಶ್ರಯ,
ಎಲ್ಲಾದರಲ್ಲಿ ನಿನ್ನ ದಯ
ನಂಗಿರೆ ಮಹಾ ಭಾಗ್ಯವೇ!

3. ಸುಶಾಂತಿಗನುಕೂಲವಾದ
ಸನ್ಮಾರ್ಗ ಯಾವದೆಂಬದು
ನೀ ಮಾತ್ರ ಬಲ್ಲೆ; ನಾಶಕರ
ದುರ್ಮಾರ್ಗಕ್ಕೆನ್ನ ತಪ್ಪಿಸು.
ನಿನ್ನನ್ನು ನಾನು ಬಿಡದಂತೆ,
ಪ್ರಪಂಚಭ್ರಾಂತನಾಗದಂತೆ
ಕಾಪಾಡೆನ್ನನ್ನು ನಿತ್ಯವು!
ಸದೃಢವಾದ ಶಕ್ತಿಯನ್ನು,
ಬಿನ್ನೈಸಲಿಕ್ಕಾಸಕ್ತಿಯನ್ನು
ನನ್ನಲ್ಲಿ, ಕರ್ತ, ಹುಟ್ಟಿಸು!

4. ವಿಧೇಯವಾದ ಬಾಲನಂತೆ
ನಾ ನಿನ್ನ ಚಿತ್ತ ನಿತ್ಯವು
ಸದ್ಭಾವದಿಂದ ಮಾಡುವಂತೆ
ನಿನ್ನಾತ್ಮ ದಯಪಾಲಿಸು!
ನೀನಿಲ್ಲದೆ ಸಂತೋಷ ಎಲ್ಲಿ?
ನಿನ್ನತಿಶ್ರೇಷ್ಠ ನಾಮದಲ್ಲಿ
ನಾನಭಿಮಾನ ಪಡುವೆ.
ಇದೊಂದೆ ನನ್ನ ನಿಜ ಗುರಿ,
ಇದೊಂದೆ ನನ್ನ ಆತ್ಮದುರಿ,
ಇದೊಂದೆ ನನ್ನ ಜೀವಿಕೆ.

5. ದಿನಾಲು ಜಪ ಮಾಡಲಿಕ್ಕೆ
ನಿನ್ನಾತ್ಮ ದಯಪಾಲಿಸು.
ಸದ್ವಾಕ್ಯವನ್ನು ಕೇಳಲಿಕ್ಕೆ
ಸುಮನಸ್ಸನ್ನು ಹುಟ್ಟಿಸು.
ಸುಚಿತ್ತಕ್ಕನುಸಾರವಾಗಿ,
ಸದ್ಭಕ್ತಿಗನುಗುಣವಾಗಿ
ನನ್ನಡಿ ನಡೆ ರೂಪಿಸು.
ನನ್ನಲ್ಲಿ ಹೊಸ ಜೀವವನ್ನು,
ಸುವಾರ್ತಾವಾಕ್ಯಫಲವನ್ನು,
ಸುನಾಥನೇ, ಸಂವರ್ಧಿಸು!

6. ಹೀಗಾದರೆನ್ನ ಭಾಗ್ಯವನ್ನು
ಯಾವಾತ ವರ್ಣಿಸುವನು?
ಸಂಪೂರ್ಣವಾದ ತೃಪ್ತಿಯನ್ನು
ಕ್ರಿಸ್ತ್ಯೇಸು ನಂಗೆ ಕೊಟ್ಟನು.
ವಿಮುಕ್ತವಾದ ನನ್ನ ಮನ
ಯಾವಾಗ್ಯೂ ಸ್ವಾಮಿಸೇವೆ
ಯನ್ನ
ಮಾಡೋದಾನಂದದಿಂದಲೆ.
ಅಸ್ಥಿರ ಲೋಕ ಬೇಡ, ಯೇಸು!
ಮೇಲ್ಲೋಕ ಒಂದೆ ನಂಗೆ ಲೇಸು;
ಅದನ್ನೆ ನಿತ್ಯ ಬಯ್ಸುವೆ.

೨೮೪

Herzlich lieb hab' ich dich, o Herr.—M. T. 197.

1. ಹೃತ್ಪ್ರಿಯನಾದ ಕರ್ತನೆ!
ನನ್ನಿಂದ ದೂರವಾಗದೆ,
ಬಾ, ಬಾ ಸಹಾಯಕಾಗಿ!
ಸದಾ ನಾನೆಲ್ಲಿ ಇದ್ದರು
ಏನೊಂದು ಚಿಂತೆ ಮಾಡೆನು,
ನೀ ಕೃಪೆದೋರಲಾಗಿ.
ಹೃದ್ಗೃಹ ಭಿನ್ನವಾದರು,
ನಿನ್ನಲ್ಲಿ ಸುಖಿಯಹೆನು.
ನೀ ನಿನ್ನ ಶುದ್ಧ ರಕ್ತದಿ
ಸಂರಕ್ಷಿ ಸಿದ್ಧ ಮಾಡಿದಿ.
ಶ್ರೀ ಯೇಸುವೆ,
ನಮ್ಮಾತ್ಮನಾದ ದೇವರೆ,
ಸಂರಕ್ಷಿ ಕೊಡು ನನಗೆ!

2. ಈ ಕೀಳ ಜೀವದೊಳಗೆ
ನಂಗಿರ್ಪದೆಲ್ಲ ನಿನ್ನದೆ;
ದೇಹಾತ್ಮ ನಿನ್ನ ದಾನ.
ಪರಾರ್ಥಕಾಗೀ ದಾನವ
ಪ್ರಯೋಗಿಸಲ್ಕೆ, ಒಡೆಯ,
ಕೊಡೆಂಗೆ ತ್ರಾಣ ಜ್ಞಾನ!
ದುರ್ಬೋಧನಾದಿಮೋಸವ,
ಸೈತಾನ ತಂತ್ರ ಯುಕ್ತಿಯ
ಹೀನೈಸಿ, ಕ್ರೂಜೆ ಹೊರಲು
ನೀನೆನಗುಪದೇಶಿಸು!
ನಾ ಸಾಯಲೆ,
ಆಧಾರವನ್ನು, ಕ್ರಿಸ್ತನೆ,
ನೀ ಕೊಡು ನನ್ನ ಆತ್ಮಕೆ.

3. ಈ ಲೋಕ ಬಿಟ್ಟು ಹೋ
ಗಲು,
ತೀರ್ಪಾಗೊ ದಿನ ವರೆಗು
ಈ ದೇಹ ನಿದ್ದೆಗೆಯ್ಯು
ನೀ ನೇಮಿಸೊಳ್ಳೆ ಸ್ಥಳವ.
ಶ್ರೀ ದೂತರೆನ್ನ ಆತ್ಮವ
ಇಲ್ಲಿಂದ ಬೇಗ ಒಯ್ಯು
ಆಜ್ಞಾಪಿಸೆನ್ನ ಕರ್ತನೆ!
ಕಣ್ಣಾರೆ ನಿನ್ನ ಮಹಿಮೆ
ನಾನಲ್ಲಿ ನೋಡುತಿರ್ಪೆನು.

ಈ ದೇಹ ಶೀಘ್ರ ಎಬ್ಬಿಸು!
ನಾನೆದ್ದರೆ,
ನನ್ನಾಪ್ತ ಕರ್ತ, ನಿನಗೆ
ಅನಂತ ಸ್ತೋತ್ರ ಮಾಡುವೆ.

೨೮೫

Mel. **Fröhlich soll mein Herze springen.—M. T. 138.**

1. ಆಗೊದೆಂದು, ಐ, ಸಹಾಯ?
ಎಂದಿಗು
ತೀರದು
ಈ ಪ್ರಪಂಚಮಾಯ!
ರಕ್ತ ಸೋರುವಂಥ ಗಾಯ
ಹೊಂದಿದೆ;
ಸುಮ್ಮನೆ
ಕಳಕೊಂಡೆ ಪ್ರಾಯ.

2. ತಾಗಿತೆನಗಾ ಸೈತಾನ
ಬಾಣವು;
ಹೋಯಿತು
ಆತ್ಮಸಮಾಧಾನ;
ಸಾಯುತೇನೆ, ಅನ್ನಪಾನ
ಇಲ್ಲದೆ.
ಕರ್ತನೆ,
ಕೊಡು ಒಂದು ದಾನ!

3. ಕ್ರಿಸ್ತ, ನನ್ನ ಜೀವ ಕ್ಷಯ
ಅಹುದು;
ಹುಟ್ಟಿತು
ನರಕಾಗ್ನಿಭಯ,
ಲೋಕದಾಶೆ ಪೂರ್ಣ ಲಯ;
ಕೋರಿಕೆ
ಒಂದದೆ—
ಯೇಸು, ನಿನ್ನ ದಯ!

೨೮೬

Hier legt mein Sinn sich vor dir nieder.—M. T. 282.

1. ಸ್ವಚಿತ್ತದಿಂದ ನಿನ್ನ ಬಿಟ್ಟು
ಸ್ವಮಾರ್ಗದಲ್ಲಿ ಮನಸಿಟ್ಟು
ನಾ ತಪ್ಪಿಹೋದೆ; ನನ್ನನ್ನು,
ಕ್ರಿಸ್ತ್ಯೇಸುವೇ, ಕಟಾಕ್ಷಿಸು!

2. ನನ್ನಘರಾಶಿ ಹೆಚ್ಚಲಾಗಿ,
ಶ್ರೀ ಯೇಸು, ನಿನ್ನ ಘನಕಾಗಿ
ಈ ಭಾರವನ್ನು ನೀಗಿಸು,
ನನ್ನಾತ್ಮವನ್ನು ರಕ್ಷಿಸು!

3. ನಾ ನಿನ್ನ ವಶದಲ್ಲಿದ್ದೇನೆ;
ನಿನ್ನಾಳಿಕೆಗೆ ಮೆಚ್ಚುತ್ತೇನೆ;
ನಿನ್ನಾಜ್ಞೆ ನನಗಿಷ್ಟವೆ;
ಸ್ವಚಿತ್ತವೆಲ್ಲ ಹೋಗಿದೆ.

4. ನಿನ್ನನ್ನು ಪ್ರೀತಿ ಮಾಡುತ್ತೇನೆ,
ಆದಾಗ್ಯೂ ಹೆಚ್ಚು ತಪ್ಪಿದ್ದೇನೆ.
ಕ್ರಿಸ್ತ್ಯೇಸು, ಸ್ಥಿರ ಪ್ರೀತಿಗು
ನನ್ನನ್ನು ಬಲ ಪಡಿಸು!

೨೮೭

Mel. Horch, die Wellen tragen.
M. T. 156.

1. ದೇಹಿ, ದೇಹಿ ಜೀವಪಾನ,
ದೇಹಿ ಜೀವರೊಟ್ಟಿಯ!
ದೇಹಿ, ದೇಹಿ ಆತ್ಮಸ್ನಾನ!
ದೇಹಿ ನೀತಿವಸ್ತ್ರವ!
ದೇಹಿ ಕ್ರೂಜೆವೃಕ್ಷಫಲ
ವಿಷ ತಿಂದ ಪಾಪಿಗೆ!
ದೇಹಿ ಒಂದು ವಾಸಸ್ಥಲ
ಶಾಂತಿಹೀನ ಆತ್ಮಕೆ!

2. ತ್ರಾಹಿ, ತ್ರಾಹಿ, ದಿವ್ಯ ಮಿತ್ರ!
ತ್ರಾಹಿ! ನಾನು ಬಿದ್ದೆನು.
ತ್ರಾಹಿ, ತ್ರಾಹಿ, ಓ ಪವಿತ್ರ!
ತ್ರಾಹಿ! ನಾನು ಸತ್ತೆನು.
ತ್ರಾಹಿ! ನಿನ್ನ ಶ್ರಮದಿಂದ
ಶಾಂತಿ ನಮಗಾಯಿತು.
ತ್ರಾಹಿ! ನಿನ್ನ ಮೃತಿಯಿಂದ
ಹುಟ್ಟಿತೆಮ್ಮ ಜೀವವು.

3. ಜಯ, ಜಯ, ಪ್ರಿಯ ಶೂರ!
ಜಯ, ದೇವಪುತ್ರನೇ!
ಜಯ, ಜಯ, ನೀತಿಸೂರ!
ಜಯ, ನಿತ್ಯ ತೇಜನೇ!
ಜಯ, ಪರಲೋಕದಿಂದ
ಬಂದ ದಿವ್ಯ ರಕ್ಷಕ!
ಜಯ, ಪರಲೋಕದಿಂದ
ಮೇಲಕೇರಿದರಸ!

೨೮೮

Eins ist not!—M. T. 162.

1. ಒಂದವಶ್ಯ! ಒಂದೆ ಅರ್ಥ
ನನಗೀಗ ತಿಳಿಸು!
ಬೇರೆ ಎಲ್ಲ ಆಶೆ ವ್ಯರ್ಥ;
ಬೇರೆ ಸುಖವಿರದು.
ಸಂಸಾರದ ಭೋಗವು ಆತ್ಮಕೆ
ಶೋಕ;
ಸಂಪೂರ್ಣ ಸಂತೋಷವನೀ
ಯದು ಲೋಕ.
ಆ ಉತ್ತಮ ದಾನವು ಸಿಕ್ಕಿದರೆ,
ಸಂಗೊಂದರಲೆಲ್ಲವು ಪ್ರಾಪ್ತಿ
ಸುತೆ.

2. ಏಕ ಕಾಂಕ್ಷೆಯುಳ್ಳ ಪ್ರಾಣ
ಲೌಕಿಕೆಲ್ಲ ತ್ಯಜಿಸಿ,
ಕ್ರಿಸ್ತನಲ್ಲಿ ಸ್ಥಿರ ಧ್ಯಾನ
ಇಟ್ಟುಕೊಂಡು ಇರಲಿ!
ನೀ, ಕ್ರಿಸ್ತನೇ, ದೇವಮನುಷ್ಯನ
ಮೂರ್ತಿ;
ನೀನೊಬ್ಬನೇ ಸರ್ವ ಮಹತ್ವದ
ಪೂರ್ತಿ;
ನೀ ಮಾತ್ರ ಪರಾತ್ಪರ ಅರಸನು;
ನೀನೊಬ್ಬನೇ ಗತಿ ನಿರಂತರಕು!

3. ನಿನ್ನ ಮೇಲೆ ನನ್ನ ಆಶೆ,
ಅತಿಪ್ರಿಯ ಯೇಸುವೇ!

ನನ್ನ ನಿತ್ಯ ಅಭಿಲಾಷೆ
ನೀನೆ, ದಿವ್ಯ ಮಿತ್ರನೇ!
ಅನೇಕರು ತೊಲಗಿ ಹೋಗಲಿ!
ಯೇಸು,
ನಿನ್ನಲ್ಲಿಯೆ ವಾಸಿಸೊದೆನಗೆ ಲೇ
ಸು!
ನಿನ್ನಮರ ವಾಕ್ಯದ ಬಂಡೆಯೊಳು
ಸಜ್ಜೀವದ ಬುಗ್ಗೆಯು ಪರುವದು.

4. ಒಬ್ಬ ದಿವ್ಯ ಯಜಮಾನ
ನಮಗ್ಯೇಸು ಕ್ರಿಸ್ತನು.
ಈತ ಹೇಳುತಿರ್ವ ಜ್ಞಾನ
ಶ್ರೇಷ್ಠ ಆತ್ಮತೃಪ್ತಿಯು.
ಕ್ರಿಸ್ತ್ಯೇಸುವು ಕ್ರೂಜೆಯ ಸ್ಮರಿಸಿ
ದ್ಧಾನೆ;
ಕ್ರಿಸ್ತ್ಯೇಸು ಮನುಷ್ಯರಿಗೊಲಿ
ಯುತಾನೆ.
ಕ್ರಿಸ್ತ್ಯೇಸುವ ಸ್ನೇಹವನರಿವುದೆ
ಸರ್ವೋತ್ತಮ ಭಾಗ್ಯವು ಭಕ್ತ
ರಿಗೆ!

೨೮೯

I need Thee ev'ry hour.

M. T. 246.

1. ನೀ ಬೇಕು ಸರ್ವದಾ, ಉ
ದ್ಧಾರಕ!
ಇನ್ನಾವ್ಯಾರು ಕೊಡೊರು ಸುಶಾಂ
ತಿಯ?
ಶ್ರೀ ಯೇಸು, ನೀನಗತ್ಯ!
ಯೇಸು, ನೀನಗತ್ಯ!
ಕೈ ಚಾಚಿ ನನಗೀಗ ಸಹಾಯ
ತಾ!

2. ನೀ ಬೇಕು ಸರ್ವದಾ! ನೀನಿ
ದ್ದರೆ,
ಗಂಡಾಂತ್ರದಲ್ಲಿಯೂ ಪಾರಾ
ಗುವೆ.
ಶ್ರೀ ಯೇಸು, ...

3. ನೀ ಬೇಕು ಸರ್ವದಾ! ನನ್ನೊ
ಟ್ಟಿಗೆ
ನೀನಿಲ್ಲದಿದ್ದರೆ, ಸೋತ್ಹೋಗುವೆ.
ಶ್ರೀ ಯೇಸು, ...

4. ನೀ ಬೇಕು ಸರ್ವದಾ!
ಸುನಾಥನೇ!
ನೀ ಹೇಳಿದಂತೆಯೇ, ನಾ ಮಾ
ಡುವೆ.
ಶ್ರೀ ಯೇಸು, ...

5. ನೀ ಬೇಕು ಸರ್ವದಾ! ಪವಿ
ತ್ರನೇ!
ಮಾಡೆನ್ನ ಹೃದಯಂ ಪವಿತ್ರವೇ!
ಶ್ರೀ ಯೇಸು, ...

೨೯೦

Come near me, O my Saviour!
M. T. 304.

1. ಸಮೀಪ ಬಾ ಸಂರಕ್ಷಕ!
ಕೊಡೆಂಗೆ ನಿನ್ನ ಕೈ!
ನನ್ನಲ್ಲಿ ನಿಂಗೆ ಹುಟ್ಟಿದ
ನಿನ್ ಪ್ರೇಮ ತೋರಿಸೈ!
ನೀ ಹ್ಯಾಗು ನಂಗೆ ಬೇಕು!
ನಿನ್ಹೊರ್ತು ದುಃಖವೆ!
ಸೈತಾನ ಬಾಣ ತಾಗಲು,
ನಾ ಕೆಟ್ಟೆನಲ್ಲವೆ?

2. ತುಫಾನು ಎದ್ದ ಸಮಯ
ಇರೆನ್ನ ನಾವೆಯೊಳ್!
ನೀ ಸೇರಿಸೆನ್ನ ನಾವೆಯ
ಸುಭದ್ರ ರೇವಿನೊಳ್!
ಮನುಷ್ಯವಾಕ್ಯ ವ್ಯರ್ಥ;
ತುಫಾನು ನೀಗಲು
ನಿನ್ನುಕ್ತಿಯೊಂದೆ ಸಾರ್ಥಕ;
ನಿನ್ನಲ್ಲೆ ರಕ್ಷೆಯು.

3. ಸಮೀಪ ಬಾ ಎನ್ ತಾರಕ!
ಸುಕಾಲದಲ್ಲಿಯೂ
ವಿಪತ್ತಿನಿಂದೆನ್ನಾಶೆಯು
ಸಂದ್ಹೋಗೊ ಕಾಲಕೂ
ಅಗತ್ಯ ನಂಗೆ ನೀನೆ;
ಇನ್ನ್ಯಾರು ಇದ್ದರು,
ನಿನ್ನಸ್ತವೆನ್ನ ಬಿಟ್ಟರೆ,
ನಾ ತಪ್ಪಿ ಹೋಗ್ವೆನು.

4. ಭೂಯಾತ್ರೆತೀರೊ ಮಟ್ಟಿಗು
ಇರೆನ್ನ ಹತ್ರವೆ!
ಈ ಜೀವ ಪೋಪ ಕಾಲವು
ಸಮೀಪ ಬಂದರೆ,
ಪರ್ದೈಸದೊಳ್ ಪ್ರವೇಶ
ಕೊಡಯ್ಯ ದಾಸಗೆ!
ಈ ಪ್ರೀತಿಗಾಗಿ ಶಾಶ್ವತ
ಸಂಸ್ತುತಿ ಹಾಡುವೆ.

೨೯೧

Mel. What a friend we have in Jesus.—M. T. 233.

1. ನಿನ್ನ ಹೊರ್ತು ಇರಲಾರೆ
ಪ್ರಾಣಪ್ರಿಯ ಯೇಸುವೆ!
ನಿನ್ನಮೂಲ್ಯ ರಕ್ತಧಾರೆ
ಜೀವ ಕೊಟ್ಟಿತೆನಗೆ.
ಕ್ಷಣ ಹೊತ್ತು ನಿನ್ನ ಐಕ್ಯ
ನಂಗೆ ತಪ್ಪಿ ಹೋದರೆ,
ಪ್ರಾಣಕ್ಕಿಲ್ಲ ನಿಜ ಸೌಖ್ಯ
ದುಃಖಾಕ್ರಾಂತನಾಗುವೆ.

2. ನಿನ್ನ ಹೊರ್ತು ಗೆಲ್ಲಲಾರೆ;
ನನ್ನಲ್ಲಿಲ್ಲ ತ್ರಾಣವು.
ಎದೆಗೊಟ್ಟು ನಿಲ್ಲಲಾರೆ
ಶತ್ರು ಮೇಲೆ ಬೀಳಲು.
ನನ್ನ ಹಳೆ ದುಃಸ್ವಭಾವ
ಪೂರಾ ನನ್ನ ಗೆಲಿತು,

ಭ್ರಷ್ಟ ಮಾಡಿ ನನ್ನ ಜೀವ
ನಿಂಗೆ ದೂರ ಮಾಡೀತು.

3. ನಿನ್ನ ಹೊರ್ತು ಮಾಡಲಾರೆ
ನಿನ್ನ ನ್ಯಾಯ, ನೀತಿಯ;
ನಾ ಸತ್ಕಾರ್ಯ ಗೈಯಲಾರೆ
ನೀನು ಇದ್ದ ವಿನಹ.
ಉಪಕಾರ, ದಯ, ನೀತಿ,
ಎಲ್ಲಾ ಒಳ್ಳೆ ಕ್ರಿಯೆಯು,
ಕನಿಕರವುಳ್ಳ ಪ್ರೀತಿ
ನಿನ್ನ ಹೊರ್ತು ಹುಟ್ಟವು.

4. ನಿನ್ನ ಹೊರ್ತು ಕೊಡಲಾರೆ
ಇಷ್ಟಫಲ ನಿನಗೆ;
ಇಲ್ಲದಿರೆ ಆತ್ಮಧಾರೆ
ನನ್ನ ಆತ್ಮದೊಳಗೆ,
ನನ್ನಲ್ಲಿಲ್ಲ ಸತ್ವತ್ರಾಣ,
ಆತ್ಮಜೀವ, ಬೆಳಕು.
ನೀನೆ ಇದ್ದು ನನ್ನ ಪ್ರಾಣ
ಪುನರ್ಜೀವ ಪಡಿಸು!

5. ನಿನ್ನ ಹೊರ್ತು ಸಾಗಲಾರೆ
ಮುಂದಿನಾ ಪ್ರಯಾಣದೊಳ್;
ಗುರಿಗೆಂದೂ ಮುಟ್ಟಲಾರೆ
ಸೋತು ಯಾತ್ರಾಕಷ್ಟದೊಳ್.
ಮುಂದೆ ನಡೆ, ಪ್ರಿಯ ಸ್ವಾಮಿ!
ತೋರು ನಿನ್ನ ಹೆಜ್ಜೆಯ!
ಕ್ಷಣ ಕ್ಷಣ ನಿನ್ನ ವಾಣಿ
ಕೇಳಲೀಸು, ಒಡೆಯ!

6. ನಿನ್ನ ಹೊರ್ತು ಪಡಲಾರೆ
ಮನದೊಳ್ ಉಲ್ಲಾಸವ.
ಶಾಂತಿ ಎಂದೂ ಹೊಂದಲಾರೆ;
ನಿನ್ನ ಹೊರ್ತು ವ್ಯಾಕುಲ.
ಮನೆ ತುಂಬ ಲೋಕದರ್ಥ,
ಹೊನ್ನು, ಹಣವಿದ್ದರು,
ಇಹದರ್ಥ ಪೂರಾ ವ್ಯರ್ಥ;
ಏನೂ ಭಾಗ್ಯವೀಯವು.

7. ನಿನ್ನ ಹೊರ್ತು ಸಾಯಲಾರೆ
ಜೀವದಂತ್ಯ ಕಾಲಕೆ;
ಮೃತ್ಯುನದಿ ದಾಟಲಾರೆ
ನಿನ್ನ ಐಕ್ಯವಿಲ್ಲದೆ.
ಅಂತ್ಯಶ್ವಾಸ ಹೋಗುವಾಗ,
ಹತ್ರವಿರು ಯೇಸುವೆ!
ಚಾಚಿ ನಿನ್ನ ಹಸ್ತ ಬೇಗ
ವೈ ನನ್ನನ್ನು ಮೇಲಕೆ!

೨೯೨

Guide me, O Thou great Jehovah!
M. T. 305.

1. ನಡಿಸೆನ್ನ, ಯೇಸು ಕರ್ತ,
ಲೋಕಾರಣ್ಯಯಾತ್ರೆಯೊಳ್!
ನೀನೆ ಶಕ್ತ, ನಾನಶಕ್ತ;
ದಾಟಿಸೈ ಸ್ವಹಸ್ತದೊಳ್!
ಜೀವದನ್ನ ತಿನ್ನಿಸೆನ್ನ!
ಪೂರ್ಣ ತೃಪ್ತಿಗೊಳಿಸು!

2. ಜೀವಜಲನಿಧಿಯಿಂದ
ನೀಗು ನನ್ನ ತೃಷೆಯ!
ಅಗ್ನಿಮೇಘಸ್ತಂಭದಿಂದ
ತೋರು ನನ್ನ ಮಾರ್ಗವ!
ನೀ ಸಮರ್ಥರಕ್ಷಾಕರ್ತ;
ನೀನೇ ಡಾಲೂ ಖೇಡ್ಯವೂ.

3. ಯೋರ್ದಾನ್ ತೀರದೊಳ್ಗೆ ನನ್ನ
ಕೈಯೊಳೆತ್ತಿ ಸಲಹು!
ರಕ್ಷೆಗೈದು ಪ್ರಾಣವನ್ನ
ಕಾನಾನ್ ದೇಶ ಸೇರಿಸು!
ನಿನಗಲ್ಲಿ ನಿತ್ಯದಲ್ಲಿ
ಸ್ತೋತ್ರಗಾನ ಮಾಡ್ವೆನು.

8. ಕ್ರೈಸ್ತ ಮನಶ್ಶಾಂತಿ

೨೯೩

Wer nur den lieben Gott lässt walten.—M. T. 89.

1. ವಿಶ್ವಾಸವಿಟ್ಟು ದೇವರಲ್ಲಿ,
ಆತಂಗೆ ಎಲ್ಲ ಒಪ್ಪಿಸು!
ನಿನ್ನನ್ನು ಎಲ್ಲ ಕಷ್ಟದಲ್ಲಿ
ಆಶ್ಚರ್ಯವಾಗಿ ಕಾಯ್ವನು.
ಈ ಬಂಡೆ ಮೇಲೆ ಮನೆಯು
ಕಟ್ಟಿದ್ದರೆಂದು ಬೀಳದು.

2. ಅಘೋರ ಚಿಂತೆಯಿಂದ ಏನು,
ಶೋಕಾರ್ತವಾದ ಮನವೆ?
ನಾವನುದಿನ ಅತ್ತರೇನು?
ಈ ಶೋಕವೆಲ್ಲ ಯಾತಕೆ?
ಈ ರೀತಿ ಕಷ್ಟಭಾರವು
ಮತ್ತಷ್ಟು ಹೆಚ್ಚು ಅಹುದು.

3. ನಿನ್ನಾತ್ಮ ನಿತ್ಯ ದೇವರನ್ನು
ನೋಡುತ್ತ ಶಾಂತವಿರಲಿ!
ನೀ ನೋಡಿ ಆತನೊಲ್ಮೆಯನ್ನು,
ಕೃತಾರ್ಥನಾಗಿ ಬಾಳುವಿ.
ಸ್ವೀಕಾರ ಗೈದ ತಂದೆಯು
ನಿನ್ನಾರ್ತಿಯೆಲ್ಲ ಬಲ್ಲನು.

4. ಸಹಾಯ ಮಾಡುವದಕಾಗಿ
ಸುಕಾಲವಾತ ಬಲ್ಲನು;
ನಾವಾತನನ್ನು ದೃಢವಾಗಿ
ನಂಬೋದು ಮಾತ್ರ ನಮ್ಮದು.
ಕೃಪಾಳು ದೇವ ಫಕ್ಕನೆ
ಬರೋನು ಪ್ರಾಣರಕ್ಷೆಗೆ.

5. ಸಂಕಷ್ಟದಗ್ನಿಯುರಿಯಲ್ಲಿ
ದೇವ್ರೆನ್ನ ಬಿಟ್ಟನೆಂಬದೂ

ಸೌಭಾಗ್ಯಕಾಲಮಾತ್ರದಲ್ಲಿ
ಆತನ್ನ ಸ್ತುತಿಸೋಣವೂ
ಬೇಡಂತ್ಯ ನೋಡು! ಕಡೆಗೆ
ತೋರೋದು ಹೆಚ್ಚು ಕಡಿಮೆ.

6. ಶ್ರೀಮಂತರಿಂಗೆ ಬಡತನ
ಸರ್ವೇಶ ಕೊಡಲಾರನೆ?
ದರಿದ್ರರಿಂಗೆ ಬಹು ಧನ
ಕೊಡೋದಾತಂಗೆ ದೊಡ್ಡದೇ?
ಒಬ್ಬನ್ನ ಎತ್ತಿ, ಕೆಳಗೆ
ಮತ್ತೊಬ್ಬನನ್ನು ದೊಬ್ಬನೆ?

7. ನೀ ನಿತ್ಯ ಬೇಡಿ, ಹೋರ ನಾಡಿ,
ಸದ್ಭಕ್ತನಾಗಿ ನಡೆದು,
ಯೆಹೋವ ದೇವ ಸ್ತೋತ್ರ ಮಾಡಿ,
ಆತನ್ನ ನಂಬಿ ಬದುಕು!
ವಿಶ್ವಾಸಿಯನ್ನು ದೇವರು
ಎಂದೆಂದೂ ಬಿಡಲಾರನು.

೨೯೪

Befiehl du deine Wege.
M. T. 131.

1. ಶೋಕಾರ್ತನಾದ ಭಕ್ತ,
ನಿನ್ನೆಲ್ಲ ಬೇಸರು
ಯೆಹೋವ ಸರ್ವಶಕ್ತ
ಎಂಬಾತಗೊಪ್ಪಿಸು!
ಈ ವಿಶ್ವದಧಿಕಾರಿ
ಚಂದ್ರಾದಿ ಸಾಗಿಸೆ,
ನಿನ್ನಡಿಗೊಂದು ದಾರಿ
ಇನ್ನುಂಟುಮಾಡನೆ?

2. ಯೆಹೋವನ ಔದಾರ್ಯ
ನೀ ನಂಬಿದಾದರೆ,
ನಿನ್ನಾಯು, ನಿನ್ನ ಕಾರ್ಯ
ಸಫಲವಾಗದೆ?
ಆಪತ್ತಿನೋಳ್ ಗೋಳಾಟ
ಯಾತಕೆ? ಆತನು
ನೀಗ್ಯಾನು ನಿನ್ನ ಕಾಟ;
ನೀ ನಂಬಿ ಪ್ರಾರ್ಥಿಸು!

3. ಸರ್ವೇಶ ದಯೆಯಿಂದ
ನಿಶ್ಚಿತ ಯೋಚಿಸಿ,
ಅಶೋಧ್ಯ ಜ್ಞಾನದಿಂದ
ಸಂಕಲ್ಪ ಪೂರಿಸಿ,
ಸುಪಿತ ಮಕ್ಕಳಿಂಗೆ
ಎಂಬಂತೆ ಸರ್ವದಾ
ಒಬ್ಬೊಬ್ಬ ನರನಿಂಗೆ
ಹಿತಾರ್ಥ ಕೊಡುವ.

4. ಸೈತಾನನುಗ್ರದಿಂದ
ದಂಡೆತ್ತಿ ಬಂದರು,
ಯೆಹೋವನಸ್ತ್ರದಿಂದ
ವಿನಾಶವಾಗೊನು.
ಸರ್ವೇಶ ಶತ್ರುವಿಂಗೆ
ಹಿಮ್ಮೆಟ್ಟಿ ಹೋದಾನೇ?

ಅನಾದಿ ಯಶಸಿಂಗೆ
ಕಲಂಕ ಹತ್ತೀತೇ?

5. ಕ್ರಿಸ್ತ್ಯೇಸುಭಕ್ತ, ಕೂರು!
ಕೋರೆದೆಗುಂದದೆ!
ಇನ್ನಲ್ಪ ಕಾಲ ಹೋರು!
ತಾಳೆಲ್ಲ ವೇದನೆ!
ಯೆಹೋವ ನಿನ್ನ ಕಷ್ಟ
ಚನ್ನಾಗಿ ಬಲ್ಲನು;
ಸಕಾಲದಲ್ಲಿ ನಷ್ಟ
ನಿವಾರಿಸುವನು.

6. ನೀ ನಂಬಿಗಸ್ತನಾಗಿ
ಹೋರಾಟ ನಡಿಸೆ,
ನಿನ್ನಾರತಿ ಚೆನ್ನಾಗಿ
ಪ್ರಕಾಶಿಸಿದರೆ,
ನೀ ಕೋರದ ಸಮಯ
ನಿನ್ ನೊಗ ಬಿಚ್ಚೊನು;
ಆಗೆಲ್ಲ ತಾಪತ್ರಯ
ಒಮ್ಮೇಲೆ ನಿಲ್ಲೊದು.

7. ಮತ್ತಾತ ತನ್ನ ಪೀಠ
ಬಿಟ್ಟೆದ್ದು ಹರ್ಷದಿ
ನಿನ್ ಮಂಡೆಗೆ ಕಿರೀಟ,
ನಿನ್ ಕೈಗೆ ಕಿನ್ನರಿ
ಇತ್ತಾಗ, ನಿನಗಲ್ಲಿ
ಇನ್ನೆಷ್ಟು ಆದೀತೇ
ಈ ಗೋಳುಕೊಳ್ಳದಲ್ಲಿ
ನೀ ತಾಳ್ದ ವೇದನೆ?

8. ಸ್ವರ್ಗೀಯ ಯಜಮಾನ!
ಆಶ್ಚರ್ಯ ಪ್ರಭುವೆ!
ಸ್ವೀಕರಿಸೆಮ್ಮ ಗಾನ!
ಕೇಳೆಮ್ಮ ಪ್ರಾರ್ಥನೆ—
ಇಡೀ ಭೂಯಾತ್ರೆಯಲ್ಲಿ
ನೀನೆಮಗೊಲಿದು,
ಬಿಡಾರ ಬಿಡುವಲ್ಲಿ
ನಿನ್ನೈಕ್ಯಕೇರಿಸು!

೨೯೫

Befiehl du deine Wege.
M. T. 131.

1. ಈ ವ್ಯರ್ಥ ಚಿಂತೆ ಬಿಟ್ಟು,
ವಿಶ್ವಾಸ ನಿತ್ಯವು
ಸರ್ವೇಶನಲ್ಲಿ ಇಟ್ಟು,
ನಿರ್ಭೀತನಾಗಿರು!
ಸಮಸ್ತ ಲೋಕವನ್ನು
ತಾನಾಳ್ವ ದೇವರು
ವಿಧೇಯ ಭಕ್ತನನ್ನು
ಸಂರಕ್ಷೆ ಮಾಡೊನು.

2. ಪಾಪಾತ್ಮ, ದೇವರಲ್ಲಿ
ವಿಶ್ವಾಸವಿರಿಸು!
ಜಗತ್ತು ಆತನಲ್ಲಿ
ಸಂತೃಪ್ತವಹುದು.
ಸಹಸ್ರ ಚಿಂತೆಯಿಂದ
ನಿಂಗೇನು ಲಾಭವು?

ವಿಶ್ವಾಸ ಮಾತ್ರದಿಂದ
ಸಮಸ್ತ ನಿನ್ನದು!

3. ಪಿತಾ, ಸುನೀತಿಯನ್ನು
ನಮ್ಮಲ್ಲಿ ಬೆಳಿಸು!
ಅಸಹ್ಯ ಮಲವನ್ನು
ಸಂಪೂರ್ಣ ತೆಗೆದು,
ಕೊಡೈ ವಿಶ್ರಾಂತಿಯನ್ನು
ಭಯಸ್ಥ ಭಕ್ತಗೆ,
ಈಯ್ ನಿನ್ನ ಪ್ರೀತಿಯನ್ನು
ವಿರುದ್ಧ ಮನಕೆ!

4. ನಿನ್ನಲ್ಲಿ ಶುದ್ಧ ನೀತಿ,
ನಿನ್ನಲ್ಲಿ ಬೆಳಕು;
ನಿನ್ನಲ್ಲಿ ಸತ್ಯ, ಪ್ರೀತಿ,
ನಿನ್ನಲ್ಲಿ ತ್ರಾಣವು.
ಶತ್ರುಂಗಳೆಲ್ಲರನ್ನು
ವಿನಾಶ ಮಾಡುವಿ.
ಅನಂತ ಸುಖವನ್ನು
ವಿಶ್ವಾಸಿಗೀಯುತಿ.

೨೯೬

Harre, meine Seele.—M. T. 192.

1. ಕೋರು ಚಿಂತೆ ಬಿಟ್ಟು,
ನನ್ನಾತ್ಮವೇ,
ಕರ್ತನಲ್ಲಿ ಇಟ್ಟು
ದಿಟ್ಟ ನಂಬಿಕೆ!
ಭೀತಿಯಿಲ್ಲದೆ
ಇರು! ಬೇಗನೆ
ಸೂರ್ಯ ಮೂಡಲಾಗಿ,
ರಾತ್ರಿ ಹೋಗುತೆ.
ಸಂಕಷ್ಟದಲ್ಲಿ,
ಚಿಂತೆಯೊಳು
ನಿನ್ನ ದೇವರಲ್ಲಿ
ವಿಶ್ವಾಸಿಸು!

2. ಕೋರು ಚಿಂತೆ ಬಿಟ್ಟು,
ನನ್ನಾತ್ಮವೇ,
ಕರ್ತನಲ್ಲಿ ಇಟ್ಟು
ದಿಟ್ಟ ನಂಬಿಕೆ!
ಚಿಂತೆ ಕಷ್ಟವು
ಮಿತಿ ಮೀರಲು,
ರಕ್ಷಾಬಲವನ್ನು
ಕಷ್ಟ ಮೀರದು.
ನೀ ಸರ್ವತ್ರಾಣ,
ನೀ ಪ್ರೀತಿಯೇ!
ರಕ್ಷಿಸೆನ್ನ ಪ್ರಾಣ,
ದೇವೇಶನೇ!

೨೯೭

Like a river glorious.—M. T. 306.

1. ದೇವಸಮಾಧಾನ
ನದಿಯಂತೆಯೆ

ಇಷ್ಟ ತೀರ್ಥಪಾನ
ಭಕ್ತರಾತ್ಮಕೆ.
ಎಲ್ಲಾ ಭಯವನ್ನು
ನೀಗಿಸುತ್ತದೆ,
ನವ ಧೈರ್ಯವನ್ನು
ಹುಟ್ಟಿಸುತ್ತದೆ.
ದೇವಕೃಪಾನಿಧಿ ಸುಖಪೂರ್ತಿ
ಯು,
ಪರಮಾರ್ಥಸಿದ್ಧಿ, ಶಾಂತಿಮೂ
ಲವು.

2. ದೇವಾಶ್ರಯದಲ್ಲಿ
ಸೇರಿದವನು
ದುರ್ಗದಂತೆ ಅಲ್ಲಿ
ನಿಲ್ಲುವವನು.
ಘೋರ ಬಾಧೆ, ಚಿಂತೆ,
ಯಾವ ವಿಪತ್ತೂ
ಯೇಸುಭಕ್ತರಿಂಗೆ
ತಟ್ಟಲಾರವು.
ದೇವಕೃಪಾನಿಧಿ . . . .

3. ಸುಖದುಃಖವೆಲ್ಲ
ಆತನಿಂದಲೇ.
ಶಿಕ್ಷೆ ರಕ್ಷೆಗೆಲ್ಲ
ಮೂಲ ಪ್ರೀತಿಯೇ.
ನಂಬು ಆತನನ್ನು!
ಸತ್ಯಸಂಧನು
ನಿನ್ನ ಕಾರ್ಯವನ್ನು
ನಡಿಸುವನು.
ದೇವಕೃಪಾನಿಧಿ . . . .

೨೯೮

Gott lebt! Wie kann ich traurig sein?—M. T. 147.

1. ಇದ್ದಾನೆ ದೇವರ್! ಆತನು
ನನ್ನಾಪತ್ತೆಲ್ಲ ಬಲ್ಲ.
ದುಃಖಾಬ್ಧಿಯಲ್ಲಿ ಬೀಳಲು,
ಯಾನ್ ಭ್ರಷ್ಟಾನಾಥನಲ್ಲ.
ನಾನತ್ತರೆ,
ಕಂಡಿರನೆ?
ಆತಂಗೆ ಹೇಳಿ, ದಯ
ಇಡೋನು. ಯಾಕೆ ಭಯ?

2. ಕೇಳಿರುತಾನೆ ದೇವರು!
ನಾ ಮೊರೆ ಇಡಲಾಗಿ,
ಆಲೈಸುತಾನೆ ಒಲಿದು,
ದಯಾಳು ತಂದೆಯಾಗಿ.
ವಿಜ್ಞಾಪನೆ
ಮೇಲೇರಲಿ,
ಕಟಾಕ್ಷದಿಂದ ರಾಯ
ನಂಗೀಯುವನ್ ಸಹಾಯ.

3. ಕಂಡಿರುತಾನೆ ದೇವರು!
ಇಳಾರ್ತಗಿರುಳಲ್ಲ.

ಅಗಾಧ ಚಿಂತೆ ಹುಟ್ಟಲು,
ಗೋಳಾಡ ತಕ್ಕದಲ್ಲ.
ಕಣ್ಣೊಳಗೆ
ನೀರೇರಲೆ,
ಕಂಡದನೊರಸೋನು;
ಸಂತೋಷ ಪಡಿಸೋನು.

4. ಮುಂಧೋಗುತಾನೆ ದೇ
ವರು!
ನಿಶ್ಚಿಂತನಾಗಿದ್ದೇನೆ.
ಉರ್ಲೋಡ್ಡಲೀ ಪ್ರಪಂಚವು!
ನಾ ದಾಟಿ ಹೋಗುತ್ತೇನೆ.
ಹಾದಿಕ್ಕಟ್ಟೇ!
ಎಂತಳಲೇ,
ಹೃದ್ಧೈರ್ಯ ಹುಟ್ಟಿಸೋನು;
ಕಾಲ್ ಜಾರೆ, ಕೈಕೊಡೋನು.

5. ತಂದೀಯುತಾನೆ ದೇವರು!
ಸರ್ವೇಶನುಪಕಾರಿ.
ಓ ಪ್ರಾಣ, ಹಸಿದಿರಲು,
ಬೇಡ್ವುಣ್ಣು! ಸಾಯಲಾರಿ.
ಅರಣ್ಯಕೂ
ನಿನ್ನೊಯ್ದರೂ,
ದಿನಂಪ್ರತೀಲ್ಯಾಹಾರ
ನಿಂಗೀಯದಿರಲಾರ.

6. ಒಲ್ದಿರುತಾನೆ ದೇವರು!
ಕಣ್ಣೀರಿಗಂಜಲೇಕೆ?
ಎದೇಲಿ ನಿತ್ಯ ಪ್ರೀತಿಯು!
ಬೇಡ್! ಅಳುವೋರೆಯೇಕೆ?
ಕ್ರೂಜೇಲಿಯೂ
ತೂಗಿದ್ದರೂ,
ಕ್ರಿಸ್ತ್ಯೇಸು ಅಳಲಿಲ್ಲ.
ನೀನೂ ಬಿದ್ಹೋಗೊದಿಲ್ಲ!

7. ಇದ್ದಾನೆ ದೇವರ್! ಆತನು
ಕಣ್ಕಿವಿಯುಳ್ಳ ತಂದೆ;
ಮುಂದ್ಹೋಗುತಾನ್, ಈ ವರೆ
ಗೂ
ನಾ ಸ್ವಸ್ಥವಾಗಿ ಬಂದೆ;
ಸಮಸ್ತವ
ತಂದೀಯುವ;
ಸತ್ಪ್ರೀತಿ ತೋರಿಸೋನು,
ನಿತ್ಯಕ್ಕು ಒಲಿಯೋನು.

೨೯೯

He leadeth me. O blessed thought!
M. T. 307.

1. ಕಾಪಾಡುವವ ದೇವರೇ!
ಸಂತೋಷವುಳ್ಳ ಯೋಚನೆ!
ನಾನೆಲ್ಲಿ ಹ್ಯಾಗೆ ಇದ್ದರು,
ಕಾಪಾಡುವವನಾತನು.
ಕಾಪಾಡುವವ ದೇವರೇ
ತನ್ನ ಸ್ವಹಸ್ತದಿಂದಲೇ.

ಅಧೈರ್ಯ ಬಿಟ್ಟು ನಂಬುವೆ;
ಕಾಪಾಡುವವ ದೇವರೇ.

2. ಒಂದೊಂದು ವೇಳೆ ದುಃಖವು,
ಒಂದೊಂದು ವೇಳೆ ಸುಖವು;
ಹ್ಯಾಗಿದ್ದರೂ ನಿಶ್ಚಿಂತೆಯೇ—
ಕಾಪಾಡುವವನಾತನೆ.
ಕಾಪಾಡುವವ . . . .

3. ಏನೇನು ಒದಗಿದರು
ನಾ ಗುಣುಗುಟ್ಟಲಾರೆನು;
ಯಾವಾಗಲೂ ಸಂತೃಪ್ತನೇ—
ಕಾಪಾಡುವವನಾತನೆ.
ಕಾಪಾಡುವವ . . . .

4. ಈ ಜೀವದಂತ್ಯ ಬಂದರೂ,
ನಾನಾಚೆ ತೆರಳಿದರೂ
ನಿರ್ಭೀತನಾಗಿ ದಾಟುವೆ—
ಕಾಪಾಡುವವನಾತನೆ.
ಕಾಪಾಡುವವ . . . .

೩೦೦

Ist Gott für mich, so trete.
M. T. 128.

1. ನನ್ನೊಂದಿಗೀಶನಿರೆ
ವಿರೋಧಿ ಯಾವನು?
ನಾ ಮೊರೆಯಿಡುತ್ತಿರೆ
ದುರ್ವೈರಿ ಸೈನ್ಯವು
ಸೋಲೋದು ಕ್ಷಣದಲ್ಲಿ.
ಸರ್ವೇಶನಾಪ್ತನು
ತುಫಾನು ಇರುವಲ್ಲಿ
ಸುಶಾಂತನಹನು.

2. ನಾನೂರಿ ನಿಲ್ಲೋ ಬಂಡೆ
ಕ್ರಿಸ್ತ್ಯೇಸುಕೃಪೆಯು;
ಐಶ್ವರ್ಯನಿಧಿ ಕಂಡೆ,
ನಾನಿನ್ನು ಧನ್ಯನು.
ಒಳ್ಳೇವ ನಾನು ಅಲ್ಲ,
ಕ್ರಿಸ್ತ್ಯೇಸು ಒಬ್ಬನೇ.
ಆ ಯೇಸು ಕೊಡೋದೆಲ್ಲ
ಅಪೇಕ್ಷಣೀಯವೇ.

3. ಕ್ರಿಸ್ತ್ಯೇಸು ರಕ್ಷಾಮೂರ್ತಿ
ಹೃಚ್ಛುದ್ಧಿ ಮಾಡಿದ;
ಕ್ರಿಸ್ತ್ಯೇಸು ಮಧ್ಯವರ್ತಿ
ಅಂತ್ಯಾಜ್ಞೆ ನೀಗಿದ.
ಕ್ರಿಸ್ತ್ಯೇಸುರಕ್ತದಿಂದ
ನರಕಾಗ್ನಿ ನೊಂದಿತು.
ಕ್ರಿಸ್ತ್ಯೇಸುಜಯದಿಂದ
ವಿಜಯ ನನಗು.

4. ನಂಗಿಟ್ಟಿದ್ದಾನೆ ಅಲ್ಲಿ
ಮುಂದಾಗಿ ಸ್ವಾಸ್ಥ್ಯವ;
ಯುದ್ಧಾಂತ್ಯದಿನದಲ್ಲಿ
ಅದನ್ನು ಕೊಡುವ.
ಉಂಟಿಲ್ಲಿ ಹಿಂಸೆ, ಶೋಕ
ಯೇಸು ನಿಮಿತ್ತವು.

ಚಿಂತಿಲ್ಲ! ಪರಲೋಕ
ಸೌಭಾಗ್ಯ ನನ್ನದು.

5. ಮನುಷ್ಯ, ದೇವದೂತ,
ಭೂದಿವಸೈನ್ಯವು,
ಪಿಶಾಚಿ, ಪ್ರೇತ, ಭೂತ
ಇತ್ಯಾದಿ ಬಲವು
ಆ ಪ್ರೇಮಹಸ್ತದಿಂದ
ವಿಯೋಗ ಮಾಡವು.
ಯೇಸು, ನಾನಿಂದಿನಿಂದ
ನಿನ್ನವ ನಿತ್ಯಕು!

6. ಉಲ್ಲಾಸದಿಂದಿದ್ದೇನೆ,
ಎಲ್ಲಿನ್ನು ಶೋಕವು?
ಸಂಗೀತ ಹಾಡುತ್ತೇನೆ,
ನಂಗಾಯ್ತು ಮೋಕ್ಷವು.
ಆ ದಿವ್ಯ ಸತ್ಯಾದಿತ್ಯ
ಉದಯವಾದನು.
ನನ್ನಾಪ್ತ ಯೇಸು ನಿತ್ಯ
ಆನಂದವೀಯ್ವನು.

೩೦೧

So führst du doch recht selig,
Herr, die Deinen.—M. T. 167.

1. ಕರ್ತಾ, ಅಪೂರ್ವವಾದ
ಮಾರ್ಗದಿಂದ
ಸ್ವಜನರಂ ಪರೀಕ್ಷೆ ಮಾಡುತಿ!
ಹ್ಯಾಗಾದರೂ ಸಂಪೂರ್ಣ ಪ್ರೀ
ತಿಯಿಂದ
ಸ್ವಪ್ರಜೆಯನ್ನು ಕಾಯುತಿರುವಿ.
ನಿನ್ನನ್ನು ನಂಬುವಂಥ ದಾಸಗೆ
ಡೊಂಕಾದ ಮಾರ್ಗ ನೆಟ್ಟಗ
ಹುದು;
ಆರಂಭದಲ್ಲಿ ಕತ್ತಲಿದ್ದರು,
ಕಡೇಲಿ ಎಲ್ಲ ಬೆಳಕಾಗುತೆ.

2. ಮನುಷ್ಯಬುದ್ಧಿ ಕಲ್ಪಿತಂಗ
ಳನ್ನು
ಅನೇಕ ಸಾರಿ ಹೀನ ಮಾಡುವಿ;
ನಮ್ಮಿಂದಲಾಗದಂಥ ಕೃತ್ಯವನ್ನು
ನೀನೊಂದು ಕ್ಷಣದಲ್ಲಿ ತೀರ್ಚುತಿ.
ಮಣ್ಣಾದ ನೀಚರನ್ನು ಎಬ್ಬಿಸಿ,
ಭೂರಾಜರಲ್ಲಿ ಕೂಡ್ರ ಮಾಡಲು,
ಗರ್ವಿಷ್ಠನನ್ನು ಬೇಗ ಹಿಡಿದು,
ಸ್ವಪೀಠದಿಂದ ತಳ್ಳಿ ಬಿಡುತಿ.

3. ನಾವೋ ವಿವೇಕಹೀನರೆಂಬ
ದನ್ನು
ಚನ್ನಾಗಿ ತಿಳಿದಾತನಿರುತ್ತೀ;
ಅಬಲರಾಗಿ ಬೀಳುವ ನಮ್ಮನ್ನು
ಮಮತೆಯಿಂದ ಎತ್ತಿ ಹೊರುತ್ತೀ.
ನೀ ನಮ್ಮನ್ನೊಮ್ಮೆ ತಂದೇ ಚಿತ್ತದಿ
ಇನ್ನೊಮ್ಮೆ ತಾಯಿಹಾ ಮುದ್ದಿನಿಂ
ದಲೇ

ಮುಂದೊಯ್ಯು ನಿನ್ನ ಮಾರ್ಗ
ದಲ್ಲಿಯೇ
ನೀನಿರುವಲ್ಲಿ ನಮ್ಮನ್ನೊಯ್ಯುವಿ.

4. ಸಮ್ಮಪ್ಪಾ, ನಿನ್ನ ಪ್ರೀತಿಚಿತ್ತ
ದಿಂದ
ನನ್ನನ್ನು ಮಗುವೆಂತ ನಡಿಸೋ!
ದಿವ್ಯಾತ್ಮನೇ, ಸುಶಾಂತ ಕಾಂತಿ
ಯಿಂದ
ನನ್ನಲ್ಲಿ ನಿತ್ಯ ವಾಸವಾಗಿರೋ!
ನಂಗಾಗಿ ಮೃತಪಟ್ಟ ಯೇಸುವೇ!
ನಿನ್ನಿಂದ ಅಪಜಯವಾದೆನು;
ಅನಂತ ಪ್ರೀತಿ ನನ್ನ ಜೈಸಿತು.
ನಿರಂತ್ರ ನಾನು ನಿನ್ನ ದಾಸನೇ!

೩೦೨

Mel. Jesus, the very thought of Thee.—M. T. 24.

1. ನೀ ಕೊಟ್ಟ ಎಲ್ಲ ಸುಖವ
ನಾನುಂಡೆ, ಕರ್ತನೆ;
ನೀನೀಯುವಷ್ಟು ದುಃಖವ
ನಾನೀಗ ತಾಳುವೆ.

2. ನಾ ಗೈದ ಪಾಪರಾಶಿಗೆ
ನೀ ಗೈವ ಶಿಕ್ಷೆಯು
ವಿನಾಶ ಮಾಡದೆಸಗೆ
ಸಂರಕ್ಷೆ ಮಾತ್ರವು.

3. ಮನುಷ್ಯರಲ್ಲಿ ನಂಬಿಕೆ
ನಾನಿಡೆನೆಂದಿಗು;
ಐ, ನಿನ್ನ ಹಸ್ತದಲ್ಲಿಯೆ
ಸುಭದ್ರನಿರ್ವೆನು.

4. ಸುಬುದ್ಧಿ, ನೀತಿವಂತಿಕೆ
ಸುಮಾರ್ಗಕ್ಕೊಯ್ಯವು;
ಚುಕ್ಕಾಣಿ ಹಿಡಿ, ಕ್ರಿಸ್ತನೇ,
ನನ್ ನಾವೆ ದಾಟಿಸು!

5. ನೆಪ್ಪಾಗಿ ನನ್ನ ಪಾಪವು
ಸಂತಾಪ ಹುಟ್ಟಲು—
ನಿನ್ನೆಲ್ಲ ಪಾಪ ಬಿಟ್ಟೆನು
ಎಂದ್ಹೇಳಿ ಸಲಹು.

6. ಸಂಪೂರ್ಣ ಕ್ಷಮೆ ಮಾಡುವಿ
ಯಥಾರ್ಥ ಪಾಪಿಗೆ;
ಎಲ್ಲೆಲ್ಲು ಸಾರಲ್ಪಡಲಿ
ಈ ಶುಭ ಬೋಧನೆ!

7. ಈ ವಾಕ್ಯ ಓದಿ ಕೇಳಿದೆ;
ಈ ವಾಕ್ಯ ಹಿಡಿದು
ನಾ ಭರವಸ ಮಾಡುವೆ
ಎನ್ ಮೃತಿಯಲ್ಲಿಯು.

8. ದಾರಿದ್ರ್ಯ, ರೋಗ ಬಂದರೆ,
ನಂಗೇಕೆ ಚಿಂತೆಯು?
ನನ್ನೊಳ್ಳೆ ತಂದೆ ದೇವರೆ
ಇದ್ದಾನೆ ನಿತ್ಯವು.

9. ನಿನ್ನಾತುಕೊಂಡ ಭಕ್ತಗೆ
ಕೇಡೇನೂ ತಟ್ಟದು;
ನೀನೆನ್ನ ಬಂಡೆ, ದುರ್ಗವೆ,
ಸುಭದ್ರಾಶ್ರಯವು.

10. ನೀ ಬಾ ನಾನಿರುವಲ್ಲಿಗೆ!
ಎಂಬಂಥ ಅಪ್ಪಣೆ
ನಿನ್ನಿಂದ ಬರ್ವ ವರೆಗೆ
ನಾನಿಲ್ಲಿ ಕಾಯುವೆ.

11. ಹೀಗಿದ್ದು ನಾ ಕೈಕೊಂಬೆನು
ನಿನಾಜ್ಞೆ ನಿತ್ಯವು;
ದೇಹಾತ್ಮಕ್ಕೆಲ್ಲ ಸೌಖ್ಯವು
ನಿನ್ನಿಂದ ಬಪ್ಪದು.

೩೦೩

Was Gott tut, das ist wohlgetan.
M. T. 146.

1. ಸದಾ ಸುಚಿತ್ತವಾಗಿದೆ
ದಯಾಳು ದೇವಚಿತ್ತ.
ಸಂತೋಷವಾಗಿ ಬಾಳುವೆ,
ಕ್ರಿಸ್ತ್ಯೇಸು, ನಿನ್ ನಿಮಿತ್ತ!
ಆ ಲೋಕದಿ
ಪ್ರವೇಶಿಸಿ,
ಮರ್ತೆಲ್ಲ ಕಷ್ಟ, ಬೇನೆ,
ವಿಮುಕ್ತನಾಗುತ್ತೇನೆ.

2. ಸದಾ ಸುದಾನವಾಗಿದೆ
ದಯಾಳು ದೇವದಾನ.
ಈ ಪಾಪವೆಂಬ ರೋಗಕೆ
ಅಸಹ್ಯವಾದ ಪಾನ
ಬೇಕಾದರೆ,
ನಾ ಕುಡಿಪೆ.
ಕ್ರಿಸ್ತ್ಯೇಸುವಿನ ರಕ್ತ
ಸುಕ್ಷೇಮ ಕೊಡ ಶಕ್ತ.

3. ಸದಾ ಸುಶಿಕ್ಷೆಯಾಗಿದೆ
ದಯಾಳು ದೇವಶಿಕ್ಷೆ.
ನಮ್ಮಾತ್ಮಗುಣಸ್ಥಿತಿಗೆ
ಉಂಟಾಗಲೈ ಪರೀಕ್ಷೆ!
ನನ್ನಪ್ಪನೆ!
ನೀ ದಂಡಣೆ
ಕೊಟ್ಟಾಗ್ಯೂ, ತಾಳುತ್ತೇನೆ;
ಕೃತಜ್ಞನಾಗಿದ್ದೇನೆ.

4. ಸನ್ಮಾರ್ಗದಲ್ಲಿ ಭಕ್ತನು
ಸಂಚರಿಸುತ್ತಿದ್ದಾನೆ;
ಆದೀಲಿ ಕತ್ತಲಿದ್ದರು,
ಕಡೇಲಿ ನೋಡುತಾನೆ
ಮಹಾ ಪ್ರಭೆ;
ನನ್ನಾತ್ಮವೆ,
ಸಂದೇಹವೆಲ್ಲ ಬಿಡು!
ಸದಾ ವಿಶ್ವಾಸವಿಡು!

೩೦೪

Meine Seel' ist stille.—M. T. 177.

1. ಪ್ರಾಣ ದೇವರಲ್ಲಿ,
ಆತನೊಲ್ಮೆಯಲ್ಲಿ
ಶಾಂತಿ ಹೊಂದುತೆ!
ಆತ ದೊರೆಯಾಗಿ
ಎಲ್ಲ ಆಳಲಾಗಿ,
ಹೃತ್ತು ತುಂಬುತೆ;
ದಿವಕೆ
ಪ್ರಯಾಣವೆ;
ಯೇಸುವೆನ್ನ ಬಿಡೊದಿಲ್ಲ.
ನಂಗೆ ಚಿಂತೆ ಇಲ್ಲ.

2. ದೇವರೈಕ್ಯದಲ್ಲಿ
ಇರ, ಹೃತ್ತಿನಲ್ಲಿ
ಮುಖ್ಯ ಆಶೆಯೇ.
ನನ್ನ ಪುಣ್ಯಕರ್ಮ,
ನನ್ನ ನೀತಿಧರ್ಮ
ದೇವರೈಕ್ಯವೇ.
ಲೋಕದ
ಮಿಥ್ಯಾನಂದ
ಪರರರ್ಸಿಕೊಳ್ಳುತಾರೆ;
ನಾನು ಬಯ್ಸಲಾರೆ.

3. ಸರ್ವಲೋಕದಲ್ಲಿ,
ಏಕ ಪತಿಯಲ್ಲಿ
ಮೋಹಗೊಂಡೆನು;
ನನ್ನ ಯೋಗಧ್ಯಾನ,
ನನ್ನ ಪ್ರಾಣಸ್ಥಾನ
ಇಷ್ಟ ಯೇಸುವು.
ಯೇಸುವೇ,
ಪ್ರಾಣೇಶನೇ!
ನಿನ್ನ ಪ್ರಿಯ ಅಕ್ಷಿಕಾಂತಿ
ನಂಗೆ ಪ್ರಾಣಶಾಂತಿ.

4. ಪೂರ್ಣ ಧೈರ್ಯದಲ್ಲಿ
ತಂದೆಯೆದೆಯಲ್ಲಿ,
ಮಗ, ಮಲಗು!
ಆತ್ಮದನ್ನಪಾನ,
ದೊಡ್ಡ ಸಮಾಧಾನ
ತಂದೆ ಈಯ್ವನು.
ತಾಯಿಯ
ಕಟಾಕ್ಷವ
ಕಾಣ್ಬ ಮೊಲೆಮಗುವಾಗಿ,
ಬಾಳು ಸುಖಿಯಾಗಿ!

5. ನಿನ್ನ ಎದೆಗಂಬು
ತಾಗಲಾಗಿ, ನಂಬು!
ಯೇಸು ವೈದ್ಯನು.
ಶತ್ರುಭಯ ಬಿಡು!
ಬೀಳೆ, ಮೊರೆ ಇಡು—
ಕರ್ತ, ಸಲುಹು!
ನಂಬಿಕೆ
ತುಂಬಿದ್ದರೆ,
ಮಧ್ಯ ಕಷ್ಟವೆಲ್ಲ ತಾಳ್ವೆ;
ಕಡೆಯಲ್ಲಿ ಬಾಳ್ವೆ.

6. ಆಮೆನ್! ಯೇಸುವಲ್ಲಿ
ನಂಬಿದವರಲ್ಲಿ
ಯಾರು ಕೆಟ್ಟರು?
ದೇವ ಮಕ್ಕಳನ್ನು
ಕೊಲ್ಲೊ ಹೊರೆಯನ್ನು
ಹೊರಲೀಸನು.
ತಾಳ್ದರೆ,
ಸೋತ್ಹೋಗದೆ,
ಗೆದ್ದು, ತಂದೆಮನೆಗ್ಹೋಗಿ
ಆದಿ ಸುಖಭೋಗಿ.

೩೦೫

Amid the trials that I meet.
M. T. 308.

1. ನನ್ನನ್ನು ಕಷ್ಟ ಮುತ್ತಲು,
ಪಾದಕ್ಕೆ ಮುಳ್ಳು ನಾಟಲು,
ಕರ್ತಾ, ನಾ ಧೈರ್ಯ ಬಿಡೆನು—
"ನೀ ನೆಪ್ಪು ಮಾಡುತಿ."
ನೀ ನೆಪ್ಪು ಮಾಡುತ
ನಿತ್ಯವು ಹತ್ತರ
ಇಪ್ಪಾಗ, ಯಾವ ಕುಂದಕ?
ನಾನೇತಕಂಜುವೆ?

2. ಸಂಸಾರಚಿಂತೆ ಹೆಚ್ಚಲು,
ನನ್ನನ್ನು ಕಾಡುತ್ತಿರಲು,
ಒಂದನ್ನು ಹ್ಯಾಗು ಬಲ್ಲೆನು—
"ನೀ ನೆಪ್ಪು ಮಾಡುತಿ."
ನೀ ನೆಪ್ಪು ಮಾಡುತ . . .

3. ನಾ ಸುಖದುಃಖವೆನ್ನದೆ
ಕಾರ್ಗತ್ತಲಲ್ಲು ಅಂಜದೆ
ಸಂತುಷ್ಟನಾಗಿ ಹಾಡುವೆ—
"ನೀ ನೆಪ್ಪು ಮಾಡುತಿ."
ನೀ ನೆಪ್ಪು ಮಾಡುತ . . .

೩೦೬

All the way my Saviour leads me.
M. T. 309.

1. ಎಲ್ಲ ಠಾವಿನೊಳು ಸುಖ
ನನಗೀಯೊ ನಾಥನು
ಇರಲಾಗಿ ಏನು ದುಃಖ?
ತುಂಬಿರೋದು ಶಾಂತಿಯು;
ಶರೀರಾತ್ಮಕಾಶೀರ್ವಾದ
ಕೊಡುತಾನೆ ನಿತ್ಯವು;
ಕಷ್ಟ ಬಂದು ಮುತ್ತಿದಾಗ
ಪರಿಹಾರ ಮಾಡೊನು.

2. ಎಲ್ಲ ಠಾವಿನೊಳು ಯೇಸು
ಕಾಯುತಾನೆ ನಿಶ್ಚಯ!
ಮಾರ್ಗದೊಂಕು ತೋರೆ, ಲೇಸು
ಮಾಡುತಾನೆ ಒಡೆಯ.
ಕಷ್ಟದೊಳ್ ನಿರಂತ್ರ ದಯ
ತೋರಿಸುತ ನಡಿಸಿ,

ಅಂತ್ಯದೊಳ್ ಸಂಗೀಯ್ವ ರಾಯ
ಶಾಂತಿ ತನ್ನ ರಾಜ್ಯದಿ.

3. ಎಲ್ಲ ಠಾವಿನೊಳಭಯ
ಕೊಟ್ಟು ಕಾಯ್ವ ಕರ್ತನು,
ಶಕ್ತಿ ಕುಂದಲು, ಸಹಾಯ
ಪಾಲಿಸೋನು ನನಗು.
ಹಸಿದಾಗ, ದಿವ್ಯ ಮನ್ನ
ಬಡಿಸೋನು ನನಗೆ;
ದಾಹವಾಗೆ, ಬುಗ್ಗೆಯನ್ನ
ತೋರಿಸೋನು ದೀನಗೆ.

4. ದೀರ್ಘ ಕಷ್ಟ, ರೋಗ, ನಷ್ಟ
ನನ್ನ ಕಾಡುತಿದ್ದರು,
ಪರದಲ್ಲಿ ಭಾಗ್ಯಶ್ರೇಷ್ಠ
ಇಟ್ಟಿದ್ದಾನೆ ನನಗು;
ಅಮರತ್ವವುಳ್ಳ ದೇಹ
ಹೊಂದಿ, ಸ್ವಂತ ಗೃಹದೊಳ್
"ಜಯ! ಜಯ! ಶ್ರೀ ಮಸೀಹ!"
ಎಂದು ಹಾಡ್ವೆ ನಿತ್ಯದೊಳ್.

೩೦೭

Warum sollt' ich mich denn grämen?—M. T. 137.

1. ಚಿಂತೆ ಯಾಕೆ? ಯಾಕೆ
ದುಃಖ?
ಯೇಸುವು
ಬಂದನು;
ಆತ ನಮ್ಮ ಸುಖ.
ಆತಗುಂಟು ಘನಪೀಠ;
ನಮಗೆ
ಇಟ್ಟದೆ
ಮಹಿಮೇ ಕಿರೀಟ!

2. ಹುಟ್ಟುವಾಗ ಏನು ತಂದೆ?
ಕೂಸಿಗೆ
ಏನದೆ?
ಬತ್ತಲಾಗಿ ಬಂದೆ.
ತೀರಿಹೋಗುವಾಗಲೇನು
ಹಿಡಿದು
ಹೊರಟು,
ಅಲ್ಲಿ ತೋರಿಸೇನು?

3. ನಮ್ಮ ಜೀವ ನಮ್ಮದಲ್ಲ;
ದೇವರು
ಕೊಟ್ಟದು
ತೆಗೆಯಲ್ಕು ಬಲ್ಲ.
ಆತನಾಜ್ಞೆ ದಿವ್ಯಾಹಾರ!
ಆತನು
ಮಾಡೊದು
ಪರವೋಪಕಾರ!

4. ಸ್ವಪ್ನದಂತೆ ಹೊನ್ನು, ಹಣ;
ಬೊಬ್ಬುಳಿ
ಕಾಣಿಸಿ
ನಿಲ್ಲದೊಂದು ಕ್ಷಣ.
ಮಾಯೆ ನರಲೋಕದಲ್ಲಿ

ಇರುತೆ;
ಸತ್ಯವೆ
ಪರಲೋಕದಲ್ಲಿ!

5. ಬೈದರೇನು ದ್ವೇಷಗಾರ?
ಮೋಕ್ಷವು
ನನ್ನದು;
ಮೋಕ್ಷ ತಪ್ಪಿಸಾರ.
ಆಸ್ತಿ, ಜೀವ, ವ್ಯರ್ಥ ಮಾನ
ಹೋದರು,
ಹೋಗದು
ನಿತ್ಯ ಸಮಾಧಾನ.

೩೦೮

Mel. Das ist unbeschreiblich.
M. T. 113.

1. ನಿನ್ನ ಮಾರ್ಗವನ್ನು
ಕರ್ತಗೊಪ್ಪಿಸು;
ಆತನು ನಿನ್ನನ್ನು
ನಡಿಸುವನು.
ಒಳ್ಳೇದನ್ನು ಮಾಡು!
ದೇವರಲ್ಲಿಯೇ
ನಂಬುತ್ತಾ ಕೊಂಡಾಡು
ಅನುದಿನವೇ!

2. ಮೇಲೆ ನೋಡು! ಅಲ್ಲಿ
ಕ್ರಿಸ್ತ ಯೇಸುವು
ಊರ್ಧ್ವ ಪೀಠದಲ್ಲಿ
ಕೂತುಕೊಂಡನು.
ಆತ ನಮಗಾಗಿ
ಕಷ್ಟ ಶೋಧನೆ
ತಾಳಿದಾತನಾಗಿ
ಹೋದನಲ್ಲಿಗೆ.

3. ನಿನ್ನ ಚಿಂತೆಯೆಲ್ಲ
ತಿಳಿಸಾತಗೆ!
ನಿನ್ನ ಭಾರವೆಲ್ಲ
ಆತ ಹೊರನೆ?
ನಿನ್ನ ನೋಡುತ್ತಾನೆ;
ಹುಟ್ಟೊ ಮೊದಲು
ಪ್ರೀತಿ ಮಾಡಿದ್ದಾನೆ;
ನಿನ್ನ ಬಿಡನು.

4. ಆತನಲ್ಲಿ ದಯ,
ಪ್ರೀತಿ, ನಂಬಿಕೆ,
ಆದರ, ಸಹಾಯ
ದೊರಕುತ್ತದೆ.
ದಿವ್ಯ ಚಿತ್ತ ನೆಚ್ಚಿ
ಮೌನವಾಗಿರೋ!
ಕರ್ತನಿಂಗೆ ಮೆಚ್ಚಿ
ಸುಖ ಪಡಕೋ!

5. ಭರವಸವಿಟ್ಟು
ನಿತ್ಯ ಪ್ರಾರ್ಥಿಸು!

ಅನುಮಾನ ಬಿಟ್ಟು
ಧೈರ್ಯವಾಗಿರು!
ತನ್ನ ದೇವರಲ್ಲಿ
ನೀತಿವಂತನು
ಸಮಾಧಾನದಲ್ಲಿ
ನಿಲ್ಲ ತಕ್ಕದ್ದು.

6. ಆಗ ತಾಪತ್ರಯ
ನಿಂತು ಹೋಗೊದು;
ಕರ್ತನತಿಶಯ
ದಯ ತಪ್ಪದು.
ಏನು ಮಾರ್ಗದಲ್ಲಿ
ಒದಗಿದರು,
ದಿವ್ಯ ಕೃಪೆಯಲ್ಲಿ
ಹಿತವಾಗೊದು.

7. ಆತ ನಡಿಸೋನು
ತನ್ನ ಭಕ್ತನ;
ತೃಪ್ತಿ ಪಡಿಸೋನು,
ಪರಲೋಕದ
ಭಾಗ್ಯದತಿಶಯ
ದಯಪಾಲಿಸಿ.
ಭಕ್ತಸಮುದಾಯ
ಸ್ತೋತ್ರ ಮಾಡಲಿ!

೩೦೯

Wirf Sorgen und Schmerz.
M. T. 1.

1. ನಂಬೇಸುವನು!
ನೀನರುಹಿಸು
ಆ ಪ್ರಿಯಗೆ ಚಿಂತೆಗಳನ್ನು!

2. ದಿಕ್ಕರಿಯದೆ
ಪ್ರಲಾಪಿಸಲೆ,
ಆಶ್ರಯಿಸು ರಕ್ಷಕನನ್ನು!

3. ನೀ ಪ್ರಾರ್ಥಿಸಲು,
ನಿನ್ ಹೊರೆಯನು
ಎತ್ತಾತ್ತುಕುವನುದ್ಬಲದಿಂದ.

4. ದಿವ್ಯಾದರಕ
ಸಮಾಧಾನವ
ನಿಂಗೀಯುವನೊಲುಮೆಯಿಂದ.

5. ಆ ಕುರುಬನ
ಭದ್ರಾಶ್ರಯವ
ಪ್ರವೇಶಿಸಿ, ತ್ಯಜಿಸು ದುಃಖ!

6. ಸಂಕಷ್ಟಗಳು
ಬಿಟ್ಟೋಗುವವು.
ಕ್ರಿಸ್ತ್ಯೇಸುವೆ ಹೃದದ ಸುಖ!

೩೧೦

Gott will's machen, dass die Sachen.—M. T. 30.

1. ಬೇಡ ಭಯ!
ಯೇಸುದಯ
ಶರಣಾರ್ಥಿಕೋಟಿಯೇ!
ಎಲ್ಲ ತಾನು
ನಡಿಸ್ವಾನು
ಉತ್ತಮ ಪ್ರಕಾರವೇ.

2. ನಿನ್ನನಾಯ್ದ,
ನಿನ್ನ ಕಾಯ್ವ
ಕರ್ತ ನಿದ್ದೆಗೊಂಡಾನೆ?
ಭಯ ಬಿಟ್ಟು,
ನಂಬಿಗಿಟ್ಟು,
ಹೃದವೆತ್ತು ಮೇಲಕೆ!

3. ತಡದಲ್ಲು
ತ್ವರೆಯಲ್ಲು
ಆತ ತಂದೆ ನಿನಗೆ;
ನಿನ್ನ ಕಷ್ಟ,
ನಿನ್ನ ನಷ್ಟ
ಆತ ಬಲ್ಲ, ಮಗನೆ!

4. ಕೃಪಾಪತಿ
ಶ್ರೇಷ್ಠ ಗತಿ
ನಿಂಗೆ ನೇಮಿಸಿಹನು.
ಶಾಂತನಾಗಿ
ಇರಲಾಗಿ,
ನಿನ್ನ ಚಿಂತೆ ಹೋಗೊದು.

5. ನಿನ್ನ ಸುಖ,
ನಿನ್ನ ದುಃಖ
ಕೊಡುವವನಾತನು.
ಚಿಂತೆಯೇನು?
ಭಯವೇನು?
ಆತಗೆಲ್ಲ ಒಪ್ಪಿಸು!

6. ಹೊರು ನಿನ
ಯೇಸುವಿನ
ಹೌರವಾದ ಕ್ರೂಜೆಯ!
ನಿನಗಲ್ಲಿ
ಪೀಠದಲ್ಲಿ
ಈಯುವನ್ ಕಿರೀಟವ.

೩೧೧

Peace, perfect peace.—M. T. 310.

1. ಧೈರ್ಯ ಪಡೋ!
ಈ ಪಾಪಲೋಕದೊಳ್
ಶ್ರೀ ಯೇಸುವೀವ ಶಾಂತಿ ಮನ
ದೊಳ್.

2. ಧೈರ್ಯ ಪಡೋ!
ನಿನ್ನೆಲ್ಲ ಕಾರ್ಯದಿ
ಸುನಾಥಚಿತ್ತಮಾಡೋದೇ ಶಾಂತಿ.

3. ಧೈರ್ಯ ಪಡೋ!
ಅಪಾಯವಿದ್ದರು
ಕ್ರಿಸ್ತ್ಯೇಸುವಲ್ಲಿ ಶಾಂತಿ ಸಿಕ್ಕೋ
ದು.

4. ಧೈರ್ಯ ಪಡೋ!
ದೂರಿರ್ಪ ಪ್ರಿಯರಂ
ಕಾಪಾಡುತ್ತಾನೆ. ಸಂಬು
ಕರ್ತನಂ.

5. ಧೈರ್ಯ ಪಡೋ!
ಇನ್ನಾಗೋ ಕಾರ್ಯದೊಳ್
ಭವಿಷ್ಯವೂ ಸರ್ವೇಶಹಸ್ತ
ದೊಳ್.

6. ಧೈರ್ಯ ಪಡೋ!
ನಾ ಸಾವಿಗಂಜಲೋ?
ಕ್ರಿಸ್ತ್ಯೇಸು ಮೃತ್ಯುಹರನಲ್ಲ
ವೋ?

7. ಶಾಂತ್ಯೆನಗೆ!
ಹೋರಾಟಕಂತ್ಯವು!
ಅನಂತ ಶಾಂತಿ ಕ್ರಿಸ್ತನೀವನು.

೩೧೨

Wenn Christus, der Herr.
M. T. 254.

1. ಸಂರಕ್ಷಕನು
ಸಂಗೊಲಿದರೆ,
ಎನ್ ಪ್ರಾರ್ಥನೆಯ
ತಾ ಕೇಳಿದರೆ,
ನಾ ಸತ್ತರೂ ಸಾಯೆ,
ಜಿಜ್ಞೈಸುವೆನು;
ಕ್ರಿಸ್ತ್ಯೇಸುವು ನನ್ನ
ಉದ್ಧಾರಕನು.

2. ಸಂಕಷ್ಟಗಳು
ಹೆಚ್ಚಾಗುತ್ತಲೆ,
ಹೃದ್ವೇದನೆಯು
ಉಕ್ಕೇರಿದರೆ,
ನಾ ಸೋತರೂ ಸೋಲೆ,
ಜಿಜ್ಞೈಸುವೆನು;
ಕ್ರಿಸ್ತ್ಯೇಸುವು ನನ್ನ
ಉದ್ಧಾರಕನು.

3. ಸಂಬಂಧಿಕರು
ಕೈ ಬಿಟ್ಟಿದ್ದರೆ,
ಸಂಗಾತಿಗಳು
ಹಿಂಜರಿದರೆ,
ನಾ ಮೇಲೆ ಕಣ್ಣೆತ್ತಿ
ನಂಬಿರುವೆನು—
ಕ್ರಿಸ್ತ್ಯೇಸುವು ನನ್ನ
ಉದ್ಧಾರಕನು.

4. ಸಿಂಹಾಸನಕೆ
ನಾನೆರಗುವೆ,
ಈ ಬಿನ್ನಹವಂ
ನಾ ಜಪಿಸುವೆ—
ಈ ಪಾಪಿಯಂ ತ್ರಾಹಿ,
ಉದ್ಧಾರಕನೇ!
ಕೈ ನೀಡು! ಕೈ ನೀಡು,
ಸಂರಕ್ಷಕನೇ!

9. ದೇವಸ್ತೋತ್ರ

೩೧೩

Lobe den Herren, den mächtigen König der Ehren.—M. T. 50.

1. ಸ್ತೋತ್ರವನುತ್ತಮ ದೇವರಿ
ಗರ್ಪಿಸ ಬನ್ನಿ!
ಊರ್ಧ್ವದಿ ಕರ್ತಗೆ ಮಹಿಮೆ
ಯಾಗಲಿ ಅನ್ನಿ!
ಹರುಷದಿ
ದೂತರ ಸಂಘದಲಿ
ಸ್ತೋತ್ರಸುಗಂಧವ ತನ್ನಿ!

2. ಭೂದಿವಲೋಕಗಳಾತನ
ಸ್ವಾಶ್ರಿತ ರಾಜ್ಯ.
ಯಾವನು ಭೂದಿವರಾಜನ
ಸಂಗಡ ವ್ಯಾಜ್ಯ
ಮಾಡುವನು?
ಆತನು ನುಡಿಯಲು,
ಮರ್ತ್ಯರ ಗದ್ದಲ ತ್ಯಾಜ್ಯ!

3. ಕ್ರಿಸ್ತನು ಕ್ರಯಕೆ ಕೊಂಡ
ಜನಾಂಗವಿದ್ಧೇವೆ.
ರಾಜನ ಚಿತ್ತಕೆ ಒಪ್ಪಲಿ ದಾಸರ
ಸೇವೆ!
ಒಡೆಯನು
ನಮಗೆ ಒಲೆಯಲು,
ಸುಖದಿ ಜೀವಿಸುತೇವೆ.

೩೧೪

Nun danket alle Gott.—M. T. 119.

1. ಎಲ್ಲಾನ್ನು ಭೋಗಿಸಿ
ದಯಾಳು ಕರ್ತನಿಂದ,
ಕೃತಜ್ಞರಾಗಿರಿ
ಮನೋವಾಕ್ಕಾಯದಿಂದ!
ನಮ್ಮನ್ನು ರಕ್ಷಿಸಿ
ತಾಯ್ಗರ್ಭದಿಂದಲೇ,
ಸಹಸ್ರ ವರವ
ಕೊಟ್ಟವನಾತನೇ!

2. ಉದಾರಿ ದೇವರೆ,
ಸುಶಾಂತ ಹೃದವನ್ನು
ಸುಕ್ಷೇಮದೊಂದಿಗೆ
ಕೊಟ್ಟೆಲ್ಲ ಭಕ್ತರನ್ನು
ಕಾಪಾಡಿ ರಕ್ಷಿಸು!
ಕಡೇಲಿ ನಮಗು
ಆ ಲೋಕದೊಳಗೆ
ಮೋಕ್ಷಾನುಗ್ರಹಿಸು!

3. ಪಿತಾಪುತ್ರಾತ್ಮಕೆ,
ಮಹೋಚ್ಚ ಪೀಠದಲ್ಲಿ
ಕೂತಿರುವಾತಗೆ
ಸಮಸ್ತ ಸೃಷ್ಟಿಯಲ್ಲಿ
ಏಳುತ್ತೆ ಸ್ತೋತ್ರವು!
ತ್ರೈಲೋಕ್ಯಕರ್ತಗೆ
ನಾವೂ ಸಂಗೀತವ
ಹಾಡೋಣ, ಭ್ರಾತ್ರರೆ!

೩೧೫

Allein Gott in der Höh' sei Ehr'.
M. T. 109.

1. ಸರ್ವೋನ್ನತಂಗೆ ಸ್ತೋತ್ರವು!
ಆತಂಗೆ ಸ್ಥಿರ ಸೇವೆ
ಮಾಡೋಣ! ನಾವು ನಿತ್ಯವು
ಸುಭದ್ರ ಬಾಳುತೇವೆ.
ನಮ್ಮಲ್ಲಿ ದೇವರೊಲ್ಮೆಯೂ
ಅನಂತ ಸಮಾಧಾನವೂ;
ನಿಂತ್ಹೋಯಿತೆಲ್ಲ ಕಾಟ.

2. ಸಮಸ್ತಸೃಷ್ಟಿರಾಜನೇ,
ಆಶ್ಚರ್ಯ ನಿನ್ನ ನೀತಿ!
ನಮ್ಮತಿಪ್ರಿಯ ತಂದೆಯೇ,
ಅತ್ಯಂತ ನಿನ್ನ ಪ್ರೀತಿ!
ಅಶೋಧ್ಯ ನಿನ್ನ ಜ್ಞಾನವು;
ಸಂಪೂರ್ಣ ನಿನ್ನ ಶಕ್ತಿಯು!
ನೀ ಒಳ್ಳೆ ಯಜಮಾನ!

3. ಶ್ರೀ ದೇವಪುತ್ರ ಯೇಸುವೆ,
ನೀ ತಂದೇ ಪ್ರತಿಕಾಂತಿ!
ಪಾಪಾಬ್ಧಿಮಗ್ನ ಜನಕೆ
ನಿನ್ನಿಂದ ಬಂತು ಶಾಂತಿ.
ನೋಡೆಮ್ಮ ದುಃಖಸ್ಥಿತಿಯಂ!
ತಾರಯ್ಯ ಹೃದಸುಖವಂ,
ನಮ್ಮಲ್ಲಿ ದಯವಿಟ್ಟು!

4. ದೇವಾತ್ಮ ಪರಿಶುದ್ಧನೆ!
ಸೈತಾನಬಲ ಮುರಿ!
ವಿಮುಕ್ತವಾದ ಸಭೆಗೆ
ಕೊಡೀಶಭಕ್ತಿಯುರಿ!
ನೀ ನೀಗಿಸೆಲ್ಲ ಕಷ್ಟವಂ!
ಕೊಡೈ ವಿಶ್ರಾಂತಿಗತಿಯಂ!
ನಮ್ಮಲ್ಲಿ ವಾಸಮಾಡು!

೩೧೬

O Lord of heav'n and earth and sea.—M. T. 283.

1. ಭೂಪರಲೋಕದೇವರೇ!
ಸಮಸ್ತ ಕೊಡುವಾತನೇ!
ಅನಂತ ಸ್ತೋತ್ರ ನಿನಗೆ,
ದಯಾಳುವೇ!

2. ನಿನ್ನಿಂದ ಸೂರ್ಯ ತಪ್ಪದೆ
ಸದಾ ಉದಯವಾಗುತೆ;
ಅನಂತ ಸ್ತೋತ್ರ ನಿನಗೆ,
ದಯಾಳುವೇ!

3. ಭೂಫಲವನ್ನು ಹುಟ್ಟಿಸಿ
ಸಮಸ್ತ ಜೀವ ಕಾಯುತ್ತೀ;
ಅನಂತ ಸ್ತೋತ್ರ ನಿನಗೆ,
ದಯಾಳುವೇ!

4. ಸಂಸಾರ, ಕ್ಷೇಮ, ಬಾಳಿಕೆ
ನಿನ್ನಾಶೀರ್ವಾದದಿಂದಲೆ;
ಅನಂತ ಸ್ತೋತ್ರ ನಿನಗೆ,
ದಯಾಳುವೇ!

5. ಈ ಲೋಕ ರಕ್ಷಿಸೋದಕೆ
ಮಗನ್ನ ಕೊಟ್ಟ ತಂದೆಯೆ!
ಅನಂತ ಸ್ತೋತ್ರ ನಿನಗೆ,
ದಯಾಳುವೇ!

6. ನೀ ಕೊಟ್ಟ ಶುದ್ಧ ವಾಕ್ಯವು
ನನ್ನಾತ್ಮಕೆ ಆಧಾರವು;
ಅನಂತ ಸ್ತೋತ್ರ ನಿನಗೆ,
ದಯಾಳುವೇ!

7. ಮೇಲ್ಲೋಕದಲ್ಲಿ ಬಾಧ್ಯತೆ
ನಾನೀಯ್ವೆನೆಂದ ತಂದೆಯೆ!
ಅನಂತ ಸ್ತೋತ್ರ ನಿನಗೆ,
ದಯಾಳುವೇ!

8. ನನ್ನನ್ನು ನಿನ್ನ ಸೇವೆಗೆ
ಸಂತೋಷದಿಂದ ಕೊಡುವೆ;
ನಿನ್ನನ್ನು ಮಾತ್ರ ನಂಬುವೆ,
ದಯಾಳುವೇ!

೩೧೭

Ps. 146.
Lobe den Herren, o meine Seele!
M. T. 112.

1. ಕರ್ತನ ಸ್ತೋತ್ರವ ಮಾಡಿರೆಲ್ಲ!
ಸ್ತೋತ್ರವ ಮಾಡೆನ್ನಾತ್ಮವೇ!
ನನ್ನುಸುರಾಡುವ ಕಾಲವೆಲ್ಲ
ಹೊಗಳುತಿರ್ವೆನಾತನ್ನೇ.
ಶರೀರ ಪ್ರಾಣ ಆತ್ಮವು
ಆತನು ಕೊಟ್ಟ ದಾನವು.
ಹಲ್ಲೆಲೂಯ, ಹಲ್ಲೆಲೂಯ!

2. ಅಸ್ಥಿರ ಜಾತಿಯ ರಾಜರಲ್ಲಿ
ನಂಬಿಕೆ ಇಡ ಬಹುದೇ?
ರಕ್ಷಣೆಯಿಲ್ಲದ ನರರಲ್ಲಿ
ಕೋರಿಕೆ ತಾಳ ಬಹುದೇ?
ಸ್ವಜೀವ ಕಾಯಲಾರರು!
ನಿತ್ಯನು ನಮ್ಮ ದೇವರು.
ಹಲ್ಲೆಲೂಯ, ಹಲ್ಲೆಲೂಯ!

3. ತನ್ನ ನಿರೀಕ್ಷೆ ಯೆಹೋವನಲ್ಲಿ
ಇಡುವ ಪಾಪಿ ಧನ್ಯನೆ.
ಯಾಕೋಬನೀಶನ ಕೃಪೆಯಲ್ಲಿ
ನಮ್ಮಯ ನಿತ್ಯ ರಕ್ಷಣೆ.
ಆಕಾಶ ಭೂಮಿ ಸಾಗರ
ಆತನ ಕೈಯ ಕೆಲಸ.
ಹಲ್ಲೆಲೂಯ, ಹಲ್ಲೆಲೂಯ!

4. ಅನ್ಯಾಯ ಹೊಂದಿದ ದೀನರಿಂಗೆ
ತೀರಿಸಿ ನೀತಿನ್ಯಾಯವ,

ಹಸಿದು ಬೇಡುವ ಜನರಿಂಗೆ
ಕೊಡುವನಾತ ರೊಟ್ಟಿಯ;
ಸಮಸ್ತ ಬದ್ಧಜನವ
ಬಿಡಿಸುತಾನೆ ರಕ್ಷಕ.
ಹಲ್ಲೆಲೂಯ, ಹಲ್ಲೆಲೂಯ!

5. ಕೊಡುವನಾತನು ಕಣ್ಗಳನ್ನ
ಕುರುಡರಿಂಗೆ ಕೃಪೆಯಿಂ,
ಭಾರದಿ ಬಾಗಿದ ಪಾಪಿಯನ್ನ
ಎತ್ತುವನಾತ ತಾಳ್ಮೆಯಿಂ;
ಒಬ್ಬೊಬ್ಬ ನೀತಿವಂತನ್ನ
ಮಾಡುವನಾತ ಪ್ರೀತಿಯ.
ಹಲ್ಲೆಲೂಯ, ಹಲ್ಲೆಲೂಯ!

6. ಆಶ್ರಯಸ್ಥಾನವು ನಿತ್ಯದಲ್ಲಿ
ಕರ್ತನು ಪರದೇಶಿಗೆ;
ನಿರ್ಭಯದುರ್ಗವು ಕಷ್ಟದಲ್ಲಿ
ದಿಕ್ಕನ್ನು ಕಾಣದಾತಗೆ.
ಅನಾಥ ವಿಧವೆಯರ್ಗೆ
ಆಧಾರ ನಮ್ಮ ಕರ್ತನೆ.
ಹಲ್ಲೆಲೂಯ, ಹಲ್ಲೆಲೂಯ!

7. ಆದರೆ ದುಷ್ಟರ ಮಾರ್ಗವನ್ನು
ಡೊಂಕಾಗುವಂತೆ ಮಾಡುವ;
ಅವರ ಸರ್ವ ಕುಯುಕ್ತಿಯನ್ನು
ನಶಿಸುತಾನೆ ಒಡೆಯ.
ಸಂಪೂರ್ಣ ಜಯಶಾಲಿಯು
ಯೆಹೋವನಾದ ದೇವರು.
ಹಲ್ಲೆಲೂಯ, ಹಲ್ಲೆಲೂಯ!

8. ಪ್ರೀತಿಯ ದೇವರು ಆಳುತಾನೆ,
ಚಿಯೋನೆ, ಯುಗಯುಗಕೆ;
ಯೆಹೋವನೊಬ್ಬನೆ ಆಗಿದ್ದಾನೆ
ರಾಜಾಧಿರಾಜ ವಿಶ್ವಕೆ.
ಸಮಸ್ತ ಭೂಜನಾಂಗವೆ,
ಸ್ತೋತ್ರವ ಮಾಡು ಕರ್ತಗೆ!
ಹಲ್ಲೆಲೂಯ, ಹಲ್ಲೆಲೂಯ!

9. ಕರ್ತನ ಸ್ತೋತ್ರವ ಮಾಡಿರೆಲ್ಲ!
ಸ್ತೋತ್ರವ ಮಾಡೆನ್ನಾತ್ಮವೇ!
ನನ್ನುಸುರಾಡುವ ಕಾಲವೆಲ್ಲ
ಹೊಗಳುತಿರ್ವೆನಾತನ್ನೇ.
ಶರೀರ ಪ್ರಾಣ ಆತ್ಮವು
ಆತನು ಕೊಟ್ಟ ದಾನವು.
ಹಲ್ಲೆಲೂಯ, ಹಲ್ಲೆಲೂಯ!

೩೧೮

O dass ich tausend Zungen hätte.
M. T. 92.

1. ಸಹಸ್ರ ನಾಲಿಗೆನಗಿದ್ದು,
ಸಹಸ್ರ ಬಾಯ್ಗಳಿದ್ದರೆ,
ಕೃತಜ್ಞನಾಗಿ ಅಡ್ಡ ಬಿದ್ದು,
ಸನ್ನಿಧಿ ಹೃತ್ತಿನಿಂದಲೆ

ದೈವಾನುಗ್ರಹಮಹಿಮೆ
ಆದಷ್ಟು ಹಾಡುತ್ತಿರುವೆ.

2. ನನ್ನಾತ್ಮವೇ, ಸಂತುಷ್ಟನಾದ
ನಿನ್ನಿಂದ ಸ್ತೋತ್ರ ಕೇಳನೋ?
ಎಚ್ಚತ್ತು, ನಿನ್ನ ದೇವರಾದ
ಸರ್ವೇಶನನ್ನು ಸ್ತುತಿಸೋ!
ನನ್ನಲ್ಲಿ ಪ್ರತಿ ಉಸುರು
ಆಗಿರಲೊಂದು ಗೀತವು!

3. ವೃಕ್ಷಾದಿಯೇ, ಅರಣ್ಯದಲ್ಲಿ
ಸರ್ವೇಶನಾಣ್ಮೆ ಹೊಗಳು!
ತೃಣಾದಿಯೇ, ತಗ್ಗಿನ್ನೆಯಲ್ಲಿ
ಯೆಹೋವನೊಳ್ಮೆ ತಿಳಿಸು!
ಸಮಸ್ತ ಚಂದ ಪೂಗಳೇ,
ಸಾರಿರಿ ದೇವಮಹಿಮೆ!

4. ಅದ್ಭುತಕೆಲ್ಲ ಲೆಕ್ಕವಿಲ್ಲ;
ಅದನ್ನು ವರ್ಣಿಸೋದಕೆ
ನನ್ನಲ್ಪ ಶಕ್ತಿ ಸಾಲೋದಿಲ್ಲ;
ಸಮಸ್ತ ಜೀವರಾಶಿಯೆ,
ನಾವೊಟ್ಟಿಗೆಮ್ಮ ದೇವರ
ಸಂಸ್ತುತಿಯನ್ನು ಮಾಡುವ!

5. ಶರೀರ ಜೀವ ಆಸ್ತಿಗಾಗಿ
ನೀ ಸ್ತೋತ್ರಹೊಂದು, ತಂದೆಯೆ!
ಪ್ರಪಂಚದೆನ್ನುದ್ಯೋಗಕಾಗಿ
ನಿನ್ನೊಳ್ಮೆಯಂ ಕೊಂಡಾಡುವೆ;
ಕ್ಷೇಮಾದಿಗಳಿಗೋಸ್ಕರ
ತಕ್ಕೋ ಸಹಸ್ರ ಸ್ತುತಿಯು!

6. ಕ್ರಿಸ್ತ್ಯೇಸುವೇ, ಕಾರುಣ್ಯದಿಂದ
ನೀ ಕ್ರೂರ ಮೃತ್ಯು ಸಹಿಸಿ,
ನನ್ನನ್ನು ನರಕಾಗ್ನಿಯಿಂದ
ವಿಮುಕ್ತನಾಗ ಮಾಡಿದಿ;
ನನ್ನೀಶನಾದ ನಿನ್ನನೆ
ನಿರಂತ್ರ ಹಾಡಿಪಾಡುವೆ.

7. ಪುತ್ರಸ್ವೀಕಾರಮುದ್ರೆಯಾದ
ಪವಿತ್ರ ಆತ್ಮ, ನಿನಗೆ
ಸಂಸ್ತುತಿ! ಎಷ್ಟೊ ಆಶೀರ್ವಾದ
ನಿನ್ನಿಂದ ನಾನು ಹೊಂದಿದೆ!
ನನ್ನಲ್ಲಿ ಒಳ್ಳೆದೆಲ್ಲವು
ನಿನ್ನೋಜೆಯಿಂದ ಆದದ್ದು.

8. ಯಾರೆನ್ನ ಪಾಲಿಸುತಿದ್ದಾರೆ?
ನೀನಲ್ಲವೋ, ಸುಧನಿಯೇ?
ಯಾರೆನ್ನ ಕಾಯುತಿರುತಾರೆ?
ನೀನಲ್ಲವೋ, ಸೈನ್ಯೇಶನೇ?
ನನ್ನಪರಾಧದಾವಳಿ
ಅಮಿತವಾಗಿ ತಾಳಿದಿ.

9. ಸಂತೋಷದಿಂದ ಶಿಕ್ಷೆಯನ್ನು
ನಾ ತಾಳಿ, ನಿನ್ನ ಪ್ರೀತಿಯೆ
ನಂಗಿತ್ತ ಹಾರ ಕ್ರೂಜೆಯನ್ನು,
ಕಿರೀಟ ನೋಡಿ, ಹೊರುವೆ;

ಅದೆನ್ನ ತಿದ್ದೊದಲ್ಲದೆ
ಅಮೂಲ್ಯ ಸಾಕ್ಷಿ ಕೊಡುತೆ.

10. ನನ್ನನ್ನು ಎಲ್ಲ ವ್ಯಥೆಯಲ್ಲಿ
ಉದ್ಧಾರಮಾಡೊ ಕೃಪೆಯು
ನನ್ನಿಡಿ ಜೀವಕಾಲದಲ್ಲಿ
ಎಷ್ಟೋ ಆವರ್ತಿ ತೋಚಿತು!
ಗಂಡಾಂತ್ರ ದೊಡ್ಡದಾಗಲು
ಸಹಾಯ ಕೂಡ ದೊಡ್ಡದು.

11. ನಾ ನಿನ್ನ ಹರ್ಷದಿಂದ
ತುಂಬಿ
ಸದಾ ಕೊಂಡಾಡ ಬೇಕಲ್ಲೋ?
ವಿಜಯವಾಗೊದೆಂದು ನಂಬಿ
ಮುಂದಕ್ಕೆ ಹೋಗ ಬಾರದೋ?
ಸತ್ತೋಗೊ ಗತಿಯಲ್ಲಿಯು
ನಿಶ್ಚಿಂತನಾಗ ಬಲ್ಲೆನು!

12. ಈ ನಾಲಿಗಿನ್ನು ಆಡುವಲ್ಲಿ
ನಿನ್ನೊಲ್ಮೆ ಹಾಡುತಿರುವೆ;
ಈ ಹೃದವಿನ್ನು ಹಾರುವಲ್ಲಿ
ಸದಾ ಸಂಗೀತಭಜನೆ
ನಾ ಗೈದು, ಸ್ವರ ತಪ್ಪಲು,
ನಿಟ್ಟುಸುರಿಟ್ಟು ಹಾಡ್ವೆನು!

13. ಈ ಅಲ್ಪ ಸ್ತುತಿ ಭೂಮಿ
ಯಲ್ಲಿ
ನೀನೊಲಿದಂಗೀಕರಿಸು!
ಅದಿನ್ನು ಮುಂದೆ ದಿವದಲ್ಲಿ
ಇನ್ನೆಷ್ಟೊ ರಮ್ಯವಾದೀತು;
ವಿಮುಕ್ತರೊಂದಿಗ್ಹಾಡುವೆ
ಸಹಸ್ರ ಹಲ್ಲೆಲೂಯವೇ!

೩೧೯

Sollt' ich meinem Gott nicht singen?—M. T. 182.

1. ನನ್ನ ದೇವರೊಲ್ಮೆಯನ್ನು
ನೋಡಿ ಹಾಡದಿರಲೋ?
ಕೃಪೆಯಿಂದ ಸಭ್ಯರನ್ನು
ಆಳುತಾನೆ ಅಲ್ಲವೋ?
ದೇವಹೃತ್ತು, ಮೇರೆಯನ್ನು
ಮರ್ತು, ಪ್ರೀತಿ ಮಾಳ್ಪುದು;
ಆತ ಕಾಯ ಶಕ್ತನು
ದಾಸರಾದ ಭಕ್ತರನ್ನು.
ಎಲ್ಲಾ ತೀರಿಹೋದರು
ದೇವಪ್ರೀತಿ ತೀರದು.

2. ಹದ್ದು ತನ್ನ ಮರಿ ಮೇಲೆ
ರೆಕ್ಕೆ ಹೊದಿಯುತ್ತದೆ;
ಹಾಗೆನ್ನನ್ನು ಎಷ್ಟೋ ವೇಳೆ
ದೇವಹಸ್ತ ಮುಚ್ಚುತೆ.
ಆತ ತಾಯ್ಯ ಗರ್ಭದಲ್ಲಿ
ನನ್ನನುಂಟು ಮಾಡಿದ;
ಇಂದಿಗೆನಗಿರುವ
ಜೀವವಿಹುದಾತನಲ್ಲಿ.

ಎಲ್ಲಾ ತೀರಿಹೋದರು
ದೇವಪ್ರೀತಿ ತೀರದು.

3. ನನ್ನಲಿಟ್ಟ ಪ್ರೀತಿಯಿಂದ
ಪುತ್ರನನ್ನು ಕೊಟ್ಟನು.
ದೇವಪುತ್ರರಕ್ತದಿಂದ
ನರಕಾಗ್ನಿ ಆರಿತು.
ದೇವಪ್ರೀತಿಗಳವಿಲ್ಲ,
ಇಲ್ಲವೆನ್ನು, ಮನವೆ!
ನಿನ್ನ ಅಲ್ಪ ಬುದ್ಧಿಗೆ
ನೆಲವೆಂದೂ ಕಾಣೋದಿಲ್ಲ.
ಎಲ್ಲಾ ತೀರಿಹೋದರು
ದೇವಪ್ರೀತಿ ತೀರದು.

4. ವಾಗ್ಮುಖಾಂತ್ರ ತಂದೆಯಿಂದ
ಬಂದ ಶುದ್ಧ ಆತ್ಮನು
ಪರಕೆನಗಿಹದಿಂದ
ಹಾದಿ ತೋರಿಸುವನು.
ಈತ ನನ್ನ ಮನಸನ್ನು
ಸಲೆ ಬೆಳಕಾಗಿಸಿ,
ಮೃತಿ ಜೈಸಿ, ಘನದಿ
ಗೆಲ್ಲುತಾನೆ ನರ್ಕವನ್ನು.
ಎಲ್ಲಾ ತೀರಿಹೋದರು
ದೇವಪ್ರೀತಿ ತೀರದು.

5. ಕಾಯುತಾನೆ ಭದ್ರವಾಗಿ
ನನ್ನ ಆತ್ಮಸುಖವ;
ಮೈಗವಶ್ಯವಿರಲಾಗಿ,
ಬಪ್ಪುದನ್ನವಸನ.
ಲೋಕದಲ್ಲಿ ಬುದ್ಧ್ಯುಪಾಯ
ಕಾಣದಿರೆ, ಹೆದರೆ;
ಬಲಹೀನ ದಾಸಗೆ
ಈಯ್ವನೀಶನೇ ಸಹಾಯ!
ಎಲ್ಲಾ ತೀರಿಹೋದರು
ದೇವಪ್ರೀತಿ ತೀರದು.

6. ಭೂಮ್ಯಾಕಾಶಬಲಸೇನೆ
ನನ್ನ ಸೇವೆಗಿಟ್ಟನು.
ತುಂಬಾ ತೃಪ್ತನಾಗುತೇನೆ.
ಕಂಡದೆಲ್ಲ ನನ್ನದು.
ಗುಡ್ಡ, ಹಳ್ಳ, ಕಡಲ್, ರೇವು,
ಪೃಥ್ವಿ, ಅಂತರಿಕ್ಷವು
ಎಲ್ಲ ನನ್ನದೆಲ್ಲಿಯೂ
ದೇವರಿತ್ತನೆಂಗೆ ಮೇವು.
ಎಲ್ಲಾ ತೀರಿಹೋದರು
ದೇವಪ್ರೀತಿ ತೀರದು.

7. ಎಂದೂ ಚಿಂತೆ ಮಾಡಲಾರೆ.
ಕಷ್ಟ ತೀರೆ ಮಲಗಿ
ಭದ್ರವಾಗಿದ್ದೇನ್, ಹೊತ್ತಾರೆ
ಏಳುತೇನೆ ಸುಖದಿ.
ನನ್ನನ್ನನುಗ್ರಹದಿಂದ
ದೇವ ಕಾಯದಿದ್ದರೆ,
ನನಗೆಲ್ಲಿ ರಕ್ಷಣೆ
ನಾನಾ ಉಪದ್ರಂಗಳಿಂದ?
ಎಲ್ಲಾ ತೀರಿಹೋದರು
ದೇವಪ್ರೀತಿ ತೀರದು.

8. ತಂದೆ ನಿಜಪುತ್ರನನ್ನು
ತಳ್ಳಿ ಬಿಡಲೊಲ್ಲನು;
ಮಗುವಲ್ಲಿ ದೋಷವನ್ನು
ಕಂಡದನ್ನು ಕೊಲ್ಲನು.
ಕ್ರೂರ ಕತ್ತಿಯಿಂದ ಅಲ್ಲ,
ಬೆತ್ತದಿಂದ ಹೊಡೆದು,
ದಯಾಪೂರ್ಣ ದೇವರು
ಸಿದ್ಧಿಗೆನ್ನ ತರ ಬಲ್ಲ.
ಎಲ್ಲಾ ತೀರಿಹೋದರು
ದೇವಪ್ರೀತಿ ತೀರದು.

9. ನಾನು ಪೆಟ್ಟು ತಿನ್ನುವಾಗ,
ಕಣ್ಣೀರೆಂಗೆ ಬಪ್ಪುದು;
ಮತ್ತೆ ಬುದ್ಧಿ ಹುಟ್ಟಿದಾಗ,
ನಂಬಿ, ಧೈರ್ಯವಹೆನು.
ಲೋಕ ನನ್ನ ಹೃತ್ತು ಕದ್ದು-
ಕೊಳ್ಳಧಾಗೆ, ಶಿಕ್ಷೆಯೆ
ಬೇಕು ಹೆಡ್ಡ ಮಗಗೆ;
ಕ್ರೂಜೆ ನನಗೊಳ್ಳೆ ಮದ್ದು.
ಎಲ್ಲಾ ತೀರಿಹೋದರು
ದೇವಪ್ರೀತಿ ತೀರದು.

10. ದುಃಖ ಪಟ್ಟರೂ, ಅಭಯ
ಕೊಡೊ ವಾಕ್ಯ ಸ್ಥಿರವೆ;
ಶ್ರಮೆ ತೀರಿದಾಗ, ದಯ
ಹೊಂದಿ ತೃಪ್ತನಾಗುವೆ.
ಶಿಕ್ಷಾವೃಷ್ಟಿ ಬೀಳುವಾಗ,
ಪ್ರೀತಿಸೂರ್ಯ ತೋರನು;
ಮತ್ತೆ ಕಾಂತಿ ಕೊಡೋನು
ಪಾಪಮೇಘ ಹರಿದಾಗ.
ಎಲ್ಲಾ ತೀರಿಹೋದರು
ದೇವಪ್ರೀತಿ ತೀರದು.

11. ನಿನ್ನ ಪ್ರೀತಿಗಳವಿಲ್ಲ;
ನಾನು ಹ್ಯಾಗು ಹೆದರೆ.
ನೀನು ತಳ್ಳಿ ಬಿಡೊದಿಲ್ಲ
ಮಗನನ್ನು, ತಂದೆಯೆ!
ಜೀವವೆನಗಿರುವಲ್ಲಿ
ದಯೆಯಿಂದ ನನ್ನನು
ಗಟ್ಟಿ ನೆಲೆಗೊಳ್ಳಿಸು
ನಿನ್ನ ದಿವ್ಯ ಪ್ರೀತಿಯಲ್ಲಿ!
ಇಹ ಕಳೆಯುತ್ತಲೆ,
ಪ್ರೀತಿಯೈಕ್ಯಕ್ಕೋಗುವೆ.

೩೨೦

Nun lob', mein' Seel', den Herren.
M. T. 193.

1. ನನ್ನಾತ್ಮ, ಕರ್ತನನ್ನು
ಆಸಕ್ತಿಯಿಂದ ಸ್ತುತಿಸು!
ಕೃಪಾತಿಶಯವನ್ನು
ನೀ ಮರ್ಯದಿರು ಎಂದಿಗು!
ನಿನ್ನೀಶ ನಿನ್ನ ಪಾಪ
ತಾನ್ ಹೊತ್ತು ದೇಹದೊಳ್,
ಸಮಸ್ತ ನಿನ್ನ ಶಾಪ
ತಾನ್ ತಾಳ್ದ ಕ್ರೂಜೆಯೊಳ್.

ಸದ್ಭಕ್ತ, ನಿಂದೆಯನ್ನು
ತಾಳ್! ಇನ್ನು ಯೇಸುವು
ಸ್ವರಾಜ್ಯಮಾನವನ್ನು
ಸುಭಕ್ತಗೀಯ್ವನು.

2. ಪವಿತ್ರ ನ್ಯಾಯವನ್ನು
ಯೆಹೋವ ನಮಗಿತ್ತನು;
ಆದಾಗ್ಯು ಕೃಪೆಯನ್ನು
ಕೊಡೋನು ಶಾಂತಿಯರಸು.
ವಿನಾಶ ಗೈವ ಸಿಟ್ಟು
ತಾ ಬಿಟ್ಟು ರಕ್ಷಕ
ಕಾಯೋನು ದಯವಿಟ್ಟು
ದೀನಾತ್ಮಜನವ.
ಪೂರ್ವಕ್ಕೆ ಎಷ್ಟು ದೂರ
ಇರೋದೊ ಪಶ್ಚಿಮ,
ಮಾಡೋನು ಅಷ್ಟು ದೂರ
ನಮ್ಮಪರಾಧವ.

3. ಸುಪಿತೃ ಮಕ್ಕಳಿಂಗೆ
ಎಂಬಂತೆ ಕರ್ತ ದೇವರು
ಸ್ವಕೀಯ ಭಕ್ತರಿಂಗೆ
ಕಟಾಕ್ಷವಿಡುತಿಹನು.
ನಮ್ಮನ್ನು ಆತ ಬಲ್ಲ;
ಮಣ್ಣೆಮ್ಮ ಕಾಯವು,
ನಾಂ ಗಟ್ಟಿಯವರಲ್ಲ,
ಹೂವಂತೆ ಇಹೆವು;
ಹೊತ್ತೇರಿ ಕಾಯಲಾಗಿ
ಅದಿಲ್ಲಧೋಗೊದು;
ಬರೋದು ಶೀಘ್ರವಾಗಿ
ಮನುಷ್ಯನಂತ್ಯವು.

4. ದಿವ್ಯಾನುಗ್ರಹವೊಂದೆ
ಯಾವಾಗ್ಯು ಸ್ಥಿರವಾದದು;
ಸದ್ಭಕ್ತರಿಂಗಿದೊಂದೆ
ಪ್ರತೀಕ್ಷಾಬಲದುರ್ಗವು.
ಯೆಹೋವನಾಳುತಾನೆ
ಭೂಪರಲೋಕದಿ;
ನಮ್ಮಪ್ಪನಾಗಿದ್ದಾನೆ.
ಇಂಪಾಗಿ ಹಾಡಿರಿ
ಈ ದೊಡ್ಡ ನಾಮವನ್ನು,
ಬಲಿಷ್ಠ ದೂತರೇ!
ನೀನೂ ಯೆಹೋವನನ್ನು
ಕೊಂಡಾಡೆನ್ನಾತ್ಮವೇ!

೩೨೧

Herr, dir ist niemand zu vergleichen.—M. T. 188.

1. ನನ್ನಾತ್ಮವೇ, ಯೆಹೋವನನ್ನು
ಕೊಂಡಾಡಿ. ದಿವ್ಯ ನಾಮವನ್ನು
ವಿನಯವಾಗಿ ಸ್ತುತಿಸು!
ಸರ್ವೇಶನತಿಕೃಪೆಯನ್ನು,
ಸಮಸ್ತ ಉಪಕಾರವನ್ನು
ನೀ ಧ್ಯಾನಮಾಡು ನಿತ್ಯವು!
ಯೆಹೋವ ಪಾಪರೋಗವನ್ನು
ಸಂಪೂರ್ಣ ಸ್ವಸ್ಥ ಮಾಡಿದ;

ಯೆಹೋವ ಆತ್ಮಶಾಂತಿಯನ್ನು
ಕೊಟ್ಟೋಡಿಸೋನು ಭಯವ.

2. ಯೆಹೋವ ದಿವ್ಯ ಕೃಪೆ
ಯಿಂದ,
ಆಶ್ಚರ್ಯವಾದ ಸ್ನೇಹದಿಂದ
ಸಂತೃಪ್ತಿ ಮಾಡ ಬಲ್ಲನು.
ಉತ್ಥಾನದೊಳ್ ಸಮಾಧಿಯಿಂದ
ನಾವೆದ್ದು, ದೇವಹಸ್ತದಿಂದ
ಕಿರೀಟ ಪಡಕೊಂಬೆವು.
ಯೆಹೋವ ಬಡ ಜನರನ್ನು
ಯಾವಾಗ್ಯೂ ನಡಿಸುವನು.
ಸದಾತ್ಮ ಭಕ್ತಸಭೆಯನ್ನು
ಆನಂದ ಪಡಿಸುವನು.

3. ನಮ್ಮಲ್ಲಿ ಬಿದ್ಧ ಶಾಪವನ್ನು,
ನಮ್ಮಾತ್ಮದೇಹವ್ಯಥೆಯನ್ನು
ಯೆಹೋವನೆಲ್ಲ ತಿಳಿದು,
ನಮ್ಮಪರಾಧ ತೆಗೆದ್ಹಾಕಿ,
ನಮ್ಮನ್ನು ಮಕ್ಕಳಂತ ಸಾಕಿ,
ಸ್ವೀಕಾರ ಮಾಡಿಕೊಂಡನು.
ನನ್ನಾತ್ಮವೇ, ಸಂಗೀತ ಹಾಡು
ಭೂಪರಲೋಕರಾಜಗೆ!
ಕಟಾಕ್ಷನಿಧಿ ಸ್ತೋತ್ರ ಮಾಡು,
ವಿಮುಕ್ತವಾದ ಮನವೆ!

೩೨೨

Womit soll ich dich wohl loben.
M. T. 161.

1. ಕರ್ತ, ಯಾವ ರೀತಿಯಿಂದ
ನಿನ್ನ ಸ್ತುತಿ ಮಾಡಲಿ?
ನನಗೀಗ ಮೇಲಿನಿಂದ
ತ್ರಾಣ ಕೊಡು ದಯದಿ!
ನಿನ್ನ ಪ್ರೀತಿ ಅತಿಶಯ!
ಅತಿರಿಕ್ತ ನಿನ್ನ ದಯ!
ಲಕ್ಷ ಸ್ತೋತ್ರ ನಿನಗೆ
ಆಗಲೆನ್ನ ದೇವರೆ!

2. ನಿನ್ನ ಸತ್ಯ, ಪ್ರೀತಿ, ತ್ರಾಣ,
ದೃಢ ಅನುಗ್ರಹವು
ನನ್ನ ಹೃದದೇಕಧ್ಯಾನ
ನಿತ್ಯ ಹಗಲಿರುಳು!
ಗತಿಯೇನು? ನಿನ್ನ ಪಾದ!
ಮುಕ್ತಿ? ನಿನ್ನ ಆಶೀರ್ವಾದ!
ಲಕ್ಷ ಸ್ತೋತ್ರ ನಿನಗೆ
ಆಗಲೆನ್ನ ದೇವರೆ!

3. ಜಾರಿ ನಿನ್ನ ಮಾರ್ಗದಿಂದ
ಪಾಪ ಹೆಚ್ಚು ಮಾಡಿದೆ;
ನಿನ್ನ ದೀರ್ಘಶಾಂತಿಯಿಂದ
ಲಜ್ಜೆಯಾಯಿತೆನಗೆ.
ಕನಿಕರವುಳ್ಳ ತಂದೆ,
ಕ್ಷಮೆಯನ್ನು ಬೇಡ ಬಂದೆ.

ಲಕ್ಷ ಸ್ತೋತ್ರ ನಿನಗೆ
ಆಗಲೆನ್ನ ದೇವರೆ!

4. ಪೂರ್ಣ ಅನುಗ್ರಹದಿಂದ
ನೀನು ನನ್ನ ನಡಿಸಿ,
ನಾನು ಹುಟ್ಟಿದಂದಿನಿಂದ
ದಯ ಮಾತ್ರ ಮಾಡಿದಿ.
ಪ್ರತಿಯಾಗಿ ಕೊಡಲೇನು?
ಹಂಗು ಹ್ಯಾಗೆ ಸಲ್ಲಿಸೇನು?
ಲಕ್ಷ ಸ್ತೋತ್ರ ನಿನಗೆ
ಆಗಲೆನ್ನ ದೇವರೆ!

5. ನನ್ನ ಭಕ್ತಿಯಂ ಪರೀಕ್ಷೆ
ಮಾಡ ನೀನು ಯೋಚಿಸಿ,
ಈಗ ಪ್ರೀತಿ, ಆಗ ಶಿಕ್ಷೆ
ನನಗಾಗ ಮಾಡಿದಿ.
ಆದೆನೀಗ ನಿನ್ನ ದಾಸ!
ನಿನ್ನ ಚಿತ್ತ ನನ್ನಭ್ಯಾಸ.
ಲಕ್ಷ ಸ್ತೋತ್ರ ನಿನಗೆ
ಆಗಲೆನ್ನ ದೇವರೆ!

6. ಪ್ರಿಯ ತಂದೆ, ಪೂರ್ಣ ಪ್ರೀತಿ
ನೀನು ಮಾಡಿದೆನಗೆ.
ನಿನ್ನ ದಯವುಳ್ಳ ರೀತಿ,
ಯೇಸು, ರುಚಿ ನೋಡಿದೆ.
ಆತ್ಮ, ನಿನ್ನ ಶುದ್ಧ ಕಾಂತಿ
ನನಗೆಂದಿಗೂ ವಿಶ್ರಾಂತಿ.
ಲಕ್ಷ ಸ್ತೋತ್ರ ನಿನಗೆ,
ದೇವರೇ, ತ್ರಯೈಕನೆ!

೩೨೩

Mel. Alle Menschen müssen sterben.—M. T. 159.

1. ಹ್ಯಾಗೆ ನಾನ್, ಇಮ್ಮಾನು
ವೇಲೆ,
ನಿನ್ನ ಸ್ತೋತ್ರ ಹಾಡಲಿ?
ಅನುದಿನ ಕೃಪೆ ಮೇಲೆ
ಕೃಪೆಯನ್ನು ಕೊಡುತಿ!
ನೀ ಸಹಾಯಕಾಗಿ ಬಂದಿ;
ನೀನು ಅನ್ನಪಾನ ತಂದಿ
ಸಾಯುವಂಥ ಪಾಪಿಗೆ,
ನನ್ನ ಪ್ರಿಯ ಮಿತ್ರನೆ!

2. ದೂರ ಹೋದೆ; ದೂರದಿಂದ
ನೀನು ನನ್ನ ಕರೆದೆ.
ನರಕಾಗ್ನಿಹಾದಿಯಿಂದ
ನನ್ನನೆಳ್ದಿ, ಯೇಸುವೆ!
ಈಗ ಸುಖ ಪಡುತೇನೆ;
ನಿನ್ನ ದಾಸನಾಗಿದ್ದೇನೆ;
ನಿನ್ನ ಪಾದ ಹಿಡಿದು
ಮುಕ್ತನಾಗಿರುವೆನು.

3. ಲೋಕಕಾಡಿನಲ್ಲಿ ಸುಖ
ನನಗೇನು ಸಿಕ್ಕಿತು?
ಒಳ್ಳೆ ಕುರುಬನ ಮುಖ
ನೋಡಿ ಸುಖ ಪಟ್ಟೆನು.
ನೀನೆ ದಿವ್ಯ ಯಜಮಾನ;
ತೃಪ್ತಿ, ಕ್ಷೇಮ, ಸಮಾಧಾನ

ಕೊಡ ನೀನೆ ಶಕ್ತನು;
ನಿತ್ಯ ದ್ರವ್ಯ ನಿನ್ನದು.

4. ನೀನು ಧೈರ್ಯ ಕೊಡಲಾಗಿ,
ಚಿಂತೆ ನನಗಿಲ್ಲವು;
ಕ್ರಿಸ್ತ, ನಿನ್ನ ಭಕ್ತನಾಗಿ
ಸುಖದಿಂದಲಿರ್ವೆನು.
ನಿನ್ನದಧಿಕಾರವೆಲ್ಲ,
ಸರ್ವಲೋಕಘನವೆಲ್ಲ,
ನೀನು ಎಲ್ಲ ಆಳುತಿ;
ನನ್ನ ನೀನೆ ಕಾಯುವಿ!

೩೨೪

Awake and sing the song.
M. T. 5.

1. ನಾಂ ಮೋಶೆಗೀತವ
ಹಾಡೋಣ, ಭ್ರಾತ್ರರೇ!
ಪವಿತ್ರ ಕುರಿಮರಿಯ
ಕೊಂಡಾಡು, ಸಭೆಯೇ!
|: ಕೊಂಡಾಡಿರಿ ಕರ್ತನನ್ನು :|
|: ಹಲ್ಲೆಲೂಯಾ! :|
ಕರ್ತನನ್ನು ಕೊಂಡಾಡಿರಿ!

2. ಸತ್ಕೋದ ಪ್ರೀತಿಯು,
ಉತ್ಥಾನಘನವು,
ಪ್ರಧಾನಯಾಜಕತ್ವವು,
ಇವನ್ನು ಸ್ತುತಿಸು!
ಕೊಂಡಾಡಿರಿ. . . . .

3. ಚೀಯೋನ ಪಟ್ಣಕೆ
ಪ್ರಯಾಣ ಮಾಡಲು,
ಒಂದೇ ಸಂತೋಷ ಭಕ್ತಗೆ
ಆ ಕುರಿಮರಿಯು.
ಕೊಂಡಾಡಿರಿ . . . . . .

4. ಕ್ರಿಸ್ತ್ಯೇಸು ಬೇಗನೆ
ನಮ್ಮನ್ನು ಕರೆದು,
ಸ್ವದೇಶಮುಕ್ತಿಸ್ಥಾನಕೆ
ಪ್ರೀತೀಲಿ ವೈಯ್ವನು.
ಕೊಂಡಾಡಿರಿ. . . . .

5. ನೀನಲ್ಲಿ ಕೊಡುವ
ಸಂತೋಷ ತೀರದು;
ಹಾಡೋದು ಹೊಸ ಗೀತವ
ವಿಮುಕ್ತ ಗಣವು.
ಕೊಂಡಾಡಿರಿ. . . . .

೩೨೫

Mel. God save the King.
M. T. 101.

1. ಬಾಳಲಿ ದೇವಜ!
ಆಳಲಿ ಮಾನವ
ಗೋತ್ರವನು!
ನೀತಿಯ ರಾಜನೇ,
ಪ್ರೀತಿಯ ಗುರುವೇ,
ಗೀತದ ಗುರಿಯೇ,
ಸ್ತೋತ್ರ ಪಡು!

2. ಮಾನದ ಉನ್ನತ
ಸ್ಥಾನದಿಂದಿಳಿದ
ಸರ್ವಪತಿ.
ಅಗಲಿ ತಂದೆಯ,
ಜಗತ್ತಿಗೋಸ್ಕರ
ರಕ್ತವ ಚೆಲ್ಲಿದ
ಪರ್ವತದಿ.

3. ನೀತಿಯ ದೇವರೇ,
ಪ್ರೀತಿಯ ಮಾಡಿದೆ
ಪರರಿಗೆ.
ತಾಪವ ಸೈರಿಸಿ,
ಶಾಪವ ತಾಳಿದಿ;
ಪಾಪವ ಬಿಟ್ಟಿಧಿ
ನರರಿಗೆ.

10. ವಿಶೇಷ ಕಾಲಗಳಿಗೆ ತಕ್ಕ ಗೀತಗಳು

೧. ಪ್ರಾತಃಕಾಲ

೩೨೬

Lobet den Herren, alle die ihn ehren.—M. T. 47.

1. ಕೊಂಡಾಡಿರೆಲ್ಲ ನಮ್ಮ ಕರ್ತ
ನನ್ನು !
ಸಂತೋಷದಿಂದ ಗೀತವನ್ನು
ಹಾಡಿ,
ಸಂಸ್ತುತಿ ಪ್ರಾರ್ಥನಾದಿ ಯಜ್ಞ
ಮಾಡಿ
ಕೊಂಡಾಡಿರೆಲ್ಲಾ !

2. ಸಂದ್ಹೋದ ರಾತ್ರಿ ಪಿತೃಪ್ರೇ
ಮದಿಂದ
ರಕ್ಷಿಸಿದ್ದಾನೆ ಜೀವವಂ ಕಾಪಾಡಿ
ನಿದ್ರೆಯೊಳಿಂದ ನಮ್ಮನ್ನೇಳ
ಮಾಡಿ.
ಕೊಂಡಾಡಿರೆಲ್ಲಾ !

3. ಆರೋಗ್ಯದಿಂದ ನಾವೀಹೊ
ತ್ತು ಎದ್ದು
ಕೈ ಕಾಲಿತ್ಯಾದಿ ಇಂದ್ರಿಯವ್ಯಾ
ಪಾರ
ಸ್ವಸ್ಥದಿಂದಿರೋದಾತನುಪಕಾರ.
ಕೊಂಡಾಡಿರೆಲ್ಲಾ !

4. ರಕ್ಷಿಸುವಾತ, ಸರ್ವಸುಖ
ದಾತ
ನೀನೆಮ್ಮ ಕರ್ತ! ಇನ್ನು ನಿನ್ನ
ದಯ

ಹಗಲು ರಾತ್ರಿ ಪಾಲಿಸೆಮಗಯ್ಯ!
ಕೊಂಡಾಡುತ್ತೇವೆ.

5. ನಾವಿಂದು, ಕರ್ತಾ, ನಿನ್ನ ಮರೆಯಲ್ಲಿ
ಸುಭದ್ರರಾಗಿ ಚಿಂತೆ ಭಯ ಬಿಟ್ಟು
ಸಂಸಾರ ಮಾಡಲೀಸು ದಯ ಇಟ್ಟು!
ಕೊಂಡಾಡುತ್ತೇವೆ.

6. ನಿನ್ನ ಸದ್ವಾಕ್ಯ ಹೇಳಿದಂತೆ ಮಾಡ
ನಮ್ಮೆಲ್ಲರಿಂಗೆ ಬುದ್ಧಿಬಲವನ್ನು
ಕೊಟ್ಟು ಪ್ರತಿಷ್ಠೆ ಮಾಡು ಮನಸನ್ನು.
ಕೊಂಡಾಡುತ್ತೇವೆ.

7. ಭಕ್ತರ ಮೋಕ್ಷಾದಿತ್ಯ ಮೂಡುವಲ್ಲಿ
ನಾವೂ ವಿಮುಕ್ತರಾಗಿ ಕೃಪೆಯಿಂದ
ದೂತರ ಕೂಡ ಹರ್ಷಧ್ವನಿಯಿಂದ
ಕೊಂಡಾಡುತ್ತೇವೆ.

೩೨೭

Die güldne Sonne.—M. T. 175.

1. ಬಂಗಾರಾದಿತ್ಯ
ಭೂಮಿಗಾಲಿ ನಿತ್ಯ
ಪ್ರಕಾಶ ಚಲ್ಲಿ
ಮನಗಳಲ್ಲಿ
ಆನಂದಪೂರ್ತಿಯ ಹೊಯ್ಯುವನು.
ಸುಶಾಂತ ನಿದ್ದೆ
ನಾ ಮಾಡುತಲಿದ್ದೆ;
ಈಗೇಳಲಾಗಿ
ಹೃತ್ಸಂತಸವಾಗಿ
ದಿವಕೆ ಮುಖವನೆತ್ತಿದೆನು.

2. ಹಾಡೋಣ! ಬನ್ನಿ!
ಕರ್ತಂಗೆ ತನ್ನಿ
ದಾನಂಗಳನ್ನು!
ಸಮಸ್ತವನ್ನು
ಕರ್ತನಿಗರ್ಪಿಸ ಯೋಗ್ಯವದೆ!
ಪ್ರಾಮುಖ್ಯ ದಾನ
ಇಗೋ ನಮ್ಮ ಪ್ರಾಣ!
ದೀನ, ನಿರ್ಭೀತ
ಹೃದ್ವೀಣೆಯ ಗೀತ
ಉತ್ತಮ ಧೂಪವು ಕರ್ತನಿಗೆ!

3. ಕೃಪೆಯ ವರ,
ಕೇಡಿನ ಹರ,
ದಿನದ ಕಾಂತಿ,
ರಾತ್ರಿಯ ಶಾಂತಿ
ಅತನ ದಯೆಯ ಕೃತ್ಯಗಳು.
ಆತನು ತಂದ
ವಿಶ್ರಮವು ಚಂದ!

ಏಳೋದಕಾಗಿ
ಸೂರ್ಯೋದಯವಾಗಿ
ಆತನ ದಯೆ ಪ್ರದರ್ಶಿಸೋನು.

4. ಕರ್ತಾ, ನೀ ನನ್ನ
ಪಾಪಂಗಳನ್ನ,
ಕಟಾಕ್ಷವಿಟ್ಟು,
ಸುಟ್ಟಾಕಿ ಬಿಟ್ಟು,
ದೇವರೆ, ಮನ್ನಿಸು ದುಷ್ಟನಿಗೆ!
ಮುಂದಾಗೊ ಸುಖ,
ಮತ್ತಾಗುವ ದುಃಖ
ನಿನ್ ಹಸ್ತದಲ್ಲಿ;
ನೀನೆಲ್ಲವ ಬಲ್ಲಿ.
ನಿನಗೆ ಎಲ್ಲವನೊಪ್ಪಿಸಿದೆ.

೩೨೮

Wach' auf, mein Herz, und singe.
M. T. 15.

1. ನನ್ನಾತ್ಮಾ! ಎಚ್ಚತ್ತೇಳು!
ಸರ್ವೇಶ ಸ್ತೋತ್ರ ಹೇಳು!
ಸಮಸ್ತದಾನದಾತ,
ಸದ್ಭಕ್ತಪಾಲನಾತ.

2. ಪಿಶಾಚಿ ಕತ್ತಲಲ್ಲಿ
ಕಾದಾಡ ಬಗೆದಲ್ಲಿ
ನೀನಡ್ಡಿ ಮಾಡಿ ಬಿಟ್ಟೆ,
ನಂಗಾಗಿ ಕಾವಲಿಟ್ಟೆ.

3. ನಿನ್ನಾಜ್ಞೆಗನುಸಾರ
ನಂಗಾಯ್ತುಪಾಯಹಾರ.
ನಾ ಮಾಡಿ ಸುಖನಿದ್ದೆ
ಹೊತ್ತೇರಿದೊಡನೆದ್ದೆ.

4. ಸಂಗೀತ, ಜಪ, ಸ್ತೋತ್ರ
ನಾನರ್ಪಿಸುವ ಹೋತ್ರ.
ಸ್ವೀಕರಿಸೆಲ್ಲವನ್ನು
ಹರಸು ನೀ ನನ್ನನ್ನು!

5. ಕೊಟ್ಟೆಂದು ದೂತರನ್ನ
ಕಾಪಾಡಿ ರಕ್ಷಿಸೆನ್ನ!
ಈಯ್ ಪರಮಾರ್ಥಸಿದ್ಧಿ,
ಪ್ರಪಂಚಕಾರ್ಯವೃದ್ಧಿ!

6. ಸುದಾನಪೂರ್ತಿ ನೀಡು,
ನನ್ನಾತ್ಮ ನಿನ್ನ ಬೀಡು,
ಆಹಾರ ನಿನ್ನ ವಾಕ್ಯ,
ನನ್ನಂತ್ಯ ಸ್ವರ್ಗಭಾಗ್ಯ.

೩೨೯

Ps. 5.
Lord, in the morning thou shalt hear.—M. T. 21.

1. ಹೊತ್ತಾರೆ, ಕರ್ತ, ನಿನಗೆ
ನಾನಡ್ಡ ಬೀಳ್ವೆನು;
ಹೊತ್ತಾರೆ ನಿನ್ನ ಪೀಠಕೆ
ವಿಜ್ಞಾಪನೇಳ್ವದು.

2. ನಿನ್ನತಿಪ್ರಿಯ ನಾಮಕೆ
ಸಂಸ್ತುತಿ ಅರ್ಪಿಸಿ,
ಸದ್ಭಕ್ತಸಭೆಯೆಡೆಗೆ
ನಾನೆಂದು ಸೇರಲಿ ?

3. ನಿನ್ ವಾಕ್ಯ ನನ್ನ ಪಾದಕೆ
ಸುಜ್ಯೋತಿದೀಪವು;
ಪಾಪಾತ್ಮಮೋಸಮಾಯೆಗೆ
ನನ್ನಾತ್ಮ ತಪ್ಪಿಸು!

4. ವಿಶ್ವಾಸಿಯನ್ನು, ಕರ್ತನೆ,
ನೀನಾಶೀರ್ವದಿಸು!
ಗುರಾಣಿ ನಿನ್ನ ಕೃಪೆಯೇ!
ಕಾಪಾಡು ನಿತ್ಯವು.

———

೩೩೦

Gott des Himmels und der Erden. M. T. 80.

1. ಸರ್ವಲೋಕ ದೇವರಾದ
ತಂದೆ ಪುತ್ರ ಆತ್ಮನೇ!
ನಿನ್ನತ್ಯಂತ ಪ್ರಿಯವಾದ
ಕನಿಕರದಿಂದಲೇ
ಇಹದಿನಬೆಳಕು
ನನ್ನ ಮೇಲೆ ಮೂಡಿತು.

2. ಪಾಪವೆಂಬ ರಾತ್ರಿಯನ್ನು
ಪರಿಹರಿಸ್ಯೇಸುವೇ!
ನಿನ್ನ ಕ್ರೂಜೆನೀತಿಯನ್ನು
ಮೂಡಿಸೆನಗ್! ಆಗಲೇ
ಕ್ಷೇಮ ದೊರಕುತದೆ
ಭ್ರಷ್ಟನಾದ ನನಗೆ.

3. ಪರಿಶುದ್ಧ ದೂತನನ್ನು
ಮಿತ್ರನಾಗಿ ನೇಮಿಸಿ,
ಶತ್ರುವೋಸತಂತ್ರವನ್ನು
ಹೀನ ಮಾಡು! ಅಂತ್ಯದಿ
ಶಾಂತಿಗಾಗಿ ನನ್ನನು
ಮೋಕ್ಷದಲ್ಲಿ ಸೇರಿಸು!

———

೩೩೧

Mit Jesu fang' ich an.—M. T. 119.

1. ಕ್ರಿಸ್ತ್ಯೇಸುವೊಡನೇ
ನಾ ಕಾರ್ಯ ತೊಡಗೋದು;
ಕ್ರಿಸ್ತ್ಯೇಸುವೊಡನೇ
ನಾ ಕಾರ್ಯ ಮುಗಿಸೋದು.
ಕಣ್ದೆರೆದಿರಲು,
ಕಣ್ಮುಚ್ಚುವಾಗಲು
ಕ್ರಿಸ್ತ್ಯೇಸುವಲ್ಲಿಯೇ
ಹೃದ್ದೃಷ್ಟಿ ಇಹುದು.

2. ಕ್ರಿಸ್ತ್ಯೇಸುವಿದ್ದರೆ
ಸಂದೇಹ, ಭೀತಿ ಏಕೆ?
ಕ್ರಿಸ್ತ್ಯೇಸುಶಿಷ್ಯಗೆ
ಜಗದ್ವಿಚಾರವೇಕೆ?
ಕ್ರಿಸ್ತ್ಯೇಸುದಯೆಯು
ಅಮಿತ ಭಾಗ್ಯವು;

ಕ್ರಿಸ್ತ್ಯೇಸುಸಾಮೀಪ್ಯ
ಆನಂದದಬ್ಧಿಯು.

3. ಕ್ರಿಸ್ತ್ಯೇಸುವಾಕ್ಯವು
ಅಮೂಲ್ಯ ಮಂತ್ರಘೋಷ;
ಕ್ರಿಸ್ತ್ಯೇಸುನೀತಿಯು
ಪವಿತ್ರ ತೇಜಪೋಷ.
ಕ್ರಿಸ್ತ್ಯೇಸುಮರೆಯು
ಅಭಯ ಸ್ಥಳವೇ.
ಕ್ರಿಸ್ತ್ಯೇಸುವಿರಲು
ಮೃತೀಲಿ ಜೀವವೇ.

೩೩೨

Morgenglanz der Ewigkeit.
M. T. 70.

1. ನಿತ್ಯಲೋಕಕಾಂತಿಯೇ,
ಮೂಡು ಪೂರ್ಣ ತೇಜದಿಂದ!
ಸರ್ವಜ್ಯೋತಿಮೂಲವೇ,
ನಿನ್ನ ಕಿರಣಂಗಳಿಂದ
ನಮ್ಮ ಎಲ್ಲ ಕತ್ತಲು
ಓಡಿಸು!

2. ಬೀಜ ಮೊಳೆಯುತ್ತದೆ
ಮಳೆ ಬಿದ್ದ ಭೂಮಿಯಲ್ಲಿ;
ನಿನ್ನ ಮಂಜು ಬಿದ್ದರೆ
ನನ್ನ ಒಣ ಆತ್ಮದಲ್ಲಿ,
ಹೊಸ ಜೀವತ್ರಾಣವು
ಬಪ್ಪುದು.

3. ಹೃದಯಂಗಳೊಳಗೆ
ನಿನ್ನ ಬೆಳಕನ್ನು ಹೊಯ್ದು,
ವಾಕ್ಯಖಡ್ಗದಿಂದಲೆ
ನಮ್ಮ ಪಾಪಮೂಲ ಕೊಯ್ದು,
ಜೀವದಲ್ಲಿ ನಮ್ಮನು
ಸೇರಿಸು!

4. ದಿವ್ಯ ಪ್ರೀತಿಸೂರ್ಯನೆ,
ನಿನ್ನ ಕಿರಣಂಗಳನ್ನು
ಹಗೆ ತುಂಬಿದಿಳೆಗೆ
ಹೊಯ್ದು, ಪ್ರೀತಿರಾಜ್ಯವನ್ನು
ಎಲ್ಲ ಭೂಮಿಯಲ್ಲಿಯು
ಸ್ಥಾಪಿಸು!

5. ನಿತ್ಯ ನೀತಿಸೂರ್ಯನೇ!
ನೀನು ಅಂತ್ಯದಿನದಲ್ಲಿ
ಭೂಸಮಾಧಿಯಿಂದಲೇ
ನಮ್ಮನೇಳ ಮಾಡುವಲ್ಲಿ,
ನಿತ್ಯ ಮುಕ್ತಿ ನಮಗೆ
ಆಗುತೆ.

೨. ಸಾಯಂಕಾಲ

೩೩೩

Nun ruhen alle Wälder.
M. T. 62.

1. ಈ ಹಗಲೀಗ ಸಂತು,
ಎಲ್ಲೆಲ್ಲಿ ನಿದ್ದೆ ಬಂತು
ಭೂಜೀವರಾಶಿಗೆ;
ಕರ್ತಂಗೆ ಸ್ತೋತ್ರ ಮಾಡ,
ಆತಂಗೆ ಗೀತ ಹಾಡ
ನೀ ಎಚ್ಚತ್ತಿರು ಮನವೆ!

2. ನೀ, ಸೂರ್ಯ, ಕಂತಲಂದು
ದಿನಾರಿರಾತ್ರಿ ಬಂದು,
ಕಾರ್ಗತ್ತಲಿಕ್ಕಿತು.
ಆದಾಗ್ಯು ಮನದಲ್ಲಿ
ಪ್ರಕಾಶವನ್ನು ಚೆಲ್ಲಿ
ಬೇರೊಬ್ಬ ಸೂರ್ಯನೆದ್ದನು.

3. ವಿಶಾಲಾಕಾಶದಲ್ಲಿ
ಭಂಗಾರಕಾಂತಿಯಲ್ಲಿ
ತಾರಾತಿತೇಜವು;
ನಾನೂ ಪ್ರಕಾಶಿಸೇನು,
ನಾ ಹಾಗೆ ಹೊಳೆದೇನು,
ಈ ಕೀಳಲೋಕ ಬಿಡಲು.

4. ಶರೀರ ಕಷ್ಟ ಬಿಟ್ಟು,
ವಸ್ತ್ರಾದಿ ತೆಗೆದಿಟ್ಟು,
ವಿಶ್ರಾಂತಿ ಪಡುತೆ;
ಸೌಂದರ್ಯ ವಸ್ತ್ರವನ್ನು,
ಶೃಂಗಾರಪೂರ್ತಿಯನ್ನು
ಕೊಡೋನು ಕ್ರಿಸ್ತನೆಮಗೆ.

5. ಕಷ್ಟಾಂತ ಬರಲಾಯ್ತು;
ಸಂತೋಷವೇಳೆಯಾಯ್ತು
ಬೇಸತ್ತ ಅಂಗಕೆ.
ಕಡೇಲಿ ಎಂಥ ಸುಖ,
ಈ ಪಾಪ, ಕಷ್ಟ, ದುಃಖ
ಸಮಾಪ್ತವಾಗಿ ಹೋಗಲೆ!

6. ಸಾಕೆಂತ ಬಿದ್ದಿದ್ದೇನೆ;
ವಿಶ್ರಾಂತಿ ಕೊಡುತೇನೆ
ಬೇಸತ್ತ ದೇಹಕೆ.
ಆಯಾಸ ಮುಗಿಯೋದು,
ಶರೀರಕೊದಗೋದು
ಭೂಗರ್ಭದಲ್ಲಿ ಹಾಸಿಗೆ.

7. ನಾ ಕಣ್ಣು ಮುಚ್ಚಲಾಗಿ
ದೇಹಾತ್ಮವೊಲ್ಮೆಯಾಗಿ
ಕಾಯೋವನ್ಯಾವನು?
ನೀ, ಕರ್ತ, ದಯಗೊಂಡು,
ದೇಹಾತ್ಮ ಕಾದುಕೊಂಡು,
ಕೇಡೆಲ್ಲ ಪರಿಹರಿಸು!

8. ಉಭಯ ರೆಕ್ಕೆಯನ್ನು
ಬಿದಿರ್ಚಿ, ಮರಿಯನ್ನು,

ಕ್ರಿಸ್ತ್ಯೇಸು, ಹೊದಗು!
ವಿರೋಧಿಮೋಸವನ್ನು
ಹೀನೈಸಿ, ದೂತರನ್ನು
ಸಹಾಯಕಾಗಿ ಕಳುಹು!

೩೩೪

Nun sich der Tag geendet.
M. T. 62.

1. ಈ ದಿನ ಸಂದು ಹೋಯ್ತು;
ನಾ ಹೃದ ಮೇಲಕ್ಕೊಯ್ದು,
ಅಪ್ಪಾ, ಕೊಂಡಾಡುವೆ.
ಪ್ರಸನ್ನಮುಖನಾಗಿ
ಕೂಸನ್ನ ನೋಡಲಾಗಿ
ನಾ ಬೆಳಕಾಗಿ ಉರ್ಯ್ಯುವೆ.

2. ಈ ಸಾಯಂಕಾಲದಲ್ಲಿ
ವಾತ್ಸಲ್ಯಹಸ್ತದಲ್ಲಿ
ಎನ್ನಪ್ಪಿಕೊಂಡಿರು.
ನೀನಿರೆ, ಅಂಧಕಾರ,
ಹೀನೇಂದ್ರಿಯ ವ್ಯಾಪಾರ
ಇದೆಲ್ಲ ನಿಂತುಹೋಗೊದು.

3. ನೀನೆನ್ನ ಪ್ರೀತಿಸಿದ್ದು
ನನ್ನನ್ನು ಸುತ್ತುತ್ತಿದ್ದು
ಸ್ವೀಕಾರ ಮಾಡಿದ್ಧೀ.
ಪವಿತ್ರ ತೇಜಮೂರ್ತಿ,
ವಿಶ್ವಾಸೀ ಹರ್ಷಪೂರ್ತಿ,
ವಿಶ್ರಾಂತಿ ನಿನ್ನಲ್ಲಾಗಲಿ!

4. ಒಂದ್ಹೊತ್ತಿನಂತೆ ಪ್ರಾಣ
ಸಂದ್ಹೋಗುವ ಪ್ರಯಾಣ!
ಮೇಲ್ಲೋಕ ಗುರಿಯೇ.
ಶಾಶ್ವತವಾದ ವಾಸ
ಪ್ರವೇಶಿಸೋ ಅಭ್ಯಾಸ
ನೀ ನಿತ್ಯ ಮಾಡು, ಮನವೇ!

೩೩೫

Müde bin ich, geh' zur Ruh'
M. T. 11.

1. ಅಪ್ಪಾ! ತಂದೆ ವಂದನೆ,
ಬಂದೆ ನಿನ್ನ ಪಾದಕೆ.
ಬಡ ಬಾಲ ಪ್ರಾರ್ಥನೆ
ಕೇಳು, ಸ್ವಾಮಿ ದೇವರೆ!

2. ಉಪಕಾರರಾಶಿಯಂ,
ಪರಿಪೂರ್ಣ ಪ್ರೀತಿಯಂ,
ಮಾಡಿ, ನನ್ನ ತಾಳಿದೆ,
ಕರುಣಾಳು ತಂದೆಯೆ!

3. ಬಹು ಪಾಪ ಮಾಡಿದೆ
ನಿನ್ನ ಮಾತು ಕೇಳದೆ;
ನೋಡಿ ಯೇಸುಮುಖವಂ
ಮಾಡು ಪರಿಹಾರವಂ!

4. ನನ್ನ ಮಿತ್ರಾಮಿತ್ರರಂ,
ಸರ್ವ ಬಂಧುವರ್ಗವಂ,

ಲೋಕಜನರೆಲ್ಲರಂ
ನೋಡಿ ನೀಡು ಕ್ಷೇಮವಂ.

5. ಚಿಂತೆ ದುಃಖದವರು,
ಬೇನೆಬೇಸರವರು
ಕುಗ್ಗಿ ಮಾಡೊ ಪ್ರಾರ್ಥನೆ
ತಕ್ಕೊ ನಿನ್ನ ಮನಕ್ಕೆ!

6. ಬೇಗ ಸೊಂಪು ನಿದ್ದೆಯ
ಕೊಟ್ಟು ಇಂದು ರಾತ್ರಿಯ
ಕಾವಲಿಗೆ ದೂತರ
ಕಳುಹೆನ್ನ ಹತ್ತರ!

7. ಸಾಯುವಂಥ ಗಳಿಗೆ
ನೀನು ಕೊಂಡ ಆಳಿಗೆ
ಬೇನೆಬೇಸರಿಲ್ಲದೆ
ಮಾಡಿ ವೈಯಿ ಮೋಕ್ಷಕೆ!

8. ಸ್ತುತಿ ನಿನಗಾಗಲಿ!
ಘನ ಮಾನ ಸಲ್ಲಲಿ
ನಿನ್ನ ತಿರು ನಾಮಕೆ,
ಯೇಸು, ಸರ್ವಕಾಲಕೆ!

೩೩೬

Abendruhe nach des Tages Lasten.
M. T. 98.

1. ದಿನಾಯಾಸ ಪಡಕೊಂಡ
ಮೇಲೆ
ಸಾಯಂಕಾಲಶಾಂತಿ ಒಳ್ಳೇದು.
ಈಗ ಕಷ್ಟ ಪಡಕೊಳ್ಳೊ ವೇಳೆ
ಇದ್ದರೂ, ಹೃತ್ಸಮಾಧಾನವು
ಯೇಸುವಲ್ಲಿ ನನಗಾಯಿತು.
ಪರದಲ್ಲಿ, ಪರದಲ್ಲಿ ನಿತ್ಯಶಾಂತಿಯು!

2. ಹೌದು, ಅಲ್ಲಿ ನಿತ್ಯ ಸಮಾ
ಧಾನ
ದೇವಜನರಿಂಗೆ ಇಟ್ಟದೆ.
ಲೋಕಯುದ್ಧದಲ್ಲಿ ಗೆದ್ದ ಮಾನ
ಅಲ್ಲಿ ಕರ್ತನಿಂದ ಸಿಕ್ಕುತೆ.
ಕ್ಷುಧೆದಾಹ ಮುಗಿದ್ಹೋಯಿತು,
ಸುಖಭಾಗ್ಯ, ಸುಖಭಾಗ್ಯ ಎಂದು
ತೀರದು.

3. ಸಮಾಧಾನಸ್ಥಳ ಪರಲೋಕ;
ಕ್ರಿಸ್ತನಿರುವಲ್ಲಿ ಶಾಂತಿಯು!
ಅಲ್ಲಿ ನರಲೋಕದೆಲ್ಲ ಶೋಕ
ಪರಿಹಾರವಾಯ್ತು ನಿತ್ಯಕು.
ಪ್ರಿಯ ಕರ್ತ, ಅಲ್ಲಿ ನನಗು
ನಿತ್ಯ ಶಾಂತಿ, ನಿತ್ಯ ಶಾಂತಿ ದಯೆ
ಪಾಲಿಸು!

೩೩೭

Der lieben Sonne Licht und Pracht.
M. T. 230.

1. ಪ್ರಕಾಶಮಯ ಸೂರ್ಯನು
ಪೂರೈಸಿದ್ಧಾನೆ ಯಾತ್ರ.
ಲೋಕಕ್ಕೆ ನಿದ್ರೆ ಹತ್ತಿತು.
ನನ್ನಾತ್ಮವೇ, ನೀ ಮಾತ್ರ

ಎಚ್ಚತ್ತು, ಸೇರ ಬಾ
ಕ್ರಿಸ್ತ್ಯೇಸುಪಾದವ!
ಸರ್ವಸ್ವವಂ ಸಮರ್ಪಿಸಿ
ಸಂಗೀತ ಹಾಡುಲ್ಲಾಸದಿ!

2. ಸುವರ್ಣತಾರಾರಾಶಿಯು
ರಾತ್ರೀಲಿ ಹೊಳೆಯೋದು.
ಸಹಸ್ರ ಪಾಲು ಕಾಂತಿಯು
ನನ್ನಾತ್ಮದಲ್ಲಿರೋದು.
ಆ ಸ್ವರ್ಗನಕ್ಷತ್ರ
ಶ್ರೀ ಯೇಸುತಾರಕ,
ನನ್ನಂತರ್ಜ್ಯೋತಿ, ಶರಣ,
ನಿಕ್ಷೇಪ, ಸಂತಸ.

3. ನರಾದಿ ಪ್ರಾಣಿಕೋಟಿಯು
ತೂಕಡಿಸಿರಲಾಗಿ
ಸಮಸ್ತ ಭಕ್ತಪಾಲನು
ಶ್ರೀ ಯೇಸು ಒಬ್ಬನಾಗಿ
ಇದ್ದಾನೆ ಎಚ್ಚರ
ನನ್ನನ್ನು ನೋಡುತ್ತ.
ನಿನ್ನೊಡನೆನ್ನ ಮನಸ್ಸು,
ಆತ್ಮಾಪ್ತ, ಎಚ್ಚತ್ತಿರೊದು.

4. ನಿನ್ನೈಕ್ಯದಿ ನಾ ಮಲಗೆ
ಸುಭದ್ರನಾಗಿದ್ದೇನೆ.
ನಿನ್ನಲ್ಲಿ ನಿದ್ದೆ ಗೈದರೆ
ಸಾವೇನು? ಏಳುತ್ತೇನೆ.
ಶ್ರೀ ದೂತಕಾವಲು
ನನ್ನೊಂದಿಗಿರಲು
ಪಿಶಾಚಿಸೈನ್ಯಕ್ಕಂಜೆನು.
ನಾನ್ಯೇಸು ಕ್ರಿಸ್ತ ಸ್ವಾಸ್ತ್ಯವು.

5. ಕೂಸನ್ನು ಈಗ ಅಪ್ಪಿಕೋ,
ಕ್ರಿಸ್ತ್ಯೇಸು! ನಿದ್ರೆ ಬಂತು.
ತಪ್ಪಿರೆ, ನಿನ್ನಿಂದಲ್ಲವೋ
ನನ್ನೆಲ್ಲ ಸಾಲ ಸಂತು.
ಕಾರುಣ್ಯ ಹಾಸಿಗೆ!
ಆಚ್ಛಾದ ಪ್ರೀತಿಯೇ!
ನಿನ್ನಾತ್ಮವೀವ ಹರ್ಷವು
ನನ್ನೊಂದೇ ಸ್ವಪ್ನಧ್ಯಾನವು!

6. ಆಯಾಸಗೊಂಡ ದೇಹವೇ,
ಮಲಗಿ ನಿದ್ರೆ ಮಾಡು
ಕಣ್ಮುಚ್ಚಿಕೊಂಡು! ಮನವೇ,
ಜಂಜಾಟವಂ ಬೀಸಾಡು!
ಸುಶಾಂತಿ ಆಗಲಿ!
ನೀ, ಯೇಸು, ಕಾಯುವಿ.
ಸ್ವಸ್ತ್ಯಸ್ತು ಅಂದ ನಿನಗೆ
ಹೃಜ್ಜಾತ ಸಂಧ್ಯಾವಂದನೆ!

೩೩೮

Mel. O Jesu Christ, mein's Lebens Licht.—M. T. 36.

1. ಕ್ರಿಸ್ತ್ಯೇಸು, ನೀತಿಸೂರ್ಯನೆ,
ಸಮಸ್ತ ಭಕ್ತಸಭೆಗೆ
ಆಕಾಶದಿಂ ಪ್ರಕಾಶಿಸಿ,
ಪ್ರಕಾಶ ಉಂಟುಮಾಡುತಿ.

2. ನಮ್ಮತಿ ಪ್ರಿಯ ಕರ್ತನೆ,
ಆಧಾರ ಕೊಡು ನಮಗೆ!
ಸೈತಾನನಿಂದ ನಮ್ಮನು
ಕೃಪಾಳುವಾಗಿ ರಕ್ಷಿಸು!

3. ಪವಿತ್ರ ನಿನ್ನ ರಕ್ತವು
ನಮ್ಮನ್ನು ಶುದ್ಧ ಮಾಡಿರೊದು.
ಶರೀರ ನಿದ್ದೆ ಗೈಯಲು,
ವಿಶ್ವಾಸ ಎಚ್ಚತ್ತಿಹುದು.

4. ನಮ್ಮನ್ನು ಕಾಯಿ, ಕ್ರಿಸ್ತನೇ!
ನೀನೆಮ್ಮ ಭದ್ರ ದುರ್ಗವೇ!
ಮುಂಜಾನೆ ಎಚ್ಚರಾಗಲು,
ನಿನ್ನನ್ನು ಸ್ತುತಿಸುವೆವು.

೩೩೯

Abide with me.—M. T. 44.

1. ಕ್ರಿಸ್ತ್ಯೇಸು ಸ್ವಾಮಿ, ವಾಸಿಸೆಮ್ಮೊಳು!
ಈ ಸಾಯಂಕಾಲ ಹತ್ರದಲ್ಲಿರು!
ಕಾರ್ಗತ್ತಲೀಗ ಕವಿದಿರಲು
ನೀ, ಮಿತ್ರ ಯೇಸು, ವಾಸಿಸೆಮ್ಮೊಳು!

2. ಸಹಾಯಹೀನರಿಂಗೊತ್ತಾಸೆಯು,
ಆಧಾರಹೀನರಿಂಗಾಧಾರವು
ಬಿದ್ದೋಗುವಾಗ, ನೀನೇ ಪಾಲಿಸು!
ನೀ ಬಂದು, ಕರ್ತ, ವಾಸಿಸೆಮ್ಮೊಳು!

3. ಜೀವಾಂತ್ಯಕಾಲ ತೀವ್ರ ಬರುತೆ;
ಭೂಲೋಕ ಶೋಭೆ, ಹರ್ಷ ಹೋಗುತೆ;
ಎಲ್ಲೆಲ್ಲಿಯು ಮಾರ್ಪಾಟವಾದರು,
ನೀನಿರೆ, ಯೇಸು, ಸಾಕು ನಿತ್ಯಕು.

4. ಅವಶ್ಯ ನಂಗೆ ನಿನ್ನ ಸಾಮೀಪ್ಯ.
ನಿನ್ಹೊರ್ತು ಯಾರು ನನ್ನ ಆಸರ?
ನೀನಿದ್ದರೆನಗಿಲ್ಲ ಅಂಜಿಕೆ,
ಕಟಾಕ್ಷವೆನ್ನ ದುರ್ಗವಾಗುತೆ.

5. ಸಂಕಷ್ಟವೆಲ್ಲ ಅಲ್ಪ ಮಾತ್ರವೆ,
ಕ್ರಿಸ್ತ್ಯೇಸು, ನೀ ನನ್ನೊಂದಿಗಿದ್ದರೆ!
ನಾ ಮೃತಿಕೊಂಡಿಗಂಜದಿರುವೆ;
ಪಾತಾಳಕಪಜಯವಾಗಿದೆ.

6. ಜೀವಾಂತ್ಯವೆಂಬ ಸಾಯಂಕಾಲವು
ಬಂದಾಗ, ಕರ್ತ, ನೀನೆ ದಾಟಿಸು!
ಆ ಸ್ವರ್ಗಪ್ರಾತಃಕಾಲ ಮೂಡಲೆ,
ಇಲ್ಲಿದ್ದ ಕತ್ತಲೆಲ್ಲ ಹೋಗುತೆ.

೩೪೦

Kommt, Brüder, lasst uns gehen.
M. T. 126.

1. ಸಂಧ್ಯೋಯ್ತು ದಿನ; ಬರ್ರಿ!
ಹೋಗೋಣ, ಭ್ರಾತ್ರರೆ!
ಗಂಡಾಂತ್ರವುಂಟು, ಸರಿ,
ಈ ಕಾಡಿನೊಳಗೆ.
ಪಡೋಣ ಧೈರ್ಯವ!
ವಿಶ್ವಾಸಯಾತ್ರೆಯನ್ನು
ಪೂರೈಸೊ ತ್ರಾಣವನ್ನು
ತಂದೀಯ್ವನೊಡೆಯ.

2. ಇಕ್ಕಟ್ಟು ಹಾದಿಯಲ್ಲಿ
ಪ್ರಯಾಸ ಪಟ್ಟರು,
ಆ ಕರೆದಾತನಲ್ಲಿ
ವಿಶ್ವಾಸಿಸುವೆವು!
ಯೆರೂಸಲೇಮಿಗೆ
ನಮ್ಮಾತ್ಮದೃಷ್ಟಿ ಇಟ್ಟು,
ಈ ಕಾಡುಲೋಕ ಬಿಟ್ಟು,
ಹೋಗೋಣ, ಭ್ರಾತ್ರರೆ!

3. ಪ್ರಪಂಚದನುಭೋಗ
ಏನೇನು ನೋಡದೆ,
ನಿರ್ವಿಘ್ನನಾಗಿ ಹೋಗ
ದೇಶಾಂತ್ರಿಕಟ್ಟಳೆ.
ಅಭಯವಾಗಲಿ!
ಪ್ರಪಂಚವನ್ನು ಬಿಟ್ಟು,
ಬೈಲಾಶೆ ತೆಗದಿಟ್ಟು,
ಆ ಗುರಿ ನೋಡಿರಿ!

4. ಬರ್ರೋ! ಸಂತೋಷವಾಗಿ
ಕೈಕೊಟ್ಟು ಹೋಗಿರಿ!
ಯಾರೊಬ್ಬ ಬೀಳಲಾಗಿ,
ಸಹಾಯ ಮಾಡಿರಿ!
ಪ್ರಯಾಣ ಸಣ್ಣದು;
ನಾಂ ನಾಳೆ ಸ್ವಾಸ್ತ್ಯದಲ್ಲಿ,
ನಮ್ಮಪ್ಪ ಮನೆಯಲ್ಲಿ
ಪ್ರವೇಶಗೊಂಬೆವು.

೩. ಭೋಜನ

೩೪೧

Herr, wir gehen zu dem Essen.
M. T. 164.

ಭೋಜನಕ್ಕೆ ಕೂಡ್ರುತ್ತೇವೆ,
ಪೂಜಿಸಿ ಕೈಯೊಡ್ಡುತ್ತೇವೆ—
ಪೋಷಿಸೀಗ ದೇಹವನ್ನು,
ತೋಷ ಪಡಿಸಾತ್ಮವನ್ನು!
ಸತ್ಯ ರೊಟ್ಟಿ ನೀನೇ, ಯೇಸು!
ನಿತ್ಯ ನೀನೇ ಇರೆ ಲೇಸು.
ನಡಿಸೆಮ್ಮನ್ನಿಹದಲ್ಲಿ,
ಬಡಿಸನ್ನ ಸ್ವರ್ಗದಲ್ಲಿ!

೩೪೨

Wir danken Gott für seine Gab'n.
M. T. 35.

1. ದೇವಾ, ನೀನೂಟ ಕೊಟ್ಟಿ
ದ್ದೀ;
ಕೃತಜ್ಞ ಸ್ತೋತ್ರವಾಗಲಿ!
ಇನ್ನೂ ನೀ ದಿನನಿತ್ಯವು
ನಮ್ಮನ್ನು ರಕ್ಷಿಸುಣ್ಣಿಸು!

2. ಕ್ರಿಸ್ತ್ಯೇಸು, ನಿನ್ನ ವಾಕ್ಯವು
ನಮ್ಮಾತ್ಮಜೀವಾಧಾರವು.
ಈ ಅನ್ನವನ್ನು ಬಡಿಸು,
ದಿವ್ಯಾತಣಕ್ಕೂ ಸೇರಿಸು!

3. ನೀನಿಂದು ಗೃಹಾಗತನು
ಆಗಿದ್ದದ್ದುಪಕಾರವು.
ನೀ ನಿತ್ಯಕ್ಕಿದ್ದು, ಕೊರತೆ
ನೀಗೆಮ್ಮ ಜೀವರೊಟ್ಟಿಯೋ!

---

೪. ವಿಶ್ರಾಂತಿ ದಿನ

೩೪೩

Heut' ist's Sonntag.—M. T. 66.

1. ಇಂದು ಸಬ್ಬತಾಗಿದೆ,
ಹರ್ಷಕರ ದಿನವೆ!
ಇಂದು ನಾನೇಕಾಂತದಲ್ಲಿ,
ಲೋಕಗದ್ದಲಿಲ್ಲದೆ,
ದೇವಧ್ಯಾನ ಮಾಡುವೆ,
ಸೇರಿ ದೇವರೈಕ್ಯದಲ್ಲಿ —
ಐಕ್ಯದಲ್ಲಿ.

2. ಇಂದು ಸಬ್ಬತಾಗಿದೆ,
ಹರ್ಷಕರ ದಿನವೆ!
ಹುಡುಕೋಣ ಕೃಪಾಸ್ಥಾನ,
ಮೇಲಕೆತ್ತಿ ಹೃದಯ!
ಇಲ್ಲಿ ದೇವರಾಲಯ,
ಪರಿಶುದ್ಧ ಸನ್ನಿಧಾನ—
ಸನ್ನಿಧಾನ.

3. ಇಂದು ಸಬ್ಬತಾಗಿದೆ,
ಹರ್ಷಕರ ದಿನವೆ!
ಪರಿಶುದ್ಧ ವಾಕ್ಯವನ್ನು
ಮನ ಕೊಟ್ಟು ಓದುವಾ!
ಅದರಿಂದ ಹೊಂದುವಾ
ದಿವ್ಯ ಆತ್ಮತ್ರಾಣವನ್ನು—
ತ್ರಾಣವನ್ನು!

4. ಇಂದು ಸಬ್ಬತಾಗಿದೆ,
ಹರ್ಷಕರ ದಿನವೆ!
ಸೇರಿ ದೇವಗೃಹದಲ್ಲಿ,
ಸರ್ವಭಕ್ತರೊಂದಿಗೆ
ಆತನನ್ನು ಬೇಡಲೆ,

ತೃಪ್ತಿಯಾಗೊದಾತ್ಮದಲ್ಲಿ —
ಆತ್ಮದಲ್ಲಿ.

5. ಇಂದು ಸಬ್ಬತಾಗಿದೆ,
ಹರ್ಷಕರ ದಿನವೆ!
ದೇವಸ್ತೋತ್ರವಾದ ಮೇಲೆ
ಕೂಡಿಕೊಂಡು, ಕೇಳಿದ
ವಾಕ್ಯದಭಿಪ್ರಾಯವ
ಹೇಳ್ವದೆಷ್ಟೊ ರಮ್ಯ ವೇಳೆ —
ರಮ್ಯ ವೇಳೆ!

6. ಇಂದು ಸಬ್ಬತಾಗಿದೆ,
ಹರ್ಷಕರ ದಿನವೆ!
ಭಾಗ್ಯವಂತರಾಗಿದ್ದೇವೆ;
ದೇವರೊಲ್ಮೆಧ್ಯಾನದಿ
ಲೋಕಚಿಂತೆ ತ್ಯಜಿಸಿ,
ಹೃತ್ಸಂತೋಷ ಪಡುತ್ತೇವೆ —
ಪಡುತ್ತೇವೆ.

೩೪೪

Mel. Sollt' es gleich bisweilen scheinen.—M. T. 33.

1. ಭಾನುವಾರ ಶುಭವಾರ,
ಸೃಷ್ಟಿಗೀಶನಿತ್ತ ವಾರ;
ಆರು ವಾರ ಕಷ್ಟವು,
ಭಾನುವಾರ ಶಾಂತಿಯು.

2. ಭಾನುವಾರ ಅಂಧಹಾರ —
ಯೋಗ್ಯವಾದ ನಾಮಧಾರ!
ಇಂದು ಕುರ್ಡ ಪಾಪಿಯು
ಬೋಧೆ ಕೇಳಿ ಕಾಂಬನು.

3. ಭಾನುವಾರ ಜಯವಾರ,
ಯೇಸು ಕ್ರಿಸ್ತನೆದ್ದ ವಾರ;
ಯೇಸುವಿನ ಶಿಷ್ಯಗೆ
ಇದು ಜೀವವಾರವೆ.

4. ಭಾನುವಾರ ಆತ್ಮವಾರ,
ಕಾಣೋದಿಂದು ಸ್ವರ್ಗದ್ವಾರ;
ಇಂದು ನಮ್ಮ ಹೃದದಿ
ಆತ್ಮಕಾರ್ಯ ಸಾಗಲಿ.

5. ಭಾನುವಾರ ಶಾಂತಿವಾರ,
ನಿತ್ಯಶಾಂತೀ ಸಂಚಕಾರ;
ಅಃ ವಿಶ್ರಾಂತಿವಾರವೆ,
ಮೂಡು, ಮೂಡು ಭೂಮಿಗೆ!

6. ಬಾ, ಬಾ ನಿತ್ಯಾದಿತ್ಯವಾರ
ಕುರಿಮರೀ ಲಗ್ನವಾರ!
ಆತನೊಂದಿಗೂಟಕ್ಕು
ಕೂಡ್ರೊ ಭಾಗ್ಯ ದೊಡ್ಡದು!

೩೪೫

Mel. The Church's one foundation. M. T. 260.

1. ಹಾ! ಭಾಗ್ಯವುಳ್ಳ ದಿನ,
ವಿಶ್ರಾಂತಿ ಕಾಲವು,
ಸಂಭ್ರಮ ಪಡತಕ್ಕ
ಗಂಭೀರ ವೇಳೆಯು!

ಈ ದಿವ್ಯವಾದ ದಿನ
ಅಮೂಲ್ಯ ಸಂಪತ್ತು,
ನನ್ನಾತ್ಮಕ್ಕೆ ಸುರತ್ನ,
ಸಂತೋಷವಾದದ್ದು.

2. ಈ ದಿನ ಯೇಸುಕರ್ತ
ಸಮಾಧಿ ಬಿಟ್ಟನು;
ಈ ದಿನ ಲೋಕೋದ್ಧಾರ
ಸಂಸಿದ್ಧವಾಯಿತು;
ಈ ದಿನ ದೇವರಾತ್ಮ
ಆಗಮಿಸಿದನು;
ಈ ದಿನ ಸಮಾಧಾನ
ಹೆಚ್ಚಾಗಿ ಸಿಕ್ಕೊದು.

3. ಈ ಹೊತ್ತು ಕ್ರೈಸ್ತ ಸಭೆ
ಎಲ್ಲೆಲ್ಲು ಕೂಡುತೆ;
ಎಲ್ಲೆಲ್ಲಿಯೂ ಸುವಾರ್ತೆ
ಪ್ರಸಂಗವಾಗುತೆ;
ಮೊಬ್ಬಾದ ಮನದಲ್ಲಿ
ಪ್ರಕಾಶ ಹುಟ್ಟುತೆ;
ಸದ್ಭಕ್ತಜನರಲ್ಲಿ
ಆಸಕ್ತಿ ಹೆಚ್ಚುತೆ.

4. ಈ ದಿನ ದೇವಧ್ಯಾನ
ಹೆಚ್ಚಾಗಿ ಮಾಡುವೆ;
ವಿಮೋಚನಾಸಂಗೀತ
ಇಂಪಾಗಿ ಹಾಡುವೆ.
ಭೂಲೋಕದೀ ವಿಶ್ರಾಂತಿ
ಸಮಾಪ್ತವಾದರು
ಮೇಲ್ಲೋಕದಾ ವಿಶ್ರಾಂತಿ
ಎಂದೆಂದೂ ತೀರದು.

---

೫೯. ಯುಗಾದಿ

೩೪೬

Mel. Wie soll ich dich empfangen.
M. T. 128.

1. ಒಂದೊರ್ಷದ ಸಂಚಾರ
ಸಂಧೋಗಿ ಬಿಟ್ಟಿತು.
ಈರಿಪ್ಪತ್ತಾರು ವಾರ
ನಮ್ಮಾಯು ಕುಂದಿತು.
ಕಾಲಿಟ್ಟ ಹೊಸ ವರ್ಷ
ಎಂಥಾದ್ದು ನಮಗೆ?
ತಂದೀತೋ ದುಃಖ? ಹರ್ಷ?
ಕರ್ತಂಗೆ ಗೊತ್ತದೆ.

2. ನಂಗಿದ್ದ ಪ್ರಿಯರಲ್ಲಿ
ಅನೇಕರಿಲ್ಲವು;
ಬರೋ ಯುಗಾದಿಯಲ್ಲಿ
ಇನ್ನಾರು ಇರ್ವರು?
ಯೆಹೋವನೆನ್ನಾಶ್ರಯ;
ಈ ವರೆ ಕಾದನು.

ಇನ್ನಾತನೇ ಸಹಾಯ ;
ನನ್ನನ್ನು ಕಾಯ್ವನು.

3. ಭೂಲೋಕಧನವೆಲ್ಲ
ಸುಗತಿ ತಾರದು ;
ಭೂಲೋಕವೈದ್ಯರೆಲ್ಲ
ಸುಕ್ಷೇಮ ಕೊಡರು.
ಶ್ರೀ ಯೇಸು, ನೋಡೀ ಮಾಯ !
ನೀನೆನ್ನ ವೈದ್ಯನು.
ನನ್ನಾತ್ಮ, ಪ್ರಾಣ, ಕಾಯ
ನಿಂಗೊಪ್ಪಿಸಿದೆನು.

4. ಕಾಪಾಡು ದೀನರನ್ನು
ಈ ಹೊಸ ವರ್ಷದಿ !
ಸಮಸ್ತ ತಾಪವನ್ನು
ನಮ್ಮಿಂದ ನೀಗಿಸಿ
ನಿನ್ನಯ ಚಿತ್ತ ರೀತಿ
ನಮ್ಮನ್ನು ನಡಿಸು !
ವಿಶುದ್ಧಿ, ಭಕ್ತಿ, ಪ್ರೀತಿ
ನಮ್ಮಲ್ಲಿ ಹೆಚ್ಚಿಸು !

೩೪೭

So geht's von Schritt zu Schritt.
M. T. 116.

1. ಆಯುಷ್ಯ ದಾಟುತಾ
ಈ ಜೀವ ಹಾರೊದು ;
ಭರ್ರನೆ ಬಪ್ಪುದು
ಜೀವಾಂತ್ಯಕಾಲವು.
ಸಂದ್ಹೋದ ದಿನವು,
ಸಂದ್ಹೋದ ವರುಷ
ಎಲ್ಲಿವೆ? ಆಯಿತೋ
ಒಂದು ಪ್ರಯೋಜನ ?

2. ಈ ಜೀವವೆನಗೆ
ಒಲ್ದಿತ್ತ ದೇವರೆ,
ಅದನ್ನು ತಿರಿಗಿ
ತಂದೀಯ್ವೆ ನಿನಗೆ.
ನಿಂಗಾಗಿ ಬದುಕಿ,
ನಿಂಗಾಗಿ ಸಾಯುವೆ ;
ನಾ ನಿತ್ಯ ಕಾಲಕು
ನಿನ್ನಾಳು, ಕರ್ತನೆ !

3. ಇದೆನ್ನ ಮನೆಯೆ?
ಇದನ್ಯ ಸ್ಥಳವೆ !
ಇಲ್ಲಿಂದ ಹೋಗುವೆ
ತಂದೇ ನಿವಾಸಕೆ.
ಆಯುಷ್ಯಶೇಷವು,
ನನ್ನಪ್ಪಾ, ನಿನ್ನದು ;
ಭೂಪರಲೋಕದಿ
ನಾ ನಿನ್ನ ಮಗನು.

4. ನನ್ನನ್ನು ಇಹದಿ
ನೀ ಸಿದ್ಧಿಸೊಡೆಯ !
ನೀನೊಳ್ಳೆ ಪದವಿ,
ನೀ ಜೀವದರಸ !
ನಾನಂತ್ಯ ಕಾಲದಿ
ನೋಡದೆ ನನ್ನನ್ನು,

ಕ್ರಿಸ್ತನನ್ನ ನೋಡುವ
ದಯಾನುಗ್ರಹಿಸು!

5. ಸೈತಾನಗೆನ್ನೊಳು
ಇನ್ನೇನು ಪಾಲದೆ?
ನಾ ಪಾಪಿಯಾದರು
ನನ್ನಾಸ್ತಿ ಯೇಸುವೆ;
ಕೆಟ್ಟೋದ ಮಗಗೆ
ಕಟಾಕ್ಷ ಸಿಕ್ಕಿತು.
ನಿಂಗೆನ್ನ ಪಿತನೆ,
ಕೃತಜ್ಞನಾದೆನು.

6. ಪಿತಾಪುತ್ರಾತ್ಮನೆ,
ನೀನೆನ್ನ ದೇವರು;
ನೀನೆನ್ನ ರಕ್ಷಕ;
ನೀ ಸೃಷ್ಟಿಕರ್ತನು!
ಉಂಟೆನ್ನ ರಕ್ಷಣೆ
ಸಂಪೂರ್ಣ ನಿನ್ನಲೆ!
ನಿನ್ನಡಿ ನನಗೆ
ಹೃತ್ಸೌಖ್ಯವಾದದೆ!

7. ಇದೆನ್ನ ಸಾಕ್ಷಿಯು—
"ನೀ ಮುಖ್ಯ ಪದವಿ;
ನೀನಾತ್ಮಜೀವಕೆ
ವಿಶ್ರಾಂತಿ ಕೊಡುತಿ;
ನಿಂಗೆರಗುವದೇ
ಮಹಾಂತ ಹರ್ಷವು;
ನಿನ್ನಾಳುತನವೇ
ಅನಂತ ಮುಕ್ತಿಯು!"

8. ನನ್ನಾತ್ಮ ಕಾದುಕೋ,
ಸಂಧೈರ್ಯದಾತನೇ!
ಅದನ್ನು ಕೊಟ್ಟೆನು
ನಾ ನಿನ್ನ ವಶಕೆ.
ನನ್ನಂತ್ಯಶ್ವಾಸವು
ಪ್ರೇಮೋಕ್ತಿಯಹುದು;
ಆಚೇಲಿ ನಿನ್ನಲಿ
ವಿಶ್ರಾಂತಿಯಾಹೆನು.

೩೪೮

Ps. 90.
O God, our help in ages past.
M. T. 23.

1. ದೇವಾ, ನೀ ಭಕ್ತ ಸಭೆಯ
ನಿವಾಸಸ್ಥಾನವು.
ವಿಶ್ವಾದಿಯಿಂ ನೀನಿದ್ದವ
ಸರ್ವೇಶ ನಿತ್ಯಕು.

2. ಮನುಷ್ಯ ಹುಟ್ಟಿದಾರಭ್ಯ
ವಿನಾಶಪಾತ್ರನೇ.
ನಿನ್ನಲ್ಲೋ ಸಾವಿರಾಯುಷ್ಯ
ದಿನಕ್ಕೆ ತುಲ್ಯವೇ.

3. ಒಪ್ಪೊತ್ತೇ ಇರ್ವ ಹುಲ್ಲಿನ
ಓಪಾದಿ ನರನು.
ಎಪ್ಪತ್ತೂ ವರ್ಷದಾಯುಸ
ವಿಪತ್ತೇ ಸರ್ವವು.

4. ಈ ಪೀಡೆಗೊಂದೇ ಕಾರಣ
ಅಃ ಪಾಪರಾಶಿಯೇ.

ಕೋಪಾಗ್ನಿಯಿಂದ ನಶಿಸ
ನಾಂ ಪಾತ್ರರಲ್ಲವೇ?

5. ಈ ನಿನ್ನ ಕೋಪಕ್ಕಂಜುತ
ದಿನಾಂತ ನೆನದು
ಜ್ಞಾನಿಗಳಾಗಿ ವರ್ತಿಸ
ನೀನುಪದೇಶಿಸು!

6. ಪ್ರಸನ್ನನಾಗು, ಕರ್ತನೆ!
ಯೇಸೂ ನಿಮಿತ್ತವು;
ನೀ ಸಿಟ್ಟು ಮಾಡಿದಷ್ಟಕ್ಕೆ
ಉತ್ಸಾಹಗೊಳ್ಳಿಸು!

7. ಸಂವರ್ಧಿಸೆಮ್ಮ ಬದುಕು
ನಿವಾರಿಸಘವ;
ಜೀವಾಂತ್ಯದಲ್ಲಿ ಕಾಣಿಸು
ಆ ಸ್ವರ್ಗಭಾಗ್ಯವ.

8. ವಿಶ್ವಾದಿಯಿಂದಿದ್ದಾತನೆ,
ಈ ವರ್ಷಕ್ಕಾಗಿರು
ವಿಶ್ವಾಸಿಸಿರ್ದ ನಮಗೆ
ನಿವಾಸಸ್ಥಾನವು!

೩೪೯

Mel. Gott ist gegenwärtig.
M. T. 178.

1. ಇಲ್ಲಿದ್ದೇವೆ, ಯೇಸು,
ಹೋದ ವರ್ಷದಿಂದ
ಬಂದು ನಿನ್ನ ದಯದಿಂದ.
ಎಷ್ಟೋ ಮಂದಿ ಇಲ್ಲ;
ಹೋಗಿ ಬಿಟ್ಟಿದ್ದಾರೆ,
ನಿನ್ನ ಮುಂದೆ ಸೇರಿದ್ದಾರೆ.
ದೇವರೇ,
ಬೇಗನೇ
ತೀರೊದೆಮ್ಮ ಕಾಲ;
ಬಿಡು ನಮ್ಮ ಸಾಲ!

2. ಕ್ಷಾಮ, ವ್ಯಾಧಿ, ಯುದ್ಧ
ಮೊದಲಾದ ಕಷ್ಟ,
ಅರ್ಥ ಮತ್ತು ಪ್ರಾಣ ನಷ್ಟ
ಭ್ರಾತ್ರರಿಂಗೆ ತಾಗಿ
ದುಃಖ ಹುಟ್ಟಿದಲ್ಲಿ
ನೀನು ನಮ್ಮ ಸೀಮೆಯಲ್ಲಿ,
ತಂದೆಯೇ,
ದೇವರೇ,
ಇಟ್ಟಿ ಸಮಾಧಾನ,
ಕೊಟ್ಟಿ ಅನ್ನಪಾನ.

3. ಇದು ನಮ್ಮ ಪುಣ್ಯ,
ನಿನ್ನ ದಯವಲ್ಲ
ಎಂತ ಯಾರು ಹೇಳ ಬಲ್ಲ?
ನಿನ್ನ ಪ್ರೀತಿ ಎಷ್ಟು?
ಎಷ್ಟು ನಮ್ಮ ಪಾಪ?
ನೀನು ನಮಗೇನೂ ಶಾಪ
ಕೊಡದೆ,
ಸೈರಣೆ,
ಪ್ರೇಮ ಮಾತ್ರವಿಟ್ಟಿ;
ಕೋಪವೆಲ್ಲ ಬಿಟ್ಟಿ.

4. ಇಂಥ ದೀರ್ಘಶಾಂತಿ
ಹೋದ ವರ್ಷದಲ್ಲಿ
ನಿತ್ಯ, ಪ್ರತಿಕ್ಷಣದಲ್ಲಿ
ಹೊಂದುತ್ತಿದ್ದ ಮೇಲೆ,
ಸ್ತೋತ್ರಗೀತ ಹಾಡ,
ನಿಂಗೆ ನಮಸ್ಕಾರ ಮಾಡ
ಬಂದೆವು;
ಲಕ್ಷಿಸು
ನಮ್ಮ ದೀನ ಸೇವೆ,
ಅಡ್ಡ ಬೀಳುತ್ತೇವೆ.

5. ಮೂಡಿಸೆಮ್ಮ ಮೇಲೆ
ಹೊಸದೊಂದು ವರ್ಷ,
ಅದರಲ್ಲಿ ಆತ್ಮಹರ್ಷ!
ನಿನ್ನ ಮಾತಿನಂತೆ
ನಮ್ಮ ಕೂಡ ಇದ್ದು
ನಿನ್ನ ಮಕ್ಕಳನ್ನು ತಿದ್ದು;
ಕರ್ತನೆ,
ಕಡೆಗೆ
ಸೇರಿಸೆಮ್ಮನ್ನಲ್ಲಿ,
ಸ್ವರ್ಗದ್ವಾರದಲ್ಲಿ!

೩೫೦

Mel. Nun danket alle Gott.
M. T. 119.

1. ಹೋಯ್ತೊಂದು ವತ್ಸರ
ನಮ್ಮಲ್ಪಾಯುಷ್ಯದಿಂದ;
ಹೋಯ್ತು ಸುಖ ದುಃಖವು
ನಮ್ಮನುಭವದಿಂದ.
ಇನ್ನೊಮ್ಮೆ ಬಾರದು
ಸಂದ್ಹೋದ ವರುಷ;
ನಮ್ಮನ್ನು ದೇವರು
ವಿಚಾರ ಮಾಡುವ.

2. ಕರ್ತಾ, ನೀ ಬಿಡದೆ
ನಮ್ಮನ್ನು ಪ್ರೀತಿಸಿದ್ಧಿ;
ಮಹಾ ಕಾರುಣ್ಯದಿ
ನೀನೆಮ್ಮನುಳಿಸಿದ್ಧಿ.
ನಿನ್ನಲ್ಲಿ ದಯವು
ಅಮೂಲ್ಯವಾದದೆ;
ನಮ್ಮಿಡಿ ಮನಸು
ಕೃತಜ್ಞವಾಗಿದೆ.

3. ನಿನ್ನನ್ನು ತಿರಿಗಿ
ಆಶ್ರೈಸಿಕೊಳ್ಳುತ್ತೇವೆ;
ನಿನ್ನಲ್ಲಿ ನಿತ್ಯವು
ಸುಭದ್ರವಾಗಿದ್ಧೇವೆ.
ಶತ್ರುಂಗಳೊಳಗೆ
ನೀನೆಮ್ಮ ದುರ್ಗವು;
ನಿನ್ನಲ್ಲಿ ಸೇರಲೆ,
ಕೇಡೇನೂ ತಾಗದು.

4. ಈಯ್ ಹೊಸ ವರ್ಷಕೆ
ವಿಶ್ವಾಸ ಹೊಸದಾಗಿ;
ಸದ್ಧರ್ಮ ಸ್ಥಾಪಿಸು
ಪ್ರಾಚೀನ ರೂಪವಾಗಿ!

ಮನೇಂದ್ರಿಯಂಗಳಂ
ಹೊಸ್ತಾಗ ಪ್ರೇರಿಸು!
ಸದ್ವಾಕ್ಯದೀಪವಂ
ನಮ್ಮೊಳಗುಳಿಸು!

5. ನಮ್ಮಲ್ಲಿ ಹೆಚ್ಚಿಸು
ನಿರೀಕ್ಷೆ, ಪ್ರೀತಿಯನ್ನು!
ಕಷ್ಟಾದಿ ಬಂದರೆ,
ಹೆಚ್ಚಿಸು ತಾಳ್ಮೆಯನ್ನು!
ನೀ ನಿನ್ನ ಸತ್ಯತೆ
ದಿನಾಲು ತೋರಿಸು!
ನಮ್ಮೆಲ್ಲ ಕಷ್ಟದಿ
ನಮ್ಮನ್ನುದ್ಧರಿಸು!

6. ದುರಾಶಾಮೂಲವ
ನಮ್ಮಿಂದ ಕಿತ್ತು ಬಿಡು!
ಶರೀರ ಪ್ರಾಣಕೆ
ಬೇಕಾದದನ್ನು ನೀಡು!
ಮುಂದಿನ ಮಾರ್ಗವ
ಕರ್ತಾ, ನೀ ನೇಮಿಸು!
ನಿನ್ನಿಷ್ಟ ಚಿತ್ತಕೆ
ನಾವೊಪ್ಪಿಕೊಂಡೆವು.

7. ಈ ವರ್ಷ ಯಾವಗೆ
ಈ ಲೋಕವನ್ನು ಬಿಟ್ಟು
ಹೋಗಾಜ್ಞೆ ಕೊಡುವಿ,
ಅವಂಗೆ ದಯವಿಟ್ಟು,
ವಿಶ್ವಾಸಾನಂದದಿ
ನಿನ್ನಿಷ್ಟ ಸ್ಥಾನಕೆ
ಪ್ರವೇಶ ಕಾಣಿಸು,
ಅನಾದ್ಯನಂತನೆ!

೩೫೧

Mel. Nun danket alle Gott.
M. T. 119.

1. ದಯಾಳು ದೇವರೇ,
ನಾವೀಗ ನಿನ್ನ ಸೇವೆ
ಕೃತಜ್ಞರಾಗಿಯೇ
ಪೂರೈಸ ಬಂದಿದ್ದೇವೆ.
ನಮ್ಮಲ್ಲಿ ಬಂದಿರು
ನೀ ಹೇಳಿದಂತೆಯೇ!
ಆಲೈಸು ನಮ್ಮನು
ಕಟಾಕ್ಷದಿಂದಲೇ!

2. ಸಂದ್ಹೋದ ವರ್ಷದಿ
ಅಪಾರ ಪ್ರೀತಿಯಿಂದ
ನೀನೆಮ್ಮ ನಡಿಸಿ,
ಆಶ್ಚರ್ಯ ರೀತಿಯಿಂದ
ಈ ಹೊಸ ವರ್ಷಕೆ
ತಂದಿದ್ದಿ, ದೇವರೆ!
ನಮ್ಮಾತ್ಮ ನಿನ್ನನು
ಸಂಕೀರ್ತಿಸುತ್ತದೆ.

3. ಪ್ರಮಾಣ ಮೀರುತೆ
ನಾ ಗೈದ ಪಾಪರಾಶಿ.
ಪ್ರೇಮಾಬ್ಧಿ ಯೇಸುವೇ,
ನೀ ಮಾಡೆನ್ನನ್ನು ವಾಸಿ!

ಐ ಮನ್ನಿಸೆನಗೆ
ಸಮಸ್ತ ಪಾಪವ!
ನಾ ನಡಿಸುವೆನು
ನಿನ್ನಿಷ್ಟ ಸೇವೆಯ.

4. ಕಾಯೆನ್ನ ಪ್ರಾಣವ
ಈ ಹೊಸ ವರ್ಷದಲ್ಲಿ!
ನಿನ್ನಾತ್ಮವರವ
ಸಂವರ್ಧಿಸು ನನ್ನಲ್ಲಿ!
ಸಮಸ್ತ ಕಾಲದಿ
ಇರೆನ್ನ ಹತ್ತರ!
ನನ್ನಾತ್ಮದೇಹದಿ
ನೀ ಮಾಡು ವಸ್ತಿಯ!

5. ನನ್ನಂತ್ಯ ವರ್ಷವು
ಸಮಿಾಪವಾದೀತಲ್ಲ?
ನೀ, ಯೇಸು, ಬರೊದು
ಯಾವಾಗ? ಯಾರು ಬಲ್ಲ?
ಈಗೀಗಲೆನ್ನನು
ನೀ ಸಿದ್ಧಿಸೀಶನೆ!
ನಿನ್ನನು ನಿತ್ಯಕು
ಕೊಂಡಾಡುತ್ತಿರುವೆ.

೩೫೨

Nun lasst uns geh'n und treten.
M. T. 15.

1. ನಾವೀಗ ಕೂಡಿ ಹಾಡಿ
ಕರ್ತಂಗೆ ಸ್ತೋತ್ರ ಮಾಡಿ
ಕೃತಜ್ಞರಾಗಿರೋಣ!
ಆತಂಗೆ ಪ್ರಾರ್ಥಿಸೋಣ!

2. ಒಂದೊರ್ಷ ಬಿದ್ದು ಸಂತು,
ಮತ್ತೊಂದು ಮೂಡಿ ಬಂತು;
ಈ ದಿನಕಾತ ತಾನೆ
ನಮ್ಮನ್ನು ತಂದಿದ್ದಾನೆ.

3. ಸಹಸ್ರ ಚಿಂತೆಯಲ್ಲು
ಹೃತ್ಕಾಯಕಷ್ಟದಲ್ಲು
ವಿಜಯ ಹೊಂದಿದ್ದೇವೆ;
ಹೃದ್ಧೈರ್ಯ ಪಡುತೇವೆ.

4. ತಾಯ್ ಕೂಸು ನಿತ್ಯದಲ್ಲಿ
ಆರೈಸೋ ರೀತಿಯಲ್ಲಿ
ಯೆಹೋವನೆಮ್ಮ ಕಾದ;
ಸಹಾಯಗಾರನಾದ.

5. ನೀನೆಮ್ಮ ಜೀವಗತಿ;
ನಿನ್ನಕ್ಷಿಯಿಂದ, ಪತಿ,
ಕಾಪಾಡು! ನಮ್ಮ ಬಲ
ಯತ್ನೈಸಲೇನು ಫಲ?

6. ದಿನಾಲು ಹೊಸದಾಗಿ
ನೀ ಪ್ರೀತಿಸಿದ್ದಕ್ಕಾಗಿ
ನಾಂ ಗೈವ ಸ್ತೋತ್ರಸ್ವರ
ಆಲೈಸು, ಶೋಕಹರ!

7. ಇನ್ನಾಗೊ ಶ್ರಮೆಯಲ್ಲಿ,
ವಿವಿಧ ಭಾರದಲ್ಲಿ

ನಮ್ಮಾತ್ಮ ಸಂಯುದ್ಧ ಕುಗ್ಗೆ,
ಆಗೆಮ್ಮ ಸುಖಬುಗ್ಗೆ!

8. ನಿನ್ನಾಶ್ರಯಕ್ಕೆ ಬಂದು,
ಐ, ಒಲ್ಮೆ ತೋರಿಸೆಂದು,
ಗೋಳಾಡಲೊಬ್ಬ ನರ,
ತಂದಿಕ್ಕು ತಾಳ್ಮೆವರ!

9. ರಕ್ತಾಶ್ರು ಚಲ್ವದನ್ನು,
ಐ, ನೀಗಿ, ಲೋಕವನ್ನು
ಅನ್ಯೋನ್ಯಶಾಂತಿಯಿಂದ
ತುಂಬಿನ್ನು ವೇಗದಿಂದ!

10. ಈ ಹಿರಿ ಕಿರ್‍ಯರಲ್ಲಿ
ನಿನ್ನೊಲ್ಮೆಕಾಂತಿ ಚಲ್ಲಿ,
ಕೊಡಯ್ಯ, ನಮ್ಮ ಪಾದ
ಇಟ್ಟಲ್ಲಿ ಆಶೀರ್ವಾದ!

11. ದುರ್ಗತಗಾಗು ಗತಿ!
ವಿಮನಗಾಗು ಮತಿ!
ನಿರ್ಬಲಗಾಗು ಬಲ!
ನಿಃಸ್ಥಲಗಾಗು ಸ್ಥಲ!

12. ರೋಗಿಷ್ಠರಿಂಗೆ ದಯ
ಗೈದಿಹ ಕಷ್ಟ, ಭಯ
ಇತ್ಯಾದಿ ಮನೋಭಾರ!
ಮಾಡಯ್ಯ ಪರಿಹಾರ!

13. ವರಾತಿಶ್ರೇಷ್ಠವಾದ
ನಿನ್ನಾತ್ಮಸುಪ್ರಸಾದ
ಕೊಟ್ಟೈದಿಸಂತ್ಯದಲ್ಲಿ
ನಮ್ಮನ್ನು ಸ್ವರ್ಗದಲ್ಲಿ!

14. ಕೊಡಯ್ಯ ಬೇಡಿದ್ದನ್ನು!
ಕ್ರಿಸ್ತ್ಯೇಸುರಕ್ಷೆಯನ್ನು
ಈ ಹೊಸ ವರ್ಷದಲ್ಲಿ
ಕಣ್ಣಾಗಣಿಸೆಲ್ಲರಲ್ಲಿ!

೩೫೩

Bis hieher hat mich Gott gebracht.
M. T. 110.

1. ಈ ವರೆಗೆಮ್ಮ ದೇವರು
ಸಹಾಯ ಮಾಡಿದ್ದಾನೆ;
ಈ ವರೆಗ್ಗಗಲಿರುಳು
ನಮ್ಮನ್ನು ಕಾದಿದ್ದಾನೆ!
ಈ ವರೆಗೆಮ್ಮ ನಡಿಸಿ,
ಸಂತೋಷ ದಯಪಾಲಿಸಿ
ಉದ್ಧಾರ ಮಾಡಿದ್ದಾನೆ.

2. ಸಂಸ್ತುತಿ ನಿಂಗೆ, ಕರ್ತನೇ,
ಸಂಕೀರ್ತಿ, ನಮಸ್ಕಾರ!
ನಿಶ್ಚಲ ಪ್ರೀತಿಯಿಂದಲೇ
ಸ್ವಪ್ರಜೆಯ ವಿಚಾರ
ನೀ ಗೈದದನ್ನು ನೆನಸಿ
ಕೊಂಡಾಡುತ್ತೇವೆ ಹರ್ಷದಿ
ನಿನ್ನೆಲ್ಲಾ ಉಪಕಾರ.

3. ಇನ್ನಾದರೂ ಸ್ವಜನಕೆ
ಆಶ್ರಯಸ್ಥಾನವಾಗು!
ಸರ್ವತ್ರ ಪ್ರತಿ ಗಳಿಗೆ
ಸ್ವತಃ ಸಮೀಪವಾಗು!
ಕ್ರಿಸ್ತ್ಯೇಸುಶ್ರಮಮೂಲದಿಂ
ಸಮಸ್ತ ಕಷ್ಟದೊಳಗಿಂ
ನಮ್ಮನ್ನು ಪಾರು ಮಾಡು!

೩೫೪

Jesus soll die Losung sein.
M. T. 73.

1. ಹೊಸದಾದ ವರ್ಷಕೆ
ಏಕನಾದ ಸಹಕಾರಿ,
ಮುಂದಿನ ಪ್ರಯಾಣಕೆ
ಅತ್ಯಗತ್ಯ ರಹದಾರಿ
ಯೇಸು ಕ್ರಿಸ್ತನೊಬ್ಬನೆ!
ಆತನನ್ನು ಅಗಲೆ.

2. ಯೇಸುವಿನ ವಾಕ್ಯವು
ನನ್ನ ದ್ರವ್ಯ, ನನ್ನ ಶಸ್ತ್ರ;
ಯೇಸುವಿನ ನಾಮವು
ನನ್ನ ಧ್ವಜ, ನನ್ನ ವಸ್ತ್ರ.
ಅತಿಶ್ರೇಷ್ಠ ಮಹಿಮೆ
ಆಗಲೀ ಶ್ರೀನಾಮಕೆ!

3. ಇಷ್ಟಸಿದ್ಧಿ ನನಗೆ
ಕ್ರಿಸ್ತನಲ್ಲಿ ಇರಲಾಗಿ,
ನಾನು ಈ ಯುಗಾದಿಗೆ
ಪೂರ್ಣ ಧೈರ್ಯಶಾಲಿಯಾಗಿ
ಸೇರಿ, ದಿನ ದಿನಕೆ
ಹೆಚ್ಚು ಭಾಗ್ಯ ಹೊಂದುವೆ.

4. ಯೇಸುವನ್ನು ಹಿಡಿದು
ಹೋಗುತೇನೆ ದಾರಿಯಲ್ಲಿ;
ಆತ ಕೋಲು, ದೀಪವು
ನನ್ನ ಭೂಸಂಚಾರದಲ್ಲಿ;
ಆತನಿರೆ, ಎಲ್ಲವು
ಅತಿಹಿತವಾಗೊದು.

5. ಚಿಂತೆತಾಪತ್ರಯವು
ಯೇಸುವಿನ ನಾಮದಿಂದ
ಪರಿಹಾರವಾಗೊದು;
ಈ ಶ್ರೀನಾಮಬಲದಿಂದ
ನಾನು ಸೋತು ಹೋಗದೆ
ಪೂರ್ಣ ಜಯಗೊಳ್ಳುವೆ.

೩೫೫

Mel. Gesang verschönt das Leben.
M. T. 9.

1. ಸಂಗೀತವನ್ನು ತರ್ರಿ
ಯೆಹೋವನಾಮಕೆ!
ಉತ್ಸಾಹದಿಂದ ಬರ್ರಿ
ಯುಗಾದಿ ಹಬ್ಬಕೆ!

2. ದಯಾಳು ದೇವರನ್ನು
ಕೊಂಡಾಡು ಸಭೆಯೇ!
ಮಹೋಪಕಾರವನ್ನು
ಸಿಂಗಿತ್ತನಲ್ಲವೇ!

3. ಹಾಡೋಣ ಇಂಪು ರಾಗ!
ಯೆರೂಸಲೇಮಿಗೆ
ಪ್ರಯಾಣ ಮಾಡುವಾಗ
ನಾಂ ಹಾಡ ಬಾರದೆ?

4. ಅಲ್ಲೆಮ್ಮ ಸ್ವಂತ ದೇಶ,
ಅಲ್ಲೆಮ್ಮ ದ್ರವ್ಯವೇ!
ಆ ಪಟ್ಣದೊಳ್ ಪ್ರವೇಶ
ಮಾಡೋಣ, ಭಾತ್ರರೇ!

5. ನಾವಿಲ್ಲಿ ಕೂಡಿದಾಗ
ಮತ್ತಗಲುವೆವು.
ಅಲ್ಲ್ಯಾಗೊ ಸ್ತೋತ್ರರಾಗ
ಎಂದೆಂದು ತೀರದು.

6. ಸಂತೋಷ ತೀರದಂಥ
ಉತ್ಸಾಹಕಾಲವು,
ಮಾರ್ಪಾಟವಾಗದಂಥ
ಸುವರ್ಷ ಬಪ್ಪುದು.

7. ಕರ್ತಾ, ಆ ಹಬ್ಬಕಾಗಿ
ನಮ್ಮನ್ನು ಸಿದ್ಧಿಸು!
ನಿನ್ನನ್ನು ನೋಡಲಾಗಿ
ಕಟಾಕ್ಷ ಪಾಲಿಸು!

---

೬. ವಾರ್ಷಿಕ ಪಶ್ಚಾತ್ತಾಪ

೩೫೬

Mel. Through the night of doubt and sorrow.—M. T. 284. 31.

1. ಬನ್ನಿ, ಪಶ್ಚಾತ್ತಾಪದಿಂದ
ಸ್ವಾಮಿಗಡ್ಡ ಬೀಳುವ!
ಆತನಲ್ಲಿ ಕೃಪೆಯುಂಟು,
ಆತ ಶಾಂತಿದಾಯಕ.

2. ಶಿಕ್ಷಿಸಿದ ನೀತಿಯಿಂದ;
ಪ್ರೀತಿ ತೋರಿಸುವನು.
ಪೆಟ್ಟುಕೊಟ್ಟ ಹಸ್ತದಿಂದ
ಪೂರ್ಣ ವಾಸಿಮಾಡೊನು.

3. ದುಃಖ ತಾಪತ್ರಯ ಹೆಚ್ಚಿ
ರಾತ್ರಿಯಂತೆ ಮುಚ್ಚಲು,
ನೀತಿಸೂರ್ಯ ಯೇಸು ಮೂಡಿ
ಹರ್ಷ ಹುಟ್ಟಿಸಿದನು.

4. ಹ್ಯಾಗೆ ವೊಳಿಕೆಯ ಮೇಲೆ
ತಿಳಿ ಮಂಜು ಬೀಳುತ್ತೋ,
ಹಾಗೆ ನಮ್ಮ ಮೇಲೆ ಕೃಪೆ
ಸುರಿಸುವನಲ್ಲವೋ?

5. ಮಳೆಯಿಂದ ಚಂದ ಪುಷ್ಪ
ಅರಳುವ ಮೇರೆಗೆ,

ನಮ್ಮ ಮನದೊಳಾನಂದ
ಹುಟ್ಟಿ ತೃಪ್ತಿಯಾಗುತ್ತೆ.

6. ಬನ್ನಿ, ಪಶ್ಚಾತ್ತಾಪದಿಂದ
ಸ್ವಾಮಿಗಡ್ಡ ಬೀಳುವ!
ಆತನಲ್ಲಿ ಕೃಪೆಯುಂಟು,
ಆತ ಶಾಂತಿದಾಯಕ.

೩೫೭

Betet an vor Gott, ihr Sünder.
M. T. 286. 195.

1. ನರಪುತ್ರರಡ್ಡ ಬೀಳಿ!
ಸಾಷ್ಟಾಂಗ ಧೂಳಿಯಲ್ಲಿ ಬೀಳಿ
ಯೆಹೋವ ಸದಾಸ್ವಾಮಿಗೆ!
ನಿಮ್ಮನ್ನುಂಟುಮಾಡಿದ್ಧಾನೆ;
ಕೆಟ್ಟೋದ ಮಕ್ಕಳನ್ನು ತಾನೆ
ವಿಮುಕ್ತಿಗೈದನಲ್ಲವೆ?
ಆತಂಗೆ ನಮಿಸಿ!
ಆತನ್ನ ಬಲ್ಲಿರಿ—
ಸರ್ವತ್ರಾಣಿ!
ಸ್ವಯಂಭುವು!
ಸರ್ವಜ್ಞನು!
|: ದೀನರ ನ್ಯಾಯಾಧೀಶನು! :|

2. ಸೃಷ್ಟಿಕರ್ತ ಒಳಿಯಲ್ಲಿ
ನಾವೆಲ್ಲ ಕೂಡಿ ಬರುವಲ್ಲಿ
ಸಂತಾಪ, ಕ್ಲೇಶ ಕಾಣದೋ?
ಬೊಗ್ಗಿದವರಾಗಿ ಬನ್ನಿ,
ಕಣ್ಣೀರಿನಿಂದ ಬೇಡಿ ಅನ್ನಿ—
ಕೃಪಾಳು ಕರ್ತ, ತಾಳಿಕೋ!
ಮಧ್ಯಸ್ಥ ಕ್ರಿಸ್ತನ
ಕೊಟ್ಟಂಥ ತಾರಕ,
ಕೇಳು! ಕೇಳು!
ಕಟಾಕ್ಷಿಸು!
ಕರುಣಿಸು!
|: ಕ್ರಿಸ್ತ್ಯೇಸುವಲ್ಲಿ ರಕ್ಷಿಸು! :|

3. ನಮಸ್ಕಾರ ಮಾಡಿರಿಂದು!
ಕ್ರಿಸ್ತ್ಯೇಸುಪಿತ ಪ್ರೀತಿಸಿಂಧು;
ಹೌದಾತ ವಿಶ್ವಪ್ರೇಮಿಯು.
ದೀರ್ಘಶಾಂತನಾಗಿದ್ಧಾನೆ,
ಅಕ್ರಮಗಾರಗನ್ನುತ್ತಾನೆ—
ಹಾಳಾಗಬೇಡ, ಬದುಕು!
ಕಲ್ಲಾಗ ಬಾರದು!
ಹೃದ ಮಾರ್ಪಡಿಸು!
ಕೇಳು! ಕೇಳು!
ನೀ ಕೇಳದೆ
ಮುಂದ್ಹೋದರೆ,
|: ಕೋಪಾಗ್ನಿಗಿನ್ನು ಪಾತ್ರನೆ! :|

4. ಎಚ್ಚರಾಗಿ ಬನ್ನಿ! ಬನ್ನಿ!
ಈ ಹೊತ್ತು ಬಂದು ಧೂಪ ತನ್ನಿ,
ವ್ಯಾಕುಲವೆಂಬ ಧೂಪವೆ!
ಕನಿಕರವುಳ್ಳ ತಂದೆ
ಒಂದೊಂದು ಕುರಿ, ಇಡೀ ಮುಂದೆ

ತಾ ಮಾಡುತ್ತಾನೆ ಪಾಲನೆ.
ಇನ್ನಲ್ಪ ಕಾಲವು
ಸಿಕ್ಕೀತು ಬಾಗಲು;
ಬನ್ನಿ! ಬನ್ನಿ!
ವಿಶ್ವಾಸದಿ
ಪ್ರವೇಶಿಸಿ
|: ಕ್ರಿಸ್ತ್ಯೇಸುವಲ್ಲಿ ಬಾಳಿರಿ! :|

೩೫೮

Mel. Dich zu lieben.—M. T. 157.

1. ಕರುಣಾಕಟಾಕ್ಷವುಳ್ಳ
ತಂದೆ, ಮಗ, ಆತ್ಮನೆ!
ಕೃಪೆಯನ್ನು, ಪ್ರೀತಿಯುಳ್ಳ
ಕರ್ತ, ತೋರಿಸೆಮಗೆ!
ನಮ್ಮ ಪಾಪಮೋಹದಲ್ಲಿ
ನಿನ್ನ ವಾಕ್ಯ ಮರೆತು,
ಈ ಪ್ರಪಂಚಕಾಡಿನಲ್ಲಿ
ದಾರಿ ತಪ್ಪಿ ಸತ್ತೆವು.

2. ನಾವು ನಿನಗೆಷ್ಟೊ ದ್ವೇಷ
ಮಾಡಿ, ಕೆಟ್ಟು ಹೋದೆವು!
ದುಷ್ಟ ತಂತ್ರವುಳ್ಳ ಶೇಷ
ಎಷ್ಟೊ ಮೋಸ ಮಾಡಿತು!
ಈಗ ನಿನ್ನ ಪ್ರೀತಿ ನೋಡಿ,
ವ್ಯರ್ಥ ಬುದ್ಧಿ ಕಳೆದು,
ನಿನ್ನ ಪಾದ ಹತ್ರ ಓಡಿ,
ನಿನ್ನ ವಶವಾದೆವು.

೩೫೯

Mel. Eternal Father, strong to save.—M. T. 249.

1. ನಿನ್ನನ್ನು, ಯೇಸು, ಬಲ್ಲೆವು
ಎಂಥೇಳ ಹ್ಯಾಗೆ ಶಕ್ತರು?
ಪ್ರಪಂಚಕಿಂಬು ಕೊಟ್ಟದು
ಸುಜ್ಞಾನಕ್ಕಡ್ಡಿಯಾಯಿತು.
ನಿನ್ ಪ್ರೀತಿ, ತ್ರಾಣ, ಕರ್ತನೆ,
ತೋರ್ಪಡಿಸಿನ್ನು ಸಭೆಗೆ!

2. ತಕ್ಕಂತೆ ಭಯ ಪಟ್ಟೆವು
ಎಂಥೇಳ ಹ್ಯಾಗೆ ಶಕ್ತರು?
ನಮ್ಮೆಲ್ಲ ಕೃತ್ಯ, ಮನಸ್ಸು
ನೀ ಬಲ್ಲಿ ಎಂದು ಮರ್ತೆವು.
ಈ ಮಾತು ಕಲಿಸೆಮಗೆ—
ನಿನ್ನಕ್ಷಿ ನಮ್ಮ ಮೇಲದೆ!

3. ತಕ್ಕಂತೆ ಪ್ರೀತಿಸಿದೆವು
ಎಂಥೇಳ ಹ್ಯಾಗೆ ಶಕ್ತರು?
ನಿನ್ನನ್ನು ಎಲ್ಲಕ್ಕಿಂತಲೂ
ಇನ್ನೊಬ್ಬನನ್ನೆಮ್ಮಂತೆಯೂ
ನಾವಿನ್ನು ಪ್ರೀತಿ ಮಾಡಲು
ನೀ, ಕರ್ತಾ, ನಮ್ಮ ಪ್ರೇರಿಸು!

4. ತಕ್ಕಂತೆ ಸೇವಿಸಿದೆವು
ಎಂಥೇಳ ಹ್ಯಾಗೆ ಶಕ್ತರು?
ಕರ್ತವ್ಯಚಿಂತೆ ಇಲ್ಲದೆ
ಆಸಕ್ತಿ ನಿಂತು ಹೋಗಿದೆ.
ನಮ್ಮನ್ನು ಯೋಗ್ಯ ಸೇವೆಗೆ
ನೀ ಬಲ ಪಡಿಸಾಳ್ಮನೆ!

5. ಶ್ರೀ ಯೇಸು, ನಿನ್ನ ಜ್ಞಾನವ,
ನಿಂಗಿದ್ದ ಭಯ, ಪ್ರೀತಿಯ
ಸಂಪೂರ್ಣವಾಗಿ ಸ್ವರ್ಗದಿ
ಸಂಸೇವೆಗಾಗಿ ಕೊಡುವಿ.
ಕಣ್ಣಾರೆ ನಿನ್ನ ನೋಡಲು
ಈಗೆಮ್ಮ ಸಿದ್ಧ ಪಡಿಸು!

೩೬೦

Mitten wir im Leben sind.
M. T. 199.

1. ಮಧ್ಯ ಜೀವದೊಳಗೆ
ಮೃತಿಯಲ್ಲಿದ್ದೇವೆ.
ಎಲ್ಲಿ ಗತಿ? ಕೃಪೆಯ
ಎಲ್ಲಿ ಹೊಂದುತ್ತೇವೆ?
ನಿನ್ನೊಬ್ಬನಲ್ಲೆ, ಕರ್ತ!
ಅಸಹ್ಯ ನಮ್ಮ ಕರ್ಮವು
ನಿನ್ನ ಕೋಪವೇರ್ಸಿತು.
ನಿರ್ಮಲ ಕರ್ತನೇ,
ನಿರ್ಮಲ ಶಕ್ತನೇ,
ನಿರ್ಮಲ ದಯಾಪರನಾದ
ಸಂರಕ್ಷಕನೇ,
ತೀಕ್ಷ್ಣ ಸಾವಿನಿಂದ
ನಮ್ಮ ಆತ್ಮ ತಪ್ಪಿಸು,
ಕಟಾಕ್ಷವಿಟ್ಟು!

2. ಮಧ್ಯ ಮೃತಿಯೊಳಗೆ
ನರಕಾಗ್ನಿದ್ವಾರ
ತೆರೆದಾಗಲೆಮಗೆ
ಯಾರು ಹೊಣೆಗಾರ?
ನೀ ಮಾತ್ರ, ನಮ್ಮ ಕರ್ತ!
ನೀನೆಮ್ಮ ಕೇಡು ದೃಷ್ಟಿಸಿ,
ರಕ್ಷಿಸನುಗ್ರಹದಿ!
ನಿರ್ಮಲ ಕರ್ತನೇ,
ನಿರ್ಮಲ ಶಕ್ತನೇ,
ನಿರ್ಮಲ ದಯಾಪರನಾದ
ಸಂರಕ್ಷಕನೇ,
ಅಗ್ನಿಕುಂಡದಲ್ಲಿ
ದೊಬ್ಬ ಬೇಡ ನಮ್ಮನು,
ಕಟಾಕ್ಷವಿಟ್ಟು!

3. ಮಧ್ಯ ನರಕಾಗ್ನಿಯ
ಶಿಕ್ಷಾಪರಿಮಾಣ
ನೋಡಿ, ಭೀತಿಗೊಳ್ಳಲು,
ನಮಗೆಲ್ಲಿ ಸ್ಥಾನ?
ನಿನ್ನೊಬ್ಬನಲ್ಲೆ, ಯೇಸು!
ನೀ ನಿನ್ನ ರಕ್ತ ಚಲ್ಲಿದೆ
ಪಾಪಪರಿಹಾರಕೆ.
ನಿರ್ಮಲ ಕರ್ತನೇ,
ನಿರ್ಮಲ ಶಕ್ತನೇ,
ನಿರ್ಮಲ ದಯಾಪರನಾದ
ಸಂರಕ್ಷಕನೇ,
ಹೀನ ಮಾಡ ಬೇಡ
ಭಕ್ತರ ಪ್ರತೀಕ್ಷೆಯಂ,
ಕಟಾಕ್ಷವಿಟ್ಟು!

---

೭. ಸಭಾ ಪುನಃಸ್ಥಾಪನಸ್ಮರಣೆ

೩೬೧

Ein' feste Burg ist unser Gott.
M. T. 172.

1. ಯೆಹೋವ ಪ್ರಾಪ್ತಕಾಲದ
ಸುಭದ್ರ ದುರ್ಗಸ್ಥಲ;
ಶತ್ರುಂಗಳನ್ನು ಜೈಸುವ
ಶ್ರೇಷ್ಠಾಸ್ತ್ರ, ನಿಜ ಬಲ!
ಹಳೇ ವೈರಿಯು
ಈಗ ಮುನಿದು,
ಮಹಾ ಶಕ್ತಿಯಿಂ,
ಕುಯುಕ್ತಿತಂತ್ರದಿಂ
ವಿರೋಧ ನಿಂತಿದ್ದಾನೆ.

2. ನಮ್ಮಲ್ಲಿ ತ್ರಾಣವಿಲ್ಲವು,
ನಾಂ ಗೆಲ್ಲ ಶಕ್ತರಲ್ಲ;
ಯೆಹೋವನಾಯ್ದ ಶೂರನು
ವಿಜಯ ಕೊಡ ಬಲ್ಲ.
ಅದಾರೆಂದರೆ,
ಯೇಸು ಕ್ರಿಸ್ತನೆ!
ಎಲ್ಲಾ ಸೃಷ್ಟಿಗು
ಸರ್ವೇಶನಾತನು;
ಮತ್ತೊಬ್ಬ ದೇವರಿಲ್ಲ!

3. ಭೂ ದೆವ್ವ ತುಂಬಿದ್ದಾದರು
ನಮ್ಮನ್ನು ನುಂಗೊದಿಲ್ಲ.
ವಿಜಯಗತಿ ನಮ್ಮದು!
ನಮ್ಮಲ್ಲಿ ಭಯವಿಲ್ಲ.
ಈ ಲೋಕೇಶನು
ಸಿಟ್ಟಿಗೆದ್ದರು
ಹ್ಯಾಗೂ ನಿಲ್ಲನು.
"ಅಂತ್ಯಾಜ್ಞೆಯಾಯಿತು!"
ಈ ಒಂದೆ ಮಾತು ಸಾಕು.

4. ಯಾವಾತ ಬಂದು ಕೀಳ್ವನು
ಪವಿತ್ರ ವಾಕ್ಯವನ್ನು?
ದಿವ್ಯಾತ್ಮನಾಳುತ್ತಿರ್ವನು
ಸದ್ಭಕ್ತಸಭೆಯನ್ನು.
ಸತೀಸುತರೂ
ಹೊನ್ನೂ ಹೆಸರೂ
ಎಲ್ಲಾ ಹೋಗಲಿ!
ನೀ, ವೈರಿ, ಸೋಲುವಿ.
ರಾಜ್ಯಾದಿ ನಮ್ಮ ಪಾಲು!

೩೬೨

Lord of our Life.—M. T. 285. 47.

1. ರಕ್ಷಕನೇ, ಚೈತನ್ಯದಾತ,
ಕರ್ತ!
ತಾರಕನೇ, ಸಮಸ್ತ ವಿಶ್ವಭರ್ತ!
ಕೇಳೆಮ್ಮ ಕೂಗು, ಕೊಡು ಪರ
ಮಾರ್ಥ
ನೀ ಸರ್ವತ್ರಾಣಿ.

2. ನಾವೆಯ ಸುತ್ತು ತೆರೆ ಏಳು
ವಾಗ,
ಮಂದೆಯ ನುಂಗ ತೋಳ ಬರು
ವಾಗ,
ದುರ್ವೈರಿ ಅಗ್ನಿಬಾಣ ಹೂಡು
ವಾಗ
ರಕ್ಷಿಸೆಮ್ಮನು!

3. ಆಶ್ರಯ ಕಾಣದಿರೆ ನೀನಾ
ಶ್ರಯ.
ನಿನ್ನಿಂದ ಆಯ್ತು ಪಾಪವಿಷ
ಲಯ.
ಇನ್ನ್ಯಾಕೆ ಮೃತ್ಯು ನರಕಾದಿ
ಭಯ?
ಈಯ್ ಸಮಾಧಾನ.

4. ಸೋಲಿಸು ಭಕ್ತಸಭೆ ಕಾ
ಡೋ ಜನ,
ಕ್ಷಮಿಸು ಸತ್ಯಕ್ಕೊಪ್ಪಿದವರನ್ನ,
ವರ್ಧಿಸು ರಾಜ್ಯ, ಸೇರಿಸು
ನಮ್ಮನ್ನ
ಸ್ವರ್ಗಸೌಭಾಗ್ಯ.

೩೬೩

Isaiah 64.
Ach, dass die Himmel du zerrissest! —M. T. 236.

1. ಆಕಾಶವನ್ನು ಹರಕೊಂಡು,
ಐ, ತ್ವರೆಯಾಗಿ ಇಳ್ದು ಬಾ!
ಶೈಲಾದಿ ತತ್ತರಿಸಿಕೊಂಡು
ನಿಂಗಂಜಲಿ ಭೂಮಂಡಲ!
ಕಾಡ್ಗಿಚ್ಚು ಕಾಡು ಸುಡುವಂತೆ
ಪ್ರತಾಪವ ಪ್ರದರ್ಶಿಸಿ,
ರಾಜಾಧಿರಾಜ, ನಮ್ಮ ತಂದೆ,
ರಾಜ್ಯಾರಿ ಸೋಲಿಸುಗ್ರದಿ!

2. ನಿನ್ನ ಪ್ರಭಾವ, ತೇಜ, ಶಕ್ತಿ
ಜನಾಂಗಕ್ಕೆಲ್ಲ ಕಾಣಲಿ!
ನಿಂಗರ್ಹವಾದ ಭಯಭಕ್ತಿ
ಸಮಸ್ತರಲ್ಲಿ ಹುಟ್ಟಲಿ!
ಮಾನುಷ ಕಣ್ಣು ಕಾಣದಂಥ,
ಮಾನುಷ ಕಿವಿ ಕೇಳದ,
ಮಾನುಷ ಬುದ್ಧಿ ಮೀರುವಂಥ
ವಿಮುಕ್ತಿ ಸಾಧಿಸೊಡೆಯ!

3. ನಿನ್ನಾಜ್ಞೆಯನ್ನು ಆದು
ಕೊಂಡು
ನಿನ್ನನ್ನು ಪ್ರೀತಿ ಮಾಡುವ
ಸ್ವಪ್ರಜೆಯಂ ಕಾಪಾಡಿಕೊಂಡು
ನಿನ್ನಾಪ್ತರಿಂಗೆ ಶಾಂತಿ ತಾ!
ನಮ್ಮನ್ನು ನೋಡಿ ದಯದಿಂದ
ಬಿಟ್ಟೆಲ್ಲ ಉಗ್ರಕೋಪವ
ಮಹಾಂತ ನಿನ್ನ ಪ್ರೀತಿಯಿಂದ
ಕಟಾಕ್ಷಿಸಿನ್ನು ಸಭೆಯ!

೩೬೪

Mel. Es braust ein Ruf wie Donnerhall.—M. T. 165.

1. ಉಂಟಾಗಿದೊಂದು ಗರ್ಜನೆ;
ಶಸ್ತ್ರಕ್ಕೆ ಶಸ್ತ್ರ ತಾಗುತೆ;
ಆರ್ಭಟ, ಬೊಬ್ಬೆ ಹತ್ತಲು
ವಿಶ್ವಾಸವೀರರೆದ್ದರು.
|: ಸುಶಾಂತಿ ಪಡು, ಸಭೆಯೆ! :|
|: ಯೆಹೋವನಕ್ಷಿ ಕಾಯುತಿ
ರುತೆ. :|

2. ಸಹಸ್ರ ಮಂದಿ ನಮ್ಮನು
ನಿರ್ಮೂಲಿಸಲಿಕೆದ್ದರು,
ಒತ್ತಾಯ, ಸುಳ್ಳು, ಕಪಟ
ನಮ್ಮೆದುರಾಳಿಯಾಯುಧ.
|: ಸುಶಾಂತಿ ಪಡು, ಸಭೆಯೆ! :|
|: ಯೆಹೋವನಕ್ಷಿ ಕಾಯುತಿ
ರುತೆ. :|

3. ನಾವಂಜೆವೆಮ್ಮ ಕರ್ತನು
ಕ್ರೂಜೇಲಿ ಹೋರನಾಡಲು
ಸೈತಾನನಧಿಕಾರವ
ಸಂಪೂರ್ಣ ಮುರಿದ್ಹಾಕಿದ.
|: ಸುಶಾಂತಿ ಪಡು, ಸಭೆಯೆ! :|
|: ಯೆಹೋವನಕ್ಷಿ ಕಾಯುತಿ
ರುತೆ. :|

4. ವಿಶ್ವಾಸ ನಮ್ಮ ಖೇಡ್ಯವು;
ಸುವಾರ್ತೆ ನಮ್ಮ ಖಡ್ಗವು;
ದೇವಾತ್ಮ ನೆರವಾಗಲು,
ವಿರೋಧಿ ನಮ್ಮ ಜೈಸನು.
|: ಸುಶಾಂತಿ ಪಡು, ಸಭೆಯೆ! :|
|: ಯೆಹೋವನಕ್ಷಿ ಕಾಯುತಿ
ರುತೆ. :|

5. ಪ್ರಮಾಣ ಮಾಡಿ ನಂಬಿಕೆ
ಇಟ್ಟೆಮ್ಮ ಯೇಸುನಾಥಗೆ
ಭೂಲೋಕವನ್ನು ಗೆದಿಯ
ನಾವೆಲ್ಲರೆದ್ದು ಹೋರುವ!
|: ಸುಶಾಂತಿ ಪಡು, ಸಭೆಯೆ! :|
|: ಯೆಹೋವನಕ್ಷಿ ಕಾಯುತಿ
ರುತೆ. :| |:

೩೬೫

Mel. Ein' feste Burg ist unser Gott.—M. T. 172.

1. ಹೋರಾಡಲಿಕ್ಕೆ ಬಂದೆವು
ನಮ್ಮಿಶನಾಮದಲ್ಲಿ.
ವೈರಾಳುಗುಂಪಿಗೆದುರು
ಹೋಗೋಣ ಧೈರ್ಯದಲ್ಲಿ
ಸದಾ ಹೋರುತಾ,
ಯತ್ನ ಮಾಡುತಾ!
ದೃಢ ನಂಬಿಗೆ,
ಸುಶಾಂತಿ, ಪ್ರಾರ್ಥನೆ
ಇವಾಗಿವೆಮ್ಮ ಶಸ್ತ್ರ.

2. ಸೈತಾನದುರ್ಗ ದೊಡ್ಡದು
ಈ ಹಿಂದುಸ್ಥಾನದಲ್ಲಿ.

ಹ್ಯಾಗಾದಿತೆಮ್ಮ ವಶವು?
ಗೆದ್ದೇವೊ ಯುದ್ಧದಲ್ಲಿ?
ಸದಾಶೂರನು,
ಸೈನ್ಯಾಧೀಶನು
ಆದ ಕ್ರಿಸ್ತನು
ನಮ್ಮಲ್ಲಿ ಬಂದನು.
ಇನ್ನಾಗದಪಜಯ.

3. ಉಂಟೀಗ ದೊಡ್ಡ ಯುದ್ಧವು
ಸಮಸ್ತ ಕಡೆಯಲ್ಲಿ.
ಬಂದಿರುತ್ತಾನೆ ಶತ್ರುವು
ಉದ್ರೇಕದುರಿಯಲ್ಲಿ;
ಕುಯುಕ್ತೀಶನು,
ಮಹಾ ಕ್ರೂರನು!
ನಮ್ಮನೆಲ್ಲರ
ಈ ಲೋಕದೊಡೆಯ
ಕೊಂದ್ಹಾಕ ಬಂದಿದ್ಧಾನೆ.

4. ಜನಾಂಗ ಘೋಷಿಸುತ್ತದೆ
ಸಮುದ್ರದಂದದಲ್ಲಿ.
ಸನ್ಮಾನ ಸಲ್ಲಿಸುತ್ತದೆ
ನಿರ್ಜೀವ ಮೂರ್ತಿಯಲ್ಲಿ.
ಇಂಥಾಸಕ್ತಿಯೂ
ಎಲ್ಲಾ ಭಕ್ತಿಯೂ
ನಿಷ್ಪ್ರಯೋಜಕ!
ಸುಳ್ಳಾದ ದೇವರ
ನಂಬಿದ್ದು ಕೆಟ್ಟಿದ್ಧಾರೆ.

5. ಆದಾಗ್ಯು ಸ್ಥಿರ ನಿಲ್ಲುವಾ
ಗುಬಾರ ಮಧ್ಯದಲ್ಲಿ!
ಸುವಾರ್ತೆ ಇನ್ನು ಸಾರುವಾ
ಸಂತೋಷಧೈರ್ಯದಲ್ಲಿ!
ಪರಾಕ್ರಮದಿ,
ಸರ್ವಾಯುಧದಿ
ಕಾದಾಡೋದಕೆ
ಹೋಗೋಣ ರಣಕೆ!
ಕಡೇಲಿ ಗೆಲ್ಲುತೇವೆ.

೩೬೬

Mel **Es braust ein Ruf wie Donnerhall.—M. T. 165.**

1. ವಿರೋಧವಾಗಿ ಎದ್ದರು
ನೂರಾರು ವೈರಿ ಜನರು.
ನಾವೊಂದು ಚಿಕ್ಕ ಮಂದೆಯು;
ಹೋರಾಡ ಶಕ್ತಿ ಸಾಲದು.
|: ಸಂಧೈರ್ಯಗೊಳ್ಳು, ಮಂದೆ
ಯೆ! :|
|: ಇಮ್ಮಾನುವೇಲ್ ಇದ್ಧಾನೆ
ಅಲ್ಲವೆ! :|

2. ನಮ್ಮೆಲ್ಲ ತ್ರಾಣ ವ್ಯರ್ಥವು;
ಪ್ರಯತ್ನ ಫಲವಿಲ್ಲದ್ದು.
ಈ ಮೂಢಭಕ್ತಿಪರ್ವತ
ಯಾವಾತ ಕಿತ್ತುಹಾಕುವ?
|: ಸಂಧೈರ್ಯಗೊಳ್ಳು, ಮಂದೆ
ಯೆ! :|

|: ಇಮ್ಮಾನುವೇಲ್ ಇದ್ದಾನೆ
ಅಲ್ಲವೆ! :|

3. ಸುವಾರ್ತೆ ಕೇಳಲೊಲ್ಲರು,
ಕರ್ತನ್ನ ಸೇರಿಕೊಳ್ಳರು.
ಬೋರ್ಗಲ್ಲಿನಂಥ ಹೃದಯ
ಯಾರೊಡೆದ್ದಾಕಿ ಬಿಡುವ?
|: ಸಂಧ್ಯೆಯರ್ಗೊಳ್ಳು, ಮುಂದೆ
ಯೆ :|
|: ಇಮ್ಮಾನುವೇಲ್ ಇದ್ದಾನೆ
ಅಲ್ಲವೆ! :|

4. ಕುಯುಕ್ತಿವೋಸತಂತ್ರದಿ
ಹೋರಾಡುವರಾ ಸೈನ್ಯದಿ.
ಅದೆಮ್ಮ ಮೇಲೆ ಬಿದ್ದರೆ,
ಕೆಟ್ಟೋದೇವಲ್ಲೊ ಬೇಗನೆ?
|: ಸಂಧ್ಯೆಯರ್ಗೊಳ್ಳು, ಮುಂದೆ
ಯೆ! :|
|: ಇಮ್ಮಾನುವೇಲ್ ಇದ್ದಾನೆ
ಅಲ್ಲವೆ! :|

5. ನಾವಂತು ಅಂಜಲೊಲ್ಲೆವು,
ನಮ್ಮಾಶನನ್ನು ಬಲ್ಲೆವು.
ಇಮ್ಮಾನುವೇಲನಾತನು,
ನಮ್ಮೊಡನೆ ಶ್ರೀದೇವರು.
|: ಸಂಧ್ಯೆಯರ್ಗೊಳ್ಳು, ಮುಂದೆ
ಯೆ! :|
|: ಇಮ್ಮಾನುವೇಲ್ ಇದ್ದಾನೆ
ಅಲ್ಲವೆ! :|

6. ಈ ಪತಿಪಕ್ಷ ಹೋರುತ
ಸಂತೋಷವಾಗಿ ಗೆಲ್ಲುವ!
ಶತ್ರುಂಗಳೆಷ್ಟೋ ಇದ್ದರೂ,
ವಿಜಯ ತಪ್ಪದೆಂದಿಗೂ.
|: ಸಂಧ್ಯೆಯರ್ಗೊಳ್ಳು, ಮುಂದೆ
ಯೆ! :|
|: ಇಮ್ಮಾನುವೇಲ್ ಇದ್ದಾನೆ
ಅಲ್ಲವೆ! :|

7. ಈ ದೊಡ್ಡ ಮೂರ್ತಿಸ್ಥಾ
ನವು
ಸೈತಾನಬಲದುರ್ಗವು.
ಇದೆಮ್ಮ ಕ್ರಿಸ್ತನಾಲಯ
ಇನ್ನಾಗೊದೊಂದು ಸಮಯ.
|: ಸಂಧ್ಯೆಯರ್ಗೊಳ್ಳು, ಮುಂದೆ
ಯೆ! :|
|: ಇಮ್ಮಾನುವೇಲ್ ಇದ್ದಾನೆ
ಅಲ್ಲವೆ! :|

8. ಈ ಸೀಮೆಯಲ್ಲಿ ಯೇಸುವು
ಸಮ್ರಾಜನಾಗಿ ಆಳ್ವನು.
ಭೂಲೋಕರಾಜರೆಲ್ಲರು
ಸಾಷ್ಟಾಂಗವಡ್ಡ ಬೀಳ್ವರು.
|: ಸಂಧ್ಯೆಯರ್ಗೊಳ್ಳು, ಮುಂದೆ
ಯೆ! :|
|: ಇಮ್ಮಾನುವೇಲ್ ಇದ್ದಾನೆ
ಅಲ್ಲವೆ! :|

೮. ಫಲೋತ್ಸವ

೩೬೭

Lobt den Herrn! Das Sterngefilde.
M. T. 287.

1. ಕ್ರೈಸ್ತನೇ, ಯೆಹೋವನನ್ನು
ಮನಃಪೂರ್ಣ ಸ್ತುತಿಸು!
ಬೇರೆ ಯಾವ ಹೆಸರನ್ನು
ಎತ್ತ ಬೇಡ! ಆತನು
ಯೋಗ್ಯನು! ಯೋಗ್ಯನು!

2. ಕ್ರೈಸ್ತನೇ, ನೀ ಮಾಡು ಧ್ಯಾನ—
ಗಾಳಿ, ಮಳೆ, ಬೆಳೆಯು
ನಿನಗಾತನಿತ್ತ ದಾನ;
ದೊಡ್ಡ ಉಪಕಾರವು!
ಸ್ಮರಿಸು! ಸ್ಮರಿಸು!

3. ಕ್ರೈಸ್ತನೇ, ನೀ ಸಮಾಧಾನ,
ಜೀವ, ಕ್ಷೇಮ, ಕಸಬು,
ಅನುದಿನದನ್ನಪಾನ
ಹೊಂದಿದ್ದಾರ ದಯವು?
ಧ್ಯಾನಿಸು! ಧ್ಯಾನಿಸು!

4. ಕ್ರೈಸ್ತನೇ, ನೀನುಪಕಾರ
ಹೊಂದಿ ಪ್ರತಿದಾನ ತಾ!
ಬುದ್ಧಿ, ಚಿತ್ತ, ಸದಾಚಾರ
ಆಯದ್ದೊಂದು ಭಾಗವ
ಅರ್ಪಿಸು! ಅರ್ಪಿಸು!

5. ಕ್ರೈಸ್ತನು ತಾ ಡಂಭಾಚಾರ
ಮೊದಲಾದ ಸ್ವಾರ್ಥಕೆ
ಆಸ್ತಿ ವೆಚ್ಚ ಮಾಡಲಾರ.
ಕರ್ತ ಲೆಕ್ಕ ಕೇಳನೆ?
ಯೋಚಿಸು! ಯೋಚಿಸು!

೩೬೮

Mel. Gott erhalte Franz, den Kaiser.—M. T. 153.

1. ದೇವರಾಶೀರ್ವಾದದಿಂದ
ಬಾಳು, ಸೊತ್ತು ಸಿಕ್ಕುತೆ;
ನನ್ನ ಸ್ವಂತ ಯತ್ನವೆಲ್ಲ
ಪೂರ್ಣವಾಗಿ ವ್ಯರ್ಥವೆ;
ಬುದ್ಧಿ, ಬಲ, ಕಾಲ, ಸೊತ್ತು
ಕರ್ತ ತಾನೆ ಕೊಟ್ಟದು.
ಇದು ನನ್ನ ಸ್ವಂತವೆಂದು
ಯಾರೂ ಹೇಳಕೂಡದು.

2. ಹತ್ತರಲ್ಲಿ ಒಂದು ಪಾಲು
ದೇವಭಾಗವಾಗಿದೆ;
ಹೀಗೆ ಕೊಡುವಂತೆ ಆತ
ಆಜ್ಞೆ ಕೊಡಲಿಲ್ಲವೆ?
ಪೂರ್ಣ ಮನದಿಂದದನ್ನು
ನಾನು ಕೊಡತಕ್ಕದ್ದು;
ಆತ ಕೊಟ್ಟ ನೇಮವನ್ನು
ಎಂದೂ ಮೀರಬಾರದು.

3. ದೇವರಾಜ್ಯ ಬರುವಂತೆ
ನಾವು ಚಿಂತೆ ಮಾಡಲು,
ಅದಕ್ಕಾಗಿ ನಮ್ಮ ತ್ರಾಣ,
ದ್ರವ್ಯ ಕೊಡತಕ್ಕದ್ದು.
ಎಲ್ಲವನ್ನು ಕರ್ತಗಾಗಿ
ಕೊಡಬೇಕು ನ್ಯಾಯವೇ;
ಸ್ವಲ್ಪ ಭಾಗ ಆತಗಾಗಿ
ಕೊಡುವದಕ್ಕಾಗದೇ?

4. ಯೇಸುಕ್ರಿಸ್ತ ಲೋಭಿಯನ್ನು
ಎಂದೂ ಮೆಚ್ಚಲಾರನು;
ಋಣ ತೆರುವಾತನನ್ನು
ಆಶೀರ್ವದಿಸುವನು;
ಇನ್ನು ಹೆಚ್ಚು ಕೊಡುವಾತ
ನಷ್ಟ ಹೊಂದಲಾರನು;
ಹೆಚ್ಚು ಮೇಲು ದೇವರಿಂದ
ನಿಜವಾಗಿ ಹೊಂದ್ವನು.

---

೯. ರಾಜಜಯಂತಿ

೩೬೯

Vater, kröne du mit Segen unsern König.—M. T. 148.

1. ತಂದೆ ನಿನ್ನ ಆಶೀರ್ವಾದ
ಚಕ್ರವರ್ತಿಗಾಗಲಿ!
ಆತನಿಂದ ನಿನ್ನ ಶ್ರೇಷ್ಠ
ಚಿತ್ತ ನೆರವೇರಲಿ!
ನಿನ್ನ ಸಭಾರಕ್ಷಣೆ
ಶತ್ರುಸೇನಾಶಿಕ್ಷಣೆ
ಆಗುವಂತೆ ದಯಮಾಡು!
ಚಕ್ರವರ್ತಿಗಾಶೀರ್ವಾದ!

2. ಸದ್ವಿಶ್ವಾಸವೇ ಗುರಾಣಿ;
ಖಡ್ಗ ನಿನ್ನ ಆತ್ಮವೆ;
ನ್ಯಾಯ, ನೀತಿ, ಶಾಂತಿ, ಪ್ರೀತಿ
ಇವು ರಾಜಭೂಷಣೆ;
ರಾಜ್ಯಕಾರ್ಯ ಸಿದ್ಧಿಯು,
ದೇಶದೊಳ್ ಸಮೃದ್ಧಿಯು,
ಇವನ್ನೆಲ್ಲಾ ದಯಮಾಡು!
ಚಕ್ರವರ್ತಿಗಾಶೀರ್ವಾದ!

3. ಜ್ಞಾನವುಳ್ಳ ಮಂತ್ರಿಸಭೆ,
ಜಯಶಾಲಿ ಸೈನ್ಯವು,
ನಂಬಿಗಸ್ತ ಪರಿಚಾರ,
ರಾಜನಿಷ್ಠಾ ಪ್ರಜೆಯು,
ರಾಜ್ಯದಲ್ಲಿ ಭದ್ರತೆ,
ಕ್ಷೇಮ ರಾಜರಾಣಿಗೆ
ಇರುವಂತೆ ದಯಮಾಡು!
ಚಕ್ರವರ್ತಿಗಾಶೀರ್ವಾದ!

4. ಕರ್ತಾ, ನಮ್ಮ ರಾಜ್ಯದಲ್ಲಿ
ನಿನ್ನ ರಾಜ್ಯ ಸ್ಥಾಪಿಸು!

ರಾಜ ಪ್ರಜೆಯೆಲ್ಲರನ್ನು
ಸ್ವರ್ಗವಾಸಕ್ಕೈದಿಸು!
ಸಿಕ್ಕಲಿ ಮನಶ್ಯಾಂತಿ,
ಅಲ್ಲಿ ನಿತ್ಯ ವಿಶ್ರಾಂತಿ!
ಬೇಡಿದ್ದನ್ನು ದಯಮಾಡು!
ಚಕ್ರವರ್ತಿಗಾಶೀರ್ವಾದ!

---

೧೦. ದೇವಾಲಯಾದಿ ಗೃಹಪ್ರತಿಷ್ಠೆ

೩೭೦

Mel. Wachet auf! ruft uns die Stimme.—M. T. 195.

1. ಕರ್ತ, ನಿನ್ನ ಮಾನಕಾಗಿ,
ಪವಿತ್ರನಾಮಕೀರ್ತಿಗಾಗಿ
ಈ ಮನೆ ಉಂಟಾಯ್ತಲ್ಲವೋ?
ನಮ್ಮಲ್ಲೀಗ ಸೇರ ಬಂದು,
ನಿನ್ನಾಶೀರ್ವಾದ ವರ ತಂದು,
ಸ್ವೀಕಾರವನ್ನು ಮಾಡಿಕೋ!
ಈ ಸಭಾಮಧ್ಯದಿ
ಸದಾ ನಿಂಗಿರಲಿ
ವಾಸಸ್ಥಾನ!
ಹೀಗೆಮ್ಮೊಳು
ನೀನಿರಲು,
ಇಲ್ಲುಂಟು ಸ್ವರ್ಗದ್ವಾರವು.

2. ಇಲ್ಲಿ ವಾರ ವಾರಕಾಗಿ
ಸ್ವಕೀಯ ನಿನ್ನ ಪ್ರಜೆಯಾಗಿ
ಈ ಸಭೆ ಕೂಡಿ ಬರಲು,
ನೀನೂ ಬಂದು ಮಧ್ಯದಲ್ಲಿ,
ನಿನ್ನಾತ್ಮ ಕೊಟ್ಟು ಹೃದದಲ್ಲಿ
ಈ ಸಭೆಯನ್ನು ವ್ಯಾಪಿಸು!
ಒಂದೊಂದು ಹೃದಯ
ಪವಿತ್ರ ಆಲಯ,
ಯೇಸು ಕ್ರಿಸ್ತ,
ನಿಂಗಾಗಲಿ!
ನೀ ದಯದಿ
ನಿವಾಸಿಸಿನ್ನು ಹೃದದಿ!

3. ಮತ್ತು ನಮ್ಮ ಸಭೆಯಲ್ಲಿ
ಪ್ರತ್ಯೊಂದು ಕ್ರೈಸ್ತಮನೆಯಲ್ಲಿ
ಸುಗಂಧಧೂಪ ಏರಲಿ!
ದೀಪ ದಿವ್ಯ ತೈಲದಿಂದ
ಪವಿತ್ರ ದೀಪಸ್ತಂಭದಿಂದ
ಚೆನ್ನಾಗಿ ಉರ್ಯುತಿರಲಿ!
ಒಂದೊಂದು ಗೃಹದಿ
ಗೃಹಸ್ಥನಿಡಲಿ
ಧೂಪಪೀಠ!
ನಮ್ಮೊಳಗೆ
ನಿಂತ್ಹೋಗದೆ
ನಿಂಗೇರ ಬೇಕು ಪ್ರಾರ್ಥನೆ!

೩೭೧

Mel. Wachet auf! ruft uns die Stimme.—M. T. 195.

1. ಶುದ್ಧ, ಶುದ್ಧ, ಪರಿಶುದ್ಧ,
ಯೆಹೋವದೇವ ಪೂರ್ಣ ಶುದ್ಧ
ಎಂದ್ಹಾಡುತ್ತಾರೆ ದೂತರು.
ಇಲ್ಲಿ ನಾವು ಏಕವಾಗಿ
ಈ ನಿನ್ನ ಸ್ಥಾನಕೆದುರಾಗಿ
ಕೊಂಡಾಡುತ್ತೇವೆ ನಿನ್ನನು.
ಸದ್ಭಕ್ತ ಸಂಘದಿ
ಸದ್ಭಕ್ತಿಭಾವದಿ
ಹಾಡುತ್ತೇವೆ—
ಪವಿತ್ರನೇ!
ಪವಿತ್ರನೇ!
ಪವಿತ್ರ ಸದಾಸ್ವಾಮಿಯೇ!

2. ನಿನ್ನ ವಾಕ್ಯಬೋಧಕರಾಗಿ,
ಆರಾಧಿಸುವ ಸಭೆಗಾಗಿ
ಈ ಕಟ್ಟಡದ ಕಾರ್ಯವ
ಮಾಡಲಿಕ್ಕೆ ಬೇಕಾದ್ದನ್ನು
ಕೊಟ್ಟಂಥ ದಿವ್ಯ ದಯವನ್ನು
ನಾವಿಂದು ನೆಪ್ಪು ಮಾಡುತ—
ಮಹೋಪಕಾರಿಯೇ!
ನಿರ್ಲಯ ಸ್ವಾಮಿಯೇ!
ಪರಮಾತ್ಮ!
ನೀ ಲಾಲಿಸು!
ಐ, ಪಾಲಿಸು!
ಎಂದ್ಹಾಡಿ ಬೇಡಿಕೊಂಬೆವು.

3. ನಿನ್ನ ವಾಸ ದಿವದಲ್ಲಿ
ಸಂಪೂರ್ಣವಾದ ಕಾಂತಿಯಲ್ಲಿ
ಮಿಂಚೋದು ಸರ್ವ ಕಾಲಕೆ.
ವಿಶ್ವದಲ್ಲಿ ಯಾವ ಬೀಡು
ಅದಕ್ಕೆ ಕಾಣಬಹುದೀಡು?
ಅನಾದಿ ಪ್ರೇಮಮೂರ್ತಿಯೆ!
ಅನಾಥಬಂಧುವೇ!
ಅನಂತ ಶಕ್ತನೇ!
ಸ್ತುತಿಸ್ತೋತ್ರ,
ಅಜಿತನೇ!
ಅಮಿತನೇ!
ಸದಾ ಕಟಾಕ್ಷಪೂರನೇ!

4. ನಿನ್ನ ಶತ್ರುಸೇವೆಗಾಗಿ,
ಅಬದ್ಧ ದೇವ ಕೀರ್ತಿಗಾಗಿ,
ಊರೆಲ್ಲ ಗುಡಿ ತುಂಬಿವೆ.
ನಿನ್ನ ಸತ್ಯ ಸೇವೆಗಾಗಿ
ಪವಿತ್ರ ನಿನ್ನ ನಾಮಕಾಗಿ
ಆಲಯವೆಲ್ಲಿ ಕಾಣುತೆ?
ಇಲ್ಲೊಂದು ಮಂದಿರ
ನೀ ನಿತ್ಯ ಬಂದಿರ
ಕಟ್ಟಿದ್ದೇವೆ.
ನೀನೊಲಿದು
ಸ್ವೀಕರಿಸು!
ಇದಿನ್ನು ನಿನ್ನ ಮನೆಯು.

೩೭೨

Mel. O Lord of heav'n and earth and sea.—M. T. 283.

1. ಭೂಪರಲೋಕಪ್ರಭುವೇ!
ಅನಾದಿ ನೀತಿಸೂರ್ಯನೇ!
ಅನಂತ ಸ್ತೋತ್ರ ನಿನಗೆ,
ದಯಾಳುವೇ!

2. ನಮ್ಮೆಲ್ಲರನ್ನು ಸೃಷ್ಟಿಸಿ
ದೇಹಾತ್ಮವನ್ನು ಕಾಯುತ್ತಿ;
ಅನಂತ ಸ್ತೋತ್ರ ನಿನಗೆ,
ದಯಾಳುವೇ!

3. ಸತ್ಸೇವೆ ಮಾಡುವದಕೆ
ಸಹಾಯವೀಯ್ವ ದೇವರೇ,
ಅನಂತ ಸ್ತೋತ್ರ ನಿನಗೆ,
ದಯಾಳುವೇ!

4. ಈ ಮನೆಯನ್ನು ಕಟ್ಟಲು
ನಿನ್ನಿಂದ ಆಶೆ ಹುಟ್ಟಿತು;
ಅನಂತ ಸ್ತೋತ್ರ ನಿನಗೆ,
ದಯಾಳುವೇ!

5. ಕೈ ಹಚ್ಚಿದಂಥ ಕಾರ್ಯವ
ಪೂರೈಸ ಕೊಟ್ಟೆ ಶಕ್ತಿಯ;
ಅನಂತ ಸ್ತೋತ್ರ ನಿನಗೆ,
ದಯಾಳುವೇ!

6. ಈ ಮನೆಯೊಳು ನಿತ್ಯವು
ನೀನಿದ್ದು ಆಶೀರ್ವದಿಸು!
ಅನಂತ ಸ್ತೋತ್ರ ನಿನಗೆ,
ದಯಾಳುವೇ!

7. ಪಿತಾಪುತ್ರಾತ್ಮ ದೇವರೇ,
ಸಮಸ್ತ ಸೃಷ್ಟಿಯಿಂದಲೇ
ಅನಂತ ಸ್ತೋತ್ರ ನಿನಗೆ,
ದಯಾಳುವೇ!

೩೭೩

Mel. Wachet auf! ruft uns die Stimme.—M. T. 195.

1. ಕರ್ತಾ, ನಿನ್ನ ಮಕ್ಕಳನ್ನು
ಕಟಾಕ್ಷಿಸಿ, ಈ ಮನೆಯನ್ನು
ನೀ ದಯಪಾಲಿಸಿರುತ್ತೀ.
ನಾವು ಈಗ ಅದರಲ್ಲಿ
ಪ್ರವೇಶವಾಗ ಕೃಪೆಯಲ್ಲಿ
ನೀನೊಳ್ಳೆ ಮಾರ್ಗ ಮಾಡಿದ್ದೀ!
ಈ ಉಪಕಾರವ
ನಾವಿಂದು ಸ್ಮರಿಸ
ಋಣಸ್ಥರು.
ಶ್ರೀನಾಮದಿ
ಈ ಗೃಹದಿ
ಸೇರೋಣ ಹೃತ್ಸಂತೋಷದಿ!

2. ನಾವು ನಿನ್ನಾಧೀನದಲ್ಲಿ
ನಮ್ಮನುದಿನ ಕಾರ್ಯದಲ್ಲಿ
ನಿನ್ನಿಷ್ಟ ಆಜ್ಞೇ ಮೇರೆಗೆ
ಮಾಡಬೇಕು ನಿನ್ನ ಸೇವೆ!

ವಿನಯದಿಂದ ಬೇಡುತೇವೆ—
ನೀನೆಮ್ಮ ಮನೆಯೊಳಗೆ
ಸರ್ವಾಧಿಕಾರವ
ಮಾಡ್, ಆಗು ಮನೆಯ
ಯಜಮಾನ!
ನೀನಾಳ ಬಾ,
ನಮ್ಮರಸಾ!
ಬಂದಿರು ನಮ್ಮ ಸಂಗಡ!

3. ಇನ್ನು ಮುಂದೆ ಮನೆಯನ್ನೂ
ನಿವಾಸಿಸುವ ಎಲ್ಲರನ್ನೂ
ಕಾಪಾಡಿ, ಭದ್ರವಿರಿಸು!
ಹಿರಿ ಕಿರಿ ಮಕ್ಕಳಿಂದ,
ನಮ್ಮಿಷ್ಟ ತಂದೆತಾಯ್ಗಳಿಂದ
ರೋಗಾದಿ ದೋಷ ತಪ್ಪಿಸು!
ಅಭಯ ಕೊಡುತಿ;
ನೀ ನಿತ್ಯ ಇರುತಿ
ದುರ್ಗಸ್ಥಾನ.
ಕೃಪಾಪೂರ್ಣ
ನಿನ್ನಾಶ್ರಯ
ಆಗಿರಲೆಮ್ಮ ಆಲಯ!

4. ಯೇಸುರಕ್ತ ಬಾಗಲಲ್ಲಿ
ಗುರ್ತಾಗಿ ಇದ್ದ ಪಕ್ಷದಲ್ಲಿ
ಮಂತ್ರಾದಿ ಮಾಟ ನಾಟದು.
ಕ್ರಿಸ್ತಭಕ್ತ ಬೇಡುವಲ್ಲಿ
ಇದ್ಧಾನೆ ಯೇಸು ಮನೆಯಲ್ಲಿ;
ಭೂತಾದಿ ಸೇರ ಕೂಡದು.
ಅಶುಭ ಜೈಸಲಿ,
ಕಲ್ಯಾಣ ಮಾಡಲಿ
ಯೇಸುನಾಮ!
ನೀನಿದ್ದರೆ,
ನಾನದರೆ;
ವಿನಾಶಕೆಂದು ಹೆದರೆ.

5. ಪ್ರಾರ್ಥನೆ ಈ ಮನೆಯಲ್ಲಿ
ನಿಂತ್ಹೋಗದಿದ್ದು ನಿತ್ಯದಲ್ಲಿ
ಮೇಲಾದ ಸ್ಥಾನಕೇರಲಿ!
ಪ್ರೀತಿ, ತಾಳ್ಮೆ, ಸಮಾಧಾನ
ಇತ್ಯಾದಿಗೆಲ್ಲ ಮೂಲಸ್ಥಾನ-
ವಾಗಿರೋ ಭಕ್ತಿ ಕೂಡಲಿ!
ಇದೊಳ್ಳೆ ತೈಲವು!
ಹೀಗಾಗೊದೆಲ್ಲವು
ಅಭಿಷೇಕ.
ಸತ್‌ಪ್ರಾರ್ಥನೆ
ಸುವಾಸನೆ
ಎಂಬಂತೆ ಹಬ್ಬಲೊಳಗೆ!

೧೧. ಅಸ್ವಸ್ಥಕ್ಷಾಮಾದಿಗಳು

೩೭೪

Mel. Lord, I hear of showers of blessing.—M. T. 303.

1. ಸ್ವಂತ ಜನ ಕಾಯ್ವ ಯೇಸು,
ಈಗ ಇಲ್ಲಿ ಬಂದಿರು!
ರೋಗದಲ್ಲಿ ಬಿದ್ದ ನಿನ್ನ
ದಾಸನನ್ನು ದೃಷ್ಟಿಸು!
ದೃಷ್ಟಿಸು, ದೃಷ್ಟಿಸು,
ದಾಸನನ್ನು ದೃಷ್ಟಿಸು!

2. ಒಂದು ಮಾತಿನಿಂದ ವಾಸಿ
ಮಾಡಿದಂಥ ಕರ್ತನೇ,
ಈತಗೊಂದು ವಾಕ್ಯ ಹೇಳಿ
ಕ್ಷೇಮ ಪಾಲಿಸ್ಯೇಸುವೇ!
ಯೇಸುವೇ, ಯೇಸುವೇ,
ಕ್ಷೇಮ ಪಾಲಿಸ್ಯೇಸುವೇ!

3. ಸೌಖ್ಯಕಾಗಿ ಮದ್ದುಮಾಯ
ಮಾಡುವಲ್ಲಿ, ಯೇಸುವೇ,
ನಿನ್ನ ಆಶೀರ್ವಾದ ಕೊಟ್ಟು
ವಾಸಿಮಾಡು, ಕರ್ತನೇ!
ಕರ್ತನೇ, ಕರ್ತನೇ,
ವಾಸಿಮಾಡು, ಕರ್ತನೇ!

4. ನಿನ್ನ ದಾಸ ನಿನ್ನ ಮೇಲೆ
ಭರವಸವಿಡಲಿ;
ತಾಳುವಂತೆ ನಿನ್ನ ಕೃಪೆ
ಈತನಲ್ಲಿ ಹೆಚ್ಚಲಿ!
ಹೆಚ್ಚಲಿ, ಹೆಚ್ಚಲಿ,
ಈತನಲ್ಲಿ ಹೆಚ್ಚಲಿ!

5. ಕಷ್ಟ ನಿಜಹಿತವನ್ನು
ಉಂಟುಮಾಡುತೆಮಗೆ;
ಕಷ್ಟಹೀನ ಲೋಕ ನೋಡಿ
ಕೋರಮಾಡು, ತಂದೆಯೇ!
ತಂದೆಯೇ, ತಂದೆಯೇ,
ಕೋರಮಾಡು, ತಂದೆಯೇ!

೩೭೫

Mel. Lord, I hear of showers of blessing.—M. T. 303.

1. ಲೋಕವನ್ನು ಕಾಯುವಂಥ
ಪ್ರೇಮವುಳ್ಳ ತಂದೆಯೇ,
ಕ್ಷಾಮಕಷ್ಟದೊಳಗಿಂದ
ರಕ್ಷಿಸೆಮ್ಮ ಕರ್ತನೇ!
ಕರ್ತನೇ, ಕರ್ತನೇ,
ರಕ್ಷಿಸೆಮ್ಮ ಕರ್ತನೇ!

2. ಸುಗ್ಗಿಕಾಲ ತಪ್ಪದಂತೆ
ಮಾಡ್ವೆನೆಂದು ಹೇಳಿದ್ದೀ;
ನೀನು ಕೊಟ್ಟ ಮಾತಿನಂತೆ
ಈಗ ನಮಗಾಗಲಿ!

ಕರ್ತನೇ, ಕರ್ತನೇ,
ರಕ್ಷಿಸೆಮ್ಮ ಕರ್ತನೇ!

3. ಭೂಮಿಬೆಂದುಹೋದದ್ದನ್ನೂ
ಅಂತರಿಕ್ಷ ಹಾಗೆಯೇ
ತಾಂಬ್ರದಂತೆ ಆದದ್ದನ್ನೂ
ನೋಡು, ನಮ್ಮ ತಂದೆಯೇ!
ಕರ್ತನೇ, ಕರ್ತನೇ,
ರಕ್ಷಿಸೆಮ್ಮ ಕರ್ತನೇ!

4. ಘೋರಕಷ್ಟ, ಈತಿಬಾಧೆ
ನಮ್ಮ ಮೇಲೆ ಬಿದ್ದವೆ.
ಕುಗ್ಗಿಹೋದ ನಮ್ಮ ಪ್ರಾಣ
ಎತ್ತಿ ಕಾಯಿ, ಕರ್ತನೇ!
ಕರ್ತನೇ, ಕರ್ತನೇ,
ರಕ್ಷಿಸೆಮ್ಮ ಕರ್ತನೇ!

5. ಕ್ಷೀಣವಾದ ದನಕರು
ಮೇವು ನೀರು ಕಾಣದೆ
ಬಿದ್ದು ಮಡಿಯುವದನ್ನು
ನೋಡು, ನಮ್ಮ ಕರ್ತನೇ!
ಕರ್ತನೇ, ಕರ್ತನೇ,
ರಕ್ಷಿಸೆಮ್ಮ ಕರ್ತನೇ!

6. ಸಣ್ಣ ಮೋಡದಿಂದ ಮಳೆ
ಮುಂಚೆ ಬಂದ ಮೇರೆಗೆ
ಈಗ ಕೂಡ ಒಳ್ಳೇ ಮಳೆ
ದಯಮಾಡು, ಕರ್ತನೇ!
ಕರ್ತನೇ, ಕರ್ತನೇ,
ರಕ್ಷಿಸೆಮ್ಮ ಕರ್ತನೇ!

7. ನಮ್ಮ ದ್ರೋಹವೆಲ್ಲವನ್ನು
ಕ್ಷಮೆ ಮಾಡು, ಕರ್ತನೇ!
ದಯವುಳ್ಳ ತಂದೆ, ಇಂದು
ಕೇಳು ನಮ್ಮ ಪ್ರಾರ್ಥನೆ!
ಕರ್ತನೇ, ಕರ್ತನೇ,
ರಕ್ಷಿಸೆಮ್ಮ ಕರ್ತನೇ!

೩೭೬

Mel. **Lord, I hear of showers of blessing.—M. T. 303.**

1. ಎಲ್ಲ ಜೀವ ಕಾಯುವಂಥ
ಕೃಪಾಮೂಲ ಕರ್ತನೇ,
ನಮ್ಮ ಮೊರೆಯನ್ನು ಈಗ
ಕೇಳು, ದಿವ್ಯ ತಂದೆಯೇ!
ಈಗಲೇ, ಈಗಲೇ
ಕೇಳು, ದಿವ್ಯ ತಂದೆಯೇ!

2. ಜಾಡ್ಯ ಬಂದು ಎಲ್ಲ ಕಡೆ
ಸಾವಿರಾರು ಕೊಂದದೆ.
ಅದು ಹತ್ರ ಬಾರದಂತೆ
ತಡೆ ಮಾಡು, ತಂದೆಯೆ!
ಈಗಲೇ, ಈಗಲೇ
ಕೇಳು, ದಿವ್ಯ ತಂದೆಯೇ!

3. ಶತ್ರುಗಳ ದಂಡು ಸುತ್ತ
ನಮ್ಮ ಮೇಲೆ ಬಂದಿದೆ;
ನಿನ್ನ ದಿವ್ಯ ತ್ರಾಣದಿಂದ
ತಪ್ಪಿಸೆಮ್ಮ ತಂದೆಯೆ!

ಈಗಲೇ, ಈಗಲೇ
ಕೇಳು, ದಿವ್ಯ ತಂದೆಯೇ!

4. ಘೋರವಾದ ತೆರೆ ಎದ್ದು
ಮುತ್ತಿಕೊಂಡು ಬಂದದೆ;
ನಮಗೀಗ ನಿನ್ನ ಹಸ್ತ
ಕೊಟ್ಟು ಎತ್ತು, ತಂದೆಯೆ!
ಈಗಲೇ, ಈಗಲೇ
ಕೇಳು, ದಿವ್ಯ ತಂದೆಯೇ!

5. ದಿಕ್ಕುದೆಸೆ ತೋಚೋದಿಲ್ಲ,
ಸುತ್ತು ಮೋಡ ಮುಚ್ಚಿದೆ;
ಅಂಧಕಾರದಲ್ಲಿ ಮಾರ್ಗ
ತೋರಮಾಡು, ತಂದೆಯೆ!
ಈಗಲೇ, ಈಗಲೇ
ಕೇಳು, ದಿವ್ಯ ತಂದೆಯೇ!

6. ನಮ್ಮ ದ್ರೋಹವನ್ನು ನೀನು
ಜ್ಞಾಪ್ತಿ ಮಾಡಿಕೊಳ್ಳದೆ
ಕೃಪೆಯಿಂದ ಕ್ಷಮೆ ಕೊಟ್ಟು
ರಕ್ಷಿಸೆಮ್ಮ ತಂದೆಯೆ!
ಈಗಲೇ, ಈಗಲೇ
ಕೇಳು, ದಿವ್ಯ ತಂದೆಯೇ!

7. ಕಷ್ಟ ತಾಳಲೇ ಬೇಕೆಂದು
ನಿನ್ನ ಚಿತ್ತವಾದರೆ
ತಾಳ ತಕ್ಕ ತ್ರಾಣವನ್ನು
ಕೊಡು, ನಮ್ಮ ತಂದೆಯೆ!
ಈಗಲೇ, ಈಗಲೇ
ಕೇಳು, ದಿವ್ಯ ತಂದೆಯೇ!

8. ಶ್ರಮೆಯಿಂದ ನಮ್ಮ ಆತ್ಮ
ಹೆಚ್ಚು ಶುದ್ಧಿ ಹೊಂದುತೆ;
ನಿನ್ನ ಚಿತ್ತಕನುಕೂಲ
ಮನ ಕೊಡು, ತಂದೆಯೆ!
ಈಗಲೇ, ಈಗಲೇ
ಕೇಳು, ದಿವ್ಯ ತಂದೆಯೇ!

---

೧೨. ವಿಯೋಗಪ್ರಯಾಣಗಳು

೩೭೭

Ziehe hin in Frieden.
M. T. 288.

1. ಸಮಾಧಾನಗೊಂಡು
ಇಂದು ಹೊರಡು!
ಧೈರ್ಯ ಪಡಕೊಂಡು,
ಪ್ರಿಯ, ತೆರಳು!
ದೇವರೆಮ್ಮ ತಂದೆ,
ಹೊಗು ಶರಣ!
ಆತ ತನ್ನ ಮುಂದೆ
ಕಾಯುತ್ತಿರುವ.

2. ಚಿಂತೆ ಭಯ ಬಿಟ್ಟು
ಸಾಗು ಅಲ್ಲಿಗೆ

ಭರವಸವಿಟ್ಟು
ಕ್ರಿಸ್ತನಲ್ಲಿಯೆ!
ತೊರೆ, ತೆರೆ, ಗಾಳಿ
ನಷ್ಟ ಮಾಡವು;
ಆತನವನ್ನಾಳಿ
ನಿಲ್ಲಿಸುವನು.

3. ಯೇಸುನಾಮದಲ್ಲಿ
ಯಾತ್ರೆಯಾಗಲಿ!
ಗಾಡಿ, ನಾವೆಯಲ್ಲಿ
ಆತ ಪ್ರೇಮದಿ
ವೈರಿವ್ಯಾಧಿಬಾಣ
ಗುರಿ ತಪ್ಪಿಸಿ
ಇಷ್ಟ ಸ್ಥಳ ಕಾಣ
ದಯಮಾಡಲಿ!

೩೭೮

Mel. Sei getreu bis in den Tod.
M. T. 69.

1. ನಾನು ಯೇಸು ಶಿಷ್ಯನೆ;
ನನಗ್ಯಾಕೆ ಚಿಂತನೆ?
ನಿನ್ನ ಮನೆ ಬಿಟ್ಟು ಹೋಗು,
ನಾನು ತೋರ್ಪ ಸ್ಥಾನಕ್ಹೋಗು
ಎಂತ ಯೇಸು ಹೇಳಲು,
ಯಾಕೆ ಬೇರೆ ಹಂಬಲು?

2. ಯೇಸು ಆಜ್ಞೆಯಂತೆಯೇ
ನಡಕೊಳ್ಳು, ಮನವೇ!
ಅತ್ತಲಿತ್ತ ನೋಡಲುಂಟೇ?
ಕತ್ತಲಲ್ಲಿ ಅಳೋದುಂಟೇ?
ಜೊತೆಗಾರನಾತನು
ಸುತ್ತಮುತ್ತ ಕಾಪನು.

3. ನೀನು ಪೋಪ ಮಾರ್ಗವು
ಓರೆಕೋರೆ ಕಾಣಲು,
ಕಾಲು ಜಾರಿ ದೊಡ್ಡ ಗಾಯ
ಆಗುವಲ್ಲಿ, ಮದ್ದುಮಾಯ
ಮಾಡೋನಾತ ನಿನಗೆ!
ಅಂಜಬೇಡ, ಶಿಷ್ಯನೆ!

4. ಲೋಕಯಾತ್ರೆ ತೀರಲು
ಶೋಕಕೆಲ್ಲ ಅಂತ್ಯವು;
ತೀರದಂಥ ಸುಖ, ತ್ರಾಣ,
ಸ್ಥಿರವಾದ ಠಾಣ್ಯ, ಸ್ಥಾನ
ತಂದೆ, ಮಗ, ಆತ್ಮನು
ಒಲ್ಮೆಯಿಂದ ಈಯ್ವನು.

೩೭೯

In der Angst der Welt will ich nicht klagen.—M. T. 289.

1. ಇಹಶೋಕ ಹಿಂಸೆಗಂಜೋ
ದೇನು?
ಘನಮಾಲೆಯಿಂದ ನನಗೇನು?
ನನ್ನ ಕರ್ತ ಮುಳ್ಳು ಮುಡಿದ.
ಶುದ್ಧ ಪುಣ್ಯಮೂರ್ತಿ ಕ್ರೂಜೆ
ಯಲ್ಲಿ

ಪಾಪರೂಪನಾಗಿ ತೂಗಿದ್ದಲ್ಲಿ
ನಂಗೆ ಸುಖ ಬೇಡವಕಟ!

2. ಯೇಸು, ನಾನು ಬಡ ದಾರಿ
ಗಾರ;
ನಿನ್ನ ಸತ್ಯ ಅಂಧಪರಿಹಾರ,
ಪವಿತ್ರಾತ್ಮ ನಂಗೆ ನಾಯಕ;
ನನ್ನ ಬಲ ನೀನೇ; ನಾನಶಕ್ತ;
ಕ್ಷೇಮ ಕಳಕೊಂಡೆ; ನಿನ್ನ ರಕ್ತ
ಪಾಪರೋಗಕ್ಕೊಂದೇ ಔಷಧ.

3. ಹೆಚ್ಚಿಸಯ್ಯಾ ಸದ್ವಿಶ್ವಾಸವ
ನ್ನು,
ವರ್ಧಿಸೆನ್ನ ಪ್ರೀತಿಯಗ್ನಿಯನ್ನು,
ಸಾಗಲಾರೆ ನಾನು ಅನ್ಯಥಾ.
ಪ್ರೀತಿ ಸೇರ ಪ್ರೀತಿಯೊಂದೇ
ದ್ವಾರ,
ಪ್ರೀತಿ ಮಾತ್ರ ಇಹದಿಂದ ಪಾರ-
ಗಾಣಿಸೋದು ಮೋಕ್ಷಕ್ಕೆನ್ನನ್ನು.

4. ಪ್ರಿಯ ಕರ್ತಾ, ಪೂರ್ಣ
ಪ್ರೇಮದಿಂದ
ನನ್ನನ್ನೆಳ್ದಿ ನಿನ್ನಲೈಕ್ಯ ಹೊಂದ;
ಮೋಕ್ಷವಿನ್ನೂ ಎಷ್ಟೋ ದೂ
ರವೆ!
ನೀಡು ನಿನ್ನ ಕೃಪಾಹಸ್ತವನ್ನು,
ತ್ರಾಹಿ ಶೋಕಗ್ರಸ್ತ ದಾಸನನ್ನು,
ಈಯು ತ್ರಾಣವೆನ್ನ ಪಾದಕೆ!

5. ಜೀವಯಾತ್ರೆಯಲ್ಲಿ ನಾನು
ಸೋಲೆ
ಎಬ್ಬಿಸೆನ್ನ ದೃಷ್ಟಿಯನ್ನು ಮೇಲೆ
ರಮ್ಯವಾದ ಊರ್ಧ್ವಲೋಕಕೆ!
ಹುಟ್ಟಿಸಿಂತು ಹೃತ್ಸಂತೋಷವನ್ನು,
ಶುದ್ಧ ದಿವ್ಯ ಭಕ್ತಭಾವವನ್ನು
ಕಣ್ಣನೀರ ತಗ್ಗು ದಾಟಲೆ!

6. ನಿನ್ನ ಕ್ರೂಜೆ ನನ್ನ ಆತ್ಮ
ಶರ್ಮ,
ಕ್ರೂಜೆ ಹೊರೋದೆನ್ನ ಯಾತ್ರಾ
ಧರ್ಮ,
ಇಲ್ಲಿ ನಾನು ಪರದೇಶಿಯು.
ನಿನ್ನ ನಂಬಿ ಯಾತ್ರೇ ಕಷ್ಟವನ್ನು
ತಾಳಿ ತೀರಿಸಿದ ಭಕ್ತನನ್ನು
ಅಲ್ಲಿ ತಂದೇ ಮನೆಗಾಣಿಸು!

೩೮೦

Mel. Jesu, meines Lebens Leben.
M. T. 160.

1. ಯಾತ್ರೆಕೂಟ ಹೋಗೋದೆಲ್ಲಿ?
ಅದು ಯಾವ ವಿಧದಿ?
ಹೋಗುತೇವೆ ದಾರಿಯಲ್ಲಿ
ರಾಜಚಿತ್ತ ಲಕ್ಷಿಸಿ.
ತಗ್ಗು ದಿನ್ನೆ ಬೈಲು ಎಲ್ಲ
ದಾಟಿ, ಯಾತ್ರಾಶ್ರಮವೆಲ್ಲ
ಹೋಗುತೆಂಬ ಧೈರ್ಯದಿ
ಹಾಡುತೇವೆ ಹೊಗಳಿ.

2. ಭಯ ಬೇಡ, ಚಿಕ್ಕ ಮಂದೆ!
ದಾರಿಯಲ್ಲಿ ಅಂಜಿಕೆ
ಯಾಕೆ? ನಮ್ಮ ಕೂಡ ತಂದೆ
ಇರುತಾನೆ; ಕ್ರಿಸ್ತನೆ
ವೈರಿಯನ್ನು ಜೈಸಿದ್ದಾನೆ;
ನಮ್ಮ ಮುಂದೆ ಹೋಗುತ್ತಾನೆ;
ಆತನೆಮ್ಮನಲ್ಲಿಗೆ
ಮುಟ್ಟಿಸೋನು ಬೇಗನೆ.

3. ಯಾತ್ರಾಗಣದಾಶೆ ಏನು?
ಪರವನ್ನು ಮುಟ್ಟೋದು;
ಇಹಭೋಗವೆಮಗೇನು?
ಮುಡಿ, ಮಡಿಯುಡುವು
ಯೇಸು ಅಲ್ಲಿ ಕೊಡುತ್ತಾನೆ;
ನಿತ್ಯರಾಜ್ಯ ಹೊಂದಿದ್ದಾನೆ;
ಜೀವಾಹಾರ ಕೊಡುತಾ
ಇದ್ದಾನೆಮ್ಮ ಹತ್ತರ.

4. ನಿಮ್ಮ ಯಾತ್ರಿಕೂಟದಲ್ಲಿ
ನಾವು ಸೇರ ಬರೋಣೋ?
ಬನ್ನಿ! ಇಷ್ಟ ಗುಂಪಿನಲ್ಲಿ
ಹೋಗೋದೊಳ್ಳೇದಲ್ಲವೋ?
ಯೇಸು ಕಾಯುತಾನೆ! ಅಲ್ಲಿ
ಶುದ್ಧವಾದ ದೇಶದಲ್ಲಿ
ಸೇರಿಸೋನು. ಹರ್ಷದಿ
ಬನ್ನಿ, ಬೇಗ ಬನ್ನಿರಿ!

೩೮೧

Holy Spirit, faithful guide.
M. T. 65.

1. ಪರಿಶುದ್ಧ ಆತ್ಮನೆ,
ಯಾತ್ರಿಗಾರನೊಂದಿಗೆ
ಇದ್ದು, ಹಸ್ತದಿಂದಲೆ
ನಡಿಸೆನ್ನ ಗುರಿಗೆ!
ಕಾಡಿನಲ್ಲಿ ಪಯಣ
ಮಾಡುವಾಗ, "ಧೈರ್ಯವ
ಕೊಡುತಾನೆ ಯೇಸುವು"
ಎಂಬ ವಾಣಿ ಕೇಳಿಸು!

2. ಸತ್ಯಮಿತ್ರ, ಸರ್ವತ್ರ
ಕುಂದು ಕಲೆ ಸರ್ವದಾ
ನೀನೇ ಪರಿಹರಿಸು!
ಭಯ ಶಂಕೆ ಓಡಿಸು!
ಮಾರ್ಗವನ್ನು ಕುರ್ಡನು
ತಡವ್ಯಾಡಿ ನೋಡಲು,
"ಇರುತಾನೆ ಯೇಸುವು"
ಎಂಬ ವಾಣಿ ಕೇಳಿಸು!

3. ಯೇಸು ಹತ್ರವಿರಲು,
ಹಗಲಲ್ಲಿ ಸೂರ್ಯನು,
ರಾತ್ರಿಯಲ್ಲಿ ಚಂದ್ರನು,
ನಾವೆಯಲ್ಲಿ ಜಲವು,
ದಾರಿಯಲ್ಲಿ ದುಷ್ಟರು,
ಕಾಡಿನಲ್ಲಿ ಮೃಗವು,
ಕಡಲಲ್ಲಿ ಗಾಳಿಯು
ಕೇಡು ಮಾಡಲಾರವು.

4. ಕಾಯುತಾನೆ ದೇವರು;
ಬಲಗಡೆ ನೆರಳು
ಆಗಿರೋನು ಆತನೇ.
ಹೀಗಿರೋಣ ಚಿಂತೆಯೇ?
ಪ್ರಾಣ ಕಾಯೊ ನಾಥನೆ
ಪೋಪ ಬಪ್ಪ ಗತಿಗೆ
ಸಾಗಿಸೋನು ನೆಟ್ಟಗೆ
ಇಂದಿನಿಂದ ನಿತ್ಯಕೆ.

5. ಶ್ರಮಕಾಲ ತೀರಲು,
ತೀರದಂಥ ಸುಖವು,
ಪರಲೋಕಗ್ರಂಥದಿ
ನಾಮಧೇಯ ಸಿಕ್ಕಲಿ!
ಯೇಸು ಕ್ರಿಸ್ತನಾಮವೆ
ಏಕ ಗತಿ ನನಗೆ.
ಅದರಿಂದ ಯಾತ್ರಿಕ
ಪರಲೋಕ ಸೇರುವ.

11. ಸ್ವರ್ಗಮಹಿಮಾಭಿಲಾಷೆ

೩೮೨

Der Herr bricht ein um Mitternacht.—M. T. 19.

1. ವಿನಾಶಕಾಲ ಹತ್ರವೇ
ಈ ನಮ್ಮ ಭೂಮಿಗೆ.
ಪೇಚಾಡಿ, ನರಪುತ್ರರೇ,
ಬಚಾವಿಗಾಗಿಯೆ!

2. ಕ್ರಿಸ್ತ್ಯೇಸು ಬಪ್ಪ ತೀರ್ಪಿಗೆ;
ನೀನೆಲ್ಲಿ ಜಾರುವಿ?
ಪಾಪಾತ್ಮಾ, ಆತನಕ್ಷಿಗೆ
ಇದ್ದಂತೆ ಕಾಣುವಿ!

3. ಆ ದಿನ ಬರೋ ವರೆಗೆ,
ಅನೇಕ ಜನರು
ಇಚ್ಛಾನುಕೂಲ ಬೋಧೆಗೆ
ಮರ್ಳಾಗಿ ಬಾಳ್ವರು.

4. ಅಂಥವರೆಲ್ಲ ಪಕ್ಕನೆ
ವೈಮರ್ತ್ಯ ಬೀಳ್ವರು;
ಸಹಾಯವೇನೂ ಕಾಣದೆ
ಕಂಗೆಟ್ಟು ಸಾಯ್ವರು.

5. ಶ್ರೀ ಯೇಸು, ನಾ ನಿನ್ನೊಡವೆ,
ನೀನೆನ್ನ ಒಡೆಯ;
ಯುಗಾಂತಕಷ್ಟ ಒದಗೆ,
ಕೊಡೆನಗೆದೆಯ!

6. ಸಂಕಷ್ಟ ತಾಳುವದಕ್ಕೂ
ನನ್ನಯ ಭಕ್ತಿಯ
ಚೆನ್ನಾಗಿ ಕಾಯುವದಕ್ಕೂ
ಕೊಡಾತ್ಮಶಕ್ತಿಯ!

೩೮೩

Luke 21, 27—36.
Mel. Lasst mich gehen.
M. T. 51.

1. ಪಕ್ಕನೆ, ಪಕ್ಕನೆ,
ನೆನಸದ ಗಳಿಗೆ
ಮಿಂಚಿನ ಓಪಾದಿಯಲ್ಲಿ
ಶೋಭೆಯಾದ ಪ್ರಭೆಯಲ್ಲಿ
ಬರುತಾನೆ ಕರ್ತನು.

2. ಯಾವನು, ಯಾವನು
ಧೈರ್ಯದಿಂದ ನಿಲ್ವನು?
ದುಷ್ಟರೆಲ್ಲ ಭೀತರಾಗಿ
ವಿಸ್ಮಯಕ್ಕೆ ಗುರಿಯಾಗಿ
ದಿಕ್ಕು ಕಾಣದ್ಹೋಗ್ವರು.

3. ಕ್ರೈಸ್ತನೇ! ಕ್ರೈಸ್ತನೇ!
ಯೇಸು ಕ್ರಿಸ್ತ ದಾಸನೇ!
ಇರು ಮನಃಸ್ವಸ್ಥದಲ್ಲಿ,
ಈ ಪ್ರಪಂಚಮರುಳಲ್ಲಿ
ಭ್ರಾಂತಿಗೊಳಗಾಗದೆ!

4. ಎಚ್ಚರ! ಎಚ್ಚರ
ಕ್ರಿಸ್ತ ದಿನಕೋಸ್ಕರ!
ಕರ್ತನನ್ನು ಎದುನೋಡು!
ಓಟ ಎಡೆ ಬಿಡದೋಡು!
ನಿನ್ನ ಆತ್ಮ ಕಾದುಕೋ!

5. ನಿದ್ರೆಯು, ನಿದ್ರೆಯು
ಕಾಣುವಲ್ಲಿ, ಶಿಕ್ಷೆಯು
ತಪ್ಪದು ಆ ದಿನದಲ್ಲಿ.
ನೀನು ನಿದ್ರಾವಸ್ಥೆಯಲ್ಲಿ
ಪೂರ್ಣವಾಗಿ ಕೆಡುವಿ.

6. ನಂಬಿಕೆ, ನಂಬಿಕೆ
ಬೇಕು ಯೇಸುದಾಸಗೆ.
ಏಕೋಭಾವ ಸೇವೆಯಲ್ಲಿ
ಇರಬೇಕು ಆಳಿನಲ್ಲಿ
ಧನಿ ಇಲ್ಲದಿದ್ದರೂ.

7. ಕರ್ತನೇ! ಕರ್ತನೇ!
ಬರ ಬೇಕು ಬೇಗನೇ!
ಮಾಡಿಕೊಂಡು ನಿನ್ನ ಸೇವೆ
ನಿನ್ನ ದಾರಿ ನೋಡುತ್ತೇವೆ;
ಪರಲೋಕದಿಂದ ಬಾ!

೩೮೪

Mel. Eines wünsch' ich mir vor allem andern.—M. T. 166.

1. ಯೇಸು ಕ್ರಿಸ್ತ ನ್ಯಾಯ ತೀರ್ಪಿಗಾಗಿ
ಮೈಮೆಯಲ್ಲಿ ಬರಲು,
ಗದ್ದುಗೆಯ ಸ್ಥಾನಕೆದುರಾಗಿ
ನರರೆಲ್ಲ ನೆರೆದು,
ನೋಡೊರಾಗ ತಮ್ಮ ಅರಸನ್ನ.
ಆಗಲಾತ ತನ್ನ ಶಿಷ್ಯರನ್ನ
ಬೇರೆ ಮಾಡಿ, ಸರ್ವರ
ನ್ಯಾಯತೀರ್ಪು ಮಾಡುವ.

2. ಕತ್ತಲಲ್ಲಿ ಆದ ದುರಾಚಾರ,
ರಕ್ತದ್ರೋಹವೆಲ್ಲವು,
ವ್ಯಭಿಚಾರ, ದ್ವೇಷ, ಅಹಂಕಾರ,
ಸುಳ್ಳುಮಾತು, ಬೈಗಳು,
ಹೃದದೊಳಗಿದ್ದ ಮೋಸ, ಮಾಯ,
ಮನಸ್ಸಾಕ್ಷಿಗಾದ ಪಾಪಗಾಯ
ಆಗ ಮರೆಯಾಗದೆ,
ಎಲ್ಲ ಸ್ಪಷ್ಟ ಕಾಣುತೆ.

3. ಮತ್ತು ಯಾರು ತಮ್ಮ ಪಾಪಕಾಗಿ
ಅತ್ತು ದುಃಖ ಪಟ್ಟರೋ,—
ದುಷ್ಟ ಲೋಕದಲ್ಲಿ ಭಕ್ತರಾಗಿ
ಯಾರು ಸ್ಥಿರ ನಿಂತರೋ,—
ಅವರಾತ್ಮಶುದ್ಧಿ, ಸತ್ಯ, ನೀತಿ,
ಉಪಕಾರ, ಧರ್ಮ, ದಯ, ಪ್ರೀತಿ,
ಸ್ಥಿರ ಭಕ್ತಿಮನಸು
ಆಗ ಎಲ್ಲ ಕಾಣ್ಬುದು.

4. ಅಯ್ಯೋ, ಮರೆ ಸೇರಿ ಕೊಳ್ಳೊದೆಲ್ಲಿ?
ಓಡಿ ಹೋಗ ಬಹುದೇ?
ಮುಚ್ಚುವಂಥ ಅಲಂಕಾರವೆಲ್ಲಿ?
ಕರ್ತ ನೆವ ಕೇಳೊನೇ?
ನನ್ನ ನೀತಿಯಲ್ಲಿ ಮೆಚ್ಚುತ್ತಾನೋ?
ಕರ್ಮ ಧರ್ಮವೇನು ಮಾಡಿದ್ದೇನೋ—
ಅದೇ ಕರ್ತನೆದುರು
ತೀರ್ಪಿನಲ್ಲಿ ಕಾಣ್ಬುದು.

5. ಕರ್ತ, ನೀನು ಎಚ್ಚರಿಸಲಾಗಿ
ಕೃಪಾವೇಳೆ ಕೊಡುತಿ.
ನಿನ್ನ ಶಬ್ದ ಕೇಳುವವನಾಗಿ
ನಾನು ನಿನ್ನ ವರದಿ
ಸರ್ವ ಕೃತ್ಯ ನಿನ್ನ ಮಾನಕಾಗಿ
ಮಾಡುತ್ತೇನೆ, ನಿನ್ನ ದಾಸನಾಗಿ
ಕಾದುಕೊಂಡು ಇರ್ವೆನು;
ಕರ್ತ, ಅಂಗೀಕರಿಸು!

೩೮೫

Mel. **Kommt, Brüder, lasst uns gehen.—M. T. 126.**

1. ಈ ಭೂಮಿ ಬಿಡುವಾಗ
ನಂಗೆಲ್ಲಿ ವಸ್ತಿಯು?
ಈ ವಸ್ತ್ರ ಮಾಸಿದಾಗ
ನಂಗೇನು ಗತಿಯು?
ಕ್ರಿಸ್ತ್ಯೇಸುಸ್ವಾಮಿಯು
ದುರಾತ್ಮರಲ್ಲಿ ಸಾಗ
ಸೈತಾನ ವಶವಾಗ
ಬಿಟ್ಟಾನೇ ನನ್ನನು?

2. ಅಶೋಕಸ್ಥಾನದಲ್ಲಿ
ನಿವಾಸ ಮಾಡುವೆ,

ನಾ ವಜ್ರಕಾಯದಲ್ಲಿ
ನಿರಂತ್ರ ಮೆರ್ಯುವೆ,
ಸಂದೇಹವಿಲ್ಲವು;
ಪವಿತ್ರ ದೇವರನ್ನು,
ಪುನೀತ ಸಭೆಯನ್ನು
ನಾ ಸೇರಿಕೊಂಬೆನು.

3. ನನ್ನಾತ್ಮ, ಬೇಡ ದುಃಖ
ಪ್ರಪಂಚತ್ಯಾಗಕೆ!
ನಿಂಗಹುದಲ್ಲಿ ಸುಖ
ಅನಂತ ಕಾಲವೆ;
ಅನರ್ಘ್ಯ ಭಾಗ್ಯವಂ
ಸ್ವಾಧೀನ ಮಾಡಿಕೊಂಡು
ಸಂಪೂರ್ಣ ಹರ್ಷಗೊಂಡು
ಬಿಡೀ ಪ್ರಪಂಚವಂ.

೩೮೬

Wenn ich von hinnen scheide.
M. T. 125.

1. ಈ ಲೋಕ ಬಿಟ್ಟು ಹೋಗ
ಸಂತೋಷ ಪಡುವೆ.
ಕ್ರಿಸ್ತ್ಯೇಸು, ನನ್ನ ಭೋಗ
ನಿರಂತ್ರ ನಿನ್ನಲೆ!
ಸುಕ್ಷೇಮದಂಗಿಯ
ನೀ ನಂಗೆ ತೊಡ ಕೊಟ್ಟೆ;
ಪಾಪಿಷ್ಠ ನಾನು ಉಟ್ಟೆ
ಸುನೀತಿವಸ್ತ್ರವ.

2. ಸರ್ವೇಶದೃಷ್ಟಿಯಲ್ಲಿ
ಸ್ವನೀತಿ ಹೇಸಿಕೆ;
ಸರ್ವಜ್ಞ ನೋಡುವಲ್ಲಿ
ಕಳಂಕ ತೋರದೆ?
ನಂಗೇನು ಪುಣ್ಯವು?
ಎಲ್ಲೆಲ್ಲು ಕೆಟ್ಟ ಕಲೆ!
ಹರ್ಕಾದ ಜೇಡಬಲೆ
ಶೃಂಗಾರವಾಗದು.

3. ದಯಾಳು ದೇವರನ್ನು
ವಿಶ್ವಾಸಿಸುತ್ತಲೇ
ಸುಕ್ಷೇಮವಸ್ತ್ರವನ್ನು
ನಿಂಗಾತನೀಯನೇ?
ನಿಂಗೀಯ್ವನಾತನು
ಸಂಜೀವವೆಂಬ ಮಾಲೆ.
ಪ್ರಾಣಾ, ನರ್ಕಾಗ್ನಿಜ್ವಾಲೆ
ನಿನ್ನನ್ನು ಮುಟ್ಟದು.

4. ಈ ವಸ್ತ್ರ ಕೊಳ್ಳಲಾರ
ನಿರ್ಲಜ್ಜಾಪಾಪಿಯು;
ಸರ್ವೇಶನೀ ಶೃಂಗಾರ
ವಿಶ್ವಾಸಿಗೀಯ್ವನು.
ಕೃಪಾಳು ಅರಸ!
ಈ ನೀತಿವಸ್ತ್ರವಿತ್ತು,
ಮಾಂಸಾಶೆಯೆಲ್ಲ ಕಿತ್ತು
ಬೀಸಾಡು ನನ್ನಿಂದ!

5. ನೀನಿತ್ತ ವಸ್ತ್ರವನ್ನು
ನಾ ಸಾಯುವನಕ

ಕಾಪಾಡು! ಬುದ್ಧಿಯನ್ನು
ಈಯ್ ನನಗೊಡೆಯ!
ತುತೂರಿ ಕೇಳಲು,
ಈ ವಸ್ತ್ರವುಟ್ಟು ಏರಿ
ನೀ ಕೂತ ಪೀಠ ಸೇರಿ
ಸಂತೃಪ್ತನಾಹೆನು.

೩೮೭

Mel. My Jesus, be Thou near me.
M. T. 122.

1. ಈ ಜೀವಕತ್ತಲಲ್ಲಿ
ನಮ್ಮನು
ನೀ, ಕರ್ತ, ತೇಜ ಚೆಲ್ಲಿ,
ನಡಿಸು!
ಏನಿಹದಲ್ಲಿ?
ಕ್ಷೇಮವನಲ್ಲಿ
ಕೊಡಲು ಬಲ್ಲಿ.
ಅದೇ ಬೇಕು!

2. ಈ ಲೋಕಕಡಲಲ್ಲಿ
ನಮ್ಮನು
ವಿಶ್ವಾಸನಾವೆಯಲ್ಲಿ
ದಾಟಿಸು!
ಇಲ್ಲಿ ಪ್ರಯಾಸ;
ಅಲ್ಲಿಯ ವಾಸ
ನಿತ್ಯ ವಿಲಾಸ.
ಅದೇ ಬೇಕು!

೩೮೮

Erheb', o Seele, deinen Sinn.
M. T. 32.

1. ಈ ಭೂಮಿಗಂಟೊದೇತಕೆ?
ನನ್ನಾತ್ಮ, ಮೇಲಕೇರು!
ನಿನ್ನೆಡೆ ದೇವಲೋಕವೆ!
ಸ್ವಸ್ಥಲದಲ್ಲಿ ಸೇರು!

2. ಈ ಭ್ರಾಂತಿ ಯಾಕೆ? ನಿನಗೆ
ಈ ಲೋಕ ಕೊಡೊದೇನು?
ಆ ಲೋಕದಾಶೆ ಇದ್ದರೆ,
ಈ ಲೋಕಭೋಗವೇನು?

3. ದೇವಜ್ಞನಾದ ಕ್ರೈಸ್ತಗೆ
ಭೂಸಂಗ ಹಿತವಲ್ಲ;
ಸದ್ಭಕ್ತ ದೇವರಲ್ಲಿಯೆ
ಸಂತೃಪ್ತನಾಗ ಬಲ್ಲ.

4. ಕೇಡೆನ್ನ ಮೇಲೆ ಬಿದ್ದರೂ,
ನಿರಾಶೆ ಪಡೆನಯ್ಯ;
ನಿನ್ನಕ್ಷಿಕಾಂತಿ ನಿತ್ಯವೂ
ಉತ್ಸಾಹವೆನಗಯ್ಯ.

5. ಭೂಲೋಕ ಬೀಡು ಮಾತ್ರವೇ;
ನಂಗಿಲ್ಲಿ ಸ್ವಾಸ್ಥ್ಯವಿಲ್ಲ;
ಸ್ವಪಟ್ಣ ಪರಲೋಕದ್ದೇ,
ಅಲ್ಲ್ಯರ್ತಿ ಕುಂದೊದಿಲ್ಲ.

6. ಸ್ವದೇಶವಲ್ಲಿ; ಅಲ್ಲಿಯೆ
ನಿರಂತಜೀವಜಲ.

ಹೋರಾಡುವಂಥ ಬಂಟಗೆ
ಅಲ್ಲೇ ವಿಶ್ರಾಂತಿಸ್ಥಲ.

7. ಕ್ರಿಸ್ತೇಸು ಅಲ್ಲಿ ಪ್ರಭೆಯ
ಸಾಮ್ರಾಜ್ಯ ಸ್ಥಾಪಿಸೋನು;
ಸದ್ಭಕ್ತ ಕ್ರಿಸ್ತಘನದ
ಸಾರೂಪ್ಯ ಪಡೆಯೋನು.

8. ಉದ್ಧಾರಿ, ಇಹಗಾಡಿನೊಳ್
ಕಟಾಕ್ಷದಿಂ ಕಾಪಾಡು!
ಆ ಪರರಾಜ್ಯಸುಖದೊಳ್
ನನ್ನನ್ನು ಸೇರ ಮಾಡು!

೩೮೯

Valet will ich dir geben.
M. T. 182.

1. ನಾನೀಗ ಬಿಟ್ಟಿದ್ದೇನೆ
ನಿನ್ನಾಶೆ, ಲೋಕವೆ!
ಅಸಹ್ಯಗೊಂಡಿದ್ದೇನೆ
ನಿನ್ನ ವೈಯ್ಯಾರಕೆ.
ನಾನೆಂದಿಗೂ ಉಲ್ಲಾಸ
ನಿನ್ನಲ್ಲಿ ಕಾಣೆನು.
ಮೇಲ್ಲೋಕದಲ್ಲಿ ವಾಸ
ನಮ್ಮಪ್ಪನೀಯ್ವನು.

2. ಮೇಲಾದ ಅನ್ನಪಾನ
ಕೊಡೋನು ತಂದೆಯು;
ಆರೋಗ್ಯಕರ ಸ್ನಾನ
ದೇವಾತ್ಮನೀಯ್ವನು.
ನಾ ಲೋಕದಲ್ಲಿ ಶಾನೆ
ದರಿದ್ರನಾದರು,
ಅಲ್ಲೆನ್ನ ಕರ್ತ ತಾನೆ
ಸೌಭಾಗ್ಯವೀಯ್ವನು.

3. ಹಸಿವೆ ತಾಳ್ದವಂಗೆ
ಸಂತೃಪ್ತಿ ಪರದೊಳ್;
ಸಂತಸ ದುಃಖಿತಂಗೆ
ವಾಗ್ದತ್ತ ದೇಶದೊಳ್.
ನಮ್ಮಪ್ಪ ಒರಸೋನು
ಕಣ್ಣೀರುಧಾರೆಯ;
ಅಮೃತ ಉಣ್ಣಿಸೋನು.
ಇದೆಂಥ ಸಂತಸ!

೩೯೦

Es ist noch eine Ruh' vorhanden.
M. T. 186. 187.

1. ಇನ್ನುಂಟು ನಿನಗೊಂದು
ಶಾಂತಿ;
ಬೇಸತ್ತ ಹೃತ್ತೆ, ಶೋಭಿಸು!
ನೀ ಬಯ್ಸುವಂಥ ಸೂರ್ಯಕಾಂತಿ
ಈ ಸೆರೆಯಲ್ಲಿ ಕಾಣದು.
ಆ ಕುರಿಮರಿ ನೋಡು! ಅಲ್ಲಿ
ಸದಾ ಸಂತುಷ್ಟನಾಗ ಬಲ್ಲಿ.
ಈ ಬೀಯ ಹೊರೆ ಬಿಸುಡು!
ಹೋರಾಟ ಬೇಗ ಮುಗಿಯೋದು;
ಈಗೀಗ ಗುರಿ ಕಾಣಿಸೋದು;
ವಿಶ್ರಾಂತಿ ಬೇಗ ಬಪ್ಪುದು.

2. ಅನಂತವಾದ ಶಾಂತಿಯನ್ನು
ಅನಾದಿಯಿಂದ ದೇವರು
ಇನ್ನ್ನು ಹುಟ್ಟ ತಕ್ಕ ಮಕ್ಕಳನ್ನು
ಮುನ್ನೆನ್ನು, ಸಿದ್ಧ ಗೈದನು.
ಕ್ರಿಸ್ತ್ಯೇಸು ನಿತ್ಯ ಶಾಂತಿಗಾಗಿ
ಸ್ವಜೀವ ಕೊಟ್ಟು ಬಲಿಯಾಗಿ,
ಜೀಸತ್ತ ಪಾಪಿಜಾತಿಗೆ
ವಿಶ್ರಾಂತಿ ಕೊಂಡುಕೊಂಡಿ
ದ್ದಾನೆ;
ಆಮೋದವಾಗಿ ಸಾರುತಾನೆ
ವಿಶ್ರಾಂತಿವಾಕ್ಯ ಲೋಕಕೆ.

3. ಇಂಪಾದ ಮೇಳವನ್ನು ಕೇಳಿ,
ನಿರಾಶೆ ಬಿಡಿ, ಭಕ್ತರೇ!
ಸಾಕಾಯ್ತು ಚಿಂತೆ! ಎಂತ ಹೇಳಿ,
ಆಯಾಸ ಪಟ್ಟ ಮಕ್ಕಳೇ!
ಅಸಹ್ಯ ಭಾರ ತೆಗೆದಿಟ್ಟು,
ಸಂಪೂರ್ಣ ದೃಢ ನಂಬಿಕಿಟ್ಟು
ಕ್ರಿಸ್ತ್ಯೇಸು ಕೊಟ್ಟ ವಾಕ್ಯದಿ,
ಸೈತಾನ ಹೆದರಿಸುವಲ್ಲಿ
ನೀವಂಜ ಬೇಡಿ! ಕರ್ತನಲ್ಲಿ
ವಿಶ್ವಾಸವಿಟ್ಟು ಬನ್ನಿರಿ!

4. ರೋಗಿಷ್ಠಗಾಶೆ ಬೇರೆ ಏನು?
ಪ್ರಯಾಣಕ್ಕೇನವಶ್ಯವು?
ಮೆತ್ತಾನ ಸಜ್ಜೆಯಲ್ಲದೇನು
ರೋಗಿಷ್ಠ ಕೇಳಿಕೊಂಬನು?
ಯಾತ್ರಸ್ಥ ತಂಪು ನೀರಿನಿಂದ
ದಾಹಾಗ್ನಿಯಾರಿಸೋದರಿಂದ
ಸಂಪೂರ್ಣ ತೃಪ್ತನಾಹನು.
ಈ ಲೋಕದೊಳಗಲ್ಪ ಶಾಂತಿ,
ಆ ಲೋಕದೊಳ್ ಮಹಾ ವಿ
ಶ್ರಾಂತಿ;
ಎಂದೆಂದಿಗದು ತೀರದು.

5. ಇಲ್ಲ್ಯತ್ತು ಬೀಜ ಬಿತ್ತುತೇವೆ,
ಅಲ್ಲ್ಯರ್ತಿಯಿಂದ ಕೊಯ್ಯೊದು;
ಅನಾಥರಾಗಿ ಇಲ್ಲಿದ್ದೇವೆ,
ಅಲ್ಲೆಮ್ಮ ತಂದೆಮನೆಯು;
ಅಲ್ಲೆಮಗೊಂದೂ ಚಿಂತೆಯಿಲ್ಲ;
ಅಲ್ಲೈದಿದಂಗೆ ಮೃತ್ಯುವಿಲ್ಲ;
ನಮ್ಮರಸನ್ನ ಕಾಣ್ಣೆವು.
ಅಮೃತವಾತ ಕುಡಿಸೋನು,
ಕಣ್ಣೀರನೊರ್ಸಿ ತೆಗೆಯೋನು;
ಇಷ್ಟಾರ್ಥವೆಲ್ಲ ಬಪ್ಪದು.

6. ಅಲ್ಲಿರ್ವ ಸಮಾಧಾನವನ್ನು
ಹೊಂದೋಣ, ಚಿಂತೆಯಿಲ್ಲದೆ!
ಆಶ್ರೈಸಿಕೊಳ್ಳಿ ಕರ್ತನನ್ನು,
ಆಯಾಸ ಪಟ್ಟ ಜನರೆ!
ಆ ತೇಜೊಮಯ ಸೇನೆ ಯಾರು?
ಸನ್ನಾತ್ಮ, ರೆಕ್ಕೆ ಎತ್ತಿ ಹಾರು!
ಇನ್ನಿಲ್ಲಿ ನಿಲ್ಲಲೇತಕೆ?
ಏಳ್! ನಡು ಕಟ್ಟು ತೀವ್ರವಾಗಿ!
ಏಳೇಳು ಜಯಶಾಲಿಯಾಗಿ!
ವಿಶ್ರಾಂತಿವರ್ಷ ಬಂದದೆ.

೩೯೧

Mel. Wiederum hat stille Nacht.
M. T. 127.

1. ಇನ್ನು ನಿತ್ಯಾರಾಮವು
ನಮ್ಮ ಕರ್ತನಿಂದ
ಎಲ್ಲ ದೇವಸಭೆಗು
ಸಿಕ್ಕುವದರಿಂದ,
ದುಃಖವುಳ್ಳ ಆತ್ಮವೇ,
ಚಿಂತೆಯನ್ನು ಬಿಡು!
ಯೇಸು ಕ್ರಿಸ್ತನಲ್ಲಿಯೇ
ದೃಢ ನಂಬಿಕಿಡು!

2. ನಮ್ಮ ಪ್ರಿಯ ರಕ್ಷಕ
ನಮ್ಮ ಹೊರೆಯನ್ನು
ತಾನು ಹೊತ್ತು, ಮಾಡಿದ
ಪರಿಹಾರವನ್ನು.
ಯೇಸು ನಮ್ಮ ವೈರಿಯ,
ತಾನೆ ಸತ್ತು, ಗೆದ್ದ;
ನಮ್ಮ ನೀತಿಗೋಸ್ಕರ
ಮೃತಿಯಿಂದ ಎದ್ದ.

3. ನಮ್ಮ ನಿತ್ಯಜೀವವು
ಯೇಸುನಾಥದಾನ;
ಯೇಸುನಾಥರಕ್ತವು
ನಮ್ಮ ಸಮಾಧಾನ;
ನಮ್ಮ ಪಾಪಸಾಲವು
ಆತನಿಂದ ಸಂತು.
ದೇವರಾತ್ಮವೊಲಿದು,
ನಮ್ಮಲಿರ ಬಂತು.

4. ಚಿಂತೆ ಪಡುವವರೆ,
ಚಿಂತೆಯೆಲ್ಲ ಬಿಟ್ಟು,
ನಿಮ್ಮ ಪೂರ್ಣ ಕೋರಿಕೆ
ಯೇಸುವಲ್ಲಿ ಇಟ್ಟು,
ನಿತ್ಯಜೀವಮಾಲೆಯ
ನೋಡಿ, ಧೈರ್ಯ ತನ್ನಿ!
ಆ ಸುವರ್ಣಪಟ್ಟಣ
ಸೇರ ಓಡಿ ಬನ್ನಿ!

೩೯೨

Mel. Meine Lebenszeit verstreicht.
M. T. 74.

1. ಉಂಟು ಒಂದು ದೇಶವು;
ಅಲ್ಲಿ ಪಾಪವೇನು ಇಲ್ಲ;
ಮೃತಿಗೂ ಪಿಶಾಚಿಗೂ
ಅಲ್ಲಿ ಅಧಿಕಾರವಿಲ್ಲ.
ಬನ್ನಿ, ಭ್ರಾತೃಗಳಿರಾ,
ಅಲ್ಲೆ ಸೇರ ಹೋಗುವಾ!

2. ಅಲ್ಲಿ ನಮಗುತ್ತಮ
ವೈದ್ಯಗಾರನಿದ್ದಾನಲ್ಲ?
ಎಲ್ಲ ರೋಗಕೌಷಧ
ಕೊಟ್ಟು, ಸ್ವಸ್ಥ ಮಾಡ ಬಲ್ಲ.
ಬನ್ನಿ, ಭ್ರಾತೃಗಳಿರಾ,
ಅಲ್ಲೆ ಸ್ವಸ್ಥರಾಗುವಾ!

3. ಅಲ್ಲಿ ಬಲದರಸು
ಕಾಯುತಾನೆ ಪ್ರಜೆಯನ್ನು;

ಕ್ಷುಧೆದಾಹಗಳಿಗು
ಮಾಡುತಾನೆ ಅಂತವನ್ನು.
ಬನ್ನಿ, ಭ್ರಾತೃಗಳಿರಾ,
ಅಲ್ಲೆ ಸುಖ ಹೊಂದುವಾ!

4. ನಿತ್ಯರಾಜ್ಯಸುಖಕೆ
ಕ್ರಿಸ್ತ ತನ್ನ ಭಕ್ತರನ್ನು
ಒಯ್ದು, ಕಡು ರೋಗಿಗೆ
ಈಯುತಾನೆ ಕ್ಷೇಮವನ್ನು.
ಬನ್ನಿ, ಭ್ರಾತೃಗಳಿರಾ,
ಅಲ್ಲೆ ಸೇರ ಹೋಗುವಾ!

೩೯೩

Mel. Sollt' es gleich bisweilen scheinen.—M. T. 33.

1. ಉಂಟು ನಿಷ್ಕಳಂಕ ದೇಶ;
ನಮಗದರೊಳ್ ಪ್ರವೇಶ.
ಅಲ್ಲಿ ಸೇರಿದಾಗಲು
ನಿತ್ಯ ಕ್ಷೇಮ ಸಿಕ್ಕೊದು.

2. ಮರಣಾಬ್ಧಿಯತಿಘೋಷ
ನಮ್ಮ ಕಿವಿಗೊಳ್ಳೆ ತೋಷ;
ಸದ್ವಿಶ್ವಾಸನಾವೆಯು
ದಾಟಿ ಹೋಗ ಬಹುದು.

3. ಇಹಸುಖವೆಲ್ಲ ಕಷ್ಟ;
ಇಹಲಾಭವೆಲ್ಲ ನಷ್ಟ;
ಇಹಕ್ಷೇಮ ತಾಪವು;
ಇಹನೀತ್ಯಸೀತಿಯು.

4. ಪರದಲ್ಲಿ ನೋವು, ಸಾವು,
ಅಂಧಕಾರ, ಚಳಿ, ಕಾವು,
ಚಿಂತೆ, ದುಃಖ ಕಾಣವು;
ಅಲ್ಲಿ ಸೌಖ್ಯ ತೀರದು.

೩೯೪

There is a happy land.
M. T. 256.

1. ಅಹಾ! ಸ್ವದೇಶವು
ಗೊತ್ತಾಯಿತು.
ಅಲ್ಲಿಯ ಜನರು
ಸಂತೃಪ್ತರು.
"ರಕ್ಷಕ ಯೇಸುವು
ಸ್ತೋತ್ರ ಹೊಂದ ಯೋಗ್ಯನು"
ಅನ್ನುತ ಹಾಡ್ವರು
ಯಾವಾಗಲು.

2. ಆ ಒಳ್ಳೇ ದೇಶಕೆ
ಹೋಗೋಣ ಬಾ!
ತಾಮಸ ಮಾಡದೆ
ಈಗಲೇ ಬಾ!
ಎಷ್ಟೆಷ್ಟೊ ಸೊಗಸು
ನಾವು ಉಣ್ಣುತ್ತಿರ್ಪೆವು,
ಕಣ್ಣೀರು ಕಾಣೆವು
ಎಂದೆಂದಿಗು.

3. ಆ ಭವ್ಯ ದೇಶದೊಳ್
ಹೋದವರೇ

ತಂದೆಯ ಹತ್ತರದೋಳ್
ಧನ್ಯರಲ್ಲೇ?
ಸುಂದರ ದೇಶಕೂ
ಜೀವದ ಕಿರೀಟಕೂ
ಹೊಂಟೋಡುತ್ತಿರುವೆ
ದಣಿಯದೆ!

೩೯೫

Home! Sweet Home!—M. T. 251.

1. ಸೌಭಾಗ್ಯವನ್ನೀಯುವ ಸ್ವ
ದೇಶವೆ!
ನಾ ಸೇರೊದು ಯಾವಾಗ
ನಿನ್ನೊಳಗೆ?
ನಾನಿಲ್ಲಿ ಪ್ರವಾಸಿಯೂ ಯಾತ್ರಿ
ಕನೂ;
ಭೂಲೋಕದಿ ಶಾಂತಿಯ ಕಾಣೆ
ನೆಂದೂ.
ಹಾ, ಸ್ವದೇಶವೆ!
ನಿರೀಕ್ಷಿಪೆ ನಿತ್ಯವು ನಾ ನಿನ್ನನೆ.

2. ನಂಗಿಲ್ಲ ಪ್ರವಾಸದಿ ಸಂತೃ
ಪ್ತಿಯು;
ವ್ಯಸ್ತಾನ್ನವು ಹತ್ತದು ಸ್ವಾ
ದೆಂದಿಗು.
ಇದ್ದಾಗ್ಯು ಸನ್ಮಾನವು, ಸಂಪ
ತ್ತಿಯು
ಕಾನಾನಿನ ಆಶೆ ಹೆಚ್ಚಾಗಿಹುದು.
ಹಾ, ಸ್ವದೇಶವೆ!
ನಿರೀಕ್ಷಿಪೆ ನಿತ್ಯವು ನಾ ನಿನ್ನನೆ.

3. ನಿನ್ನಲ್ಲಿ ನನ್ನಾಪ್ತರು ಯಾ
ವಾಗಲು
"ಸಂರಕ್ಷಿಸು, ಕರ್ತ, ನಮ್ಮಾಪ್ತ
ನನು"
ಎಂಥೇಳುತ ಸ್ವಾಮಿಗೆ ನಿತ್ಯದಲು
ನಂಗಾಗಿ ವಿಜ್ಞಾಪನೆ ಮಾಡು
ವರು.
ಹಾ, ಸ್ವದೇಶವೆ!
ನಿರೀಕ್ಷಿಪೆ ನಿತ್ಯವು ನಾ ನಿನ್ನನೆ.

4. ಉಪದ್ರಂಗಳ್ ಮುತ್ತಿದರೂ
ಇಹದಿ,
ಕೈ ಬಿಟ್ಟರೂ ಮಿತ್ರರು ನಿರ್ದ
ಯದಿ,
ನಾ ಹರ್ಷಿಪೆ ನಿನ್ನಲ್ಲಿ ಉಲ್ಲಾ
ಸಿಸಿ,
ವಿಶ್ರಾಂತಿಯ ಹೊಂದುವೆ ಸ್ವ
ಗೃಹದಿ.
ಹಾ, ಸ್ವದೇಶವೆ!
ನಿರೀಕ್ಷಿಪೆ ನಿತ್ಯವು ನಾ ನಿನ್ನನೆ.

5. ಸ್ವದೇಶದ ಸೌಖ್ಯವ ಯೋಚಿ
ಸಲು,
ಭೂಲೋಕದ ಭೋಗ ಬರೇ
ಕಸವು!

ಇಲ್ಲಿಲ್ಲ ವಿಶ್ರಾಂತಿಯು ಎಂದೆಂದಿ
ಗು!
ತಂದೇ ಮನೆಯಲ್ಲಿಯೇ ವಿಶ್ರಾಂ
ತಿಯು.
ಹಾ, ಸ್ವದೇಶವೆ!
ನಿರೀಕ್ಷಿಪೆ ನಿತ್ಯವು ನಾ ನಿನ್ನನೆ.

೩೯೬

Wo findet die Seele die Heimat, die Ruh'?—M. T. 251.

1. ಸ್ವದೇಶ, ಸ್ವದೇಶ, ನಿನ್ನಲ್ಲಿಗೆನೆ
ಪ್ರಪಂಚದೊಳಿಂದ ನಾ ಹಂಬ
ಲಿಪೆ.
ನನ್ನಾತ್ಮಕೀ ಲೋಕದಿ ಶಾಂತಿ
ಉಂಟೋ?
ಅಃ ಪಾಪರಹಿತ ಬಿಡಾರವಿ
ಲ್ಲೋ?
ಇಲ್ಲ, ಇಲ್ಲ, ಇಲ್ಲಕಟಾ!
ಮೇಲ್ಲೋಕದೊಳೆನ್ನ ಸ್ವದೇಶ
ಅಹಾ!

2. ಆ ಲೋಕದಿ ಪಾಪವೇನೇನಿ
ರದು;
ಸೈತಾನನೂ ಸಾವೂ ಪ್ರವೇಶಿ
ಸರು;
ವೈಭವದಿ ಯೇಸುವೇ ಆಳುವನು;
ವಿಶುದ್ಧರ ಮೇಳವು ಬಾರಿಸೋ
ದು.
ಅಲ್ಲಿ, ಅಲ್ಲಿ, ಅಲ್ಲಿ ಅವೆ
ಸ್ವದೇಶದ ಸೊಗಸು ಶಾಂತಿಗಳೆ.

3. ಆ ಪಟ್ಣದ ಮಹಿಮೆ ಕೇಳಿದಿರಿ
ಯೋಹಾನನು ನೋಡಿದ ದರ್ಶ
ನದಿ;
ಆ ಬೀದಿಗಳೆಲ್ಲ ಸುವರ್ಣದವೆ;
ಹನ್ನೆರಡು ಬಾಗಲು ಮುತ್ತುಗಳೆ.
ಬನ್ನಿ, ಬನ್ನಿ, ಬನ್ನಿರೀಗ
ಸಾಲೇಮಿನ ದ್ವಾರ ಪ್ರವೇಶಿಸುವ!

4. ಸ್ವದೇಶಕೆ ಮುಟ್ಟುವ ತನಕವು
ನಾವನ್ಯರ ಹಾಸ್ಯಕೆ ಹೆದರೆವು;
ಪ್ರಯಾಣದ ಶೋಧನೆ ಕಷ್ಟಗಳ
ಕ್ರಿಸ್ತ್ಯೇಸುವಿನೊಡನೆ ಸೈರಿಸುವ!
ಆತ, ಆತ, ಹೌದಾತನು
ಈ ಯಾತ್ರೆಯೊಳೆಮಗೆ ತಾರ
ಕನು!

೩೯೭

Gottlob, ich weiss mein Vaterland. M. T. 185.

1. ಮೇಲಾದ ಪಟ್ಣದೆಸೆಗೆ
ದಿನಾಲು ಹೋಗುತಿರುತೇನೆ.
ಈ ಜೀವ ಬಾಲಶಿಕ್ಷೆಯೆ;
ದೇಶಾಂತ್ರಿಯಾಗಿ ಇಲ್ಲಿದ್ಧೇನೆ.
ಈ ಜೀವ ಬರೆ ಮಾರ್ಗವೇ,
ಸ್ವಪಟ್ಣ ಪರದಲ್ಲಿಯೇ!

ನಾನಲ್ಲಿ ಯೇಸು ಕ್ರಿಸ್ತನಿಂದ
ಸ್ವತಂತ್ರ ಹೊಂದುವದರಿಂದ
ನಾನಾತನಿಷ್ಟ ಪಾದಕೆ
ಬಂದಾಗ ಹರ್ಷಗೊಳ್ಳುವೆ.

2. ನಾನಲ್ಲಿ ಸೇರಿದಾಗಲು,
ಸಂಸ್ತುತಿ ಎಂದು ತೀರ್ವದಿಲ್ಲ;
ಕಾಣೋದು ಮರ್ಮವೆಲ್ಲವು;
ಆಶ್ಚರ್ಯಕಲ್ಲಿ ಮಿತಿ ಇಲ್ಲ.
ಅಲ್ಲಿಂಗೆ ಪೂರ್ಣವಹುದು
ಪವಿತ್ರ ಕ್ರೂಜೆಫಲವು;
ವಿಶ್ವಾಸಿಸಿದ್ದು ಶೋಭಿಸೋದು,
ಅಪೇಕ್ಷಿಸಿದ್ದು ಒದಗೋದು;
ಕ್ರೂಜೇಲಿ ಸತ್ತ ಕರ್ತಗೆ
ಅನಂತ ಸ್ತೋತ್ರ ಹಾಡುವೆ.

3. ನಾನಲ್ಲಿ ಅಪ್ಪಿಕೊಳ್ಳುವೆ
ಮುಂತೆರಳಿದ ಪ್ರಿಯರನ್ನು;
ಈ ಕಣ್ಣಿನಿಂದ ದೃಷ್ಟಿಪೆ
ಮುಹತ್ವವುಳ್ಳ ಕರ್ತನನ್ನು.
ಸಮಸ್ತ ದೂತಗಣವೂ
ವಿಮುಕ್ತ ಭಕ್ತಸಭೆಯೂ
ಅನಂತ ದಿವ್ಯ ಸ್ತೋತ್ರರಾಗ
ತಮ್ಮೊಡೆಯಂಗೆ ಹಾಡುವಾಗ
ಆ ಮಂಗಳಾತ್ಮರೊಂದಿಗೆ
ಮಹಾ ಸಂತೋಷ ಪಡುವೆ.

೩೯೮

Jerusalem, du hochgebaute Stadt.
M. T. 176.

1. ಯೆರೂಸಲೇಮ್,
ಮೇಲೂರು, ನಿನ್ನಲೆ
ನಾನಿದ್ದರೊಳ್ಳೆದು!
ಎಂದೆನಗೆ
ಸ್ವಪಟ್ಣದೊಳಗೆ
ಪ್ರವೇಶವಾಗೊದು?
ನನ್ನಾತ್ಮ ಇಹವನ್ನು
ಬಿಟ್ಟೇರಿ ಮೇಲಕೆ,
ಪ್ರಪಂಚತುಷ್ಟಿಯನ್ನು
ವಿಸರ್ಜಿಸುತ್ತದೆ.

2. ಸುದಿನವೆ!
ಶುಭ ಮುಹೂರ್ತವೆ!
ನೀನೆಂದು ಬರುವಿ?
ಸ್ವದೇಶಕೆ
ನಾನೆಂದು ಮುಟ್ಟುವೆ
ಆಕಾಶರಥದಿ?
ಪ್ರೀತೀಲಿ ಭಕ್ತರನ್ನು
ಕಾಪಾಡುವಾತಗೆ
ಎಂದೆನ್ನ ಆತ್ಮವನ್ನು
ನಾ ಕೊಟ್ಟು ಬಿಡುವೆ?

3. ನಾ ಸೇರ್ವೆನು
ಆ ಘನಕೋಟೆಗೆ
ಮಹಾ ಸಂತೋಷದಿ;

ವಿಮುಕ್ತರ
ಆ ಘನಸಂಘಕೆ
ನಾ ಸೇರ್ವೆ ಹರ್ಷಿಸಿ.
ಮಹಾ ಪ್ರಭಾವಯುಕ್ತ
ಪ್ರವಾದಿಸೇನೆಯು,
ಅಪೊಸ್ತಲಾದಿ ಭಕ್ತ
ಸಮೂಹ ಕಾಣ್ಬುದು.

4. ಯೆರೂಸಲೇಮ್,
ಸಂತೋಷಪೂರ್ತಿಯು
ನಿನ್ನಲ್ಲಿ ತೀರದು!
ಹಲ್ಲೆಲೂಯಾ!
ನಿನ್ನಲ್ಲಿ ನಿತ್ಯಕು
ಸಂಸ್ತುತಿಗೀತವು.
ಕ್ರಿಸ್ತ್ಯೇಸು, ಅಲ್ಲಿ ನನ್ನ
ನೀ ಬೇಗ ಮುಟ್ಟಿಸು!
ಆ ನಿತ್ಯ ಹೊಸಿಯನ್ನ
ಹಾಡೋದೇ ಮುಕ್ತಿಯು.

೩೯೯

Light's abode, celestial Salem.
M. T. 290.

1. ದಿವ್ಯ ಸಾಲೆಮ್, ಸ್ವರ್ಣ
 ಕಾಂತಿ
ಎಸೆವಂಥ ಪಟ್ಟಣ!
ನಿನ್ನ ನೋಟದಿಂದ ಶಾಂತಿ
ಹೊಂದೊದೆನ್ನ ಹರಣ.
ಭೂಸಂಚಾರ ತೀರಲು,
ನಿನ್ನೊಳ್ ವಸ್ತಿ ಮಾಡ್ವೆನು.

2. ದೂತಸಂಘ ನಿತ್ಯವಾಗಿ
ಹಲ್ಲೆಲೂಯಾ ಹಾಡುವ,
ಶೋಕವೆಲ್ಲ ಲೋಪವಾಗಿ
ನಿತ್ಯ ಹಬ್ಬ ನಡೆವ
ನಿನ್ನ ಚಿನ್ನ ಕೋಟೆಯು
ನನ್ನ ನಿತ್ಯ ವಾಸವು.

3. ಮೊಬ್ಬು, ಮೋಡ ನೀಗಿ
 ಹೋಗಿ
ನಿತ್ಯ ತೇಜಸ್ಸಿಪ್ಪುದು;
ಯೇಸು ನೀತಿಸೂರ್ಯನಾಗಿ
ನಿನ್ನೊಳ್ ಕಾಂತಿ ಹೊಯ್ವನು.
ದುಃಖ ಕಷ್ಟ ಕಾಣವು;
ತೀರದು ಉಲ್ಲಾಸವು.

4. ನಾನು ಮರ್ತ್ಯ ದೇಹದಲ್ಲಿ
ಅಮರತ್ವ ಧರಿಸಿ,
ಯೇಸು ದೇಹದಂದದಲ್ಲಿ
ಶೋಭೆಯಾಗಿ ಕಾಣಿಸಿ,
ಹರ್ಷದಿಂದ ನಿತ್ಯವು
ಸುಖದಿಂದ ಬಾಳ್ವೆನು.

5. ಪ್ರಾಣ, ನಿನ್ನ ರಾಜನನ್ನು
ಕಾಣ್ಬೆ ಪೂರ್ಣ ತೇಜದೊಳ್;
ಶುಭ್ರ ನೀತಿವಸ್ತ್ರವನ್ನು
ತೊಟ್ಟುಕೊಂಬಿ ನಿತ್ಯದೊಳ್.
ಕಣ್ಣೀರನ್ನು ತಂದೆಯು
ತಾನೇ ಒರಸುವನು.

6. ಸೇರಿ ತಂದೇ ಮನೆಯಲ್ಲಿ
ಹೊಂದುವಿ ಕಿರೀಟವ;
ನೀರುಬುಗ್ಗೇ ಬಳಿಯಲ್ಲಿ
ನಡಿಸೋನು ರಕ್ಷಕ.
ತೃಪ್ತನಾಗಿ ನಿತ್ಯದಿ
ಹಲ್ಲೆಲೂಯಾ ಹಾಡುವಿ.

೪೦೦

Mel. Alle Menschen müssen sterben.—M. T. 159.

1. ಹಾ ಯೆರೂಸಲೇಮ್, ಶ್ರೀ
ವಾಸ!
ಎಂಥ ಜ್ಯೋತಿಶೋಭೆಯು,
ಎಂಥ ಹರ್ಷ, ಎಂಥುಲ್ಲಾಸ
ನಿತ್ಯ ನಿನ್ನಲಿರೊದು!
ಹಲ್ಲೆಲೂಯ! ಜಯ, ಜಯ!
ಮೂಡಿ ಬಂತು ಸೂರ್ಯೋ
ದಯ!
ಮೂಡಿ ಬಂತಾ ದಿನವು,
ಅದಕಂತ್ಯವಿರದು!

2. ನಾನು ಈಗ ಸೇರುತೇನೆ
ಕಾಂತಿಮಯ ಪಟ್ಟಣ!
ಇಂದು ಹೊಂದಿಕೊಳ್ಳುತೇನೆ
ಸ್ವರ್ಗವಸ್ತ್ರಭೂಷಣ!
ಚಿನ್ನದ ಕಿರೀಟವನ್ನು
ಇಟ್ಟು, ದೇವಮುಖವನ್ನು
ನೋಡುತೇನೆ ನಿತ್ಯಕು;
ಈ ಸಂತೋಷ ತೀರದು.

೪೦೧

Unter Lilien jener Freuden.
M. T. 214.

1. ಸ್ವರ್ಗಲೋಕದ ಸಂತೋಷ,
ನಿತ್ಯ ಪೋಷ
ಈಕ್ಷಿಸೆನ್ನ ಆತ್ಮವೇ!
ಈ ಭೂಲೋಕವೀಯ್ವ ತೋಷ
ತುಂಬಾ ದೋಷ.
ಬಪ್ಪುದಿನ್ನು ಅಂತ್ಯವೇ.

2. ಆ ಸಂತೋಷದಾಶೆಯಿಂದ
ವೇಗದಿಂದ
ಓಡುತ್ತೇನೆ ಅಲ್ಲಿಗೆ.
ಲಕ್ಷಗಟ್ಲೆ ದೂತಸೇನೆ
ನೋಡುತ್ತೇನೆ
ಅಲ್ಲೇ, ನನ್ನ ಯೇಸುವೇ.

3. ಭಯ ಈ ಸಮುದ್ರದಲ್ಲಿ!
ರೇವಿನಲ್ಲಿ
ನನ್ನ ದೋಣಿ ಸೇರಿಸು!
ಹಿರೀ ಅಣ್ಣಾ, ಸಮಾಧಾನ,
ನಿತ್ಯ ಮಾನ
ನನಗನುಗ್ರಹಿಸು.

4. ಲೋಕದಲ್ಲಿ ಎಷ್ಟೋ ಕಷ್ಟ,
ದುಃಖ, ನಷ್ಟ

ತುಂಬಿರೋದು, ಕರ್ತನೆ!
ಸೋಲದ ವಿಶ್ವಾಸವನ್ನು
ಕೊಟ್ಟೆನ್ನನ್ನು
ಸಾಗಿಸಂತ್ಯವರೆಗೆ!

5. ಸರ್ವಶಕ್ತ, ಯೇಸುಕರ್ತ,
ಪರಮಾರ್ಥ
ಶೀಘ್ರವಾಗಿ ಪಾಲಿಸು!
ಘೋರ ಮರಣಾಂಧಕಾರ,
ಸರ್ವ ಭಾರ,
ನಿನ್ನ ಮುಂದೆ ನಿಲ್ಲದು.

6. ಲೋಕದೆಲ್ಲಾ ಪಾಪ, ಶಾಪ,
ಸರ್ವ ತಾಪ
ನೀ ವಿನಾಶ ಮಾಡಿದಿ.
ನಿನ್ನ ದುಃಖ, ವ್ಯಥೆ, ಭಯ,
ನಿನ್ನ ಜಯ
ಎಲ್ಲಾ ನನಗೀಯುತಿ.

7. ಯೇಸು ಕ್ರಿಸ್ತ! ನನ್ನ ಪ್ರಾಣ!
ನಿಂಗೆ ಮಾನ,
ಸ್ತೋತ್ರ, ಸ್ತುತಿ ಆಗಲಿ!
ನಿನ್ನ ವಾಸ, ಕುರೀಮರೀ,
ಸೇರೋ ದಾರೀ
ತೋರಿಸನುಗ್ರಹದಿ!

೪೦೨

Ich hab' von ferne.—M. T. 212.

1. ನಾ ದೂರದಿಂದ ಯೆಹೋವ ಪೀಠವಂ
ಕಂಡ್ಹರ್ಷವಾಗಿ ಸೇರಲಾಸ್ಥಾನವಂ
ನನ್ನೊಳಗಿಹುದೆಷ್ಟೋ ಆಶೆ;
ನಿನ್ನಲ್ಲಿ, ತಂದೆ, ನನ್ನಭಿಲಾಷೆ.

2. ಅಹಾ! ಸೌಂದರ್ಯಪೂರಿತ ಮಂದಿರ!
ನೋಡೋದಸಾಧ್ಯ ಆ ಗೃಹ ಕಾಂತಿಯ!
ಯಾವಾಗ ತೀರೋದೀ ಪ್ರಯಾಸ?
ಎಂದೆಂಗೆ ಸಿಕ್ಕೋದು ಸ್ವರ್ಗವಾಸ?

3. ಅಯ್ಯೋ, ನಾ ಪಾಪಿ! ಲೌಕಿಕ ಮನಸ್ಸೂ
ಸ್ವಭಾವದಿಂದ ಅಶುಚಿ ತುಟಿಯೂ,
ಇರೋದೆನ್ನಲ್ಲಿ! ನಾನಶುದ್ಧ!
ಶ್ರೀ ಯೇಸು, ಮಾಡು ನನ್ನನ್ನು ಶುದ್ಧ!

4. ಕರ್ತಾ, ನಾ ನಿನ್ನ ಪ್ರೇಮವಂ ಗ್ರಹಿಸಿ
ಪ್ರಪಂಚದಿಚ್ಛೆ ಮೋಹಾದಿ ತ್ಯಜಿಸಿ

ಉಪದ್ರ ಶ್ರಮವೆಲ್ಲಾ ತಾಳ್ವೆ;
ನಿನ್ನೊಳು ಸೇರಿ ನಾ ನಿತ್ಯ ಬಾಳ್ವೆ.

5. ನಿನ್ನನ್ನು ಕಂಡೆ ಪವಿತ್ರ ಪಟ್ಟ
ವೇ;
ನಿನ್ನೆಲ್ಲಾ ಬೀದಿ ಸ್ವರ್ಣಾಲಂಕೃ
ತವೇ.
ನಾನೆಂದೂ ಮರ್ಯೆ ನಿನ್ನ
ಕಾಂತಿ;
ನಿನ್ನಲ್ಲೇ ನಿತ್ಯ ಸಂತೃಪ್ತಿ ಶಾಂತಿ.

೪೦೩

I want to be an angel.
M. T. 128.

1. ನಾ ದಿವ್ಯ ದೂತನಾಗಿ
ಕೈಯಲ್ಲಿ ವೀಣೆಯ
ತಕ್ಕೊಂಡು, ತಲೆ ಬಾಗಿ
ವಂದಿಪೆ ಸ್ವಾಮಿಯ.
ನಿರಂತ್ರದಲ್ಲಿ ಬಾಳಿ
ಆತನ್ನ ಕೀರ್ತಿಪೆ;
ನನ್ನೀಶನಂ ಕೊಂಡಾಡಿ
ಇಂಪಾಗಿ ಹಾಡುವೆ.

2. ಅಲ್ಲೇನೂ ದುಃಖವಿಲ್ಲ,
ಕಣ್ಣೀರು ಇರದು;
ನಾ ಕ್ಷೀಣನಾಗೋದಿಲ್ಲ;
ಭಯಾದಿ ತೋರದು;
ಕ್ರಿಸ್ತ್ಯೇಸು ಬಳಿಯಲ್ಲಿ
ನಿರಂತ್ರ ಬಾಳುವೆ;
ಸ್ವರ್ಗೀಯ ಸೇನೆಯಲ್ಲಿ
ಸಂಗೀತ ಹಾಡುವೆ.

3. ಅನೇಕರನ್ನು ಯೇಸು
ಆ ಸಂಘಕ್ಕೊಯ್ದನು;
ನಂಗಾದ್ರು ಆತ ಲೇಸು
ಸೌಭಾಗ್ಯವೀಯ್ವನು.
ನಾ ರೋಗದಲ್ಲಿ ಬಿದ್ದು
ಸಾಯುವ ಕಾಲಕೆ
ಕ್ರಿಸ್ತ್ಯೇಸು ಹತ್ರವಿದ್ದು
ವೈಯೋನು ಸ್ವರ್ಗಕೆ.

4. ಶ್ರೀ ಯೇಸು, ಸೇರಿಸೆನ್ನ
ಆ ಸಂಘದೊಳಗೆ!
ಸ್ವರ್ಗೀಯ ವೀಣೆಯನ್ನ
ಕೊಡೆನ್ನ ಹಸ್ತಕೆ!
ಕಿರೀಟವಿಟ್ಟು ಬಾಗಿ
ನಿನ್ನನ್ನು ವಂದಿಪೆ!
ನಿನ್ನೊಳ್ ಕೃತಜ್ಞನಾಗಿ
ನಿರಂತ್ರ ಹಾಡುವೆ.

೪೦೪

Lasst mich gehen!—M. T. 51.

1. ಹೋಗುವೆ! ಹೋಗುವೆ!
ಯೇಸುವನ್ನು ನೋಡುವೆ!
ಆತನಡಿಗೆರಗೋಣ,
ಸನ್ನಿಧಾನ ಸೇವಿಸೋಣ
ನನ್ನ ಪ್ರಾಣದಾಶೆಯು.

2. ಕಾಂತಿಯೇ! ಕಾಂತಿಯೇ!
ಮೇಘಹರ ಸೂರ್ಯನೇ!
ಸರ್ವ ಭಕ್ತರೈಕ್ಯದಲ್ಲಿ
ಯೇಸುವನ್ನು ನೋಡುವಲ್ಲಿ
ನಾನು ಎಂದು ಸೇರುವೆ?

3. ರಮ್ಯವು! ರಮ್ಯವು!
ದೂತಸೈನ್ಯ ಹಾಡೋದು!
ರೆಕ್ಕೆ ಇರುತಿದ್ದ ವೇಳೆ,
ಹಾರಿ ತಗ್ಗು ದಿನ್ನೆ ಮೇಲೆ,
ಚೀಯೋನ್ ಏರುತಿದ್ದೆನು!

4. ಚೋದ್ಯವು! ಚೋದ್ಯವು!
ಸಾಲೆಮ್ ಪಟ್ಣ ಸೇರೋದು!
ಸ್ವರ್ಣಪಟ್ಣದೊಳ್ ನಿವಾಸ
ಮಾಡಿಕೊಳ್ಳೋದೆಂಥುಲ್ಲಾಸ!
ಯಾರು ವರ್ಣಿಸುವರು?

5. ಮಧುರ! ಮಧುರ!
ಜೀವಫಲಭಕ್ಷಣ!
ಕಂಡು ಆ ವೃಕ್ಷಂಗಳಾಳಿ,
ಸ್ವಪ್ನವಂತನಂತೆ ಬಾಳಿ,
ಹಾಡ್ವೆ ನಿತ್ಯ ಮಂಗಳ!

೪೦೫

What, what is this that steals upon my frame?—M. T. 291.

1. ಹಾ ಏನಿದು? ಮೆಲ್ಲಾನೆ ಬಪ್ಪುದು—
ಮೃತ್ಯುವೋ? ಮೃತ್ಯುವೋ?
ಈ ಜೀವಜ್ಯೋತಿಯಾರಿಸುವದು—
ಮೃತ್ಯುವೋ? ಮೃತ್ಯುವೋ?
ಮೃತ್ಯಾದರೆ, ನಾ ಮುಕ್ತನೆ!
ಸಮಸ್ತ ಕಷ್ಟ ತೀರುತೆ;
ನನ್ನರಸನ್ನ ಕಾಣುವೆ.
ಶುಭವೆ! ಶುಭವೆ!

2. ನನ್ನಾಪ್ತರೇ, ಅಳೋದು ಯಾತಕೆ?
ಶುಭವೆ! ಶುಭವೆ!
ಸೌಭಾಗ್ಯವೀಗ ನಂಗೆ ಸಿಕ್ಕುತೆ.
ಶುಭವೆ! ಶುಭವೆ!
ನನ್ನರಸನ್ನ ಕಾಣ್ಬರೆ
ಇನ್ನ್ಯಾವ ವಿಘ್ನವೆನಗೆ?
ವೈಮೇ ಕಿರೀಟ ಹೊಂದುವೆ.
ಶುಭವೆ! ಶುಭವೆ!

3. ಕೈಯೊಳು ವೀಣೆ ಎತ್ತಿಕೊಳ್ಳುವೆ;
ಶುಭವೆ! ಶುಭವೆ!
ವಿಮುಕ್ತಸಂಘ ಸೇರಿ ಹಾಡುವೆ.
ಶುಭವೆ! ಶುಭವೆ!
ಬಂದಾರೆ ದೂತರಿಲ್ಲಿಗೆ
ನನ್ನಾತ್ಮ ವೈಯುವದಕೆ;
ಎನ್ ಯೇಸು ಹತ್ರ ಸೇರುವೆ.
ಶುಭವೆ! ಶುಭವೆ!

4. ಕೇಳ್ ಕೇಳಿರೋ! ನಮ್ಮಪ್ಪ
ಕರೆದ;
ಹೋಗುವೆ, ಹೋಗುವೆ.
ನಾ ಕೋರಿದಾ ವಿಶ್ರಾಂತಿಭವನ
ಸಿದ್ಧವೆ! ಸಿದ್ಧವೆ!
ಸಲಾಂ, ಸಲಾಂ, ನಾ ಹೋ
ಗುವೆ,
ಹೊತ್ತಿಲ್ಲ ನಿಲ್ಲುವದಕೆ;
ಶ್ರೀ ಯೇಸುಪಾದ ಸೇರುವೆ.
ಶುಭವೆ! ಶುಭವೆ!

೪೦೭

Freudenvoll, freudenvoll walle ich fort.—M. T. 292.

1. ಹರ್ಷದಿಂ, ಹರ್ಷದಿಂ ಮುಂ
ದೋಡುವಾ!
ಮೋಕ್ಷದ ಸೈನ್ಯವ ಸಂಧಿಸುವಾ!
ಯೇಸುವು ನಮ್ಮನ್ನು ಕರೆಯಲು
ಹರ್ಷದಿಂ ಮೇಲಕೆ ಓಡುವೆವು.
ಲೋಕಪ್ರಯಾಣವು ಮುಗಿ
ಯಲು
ಸ್ವರ್ಗದಾನಂದಕ್ಕೆ ಸೇರುವೆವು;
ಸೇರಿದ ಮೇಲೆ ನಿರಂತರಕು
ಹರ್ಷದಿಂ, ಹರ್ಷದಿಂ ಹಾಡು
ವೆವು.

2. ಸಾವಿನ ಬಾಣವು ನಾಟಿದರು
ನೋವಿನ್ನು ನಮಗೆ ಮಾಡದದು;
ಯೇಸು ಸಮಾಧಿಯ ಜಯಿಸಿದ;
ಹರ್ಷದಿಂ, ಹರ್ಷದಿಂ ಮುಂ
ದೋಡುವ!
ಮರಣ ನಮ್ಮನ್ನು ಜಯಿಸದು,
ಅದರ ಕೊಂಡಿಯು ಮುರಿಯಿತು.
ಪರಮ ಭಾಗ್ಯವನಾಶಿಸುತಾ
ಹರ್ಷದಿಂ, ಹರ್ಷದಿಂ ಮುಂ
ದೋಡುವಾ!

3. ನಮ್ಮನ್ನು ಬಿಟ್ಟ ಸಂಗಾತಿಗಳು
ಮೇಲಣ ಸೈನ್ಯದ ಸಂಗಡಲು
ನಮ್ಮನ್ನು ಮೇಲಕ್ಕೆ ಕರೆದರು.
ಹರ್ಷದಿಂ, ಹರ್ಷದಿಂ ಹೋಗು
ವೆವು.
ಚಿನ್ನದ ವೀಣೆಯ ಗಾಯನವು,
ಇಂಪಾದ ರಾಗದ ಧ್ವನಿಗಳು
ಕಿವಿಗೆ ಬಿದ್ದವು, ಕೇಳಿದೆವು.
ಹರ್ಷದಿಂ, ಹರ್ಷದಿಂ ಓಡು
ವೆವು.

೪೦೮

Wie wird uns sein.—M. T. 168.

1. ಸಂಕಷ್ಟವುಳ್ಳ ಅಂತ್ಯಯುದ್ಧ
ದಲ್ಲಿ
ವಿಜಯಗೊಂಡು, ನೆರೆ ದಣಿದು,

ಅನಂತಶಾಂತಿಗಾಗಿ ಮನೆಯಲ್ಲಿ
ಈ ರಣಭೂಮಿ ಬಿಟ್ಟು ಸೇರಲು,
ಬೆವರ್ಗ ವೋರೆಯೊರ್ಸಿ, ಧೂ
ಳಿಯನ್ನು
ಕಾಲಿಂದ ಝಾಡಿಸ್ಯಕ್ಷಿ ತೆರೆದು,
ನಾವಿಹದಲ್ಲಿ ನಂಬಿದೆಲ್ಲವನ್ನು
ಹೊಂದಿರಲೆಮಗೆಂಥ ಸುಖವು!

2. ಅನಾದಿಸೂರ್ಯಶುದ್ಧ
ಕಾಂತಿ ಮೂಡಿ
ಪ್ರಕಾಶವೆಮ್ಮ ಮೇಲೆ ಹೊಯ್ಯ
ಲು,
ವಿಮುಕ್ತಭಕ್ತಸಭೆಯನ್ನು ಕೂಡಿ,
ಅನಂತತೇಜವನ್ನು ಪಡೆದು,
ಸ್ವರಾಜ್ಯದೊಳ್ ಪುನೀತ ರಾಜ
ರಾಗಿ
ಪ್ರವೇಶ ಮಾಡಿ, ದೋಷ ಕಳೆದು,
ಸ್ವಗೃಹದಲ್ಲಿ ಶುದ್ಧ ಮಕ್ಕಳಾಗಿ
ಹೊಕ್ಕಾಗಲೆಮಗೆಂಥ ಸುಖವು!

3. ನಮ್ಮಾತ್ಮ ತನ್ನ ಕಾಂಕ್ಷೆಗನು
ಸಾರ
ಶರೀರಭಾರವನ್ನು ಕಳೆದು
ಹರೇದ ಹಕ್ಕಿನಂತೆ ಮೇಲೆ ಹಾರ
ಪ್ರಾರಂಭಿಸಿ, ಅನಾದಿ ತೇಜಕೂ
ವಿರಾಜ ಪೀಠಕೂ ಸಮೀಪ
ಸಾಗಿ,
ಭೂಪರಕರ್ತನೂ ಉದ್ಧಾರಿಯೂ
ಆದಾತನನ್ನು ನಾವು ಬೆರಗಾಗಿ
ಕಣ್ಣಾರೆ ನೋಡಲೆಂಥ ಸುಖವು!

4. ನಮ್ಮೆಲ್ಲ ಶಾಪ, ದುಷ್ಟತನ ನೀಗ
ಸ್ವರಕ್ತ ಸುರಿಸಿದ ಗುರುವೇ—
"ನೀವಿತ್ತ ಬನ್ನಿ, ಹರ್ಷಗೊಳ್ಳಿರೀಗ
ಸರ್ವಾಶೀರ್ವಾದ ಹೊಂದಿದವರೇ,
ನಾ ನಿಮಗೆ ಜಗದಾರಭ್ಯದಿಂದ
ಸಂಸಿದ್ಧಿಸಿದ ರಾಜ್ಯ ಪಡೆದು!"
ಎಂದ್ಹೇಳೋದನ್ನು ನಾವು
ಭ್ರಮೆಯಿಂದ
ಕಿವ್ಯಾರೆ ಕೇಳಲೆಂಥ ಸುಖವು!

5. ಸುವರ್ಣಮಯಪಟ್ಣ ಹೊಕ್ಕ
ಮೇಲೆ
ಉತ್ಥಾನದ ಶರೀರ ಧರಿಸಿ,
ಒಮ್ಮೊಮ್ಮೆ ಹಿಂದೆ ದೃಷ್ಟಿಸುವ ವೇಳೆ
ಭೂಯಾತ್ರೆಯ ಒಂದೊಂದು
ಸಂಗತಿ,
ಒಂದೊಂದು ಕಷ್ಟ ನೆಪ್ಪ ಮಾಡಿ
ಕೊಂಡು,
ಶಿಲುಬೆ ಹೊತ್ತದ್ದನ್ನು ನೆನೆದು—
ಅದಾಗಿ ಹೋಯಿತೆಂದು ಹರ್ಷ
ಗೊಂಡು
ಹಾಡುತ್ತಲಿರೆ ಎಂಥ ಸುಖವು!

6. ಎಲೈ ಸಹೋದರಾ, ನಿರಾಶೆ
ಬಿಟ್ಟು
ಬಿಕ್ಕಟ್ಟು ಹಾದಿ ಹಿಡಿಧೋಗುವ!

ದಿನಾಲು ಮೂಲುಗಿ ಕಣ್ಣೀರ
ನಿಟ್ಟು
ನಮ್ಮನ್ನು ಹೊಂಚಿ ನೋಡೋ
ವೈರಿಯು
ವಿರೋಧವಾಗಿ ಯುದ್ಧ ತೀರಿ
ಸೋಣ
ಒಂದೊಂದಾತಂಕವನ್ನು ತೆಗೆದು!
ಸಜ್ಜೀವದ ಕಿರೀಟ ಪಡೆಯೋಣ!
ಅದಾಗಲೆಮಗೆಂಥ ಸುಖವು!

೪೦೮

Wenn der Herr einst die Gefang'nen.— M. T. 148.

1. ಸೆರೆಯಿಂದ ಚೀಯೋನನ್ನು
ಕರ್ತ ಬಿಡಿಸುತ್ತಲು,
ಭಯಂಕರ ಸ್ವಪ್ನವನ್ನು
ಕಂಡ ಹಾಗಿರುವೆವು;
ಆಗ ಹೃತ್ಸಂತೋಷದಿ
ಕರ್ತನನ್ನು ಸ್ತುತಿಸಿ,
ರಾಜ್ಯದಿ ಪ್ರವೇಶಿಸೇವು,
ಆತನಡಿಗೆರಗೇವು.

2. ಎತ್ತಿ ನಿನ್ನ ಹಸ್ತವನ್ನು
ನಮ್ಮನಾಶೀರ್ವದಿಸು!
ಕಷ್ಟ ಪಡುವವರನ್ನು
ಕಂಡು, ಮೆಚ್ಚಿ, ಸಲಹು!
ತ್ರಾಣವುಳ್ಳ ಅರಸ,
ನಮ್ಮ ಪ್ರಿಯ ರಕ್ಷಕ!
ಜೈಸಿ ನಮ್ಮ ಶತ್ರುವನ್ನು,
ಕಾಯಿ ನಿನ್ನ ಪ್ರಜೆಯನ್ನು!

3. ಅಗಲಶ್ರುಧಾರೆ ಬಿಟ್ಟು
ಬೀಜ ಬಿತ್ತಿದವರು
ಮಹಿಮೇ ಕಿರೀಟವಿಟ್ಟು,
ಪೂರ್ವ ಶ್ರಮ ಮರೆತು,
ಪೈರು ತಂದು ಇರಿಸಿ
ಪರಲೋಕರಾಜ್ಯದಿ,
ಘನವುಳ್ಳ ರಾಜನನ್ನ
ಸ್ತುತಿಸೋರು. ಹೊಸಿಯನ್ನ!

೪೦೯

Wachet auf! ruft uns die Stimme. M. T. 195.

1. ಕಾಯುವವರೆದ್ದಿದ್ದಾರೆ;
ಎದ್ದೇಳಿರೆಂತ ಕೂಗುತಾರೆ;
ಎಚ್ಚತ್ತು ಏಳು, ಚೀಯೋನೇ!
ಘನವಾದ ಶಬ್ದದಲ್ಲಿ
ಕೂಗೋರು ಮಧ್ಯರಾತ್ರಿಯಲ್ಲಿ--
ಪ್ರವೀಣ ಕನ್ಯಾಸ್ತ್ರೀಯರೇ,
ಇಗೋ ನಿಮ್ಮಧಿಪ!
ತಕ್ಕೊಳ್ಳಿ ದೀಪವ!
ಹಲ್ಲೆಲೂಯಾ!
ಸಮೀಪವೆ
ವಿವಾಹಕೆ
ಪ್ರವೇಶ ಮಾಡೊ ಗಳಿಗೆ!

2. ಈ ಉತ್ಸಾಹರಾಗಕಾಗಿ
ಚೀಯೋನು ಹೃತ್ಸಂತೋಷ
ವಾಗಿ
ಎಚ್ಚತ್ತು, ಎದುರ್ಗೊಳ್ಳಲು,
ಕೋಟಿಸೂರ್ಯ ಶೋಭಾಕ್ರಾಂ
ತ,
ಪ್ರಸನ್ನ, ಸತ್ಯವಂತ ಕಾಂತ
ಆಕಾಶದಿಂದ ಬಂದನು.
ಕಿರೀಟಶ್ರೇಷ್ಠ, ಬಾ,
ಕ್ರಿಸ್ತ್ಯೇಸು, ದೇವಜಾ!
ಹೊಸಿಯನ್ನ!
ನಿನ್ನೊಡನೆ
ಕೂಡಿದ್ದರೆ,
ಕೂತೇವು ನಿನ್ನ ಮೇಜಿಗೆ!

3. ನಾನಾವಾದ್ಯಶಬ್ದದಿಂದ,
ಮನುಷ್ಯದೂತಧ್ವನಿಯಿಂದ
ಏಳೋದು ನಿನ್ನ ಸ್ತುತಿಯು.
ನಾವು ರತ್ನದ್ವಾರ ಸೇರಿ,
ಸಿಂಹಾಸನದ ಹತ್ರ ಏರಿ,
ಒಡ್ಡೋಲಗಕ್ಕೆ ಬಂದೆವು;
ಕಣ್ಣಿಂದು ಕಾಣದ,
ಕಿವ್ಯೆಂದು ಕೇಳದ
ಆತ್ಮತೃಪ್ತಿ
ಆಯ್ತುಹಹ!
ನಿಂಗೊಡೆಯ,
ಇಂಪಾದ ನಿತ್ಯ ಮಂಗಳ!

೪೧೦

Mel. Wachet auf! ruft uns die Stimme.— M. T. 195.

1. ಕರ್ತನು ಮನುಷ್ಯನಾಗಿ
ಈ ಭೂಮಿಯಲ್ಲಿ ಹುಟ್ಟಲಾಗಿ,
ಶ್ರೀ ದೂತಸೇನೆ ಹಾಡಿತು.
ಸತ್ತು ಮೇಲೆ ಜಯಗೊಂಡು,
ಸಿಂಹಾಸನಕ್ಕೆ ಏರಿಕೊಂಡು,
ಸರ್ವಾಧಿಕಾರಿ ಕೂತನು.
ಸಂಜೀವದರಸಾ,
ಅಲ್ಲಿಂದ ಬೇಗ ಬಾ!
ಹೌದು, ಹೌದು,
ಮಹೋನ್ನತಾ,
ನಿನ್ ಹತ್ತರಾ
ನಮ್ಮನ್ನು ಕರಕೊಳ್ಳ ಬಾ!

2. ಮಂದವಾಗಿ ನಿನ್ನನ್ನಿಲ್ಲಿ,
ಆರೂಢನೇ, ವಾಕ್ಕನ್ನಡೀಲಿ
ವಿಶ್ವಾಸವೀಗ ನೋಡುತೆ;
ಅಲ್ಲಿ ಮುಖಾಮುಖಿಯಾಗಿ
ನಿನ್ನನ್ನು ದೃಷ್ಟಿಸೋದಕಾಗಿ
ಹೃದ್ ಅಭಿಲಾಷಿಸುತ್ತದೆ.
ಪವಿತ್ರ ಆತ್ಮವೂ
ಸ್ವರ್ಗೀಯ ಸಭೆಯೂ—
ಯೇಸು, ಕರ್ತ,
ಬಾ! ಎನ್ನಲು,
ಈ ಸಭೆಯೂ—
ಬಾ, ಯೇಸು! ಎಂತ ಹಾಡೊದು.

INDEX OF

ENGLISH AND GERMAN HYMNS

TRANSLATED INTO KANARESE

ಕನ್ನಡ ಗೀತಗಳಿಗೆ ಆಧಾರವಾಗಿರುವ

ಅನ್ಯಭಾಷೆಯ ಗೀತಗಳ ಅನುಕ್ರಮಣಿಕೆ

**Asterisks indicate that the original hymn has not been noted in the Hymn-book.*

26

ಗೀತಗಳ ಅನುಕ್ರಮಣಿಕೆ

~~ಕಖಗಘಙ~~

ಕ ಖ ಗ ಘ ಙ

ಚ ಛ ಜ ಝ ಞ

ಟ ಠ ಡ ಢ ಣ

ತ ಥ ದ ಧ ನ

ಪ ಫ ಬ ಭ ಮ

ಯ ರ ಲ ವ ಶ ಷ ಸ ಹ ಳ

KANARESE

HYMN-BOOK

THIRTEENTH EDITION

JUBILEE EDITION

ಭಕ್ತರು ದೇವರ ಸ್ತೋತ್ರಕ್ಕಾಗಿ

ದೇವಾಲಯಗಳಲ್ಲಿಯೂ ಮನೆಗಳಲ್ಲಿಯೂ ಹಾಡತಕ್ಕ

ಗೀತಗಳು

PUBLISHED BY THE
BASEL MISSION BOOK AND TRACT DEPOSITORY
MANGALORE
1933